


ಹಂಝ ಮಲಾರ್

# ತಲ್ಲಣ

(ಬ್ಯಾರಿ ಕಥೆಗಳು)

ಪ್ರೀತಿಯಿಂದ,
ಹಂಝ ಮಲಾರ್
19/8/2005

ಅನುವಾದ : ಹಂಝ ಮಲಾರ್

ಪ್ರಕಾಶಕರು

**ಸಾರಾ ಎಂಟರ್‌ಪ್ರೈಸಸ್**

ನಂ. 50, 5ನೇ ಮುಖ್ಯರಸ್ತೆ, ಸುಭಾಷ್‌ನಗರ, ಮೈಸೂರು
ದೂರವಾಣಿ : 0821-2496837

**TALLANA :** Translated by **HAMZA MALAR,** Arastana, Post Pavoor - 574 182, Mangalore. Published by **SARA ENTERPRISES,** No. 50, 5th Main, Subhash Nagar, Mysore. Phone - 0821-2496837.

ಹಕ್ಕುಗಳು : ಲೇಖಕರದು

ಮೊದಲನೆಯ ಮುದ್ರಣ : 2004

ಪುಟಗಳು : 144 (xvi + 128)

ಬೆಲೆ : 120 ರೂಪಾಯಿಗಳು

ಮುಖಪುಟ : ಶ್ರೀಕಂಠಮೂರ್ತಿ, ಮೈಸೂರು.

PRINTED AT
**DAMINI MUDRANA**
Vijayanagar, Bangalore.
Ph : 23386695

ಅರ್ಪಣೆ

ಬ್ಯಾರಿ ಭಾಷೆ, ಸಾಹಿತ್ಯದ
ಮೇಲೆ ಪ್ರೀತಿ, ಆಸಕ್ತಿ ಇರುವ
ಎಲ್ಲರಿಗೂ.......

# ಮುನ್ನುಡಿ

## ಅನಿಸಿದ್ದು; ಅನಿಸಿದ ಹಾಗೆ

ಬಹುಸಂಸ್ಕೃತಿಯ ಈ ದೇಶದಲ್ಲಿ ಬ್ಯಾರಿ ಭಾಷೆಯೂ ಒಂದು. ಕತೆಗಾರ ಹಂಝ ಮಲಾರ್ ಅವರು ಬ್ಯಾರಿ ಭಾಷೆಯಲ್ಲಿ ರಚನೆಯಾದ ಇಪ್ಪತ್ತು ಕತೆಗಳನ್ನು ಅನುವಾದಿಸಿ ಈ ಕೃತಿಯ ಮುಖೇನ ಕನ್ನಡಿಗರ ಕೈಗಿಟ್ಟಿದ್ದಾರೆ.

ವೈಚಾರಿಕ ಭಾಷೆಯಲ್ಲಿ ರಚನೆಯಾಗಿರುವ ಇಲ್ಲಿನ ಬಹುತೇಕ ವೈಚಾರಿಕ ಕತೆಗಳು ಸ್ತ್ರೀ ಪ್ರಧಾನ ಭೌತವಾದಿ ನಿಲುವು ಹೊಂದಿದಂತಹವು. ಫಕ್ರುದ್ದೀನ್ ಇರುವೈಲು ಅವರ 'ನಿಖಾಹ್' ಹೆಣ್ಣೊಬ್ಬಳಿಗೆ ತಾಯಿಯಾಗಲಾರದ ಕೊರತೆ ಆಕೆಯ ಬದುಕನ್ನು ದಾರುಣತೆಗೆ ತಳ್ಳುವ ಮತ್ತು ಅದೇ ಹೊತ್ತಿಗೆ ಮಾನವೀಯ ಮುಖವೊಂದರ ದರ್ಶನವಾಗುವ ವಸ್ತುವನ್ನು ಹೊಂದಿದೆ. ಮುಹಮ್ಮದ್ ಬಡ್ಡೂರು ಮುಸ್ಲಿಂ ಸಮಾಜದ ಸ್ತ್ರೀ ಶೋಷಣೆಯ ಮುಖದರ್ಶನ ಮಾಡಿಸುತ್ತಲೇ ಯಾವುದು ಪರ್ಯಾಯವಾಗಬೇಕು ಎಂಬ ತಮ್ಮ ಧೋರಣೆಯನ್ನು ಮಂಡಿಸುತ್ತಾರೆ. ಸಮೀನಾ ಅಬ್ದುಲ್ ವಾಹಿದ್ ಅವರ 'ಮಾನವೀಯತೆ' ಇದೇ ಧೋರಣೆಯನ್ನು ಬೇರೊಂದು ರೀತಿಯಲ್ಲಿ ಪ್ರತಿಪಾದಿಸಿದರೆ, ಖತೀಜಾ ಸಫ್‌ರೀನಾ ಅವರ 'ತಾಳ್ಮೆ' ಮಹಿಳೆಯಿಂದಲೇ ಮಹಿಳೆಯ ಮೇಲಾಗುವ ಶೋಷಣೆಯನ್ನು ಆರ್ದ್ರವಾಗಿ ತೆರೆದಿಡುತ್ತದೆ. ಪಿ.ಎ. ರಹೀಂ ಅವರ 'ಪ್ರಾಯ ತುಂಬಿತು' ಕತೆ ಧಾರ್ಮಿಕ ಎನ್ನುವ ಪರಿಸರ ಕೂಡ ಮನುಷ್ಯನ ಬದುಕನ್ನು ಸಹನೀಯಗೊಳಿಸಲು ಆಗದೆ ಇರುವುದನ್ನು ವಸ್ತುವಾಗಿ ತೆಗೆದುಕೊಂಡರೆ, ಟಿ.ಎಂ. ಹನೀಫ್ ಮೌಲವಿ ಅವರ 'ಅರ್ಬುದ'ಕತೆ ಧಾರ್ಮಿಕ ನಂಬಿಕೆ ಮನುಷ್ಯನ ಬಾಳುವೆಯನ್ನು ಹಸನುಗೊಳಿಸುವ ಸಾಧ್ಯತೆಯನ್ನು ಮುಂದಿಡುತ್ತದೆ. ಎ.ಎಂ. ಅಥಾವುಲ್ಲ ಜೋಕಟ್ಟೆ ಅವರ 'ಬೇಗುದಿ'ಕತೆಯು ವಿವಾಹ ನಿರ್ಧಾರದ ಅಧಿಕಾರ ಹೆಣ್ಣಿಗೆ ಇಲ್ಲದಿರುವ ಹತಾಶೆಯನ್ನು, ಶಮೀಮ ಅವರ 'ಹೊಡೆತ' ಮಾನವ ಕ್ರೌರ್ಯವನ್ನು,

ರಝಿಯಾ ಅವರ 'ನಮ್ಮಂಥವರು' ಬಡ ಹೆಣ್ಮಕ್ಕಳು ವೃಥಾ ಅಪವಾದಕ್ಕೊಳಗಾಗುವ ವಾಸ್ತವವನ್ನು, ಆಯಿಶಾ ಯು.ಕೆ. ಅವರ 'ಪರಿವರ್ತನೆ' ಎರಡು ಸ್ತ್ರೀ ಶಕ್ತಿಗಳ ಮುಖಾಮುಖಿ ಬದುಕನ್ನು ಆಪ್ತವಾಗಿಸುವ ಸಾಧ್ಯತೆಯನ್ನು, ಮುಮ್ತಾಝ್ ಪಕ್ಕಲಡ್ಕ ಅವರ 'ಆಪತ್ಬಾಂದವ' ಕಥೆ ಕೈ ತುಂಬ ಹಣವಿರುವ ಗಲ್ಫ್ ಉದ್ಯೋಗಿಯ ಆದರ್ಶ ಮುಖವನ್ನು, ಶಾಹಿದಾ ತಸ್ನೀಂರ 'ಗುರಿ ಇಲ್ಲದ ಪಯಣ'ಕತೆ ವರದಕ್ಷಿಣೆ ವಿರುದ್ಧ ಯುವತಿ ಸಾರುವ ಸಮರವನ್ನು ಎತ್ತಿ ತೋರಿಸುತ್ತದೆ. ಹಾಜಿ ಬಶೀರ್ ಅಹಮದ್ ಅವರ 'ಅನುಗ್ರಹ 'ವಿವಾಹದಲ್ಲಿ ಪ್ರೇಮ ಅನುರಾಗಗಳಿಗಿಂತ ಹೆಚ್ಚಾಗಿ ಹಣವೇ ಪ್ರಧಾನವಾಗುವುದನ್ನು, ಯು.ಎ. ಕಾಸಿಂ ಉಳ್ಳಾಲ್ ಅವರ 'ಆಮಿನಾ' ಕತೆಯು ಮುಗ್ಧ ಹೆಣ್ಣು ಹೆತ್ತವರನ್ನು ನಯವಾಗಿ ವಂಚಿಸುವ ಯುವಕರ ಕ್ರೌರ್ಯವನ್ನು, ಪಿ. ಹುಸೈನ್ ಕಾಟಿಪಳ್ಳ ಅವರ 'ಕನಸು' ದ್ವಿಪತ್ನಿತ್ವ ಸ್ತ್ರೀಯರ ಕನಸನ್ನು ನುಚ್ಚುನೂರಾಗಿಸುವ ಸ್ಥಿತಿಯನ್ನು, ಮುಹಮ್ಮದ್ ಕುಳಾಯಿ ಅವರ 'ಚಿನ್ನದಂತಹ ಹುಡುಗಿ' ಮನುಷ್ಯ ಹೃದಯದ ಅನುರಾಗದ ಮೇಲೆ ಹಣ ಪ್ರಭುತ್ವ ಸಾಧಿಸಿದಾಗ ಉಂಟಾಗುವ ಹತಾಶೆಯನ್ನು ಮಾರ್ಮಿಕವಾಗಿ ಚಿತ್ರಿಸುತ್ತಾ ಹೋಗುತ್ತದೆ. ಉಳಿಧ ಕೆಲವು ಕತೆಗಳು ಸ್ತ್ರೀ ಕೇಂದ್ರಿತ ಆವರಣದಿಂದ ಹೊರಗಿನ ಸಂಗತಿಗಳನ್ನು ಅನಾವರಣಗೊಳಿಸುವ ಕೆಲಸ ಮಾಡುತ್ತವೆ. ರಮಾ ತುಳುನಾಡು ಅವರ 'ಹರಕೆಯ ಮೊಟ್ಟೆ'ಯಲ್ಲಿ ಸ್ತ್ರೀ ಸಾಂಕೇತಿಕವಾಗಿ ಕಾಣಿಸಿಕೊಳ್ಳುತ್ತಾ ಗಾಢವಾದ ಮೈತ್ರಿ ಹುಟ್ಟುಹಾಕುವ ಮಾನವೀಯ ಸಂಬಂಧವನ್ನು ಮೆಲುಕು ಹಾಕುತ್ತದೆ. ಡಿ. ಸೂಫಿ ಇಬ್ರಾಹಿಂ ಅವರ 'ಗರಿ ?' ಕತೆಯು ಅಹಂನ ಅಂತ್ಯವಾಗುವ ಬಗೆಯನ್ನು ಧ್ವನಿಪೂರ್ಣವಾಗಿ ತೆರೆದಿಡುತ್ತದೆ. ಕೆ.ಪಿ.ಎ. ಹಮೀದ್ ಪಕ್ಕಲಡ್ಕ ಕೊಂಚ ಸಾಹಿತ್ಯಿಕ ಶೈಲಿಯಲ್ಲಿ ಸಾಗುತ್ತಾ ರೂಪಕವೊಂದರ ಆಶ್ರಯದಲ್ಲಿ ಮನುಷ್ಯನ ಬದ್ಧತೆ ಮತ್ತು ಅಂತಃಕರಣಗಳನ್ನು ಹಿಡಿದಿಡುವ ಪ್ರಯತ್ನ ಮಾಡುತ್ತಾರೆ. ಹಂಝು ಮಲಾರ್ ಅವರು ಶಿಕ್ಷಣದ ಆಸಕ್ತಿ ಮತ್ತು ಬಾಲಕಾರ್ಮಿಕ ನಿಷೇಧಗಳ ಮುಖಾಮುಖಿಯನ್ನು ತಲ್ಲಣಗುಟ್ಟುವ ಭರವಸೆ ತಾಳುವ ಕುಟುಂಬವೊಂದರ ಚಿತ್ರಣವನ್ನು ಆಪ್ತವಾಗಿ ತೆರೆದಿಡುತ್ತಾರೆ.

ಈ ಎಲ್ಲಾ ಕತೆಗಳಲ್ಲಿ ನನಗೊಂದು ಸ್ಥಾಯೀಭಾವ ಕಾಣಿಸುತ್ತದೆ. ಅದೆಂದರೆ ಹೊಸ ಜಗತ್ತಿಗೆ ತೆರೆದುಕೊಳ್ಳುವ ತಹತಹ. ಅದು ಸಾಧ್ಯವಾಗದೆ ಇರುವ ಕಾರಣಗಳ ಶೋಧ. ಕಾಲ್ಪನಿಕ ವಾಗಿಯಾದರೂ ಸಾಧ್ಯವಾಗಿಸುವ ಪ್ರಯತ್ನ. ನನ್ನ ಮಟ್ಟಿಗೆ ಹೇಳುವುದಾದರೆ ಯಾವ ಬರಹಗಾರ ನನ್ನೂ ನಾನು 'ದಲಿತ ಸಾಹಿತಿ, ಮುಸ್ಲಿಂ ಸಾಹಿತಿ, ಬ್ರಾಹ್ಮಣ ಸಾಹಿತಿ ' ಎಂದು ಗುರುತಿಸುವುದಿಲ್ಲ. ಅವರು ಸಾಹಿತಿಗಳು ಅಷ್ಟೆ. ಆದರೆ, ಯಾವ ಸಮಾಜದಿಂದ ಬಂದವರು ಎಂದು ಗುರುತಿಸುವುದು ಅಗತ್ಯವಾಗುತ್ತದೆ. ಯಾಕೆಂದರೆ, ಸದ್ಯದ ಸಾಹಿತ್ಯಕ ಸಂದರ್ಭದಲ್ಲಿ ಸಮುದಾಯವು ಬೇರೆ

ಸಮುದಾಯದವರಿಗೆ ಧಕ್ಕಲಾರದ ಅನುಭವ ಲೋಕವನ್ನು ಕಟ್ಟಿಕೊಡುತ್ತದೆ. ಆ ಅನುಭವಗಳು ಇಲ್ಲಿನ ಕತೆಗಾರರಿಗೆ ಬ್ಯಾರಿ ಸಮುದಾಯದ ಬಗ್ಗೆ, ಸಮುದಾಯದ ಒಳಗಿನ ನೋವು, ನಿರಾಶೆ, ಸಂತೋಷ, ಅನನ್ಯತೆಯ ಬಗ್ಗೆ ಏನನ್ನೋ ಹೇಳಬೇಕು ಎನ್ನುವ ತುಡಿತವನ್ನು ಉಂಟು ಮಾಡಿದೆ. ಆದರೆ ಏನನನ್ನು ಹೇಗೆ ಪೇಳಬೇಕು ಎನ್ನುವ ಬಗ್ಗೆ ಸ್ಪಷ್ಟತೆ ಕಡಿಮೆ ಇದೆ. ಆದರೆ ಒಂದಂತೂ ಸ್ಪಷ್ಟ. ಸದ್ಯದ ನಮ್ಮ ಸಾಮಾಜಿಕ ಸ್ಥಿತಿಯಲ್ಲಿ ಮುಸ್ಲಿಂ ಸಮುದಾಯ ಇರುವ ಸ್ಥಿತಿಯಿಂದಲೂ, ತನ್ನೊಳಗಿನ ಪ್ರತಿಷ್ಠಿತರ ಮತ್ತು ಸ್ವಾರ್ಥ ಸಾಧಕರಿಂದಲೂ, ತನ್ನ ಹೊರಗಿನ ಆಕ್ರಮಣಶಾಲಿ ನೀತಿಯಿಂದಲೂ ಕೆಲವು ಆತಂಕಗಳನ್ನು ಎದುರಿಸುತ್ತಿದೆ. ಅಂಥಲ್ಲಿ ಯಾವುದೇ ಸಮುದಾಯ ಡಿಫೆನ್ಸಿವ್ ಆಗುವುದು ತುಂಬಾ ಸಹಜ. ಆದರೆ, ಇಲ್ಲಿನ ಒಬ್ಬನೇ ಒಬ್ಬ ಕತೆಗಾರ(ರ್ತಿ) ಕತೆಗಾರನಾ (ಳಾ)ಗಿ ಡಿಫೆನ್ಸಿವ್ ಆಗುವುದಕ್ಕೆ ಹೋಗಿಲ್ಲ ಎನ್ನುವುದು ಸ್ಪಷ್ಟ. ಅದು ಸಾಹಿತಿಯೊಬ್ಬನ ಸಾಹಿತ್ಯಕ ಬದ್ಧತೆಗೆ ಪ್ರಬಲ ಸಾಕ್ಷಿಯಾಗುತ್ತದೆ. ಅದಕ್ಕಾಗಿ ಈ ಎಲ್ಲಾ ಕತೆಗಾರರೂ ಅಭಿನಂದನಾರ್ಹರು. ಸಮುದಾಯದ ಬಗ್ಗೆ ಅವರಿಗಿರುವ ಕಾಳಜಿ, ಕಳಕಳಿಗಾಗಿ, ಪ್ರಜ್ಞಾವಂತಿಕೆಗಾಗಿ ಶ್ಲಾಘನೀಯರು.

ಸಾಹಿತ್ಯಕವಾಗಿ ನೋಡಿದರೆ ಈ ಕತೆಗಳಲ್ಲಿ ಕೆಲವು ಮಿತಿಗಳಿವೆ. ಸಮುದಾಯದ ವ್ಯಕ್ತಿ ಬಹಿರಂಗಕ್ಕೆ ಮುಖಾಮುಖಿಯಾಗುವಾಗ ಎದುರಿಸುವ ನೋವು, ನಿರಾಶೆ, ಸಮಸ್ಯೆಗಳನ್ನು ಗಂಭೀರ ವಾಗಿಯೇ ಎತ್ತಿಕೊಳ್ಳುವ ಕತೆಗಾರರು ಮನುಷ್ಯನ ಒಳತೋಟಿಗಳನ್ನೂ, ಒಳಹೊರಗಿನ ಮುಖಾ ಮುಖಿಯಲ್ಲಿ ಸಂಭವಿಸುವ ಕ್ರಿಯೆಗಳನ್ನು ಗಮನಿಸುವತ್ತ ಮುಂದೆ ಸಾಗಬೇಕಾಗಿದೆ. ಉದಾಹರಣೆಗೆ ಹೇಳುವುದಾದರೆ, 'ನಿಖಾಹ್'ಎನ್ನುವ ಕತೆಯಲ್ಲಿ ಮಕ್ಕಳಾಗುವುದಿಲ್ಲವೆಂದು ಗೊತ್ತಾದ ಕೂಡಲೇ ಸಕೀನಾಳನ್ನು ಪತಿ ಅಬ್ದುಲ್ಲ ತ್ಯಜಿಸುತ್ತಾನೆ. ಹಸ್ಸೆನ ಆಕೆಯನ್ನು ಮದುವೆಯಾಗುವ ಪ್ರಸ್ತಾಪ ಮಾಡುತ್ತಾನೆ, ಅಷ್ಟೆ. 'ಸಕೀನಾಳ ಮುಖ ರಂಗೇರತೊಡಗಿತು. ನಾಚಿಕೆಯಿಂದ ಒಳಗೆ ಓಡಿದಳು' ಎಂದು ಕತೆಗಾರರು ಕತೆಯನ್ನು ಮುಗಿಸುತ್ತಾರೆ. ಇಲ್ಲಿ ಮರು ಮದುವೆ ಆಕೆಯ ಅಗತ್ಯವೂ ಹೌದು. ಆರೋಗ್ಯ ಪೂರ್ಣ ಸಮಾಜದ ಲಕ್ಷಣವೂ ಹೌದು. ಕತೆ ತುಂಬಾ ಚೆನ್ನಾಗಿದೆ ಎನ್ನಲು ಯಾವುದೇ ತಕರಾರೂ ಇಲ್ಲ. ಆದರೆ ಪತಿಯಿಂದ ತಿರಸ್ಕೃತಳಾದ ಹೆಣ್ಣು ಅಷ್ಟು ಬೇಗ ಮದುವೆಗೆ ಒಪ್ಪಿಯಾಳೇ ? ಅದೂ ಪತಿಯ ತಮ್ಮನನ್ನು. ಒಂದು ವೇಳೆ ಒಪ್ಪಿದರೂ ಒಂದು ಮದುವೆಯಾಗಿ, ಆ ನೋವು-ಸಂತೋಷಗಳನ್ನು ಅನುಭವಿಸಿ, ಗರ್ಭಕೋಶವನ್ನು ಕಳೆದುಕೊಂಡ ದುಃಖವನ್ನು ಸಹಿಸಿರುವ ಹೆಣ್ಣು ಹರೆಯದ ತರುಣಿಯಂತೆ ನಾಚಿಕೆಯಿಂದ ರಂಗೇರಲು ಸಾಧ್ಯವೇ ? ಬದುಕಿನ ಅನುಭವಗಳು ಆಕೆಗೆ ಕೊಟ್ಟಿರುವ ಪಕ್ವತೆ ಏನು ?- ಇಂತಹ ಪ್ರಶ್ನೆಗಳು ನನ್ನನ್ನು ಕಾಡುತ್ತದೆ. ಒಬ್ಬ ಕತೆಗಾರ ಇಂತಹ ಹೆಣ್ಣೊಬ್ಬಳ ಅಂತರಂಗವನ್ನು ಇಣುಕಲು ಸಾಧ್ಯವಾದಾಗ ಈ ಪ್ರಶ್ನೆಗಳಿಗೆ

ಉತ್ತರ ಸಿಗುತ್ತದೆ. ಅದು ಕತೆಯನ್ನು ಉನ್ನತ ಮಟ್ಟಕ್ಕೆ ಎತ್ತುತ್ತದೆ ಕೂಡ. ಅಂತರಂಗವನ್ನು ಇಣುಕಲು ಸಾಧ್ಯವಾಗದಿರುವ ಈ ಸಮಸ್ಯೆ ಒಬ್ಬ ಕತೆಗಾರರದ್ದಲ್ಲ. ಇಲ್ಲಿನ ಬಹುತೇಕ ಕತೆಗಾರರ ಸಮಸ್ಯೆಯೇ ಅದು. ಎಲ್ಲೋ ಒಮ್ಮೆ ಮುಹಮ್ಮದ್ ಬಡ್ಡೂರ್, ತಂದೆ ದೂರವಾದ ಮುಗ್ಧ ಬಾಲಕನ ಅಂತರಂಗವನ್ನು ಆಪ್ತವಾಗಿ ತೆರೆದಿಡುತ್ತಾರೆ. ಆದರೆ ಕತೆ ಬೆಳೆದಂತೆ ಅದು ತೆಳುವಾಗುತ್ತಾ ಹೋಗುತ್ತದೆ. ಇವೆಲ್ಲ ಸಹಜ ಮಿತಿಗಳು. ಒಂದು ಹಂತದಲ್ಲಿ ಮಿತಿಗಳನ್ನು ದಾಟಿ ಮತ್ತೊಂದು ಮಜಲಿಗೆ ಜಿಗಿಯುವುದು ಬರಹಗಾರನಿಗೆ ಅನಿವಾರ್ಯವೂ ಆಗುತ್ತದೆ. ಅದಕ್ಕೆ ತಾನೇ ತಾನಾಗಿ ತೆರೆದುಕೊಳ್ಳುತ್ತಾನೆ ಕೂಡ. ಇಲ್ಲಿನ ಕತೆಗಾರರಿಗೆ ಕತೆ ಹೇಳುವ ಕಲೆ ಸಿದ್ಧಿಸಿದೆ. ಹೇಳಬೇಕು ಎಂಬ ಮನಸ್ಸಿದೆ. ಬದುಕಿಗೆ ಬೆನ್ನು ತೋರಿಸಬಾರದೆಂಬ ಛಲವಿದೆ. ಜೊತೆಗೆ ಬೇಕಷ್ಟು ಪರಿಕರಗಳು ಅನುಭವ ದ್ರವ್ಯವಾಗಿ ಸೇರಿಕೊಂಡಿದೆ. ಅದೆಲ್ಲವೂ ಮುಂದಿನ ದಿನಗಳಲ್ಲಿ ಒಳ್ಳೊಳ್ಳೆಯ ಕತೆಗಾರರನ್ನು ಕೊಟ್ಟಾವು ಎಂದು ಭರವಸೆ ತಾಳಲು ಬೇಕಾದಷ್ಟು ಪುರಾವೆಗಳು ಈ ಕೃತಿಯಲ್ಲೇ ದೊರಕುತ್ತದೆ.

ಬ್ಯಾರಿ ಸಮುದಾಯದ ಸಾಂಸ್ಕೃತಿಕ, ಸಾಮಾಜಿಕ, ಆಯಾಮಗಳನ್ನು ತೆರೆದಿಡುವಲ್ಲಿ ಮುಖ್ಯಪಾತ್ರ ವಹಿಸಬಲ್ಲ ಈ ಕತೆಗಳನ್ನು ಬರೆದ ಕತೆಗಾರರಿಗೂ, ಇದನ್ನು ಕನ್ನಡಕ್ಕೆ ತರುವ ಸಾರ್ಥಕ ಪ್ರಯತ್ನವನ್ನು ಮಾಡಿದ ಗೆಳೆಯ ಹಂಝ ಮಲಾರ್ ಅವರಿಗೂ ನನ್ನ ಸ್ನೇಹ ಪೂರ್ವಕ ನಮನಗಳು ಸಲ್ಲುತ್ತವೆ. ಈ ಕೃತಿಗೆ ಮುನ್ನುಡಿ ಬರೆಯುವ ಸದವಕಾಶವನ್ನು ಕೊಟ್ಟದ್ದಕ್ಕಾಗಿ ನಾನು ಹಂಝ ಮಲಾರ್‌ರಿಗೆ ಕೃತಜ್ಞನಾಗಿದ್ದೇನೆ.

ಅರವಿಂದ ಚೊಕ್ಕಾಡಿ
ಮೂಡುಬಿದಿರೆ, 574197
ದಕ್ಷಿಣ ಕನ್ನಡ ಜಿಲ್ಲೆ.

೧.೧೨.೨೦೦೪

# ಅನುವಾದಿಸಿದ ಮೇಲೆ

ಅನುವಾದಿಸುವುದು ಅದೆಷ್ಟು ಕಷ್ಟ ಅಂತ, ಬ್ಯಾರಿ ಕಥೆಗಳನ್ನು ಕನ್ನಡಕ್ಕೆ ಅನುವಾದಿಸಿದ ಮೇಲೆಯೇ ಗೊತ್ತಾಯಿತು. ಈ ಹಿಂದೆ ಅನುವಾದ ಕಥೆಗಳನ್ನು ಓದಿದಾಗಲೂ, 'ಅನುವಾದ' ಇಷ್ಟೊಂದು ತ್ರಾಸ ಕೊಡುತ್ತದೆ ಅಂತ ಗೊತ್ತಿರಲಿಲ್ಲ. ಮೂಲ ಕಥೆಗಳನ್ನು ಓದಿದಷ್ಟೇ ತೃಪ್ತಿಯೂ ಅಲ್ಲಿತ್ತು. ಆದರೆ, ಮೂಲ ಕಥೆಗಳಿಗೆ ಭಂಗ ಬಾರದಂತೆ ಅನುವಾದಿಸುವುದಿದೆಯಲ್ಲಾ... ಅದೊಂದು ಅಗ್ನಿಪರೀಕ್ಷೆಯೇ ಸರಿ. ಅಷ್ಟಕ್ಕೂ ಬ್ಯಾರಿ ಕಥೆಗಳನ್ನು ಅನುವಾದಿಸಬೇಕು ಎಂಬ ಆಶೆ ನನಗೆ ಕ್ಷಣಾರ್ಧದಲ್ಲಿ ಉಂಟಾದುದಲ್ಲ. ಹಿರಿಯ ಸಾಹಿತಿ ಬಿ.ಎಂ. ಇದಿನಬ್ಬರು ಬ್ಯಾರಿ ಸಾಹಿತ್ಯ ತುಂಬಾ ಶ್ರೀಮಂತಿಕೆಯಿಂದ ಕೂಡಿದೆ. ಅದನ್ನು ಇತರ ಭಾಷೆಗಳಿಗೆ ಮುಖ್ಯವಾಗಿ ಕನ್ನಡಕ್ಕೆ ಅನುವಾದಿಸುವ ಕೆಲಸ ಆಗಬೇಕು ಎಂದು ಆಗಾಗ ಹೇಳುತ್ತಲೇ ಇದ್ದರು. ಬಹುಷಃ ಯಾರೂ ಕೂಡ ಅದನ್ನು ಗಂಭೀರವಾಗಿ ಪರಿಗಣಿಸಿಲ್ಲವೋ ಏನೋ?. ಆದರೆ ನನ್ನ ಮನದ ಮೂಲೆಯಲ್ಲೊಂದು ಆಶೆ ಚಿಗುರೆಯೊಡೆಯುತ್ತಿತ್ತು. ಮೊದಲೇ ಸಾಹಿತ್ಯದ ವಿವಿಧ ಪ್ರಕಾರದಲ್ಲಿ ಕೈಯಾಡಿಸುವ ಚಟವುಳ್ಳ ನನಗೆ, ಬಿ.ಎಂ. ಇದಿನಬ್ಬರು ಹೇಳಿದ ಮೇಲೆ ಬ್ಯಾರಿ ಕಥೆಗಳನ್ನು ಕನ್ನಡಕ್ಕೆ ಅನುವಾದಿಸಿದರೆ ಹೇಗೆ ಎಂದು ಅನಿಸತೊಡಗಿತು. ಹಾಗೇ ಬ್ಯಾರಿ ಕಥೆಗಳಿಗಾಗಿ ಹುಡುಕಾಡಿದಾಗ ನನಗೆ ಸಿಕ್ಕಿದ್ದು ಸುಮಾರು ೪೦ ಕಥೆಗಳು. ಅದರಿಂದ ೨೦ ಕಥೆಗಳನ್ನು ಆಯ್ದು ಕನ್ನಡಕ್ಕೆ ಅನುವಾದಿಸಿದ್ದೇನೆ. ಇಲ್ಲಿನ ಎಲ್ಲಾ ಕಥೆಗಳು 'ಗಟ್ಟಿ'ಕಥೆಗಳು ಅಂತ ನಾನು ಹೇಳುವುದಿಲ್ಲ. ಆದರೆ, ಕೆಲವೊಂದು ಕಥೆಗಳು ಹಲವು ಕಾರಣದಿಂದ ಮಹತ್ವ ಪಡೆದಿದೆ. ಬ್ಯಾರಿ ಭಾಷೆಯಲ್ಲೂ ಇಷ್ಟು ಸೊಗಸಾಗಿ ಕಥೆಗಳು ಬರೆಯಲು ಸಾಧ್ಯವಾ ಎಂದು ನನಗೆ ಅನಿಸಿದ್ದು ಸುಳ್ಳಲ್ಲ.

ಓರ್ವ ಅನುವಾದಕನಾಗಿ ಇಲ್ಲಿನ ಕಥೆಗಳ ಬಗ್ಗೆ ಸಾಕಷ್ಟು ಬರೆಯಬಹುದು. ಆದರೆ, ಯುವ ವಿಮರ್ಶಕ ಅರವಿಂದ ಚೊಕ್ಕಾಡಿಯವರು 'ಮುನ್ನುಡಿ'ಯಲ್ಲಿ ಕಥೆಗಳ ಬಗ್ಗೆ ಸವಿಸ್ತಾರ ವಾಗಿ ಬರೆದಿದ್ದಾರೆ. ಹಾಗಾಗಿ ನಾನು ಕೆಲವು ಕಥೆಗಳ ಮೇಲೆ ಬೆಳಕು ಚೆಲ್ಲುವ ಪ್ರಯತ್ನ ಮಾಡಿದ್ದೇನೆ.

ಇಲ್ಲಿನ ಬಹುತೇಕ ಕಥೆಗಳಲ್ಲಿ ಬಡತನದ ಚಿತ್ರಣ ದಟ್ಟವಾಗಿದೆ. ಕ್ಷಣ ಕ್ಷಣಕ್ಕೂ ಶೋಷಿಸುವ ಯತ್ನ ನಡೆದಿದೆ. ಕೇರಳದಿಂದ ಬಂದು ಮದುವೆಯಾದ ಗಂಡಂದಿರ ಬಗ್ಗೆ ಉಲ್ಲೇಖವಿದೆ. ಇಲ್ಲಿನ ಹೆಂಗಸರು ಕೇವಲ 'ಸುಖ ' ಕೊಡುವ ಯಂತ್ರಗಳಾಗಿ ಬಿಟ್ಟಿದ್ದಾರೆ. ಅದಕ್ಕಿಂತ ಆಚೆ ಅವರು ಯೋಚಿಸುವುದೂ ಇಲ್ಲ. ಅದಕ್ಕೆ ಅವಕಾಶವೂ ಇಲ್ಲದ ಸನ್ನಿವೇಶ ಇಲ್ಲಿ ಎದ್ದು ಕಾಣುತ್ತಿದೆ.

ಕವಿ ಮುಹಮ್ಮದ್ ಬಡ್ಡೂರ್‌ರ 'ಹಲೀಮಾ' ಕಥೆಯಲ್ಲಿ ಬಂಡಾಯದ ಧ್ವನಿ ಇದೆ. ಬಡ ಹೆಣ್ಮಗಳನ್ನು ಸಮಾಜದಲ್ಲಿ 'ಒಳ್ಳೆಯ'ಯವರೆಂದು ತೋರಿಸಿಕೊಳ್ಳುವ ಮಂದಿಯ ಮುಖವಾಡ ವನ್ನು ಈ ಕಥೆ ಬಯಲಿಗೆಳೆಯುತ್ತದೆ. ಹಲೀಮಾಳನ್ನು ಇಲ್ಲಿ ಬಹುತೇಕ ಮಂದಿ ಕಾಮುಕ ದೃಷ್ಟಿಯಿಂದಲೇ ನೋಡುತ್ತಾರೆ. ಆದರೂ, ಮಸೀದಿಯ ಖತೀಬ್, ರಹೀಂರಂತಹ ಒಳ್ಳೆಯವರೂ ಇದ್ದಾರೆ. ವರದಕ್ಷಿಣೆ ಪಡೆದುಕೊಳ್ಳುವ ಧರ್ಮಭಕ್ಷಕರ ನಡುವೆಯೂ ವಧುದಕ್ಷಿಣೆ ಕೊಟ್ಟು ಮದುವೆಯಾಗುವ ಧರ್ಮರಕ್ಷಕರೂ ಇದ್ದಾರೆ ಎಂಬುದನ್ನು ಕಥೆ ಸಾರಿ ಹೇಳುತ್ತದೆ.

ಹಿರಿಯ ಸಾಹಿತಿ ಮುಹಮ್ಮದ್ ಕುಳಾಯಿಯ 'ಚಿನ್ನದಂತಹ ಹುಡುಗಿ' ಕಥೆ ತುಂಬಾ ಸೊಗಸಾಗಿದೆ. ತಾನು ಪ್ರೀತಿಸಿ ಕೈ ಕೊಟ್ಟ ಹುಡುಗಿ ಶ್ರೀಮಂತನೊಬ್ಬನ ಮಡದಿಯಾಗಿರುವುದನ್ನು ಕಂಡು ಕಥಾ ನಾಯಕ ಬೆಚ್ಚಿ ಬೀಳುವ ಚಿತ್ರಣವು ಆತನಿಗೆ ಹುಡುಗಿ ಚಾಟಿ ಏಟು ಬಾರಿಸಿದಂತಿದೆ. ಕಾಲೇಜ್‌ಗೆ ಹೋಗುತ್ತಿದ್ದಾಗ, ಪಕ್ಕದ ಮನೆಯ ಹುಡುಗಿಯನ್ನು ಪ್ರೀತಿಸಿದ್ದ ನಾಯಕ ಗಲ್ಫ್‌ನಿಂದ ಮರಳಿ ಬಂದ ನಂತರ 'ಖಳ ನಾಯಕ'ನಂತೆ ಬದಲಾದುದು, ಈ ಹಿಂದೆ ವರದಕ್ಷಿಣೆಗಾಗಿ ಆಸೆ ಪಟ್ಟ ನಾಯಕನ ತಂದೆ, ಹಾಲಿ ಸೊಸೆಯ ಆರ್ಭಟದ ಮುಂದೆ ಬೆಕ್ಕಿನ ಥರ ವರ್ತಿಸುವುದನ್ನು ಕಾಲಚಕ್ರ ಹೇಗೆ ಉರುಳುತ್ತದೆ ಎಂಬುದನ್ನು ತೋರಿಸಿಕೊಡುತ್ತದೆ.

ಕಥೆಗಾರ ಫಕ್ರುದ್ದೀನ್ ಇರುವೈಲು ಅವರ 'ನಿಖಾಹ್' ಕಥೆ ಒಂದೆಡೆ ಕಣ್ಣೀರು ಸುರಿಸುವಂತೆ ಮಾಡಿದರೂ ಮತ್ತೊಂದೆಡೆ ವಿಚಿತ್ರ ತಿರುವು ಪಡೆಯುವುದರೊಂದಿಗೆ ಮನಸ್ಸಿಗೆ ಸಮಾಧಾನ ನೀಡುತ್ತದೆ. ಮಹಡಿಯಿಂದ ಕಾಲು ಜಾರಿ ಬಿದ್ದು ಹೊಟ್ಟೆಗೆ (ಗರ್ಭಕ್ಕೆ) ಪೆಟ್ಟು ಮಾಡಿಕೊಂಡ ಹೆಂಡತಿಗೆ ಯಾವುದೇ ಮುಲಾಜಿಲ್ಲದೆ ಗಂಡ ತಲಾಖ್ ಕೊಟ್ಟರೂ, ಆತನ ತಮ್ಮ ಆಕೆಗೆ ಬಾಳು ನೀಡಲು ಮುಂದಾಗುವ ಆಶಾದಾಯಕ ಚಿತ್ರಣ ಮತ್ತೆ ಮತ್ತೆ ನೆನಪಿಗೆ ಬರುವಂತೆ ಮಾಡಿದೆ.

ಹುಸೈನ್ ಕಾಟಿಪಳ್ಳರವರ 'ಕನಸು'ಕಥೆಯಲ್ಲಿ ಬಡಕುಟುಂಬ ದಿನ ದೂಡಲೂ ಪಡುವ ಪಾಡಿದೆ. ಒಂದು ಹೆಣ್ಮಗುವನ್ನು ಕೊಟ್ಟು ೧೪ವರ್ಷದ ನಂತರ ಮರಳಿ ಬರುವ ಗಂಡನಿಗಾಗಿ ಕಾದು ಕುಳಿತ ಹೆಂಡತಿಯ ಕಾತರದ ಮಧ್ಯೆಯೇ, ಅದೇ ಗಂಡ ಮತ್ತೊಬ್ಬಳು ಹೆಂಡತಿಯನ್ನು

ಮನೆಯೊಳಗೆ ನುಗ್ಗಿಸುವ ಮೂಲಕ ಗಂಡನಿಲ್ಲದೆಯೂ ಕಳೆದವಳ ದಿನಗಳಿಗೆ ಹುಳಿ ಹಿಂಡುವ ಪ್ರಯತ್ನ ಮಾಡುತ್ತಾನೆ. ಇದು ೧೪ವರ್ಷ ಗಂಡನಿಗಾಗಿ ಕಾದವಳಿಗೆ ಸಿಕ್ಕಿದ 'ಉಡುಗೊರೆ'ಯೂ ಹೌದು. ಹೆಂಗಸರ ಅಸಹಾಯಕತೆ, ಅವರು ಕೇವಲ ಹೆರುವ ಯಂತ್ರ ಎಂದು ಪುರುಷ ಸಮಾಜ ಭಾವಿಸಿದ್ದನ್ನು ತೋರಿಸಿಕೊಡುತ್ತದೆ.

ಯು.ಎ. ಕಾಸಿಂ ಉಳ್ಳಾಲ ಅವರ 'ಆಮಿನಾ' ಕಥೆಯು ವಿವಾಹವಾಗುವುದನ್ನೇ ಕಾಯಕವನ್ನಾಗಿಸಿದ ದುಷ್ಟನೊಬ್ಬ ಆಮಿನಾಳಂತಹ ಮುಗ್ಧೆಯನ್ನು ಹೇಗೆ ವಂಚಿಸುತ್ತಾನೆ ಎಂಬುದನ್ನು ವಿವರಿಸುತ್ತದೆ. ಮದುವೆಯಾದ ಕೆಲವೇ ದಿನದಲ್ಲಿ ಕೈ ಕೊಡುವ ಧುರುಳರ ಸಂಖ್ಯೆ ಹೆಚ್ಚಿರುವ ಮಧ್ಯೆಯೂ, ಹುಡುಗಿಗೆ ಆತ್ಮವಿಶ್ವಾಸ ತುಂಬಿ, ತನ್ನಲ್ಲಿ ನಂಬಿಕೆ ಹುಟ್ಟಿಸಿ, ಮತ್ತೆ ಮತ್ತೆ ದೇಹ ಸುಖ ಪಡೆದು ಕೊನೆಗೆ ಹೆಂಡತಿಗೆ ಆಕೆಯ ಗೆಳತಿ ಕೊಟ್ಟ ಚಿನ್ನಾಭರಣವನ್ನೂ ಕೈಗೆತ್ತಿಕೊಂಡು ಓಡುವ ದೃಶ್ಯ ಕರುಳು ಹಿಂಡುತ್ತದೆ. ಕೇರಳಿಗರಿಗೆ ಪತ್ರಿಕೆ ಓದುವ ಚಟ ಜಾಸ್ತಿ. ಈ ಕಥೆಯಲ್ಲಿ ಅದಕ್ಕೂ ಒಂದಷ್ಟು ಸ್ಥಾನ ಕೊಟ್ಟದ್ದು, ಕೊನೆಗೆ ಅದೇ ನೆಪದಲ್ಲಿ ಚಿನ್ನಾಭರಣದೊಂದಿಗೆ ಪರಾರಿಯಾದ ಚಿತ್ರಣ ಮನಮುಟ್ಟುವಂತಿದೆ.

ಹಾಜಿ ಯು. ಬಶೀರ್ ಅಹಮದ್ ಅವರು ಪರಿಪಕ್ವ ಕಥೆಗಾರರಲ್ಲದಿದ್ದರೂ ಅವರ 'ಅನುಗ್ರಹ' ಎಂಬ ಕಥೆ ಸಮಾಜಕ್ಕೊಂದು ಸಂದೇಶವನ್ನು ಕೊಡುವಲ್ಲಿ ಯಶಸ್ವಿಯಾಗುತ್ತದೆ. ಹಣದ ಮದದಲ್ಲಿ ವ್ಯಕ್ತಿತ್ವಕ್ಕೆ ಮಸಿ ಬಳಿಯುವ ಧುರುಳರು ಸಮಾಜದಿಂದ ಯಾವ ಪಾಠ ಕಲಿಯುತ್ತಾರೆ ಎಂಬುದನ್ನು ಈ ಕಥೆ ತೋರಿಸಿಕೊಡುತ್ತದೆ. ಶ್ರೀಮಂತ ಅಳಿಯನಿಗಾಗಿ ಆಸೆ ಪಡುವ ಅತ್ತೆ ತನಗರಿವಿಲ್ಲದಂತೆ ವಂಚಕನಿಗೆ ಮಗಳನ್ನು ಕಟ್ಟಿಕೊಡಲು ಮುಂದಾದರೂ, ವಂಚಕನ ಮೊದಲ ಪತ್ನಿಯ ಪ್ರವೇಶ ವಿಚಿತ್ರ ತಿರುವು ಪಡೆಯುತ್ತದೆ. ತನ್ನ ಮನೆಯ ಮೂಲೆಯಲ್ಲೇ ಟೈಲರ್ ವೃತ್ತಿ ಮಾಡಿಕೊಂಡಿದ್ದವನ ಜತೆ ಮಗಳ ಮದುವೆ ನೆರವೇರುತ್ತದೆಯಾದರೂ, ನಿಖಾಹ್‌ನ ಸ್ಥಳಕ್ಕೆ ಹೆಂಗಸೊಬ್ಬಳು ಪ್ರವೇಶಿಸುತ್ತಾಳೆಯೇ ಎಂಬ ಪ್ರಶ್ನೆಯೂ ಕಾಡುತ್ತದೆ. ಇದೊಂದು ತಿರುವು ನೀಡಲು ಮಾಡಿದ ತಂತ್ರವಾಗಿದ್ದು, ಒಟ್ಟಾರೆ ಕಥೆ ಸುಖಾಂತ್ಯದಲ್ಲಿ ಕೊನೆಗೊಳ್ಳುವುದು ನಮ್ಮ ಸಮಾಜದ ಯಾವುದೋ ಒಂದು ಮೂಲೆಯಲ್ಲಿ ನಡೆದ ಘಟನೆಗಳನ್ನು ನೆನಪಿಸುತ್ತದೆ.

ರಮಾ ತುಳುನಾಡು ಅವರ 'ಹರಕೆಯ ಮೊಟ್ಟೆ' ಕಥೆ ಹೆಚ್ಚು ಅರ್ಥಪೂರ್ಣವಾದುದು. ಇಂದಿನ ಸನ್ನಿವೇಶದಲ್ಲಿ ಇಂಥ ಕಥೆಗಳ ಅವಶ್ಯವಿದೆ. ಅಲ್ಲದೆ ಅವು ಮಹತ್ವವನ್ನೂ ಪಡೆಯುತ್ತದೆ. ಹಿಂದೂ ಮುಸ್ಲಿಂ ಬಾಂಧವ್ಯವನ್ನು ಈ ಕಥೆ ಸಾರಿ ಹೇಳುತ್ತದೆ. ಗುಲಾಬಿ ಎಂಬ ಗರ್ಭಿಣಿಯ

ಆಶೆ ಈಡೇರಿಸಲು ಇಸುಬುವಿನ ಓಡಾಟ... ಹರಕೆಯ ಮೊಟ್ಟೆ ಖರೀದಿಸುವ ಧಾವಂತ... ಪಡುವ ಪಾಡು... ಒಂದು ಮೊಟ್ಟೆಯನ್ನು ಒಂದು ಸಾವಿರ ರೂಪಾಯಿಗೆ ಖರೀದಿಸುವ ಹಾಜಿಯ ಹಟ... ಬಡವರ ಆಸೆಗೆ ನೀಡುವ ಕೊಡಲಿ ಏಟು... ಕೊನೆಗೆ ಅಂಗಡಿಯಿಂದ ಮೊಟ್ಟೆ ಖರೀದಿಸಿ ಗುಲಾಬಿಯ ಕೈಗಿಡುವುದು... ಮಗನ ಮುಖಭಾವದಿಂದಲೇ ಎಲ್ಲವನ್ನೂ ಅರ್ಥೈಸಿ ಸಮಾಧಾನ ಹೇಳುವ ತಾಯಿಯ ಮಾತು... ಎಲ್ಲವೂ ಸೊಗಸಾಗಿ ಮೂಡಿ ಬಂದಿದೆ.

ಆಚೆ ಮನೆಯ ತಿಳಿಗಂಜಿಗೆ ಈಚೆ ಮನೆಯ ಉಪ್ಪು ಮೆಣಸು, ಇವನ ಪೆರ್ನಾಳ್ ಹಬ್ಬಕ್ಕೆ ಅವನಿಗೆ ಹೊಸಬಟ್ಟೆ ಬರೆ, ಅವನ ಚೌತಿ ಹಬ್ಬಕ್ಕೆ ಇವನ ಮನೆಯಲ್ಲಿ ಪಾಯಸ... ಎಂಬಂತಹ ಭಾಂದವ್ಯದ ಮಾತುಗಳು ಕಥೆ ಗಟ್ಟಿಗೊಳ್ಳಲು ಪೂರಕವಾಗಿದೆ.

ರಝಿಯಾ ಮೂಡುತೋಟ ಅವರ 'ನಮ್ಮಂಥವರು'ಕಥೆಯಲ್ಲಿ ಬ್ಯಾರಿಗಳ ಮದುವೆ ಚಿತ್ರಣಕ್ಕೆ ಹೆಚ್ಚು ಒತ್ತು ಸಿಕ್ಕಿದೆ. ಗೌಜಿ ಗದ್ದಲದ ನಡುವೆ ಚಿನ್ನ ಕಳಕೊಳ್ಳುವುದು, ಎಲ್ಲೋ ಒಂದು ಕಡೆ ಸಿಕ್ಕಿದರೂ ಅದು ಬಡಹುಡುಗಿಯ ಮೇಲೆ ಅಪವಾದ ಬೀಳುವುದು, ಆದರೂ ಮದುಮಗಳ ತಂಗಿ ಸಕೀನಾಳ ಔದಾರ್ಯ ಗಮನ ಸೆಳೆಯುತ್ತದೆ. ಬಹುಷಃ ತನ್ನ ಅನುಭವಕ್ಕೆ ಬಂದ ಘಟನೆಯನ್ನು ರಝಿಯಾ ಇಲ್ಲಿ ಚಿತ್ರಿಸಿರಬೇಕು.

ಶಮೀಮಾರ 'ಹೊಡೆತ'ಕಥೆಯಲ್ಲಿ ವಿಚಿತ್ರ ನಿಲುವಿನ ಮನುಷ್ಯನೊಬ್ಬನ ಹೊಡೆತಕ್ಕೆ ಹೆಂಡತಿ, ಮಗ ಬಲಿಯಾಗುವ ದೃಶ್ಯ ಕಣ್ಣಿಗೆ ಕಟ್ಟುವಂತಿದೆ. ಈ ಮನುಷ್ಯನ ಸ್ವಭಾವವೇ ಹೀಗೆಯಾ? ಅರೆ ಹುಚ್ಚನಾ? ಎಂಬುದು ಸ್ಪಷ್ಟವಾಗುತ್ತಿಲ್ಲ. ಆದರೆ ವಿನಾಕಾರಣ ಕೆಲವು ಹೆತ್ತವರ ಮಕ್ಕಳ ಮೇಲೆ ಮುಗಿ ಬೀಳುವ ಪ್ರಸಂಗವನ್ನು ಮನಮುಟ್ಟುವ ಹಾಗೆ ಶಮೀಮಾ ಚಿತ್ರಿಸಿದ್ದಾರೆ.

ಆಯಿಶಾ ಯು.ಕೆ. ಅವರ 'ಪರಿವರ್ತನೆ 'ಕಥೆಯಲ್ಲಿ ತಾನು ಪ್ರೀತಿಸಿದ ಹುಡುಗಿಯ ಬದಲು ಹೆತ್ತವರ ಹಣದ ದಾಹಕ್ಕೆ ತುತ್ತಾಗಿ ಶ್ರೀಮಂತ ಹುಡುಗಿಯನ್ನು ಮದುವೆಯಾದ ನಾಯಕ ಹೆಂಡತಿಯನ್ನು ಕೇವಲವಾಗಿ ಕಂಡರೂ ಆಕೆಯ ತಾಳ್ಮೆಯಿಂದಾಗಿ ಗಂಡನ ಮನಗೆಲ್ಲುತ್ತಾಳೆ. ತನ್ನ ಪ್ರೀತಿಯ ಹುಡುಗಿ ಗೆಳೆಯನ.ತೆಕ್ಕೆ ಸೇರಿದ ವಿಧಿಲೀಲೆಯನ್ನು ಗೌರವಿಸುವ ನಾಯಕನ ಔದಾರ್ಯವೂ ಮೆಚ್ಚುವಂತದ್ದು. ಶಮೀಮಾಳ ತಂದೆಯ ದೊಡ್ಡತನವೂ ಸಮಾಜಕ್ಕೊಂದು ಕನ್ನಡಿ!.

ಅಥಾವುಲ್ಲ ಜೋಕಟ್ಟೆಯವರ 'ಬೇಗುದಿ'ಪುಟ್ಟ ಕಥೆ. ಗಲ್ಫ್ ಅಳಿಯನ ಆಸೆಗೆ ಬಿದ್ದ ಮನುಷ್ಯ ತನ್ನ ಮಗಳ ಮನ ಅರ್ಥೈಸಲು ವಿಫಲವಾದದನ್ನು ಕಥೆ ಎತ್ತಿ ತೋರಿಸುತ್ತದೆ. ಅಲ್ಲದೆ

ನಿಖಾಹ್‌ಗೆ ಹೋಗುವಾಗ 'ನಿನ್ನ ಒಪ್ಪಿಗೆಯಾ?' ಎಂದು ಮಾತ್ರ ಕೇಳುವುದು ತಂದೆಯ (ಸಮಾಜದ) ಹಕ್ಕೇ ಎಂದು ಕೇಳುವ ಮೂಲಕ ಅಥಾವುಲ್ಲರು ತಣ್ಣಗಿನ ಧ್ವನಿಯಲ್ಲಿ ಪ್ರಶ್ನಿಸಿ ಬಂಡಾಯದ ಸೂಚನೆ ಕೊಟ್ಟಿದ್ದಾರೆ.

ಕೆ.ಪಿ.ಎ. ಹಮೀದ್ ಪಕ್ಕಲಡ್ಕರವರ 'ರಕ್ತ ಸಂಬಂಧಿಗಳು', ಟಿ.ಎಂ. ಹನೀಫ್ ಮೌಲವಿಯ 'ಅರ್ಬುದ', ಪಿ.ಎ. ರಹೀಂರ 'ಪ್ರಾಯ ತುಂಬಿತ್ತು...', ಸೂಪಿ ಇಬ್ರಾಹಿಂರ 'ಗರಿ?', ಸಮೀನಾ ವಾಹಿದ್‌ರ 'ಮಾನವೀಯತೆ', ಮುಮ್ತಾಝ್ ಪಕ್ಕಲಡ್ಕರ ' ಆಪತ್ಬಾಂದವ', ಶಾಹಿದಾ ತಸ್ನೀಂರ 'ಗುರಿ ಇಲ್ಲದ ಪಯಣ', ಖತೀಜಾ ಸಫ್‌ರೀನಾರ 'ತಾಳ್ಮೆ 'ಕಥೆಗಳು ಒಂದೊಂದು ಸಂದೇಶವನ್ನು ನೀಡಿ ಆ ಮೂಲಕ ಸಮಾಜವನ್ನು ಜಾಗೃತಗೊಳಿಸುವ ಪ್ರಯತ್ನ ಮಾಡುತ್ತದೆ. ಒಟ್ಟಿನಲ್ಲಿ ಇಲ್ಲಿನ ಬಹುತೇಕ ಕಥೆಗಳು ಬ್ಯಾರಿ ಮುಸ್ಲಿಂ ಸಂವೇದನೆಗಳಾಗಿದ್ದು, ತಲ್ಲಣದ ಮಧ್ಯೆಯೂ ಹೊಸ ಭರವಸೆಗಳನ್ನು ನೀಡಿದರೆ ಅಚ್ಚರಿ ಇಲ್ಲ.

ಹಂಝ ಮಲಾರ್
ಅರಸ್ತಾನ
ಅಂಚೆ : ಪಾವೂರು – 574 182
ಮಂಗಳೂರು ತಾಲ್ಲೂಕು
ದ.ಕ. ಜಿಲ್ಲೆ.

೧೨.೧೨.೨೦೦೪

# ನಿಮ್ಮೊಡನೆ........

ಬ್ಯಾರಿ ಸಾಹಿತ್ಯ ಚಳವಳಿಗೆ ಸುಮಾರು ಹತ್ತು ವರ್ಷದ ಇತಿಹಾಸವಿದೆ. ಇವಿಷ್ಟು ವರ್ಷದಲ್ಲಿ ಕೆಲವು ಪುಸ್ತಕಗಳು, ಅನೇಕ ಕ್ಯಾಸೆಟ್‌ಗಳು ಹೊರ ಬಂದಿದೆ. ಆದರೆ ಬಿಡಿ ಬಿಡಿಯಾಗಿ ಬ್ಯಾರಿ ಭಾಷೆಯಲ್ಲಿ ಪ್ರಕಟವಾದ ಕಥೆಗಳನ್ನು ಹುಡುಕುತ್ತಾ ಹೋದಾಗ ನನಗೆ ಸಿಕ್ಕಿದ್ದು ಕೇವಲ ೪೦ ಮಾತ್ರ. ಆ ಪೈಕಿ ಏಳೆಂಟು ಲೇಖಕಿಯರು ಬರೆದ ಕಥೆಯೂ ಇದೆ. ಈ ಎಲ್ಲ ಕಥೆಗಳನ್ನು ಓದಿದ ಮೇಲೆ, ಆಯ್ದು ನೇಯ್ದು ಪುಸ್ತಕ ರೂಪಕ್ಕಿಳಿಸಲು ಸಿಕ್ಕಿದ ಕಥೆ ಕೇವಲ ೨೦.

ಈ ಕಥೆಗಳನ್ನು ಅನುವಾದಿಸಲು ಅನುಮತಿ ನೀಡಿದ ಮುಹಮ್ಮದ್ ಬಡ್ಡೂರು, ಮುಹಮ್ಮದ್ ಕುಳಾಯಿ, ಫಕ್ರುದ್ದೀನ್ ಇರುವೈಲು, ಹುಸೈನ್ ಕಾಟಿಪಳ್ಳ, ಯು.ಎ. ಕಾಸಿಂ ಉಳ್ಳಾಲ, ಹಾಜಿ ಯು. ಬಶೀರ್ ಅಹಮದ್, ರಮಾ ತುಳುನಾಡು, ಶಮೀಮಾ ಜಿ. ಗೂಡಿನ ಬಳಿ, ಆಯಿಶಾ ಯು.ಕೆ., ಮುಮ್ತಾಝ್ ಪಕ್ಕಲಡ್ಕ, ಶಾಹಿದಾ ತಸ್ನೀಂ, ಖತೀಜಾ ಸಫ್‌ರೀನಾ, ಸಮೀನಾ ವಾಹಿದ್, ಅಥಾವುಲ್ಲ ಜೋಕಟ್ಟೆ, ಕೆ.ಪಿ.ಎ. ಹಮೀದ್ ಪಕ್ಕಲಡ್ಕ, ಟಿ.ಎಂ. ಹನೀಫ್ ಮೌಲವಿ, ಪಿ.ಎ. ರಹೀಂ, ಸೂಫಿ ಇಬ್ರಾಹಿಂರವರಿಗೆ ಹೃತ್ಪೂರ್ವಕ ಕೃತಜ್ಞತೆಗಳು.

ಅಕಾಲಿಕ ನಿಧನರಾದ ಕಥೆಗಾರ್ತಿ ರಝಿಯಾ ಮೂಡುತೋಟರ ಪರವಾಗಿ ಅವರ ಅಣ್ಣ, ಕವಿ ಬಿ.ಎಂ. ಹನೀಫ್‌ರಿಂದ ಅನುಮತಿ ಪಡೆದಿದ್ದೇನೆ. ರಝಿಯಾರ ಕಥೆಯನ್ನು ಅನುವಾದಿಸುವಾಗ ನನಗರಿವಿಲ್ಲದಂತೆ ಕಣ್ಣೀರು ಇಳಿಯಿತು. ಕೆಲವು ತಿಂಗಳ ಹಿಂದೆ ದೂರವಾಣಿ ಮೂಲಕ ಸಂಪರ್ಕಿಸಿದಾಗ ಅವರಾಡಿದ ಮಾತು ನೆನಪಿಗೆ ಬಂತು. ನನ್ನ ಪ್ರತಿಯೊಂದು ಕೃತಿ ಬಂದಾಗಲೂ ತನ್ನದೇ ಕೃತಿ ಎಂಬಂತೆ ಮಾತನಾಡುತ್ತಾ, 'ನೀನು ಸದಾ ಬರೆಯುತ್ತಿರಬೇಕು, ಪುಸ್ತಕ ಪ್ರಕಟಿಸುತ್ತಿರ

ಬೇಕು' ಎಂದು ಹೇಳುತ್ತಿದ್ದುದನ್ನು ಮರೆಯಲಾಗುತ್ತಿಲ್ಲ. ಆದರೆ, ಅವರನ್ನು ಮುಖತಃ ಕಂಡು ಮಾತನಾಡಲಾಗಲಿಲ್ಲವಲ್ಲ ಎಂಬ ಕೊರಗು ಈಗಲೂ ಕಾಡುತ್ತಿದೆ.

ಈ ಕೃತಿಗೆ ಮುನ್ನುಡಿ ಬರೆದುಕೊಟ್ಟು, ಹೆಸರನ್ನೂ ಸೂಚಿಸಿದ ಯುವ ವಿಮರ್ಶಕ ಅರವಿಂದ ಚೊಕ್ಕಾಡಿ, ನಾಲ್ಕು ಮಾತುಗಳ ಮೂಲಕ ಪ್ರೋತ್ಸಾಹ ನೀಡಿದ ಬೆಂಗಳೂರಿನ ದಿ ಬ್ಯಾರೀಸ್ ವೆಲ್ಫೇರ್ ಅಸೋಸಿಯೇಶನ್‌ನ ಅಧ್ಯಕ್ಷ ಬಿ. ಎಂ. ಫಾರೂಕ್, ಮಂಗಳೂರಿನ ಕೇಂದ್ರ ಬ್ಯಾರಿ ಸಾಹಿತ್ಯ ಪರಿಷತ್‌ನ ಪ್ರಧಾನ ಕಾರ್ಯದರ್ಶಿ ಉಮರ್ ಯು.ಎಚ್., ಮಂಗಳೂರಿನ ಬ್ಯಾರಿ ಸಾಹಿತ್ಯ ಮತ್ತು ಸಾಂಸ್ಕೃತಿಕ ಸಂಘದ ಅಧ್ಯಕ್ಷ ಬಶೀರ್ ಬೈಕಂಪಾಡಿಯವರಿಗೆ ಹೃತ್ಪೂರ್ವಕ ಕೃತಜ್ಞತೆಗಳು. ಈ ಕೃತಿಯನ್ನು ಪ್ರಕಟಿಸಿದ ಸಾರಾ ಎಂಟರ್‌ಪ್ರೈಸಸ್‌ನ ಮಾಲೀಕರಿಗೆ ನಾನು ಅಭಾರಿಯಾಗಿದ್ದೇನೆ.

ಹಂಝ ಮಲಾರ್

## ಒಳ ಪುಟದಲ್ಲಿರುವ ಕಥೆಗಳು


| | | |
|---|---|---|
| ೧. ಹಲೀಮಾ | ಮುಹಮ್ಮದ್ ಬಡ್ಡೂರು | ೧ .... ೧೦ |
| ೨. ಚಿನ್ನದಂತಹ ಹುಡುಗಿ | ಮುಹಮ್ಮದ್ ಕುಳಾಯಿ | ೧೧ .... ೧೮ |
| ೩. ನಿಖಾಹ್ | ಫಕ್ರುದ್ದೀನ್ ಇರುವೈಲು | ೧೯ .... ೨೩ |
| ೪. ಕನಸು | ಹುಸೈನ್ ಕಾಟಿಪಳ್ಳ | ೨೪ .... ೨೯ |
| ೫. ನಿನ್ನ ಕತ್ತಿನಾಣೆ | ಹಂಝ ಮಲಾರ್ | ೩೦ .... ೩೯ |
| ೬. ಆಮಿನಾ | ಯು.ಎ. ಕಾಸಿಂ ಉಳ್ಳಾಲ | ೪೦ .... ೪೭ |
| ೭. ಅನುಗ್ರಹ | ಹಾಜಿ ಯು. ಬಶೀರ್ ಅಹಮದ್ | ೪೮ .... ೫೫ |
| ೮. ಹರಕೆಯ ಮೊಟ್ಟೆ | ರಮಾ ತುಳುನಾಡು | ೫೬ .... ೬೨ |
| ೯. ನಮ್ಮಂಥವರು... | ರಝಿಯಾ ಎಸ್‌ಜೆಬಿ | ೬೩ .... ೬೮ |
| ೧೦. ಹೊಡೆತ | ಶಮೀಮಾ ಜಿ. ಗೂಡಿನ ಬಳಿ | ೬೯ .... ೭೩ |
| ೧೧. ಪರಿವರ್ತನೆ | ಆಯಿಶಾ ಯು.ಕೆ. | ೭೪ .... ೭೯ |
| ೧೨. ಬೇಗುದಿ | ಎ.ಎಂ. ಅಥಾವುಲ್ಲ ಜೋಕಟ್ಟೆ | ೮೦ .... ೮೨ |
| ೧೩. ರಕ್ತ ಸಂಬಂಧಿಗಳು | ಕೆ.ಪಿ.ಎ. ಹಮೀದ್ ಪಕ್ಕಲಡ್ಕ | ೮೩ .... ೮೬ |
| ೧೪. ಅರ್ಬುದ | ಟಿ.ಎಂ. ಹನೀಫ್ ಮೌಲವಿ | ೮೭ .... ೯೫ |
| ೧೫. ಪ್ರಾಯ ತುಂಬಿತ್ತು... | ಪಿ.ಎ. ರಹೀಂ | ೯೬ .... ೧೦೦ |
| ೧೬. ಗರಿ ? | ಸೂಫಿ ಇಬ್ರಾಹಿಂ | ೧೦೧ .... ೧೦೪ |
| ೧೭. ಆಪತ್ಬಾಂದವ | ಮುಮ್ತಾಝ್ ಪಕ್ಕಲಡ್ಕ | ೧೦೫ .... ೧೦೮ |
| ೧೮. ಗುರಿ ಇಲ್ಲದ ಪಯಣ | ಶಾಹಿದಾ ತಸ್ನೀಂ | ೧೦೯ .... ೧೧೪ |
| ೧೯. ತಾಳ್ಮೆ | ಖತೀಜಾ ಸಫ್‌ರೀನಾ | ೧೧೫ .... ೧೧೮ |
| ೨೦. ಮಾನವೀಯತೆ | ಸಮೀನಾ ಅಬ್ದುಲ್ ವಾಹಿದ್ | ೧೧೯ .... ೧೨೩ |
| ಶುಭ ಹಾರೈಕೆಗಳು | | ೧೨೪ .... ೧೨೬ |
| ಪದಗಳ ಅರ್ಥ | | ೧೨೭ |
| ಲೇಖಕರ ಪ್ರಕಟಿತ ಕೃತಿಗಳು | | ೧೨೮ |

# ಹಲೀಮಾ

ಮುಹಮ್ಮದ್ ಬಡ್ಡೂರು

ಕಾ.... ಕಾ...

ನಿದ್ದೆಯಿಂದ ಎದ್ದು ಕೈ ಕಾಲಿನ ಜಡ ಬಿಡಿಸುತ್ತಾ ಮುಖ ತೊಳೆದು ಹೊರಗೆ ಬಂದ ಲತೀಫ್‌ನಿಗೆ, ಎಡೆಬಿಡದೆ ಕಾಗೆ ಕೂಗುವುದು ಕೇಳಿಸಿತು. ಅವನು ಕಣ್ಣಿಟ್ಟು ಆ ಕಾಗೆಯನ್ನೇ ನೋಡುತ್ತಾ ನಿಂತ.

ಹಳೆಯ ಮನೆಯ ಮಾಡಿನ ಮೇಲಿದ್ದ ಆ ಕಾಗೆ ಕಾ...ಕಾ... ಎಂದು ಕೂಗುತ್ತಲೇ ಇದ್ದುದನ್ನು ಮತ್ತೆ ಮತ್ತೆ ನೋಡುತ್ತಾ ನಿಂತ ಲತೀಫ್‌ಗೆ ಅದೇನೋ ನೆನಪಾಯಿತು. ಆ ನೆನಪು ಪಕ್ವಗೊಳ್ಳುತ್ತಲೇ ಅವನ ಮುಖ ಅರಳತೊಡಗಿತು.

ಅಲ್ಲೇ ಅಂಗಳದ ಮೂಲೆಯಲ್ಲಿದ್ದ ಪಾತ್ರೆಯಲ್ಲಿದ್ದ ನೀರಿನಿಂದ ಹಲ್ಲುಜ್ಜಿ, ಮುಖ ತೊಳೆದು ಹಳೇ ಬಟ್ಟೆಯ ತುಂಡಿನಿಂದ ಮುಖ ಒರೆಸಿ ಮನೆಯ ಒಳಗೆ ಓಡಿದ.

ಅದು ಎರಡೇ ಎರಡು ಕೋಣೆಯ ಪುಟ್ಟ ಮನೆ. ಅಡುಗೆ ಕೋಣೆಯಲ್ಲಿ ಚಹಾಕ್ಕೆ ನೀರನ್ನು ಒಲೆಯ ಮೇಲಿಟ್ಟು ತೆಂಗಿನ ಗರಿಗಳನ್ನು ಒಲೆಯೊಳಗೆ ತಳ್ಳುತ್ತಿದ್ದ ಅಮ್ಮನಲ್ಲಿ, ' ಅಮ್ಮಾ... ಕಾಗೆ ಕೂಗುತ್ತಲೇ ಇದೆ ' ಎಂದ. ಮಗನ ಮಾತನ್ನು ಅರ್ಥೈಸಲಾಗದ ಆ ತಾಯಿ ಮಗನನ್ನೇ ದಿಟ್ಟಿಸಿ ನೋಡಿದಳು.

'ಕಾಗೆ ಎಡೆಬಿಡದೆ ಕೂಗಿದರೆ, ಆ ಮನೆಗೆ ನೆಂಟರು ಬರುತ್ತಾರಂತೆ, ಅಲ್ವ ಅಮ್ಮಾ... ನೋಡಿ. ನಮ್ಮ ಮನೆಯ ಮಾಡಿನ ಮೇಲೆ ಬೆಳಗ್ಗಿನಿಂದ ಒಂದು ಕಾಗೆ ಕಾ... ಕಾ... ಎನ್ನುತ್ತಲೇ ಇದೆ. ಹಾಗಿದ್ದರೆ, ನಮ್ಮ ಮನೆಗೆ ನನ್ನ ತಂದೆ ಈವತ್ತು ಬರುತ್ತಾರೆ. ನನಗೆ ಅಂಗಿ, ಚಡ್ಡಿ ತರ್ತಾರೆ, ಕೈ ತುಂಬ ಹಣ ಕೊಡುತ್ತಾರೆ. ನಮ್ಮನ್ನು ಹೊಸ ಮನೆಗೆ ಕರೆದುಕೊಂಡು ಹೋಗುತ್ತಾರೆ' ಎಂದು ಹೇಳುತ್ತಲಿದ್ದ ಮಗ ಲತೀಫ್‌ನ ತಲೆಯನ್ನು ಹಲೀಮಾ ಎತ್ತಿ ನೋಡಿದಳು.

ಒಲೆಗೆ ಊದಿ ಊದಿ ಕೆಂಪಾಗಿದ್ದ ಆ ಕಣ್ಣಲ್ಲಿ ನೀರು ಆಟವಾಡತೊಡಗಿತು. ತಂದೆಯನ್ನು ನೋಡಿಯೇ ಇರದ ತನ್ನ ಮಗ ಲತೀಫ್, ಬುದ್ಧಿ ಬೆಳೆದ ನಂತರ ಆಗಾಗ ತಂದೆಯನ್ನು ನೆನೆಪಿಸುತ್ತಲೇ ಇದ್ದ. ಇದೀಗ ಕಾಗೆ ಕೂಗಿದಾಗ ಅದು ತಂದೆ ಬರುವುದರ ಸೂಚನೆ ಎಂದು ಭಾವಿಸಿ ಮಗ ಕುಶಿಪಡುವುದನ್ನು ಕಂಡಾಗ, ಹಲೀಮಾಳ ಕಣ್ಣು ತೇವಗೊಂಡಿತು. ಹಳೆಯ ನೆನಪುಗಳು ಮರುಕಳಿಸತೊಡಗಿತು.

* * *

ಆರು ವರ್ಷ ಪ್ರಾಯದಲ್ಲೇ ತನ್ನ ತಾಯಿಯನ್ನು ಕಳಕೊಂಡ ಹಲೀಮಾ, ತಂದೆಯ ಆರೈಕೆಯಲ್ಲಿ ಬೆಳೆಯತೊಡಗಿದಳು. ಮಗಳ ಮೇಲಿನ ಪ್ರೀತಿ, ಕಾಳಜಿಯಿಂದ ಮರು ಮದುವೆಯಾಗದ ಹಸನ್, ಕೂಲಿ ಕೆಲಸ ಮಾಡುತ್ತಾ ದಿನ ದೂಡುತ್ತಿದ್ದ.

ಹಸನ್‌ಗೆ ಹತ್ತಿರದ ಸಂಬಂಧಿಕರು ಅಂತ ಯಾರೂ ಇರಲಿಲ್ಲ. ಒಂದುವರೆ ಎಕ್ರೆ ದರ್ಖಾಸ್ ಜಮೀನು, ಅದರಲ್ಲೊಂದು ಪುಟ್ಟ ಮನೆಯನ್ನು ಹೊರತುಪಡಿಸಿದರೆ ಅವನಿಗೆ ಬೇರೆ ಆಸ್ತಿಯೇ ಇಲ್ಲ. ಮಳೆಗಾಲದಲ್ಲಿ ತರಕಾರಿ ಬೆಳೆದು ಮಾರುತ್ತಾ, ಉಳಿದ ಎಂಟು ತಿಂಗಳಲ್ಲಿ ಸಿಕ್ಕಿದ ಕಡೆ ಕೂಲಿ ಕೆಲಸ ಮಾಡುತ್ತಲೇ ಮಗಳನ್ನು ಸಾಕತೊಡಗಿದ. ಅವಳಿಗೆ ತಿಂಡಿ ತಿನಿಸು, ಬಟ್ಟೆ ಬರೆ ಹೀಗೆ ಯಾವುದರಲ್ಲೂ ಕೊರತೆಯಾಗದಂತೆ ನೋಡಿಕೊಳ್ಳುತ್ತಿದ್ದ. ಮದ್ರಸಕ್ಕೂ ಕಲಿಸುತ್ತಿದ್ದ.

ತಾಯಿ ಕಣ್ಮುಚ್ಚಿ ಎಂಟು ವರ್ಷವಾಗಿತ್ತು. ತಂದೆಯ ಆರೈಕೆ, ಕೊಂಡಾಟದಿಂದ ಬೆಳೆದ ಹಲೀಮಾ ಹದಿಮೂರನೇ ವರ್ಷದಲ್ಲೇ ಗುಂಡು ಗುಂಡಾಗಿ ಚೆಂದವಾಗಿ ಕಾಣುತ್ತಿದ್ದಳು. ಪೋಲಿ ಹುಡುಗರು ಆಕೆಯತ್ತ ಒಂದು ನೋಟ ಬೀರತೊಡಗಿದರು.

ಅದೊಂದು ರಾತ್ರಿ ಮೂತ್ರವಿಸರ್ಜನೆಗಾಗಿ ಹೊರ ಹೋದ ಹಸನ್‌ಗೆ ವಿಷದ ಹಾವು ಕಚ್ಚಿತು. ತಕ್ಷಣ ಔಷಧಿಯ ವ್ಯವಸ್ಥೆಯ ಮಾಡಲಾಗದೆ, ವಿಷ ಏರುತ್ತಲೇ ಹಸನ್ ಇಹಲೋಕ ತ್ಯಜಿಸಿದ್ದ. ಕೂಡು ಕುಟುಂಬವಿಲ್ಲದ ಹಸನ್‌ನನ್ನು ಜಮಾಅತರೇ ಸೇರಿ ದಫನ ಮಾಡಿದರು.

ಹದಿಮೂರನೇ ಹರೆಯದಲ್ಲೇ ತಬ್ಬಲಿಯಾದ ಹಲೀಮಾಳನ್ನು ಯಾರು ನೋಡಿಕೊಳ್ಳುವುದು ಎಂಬುದರ ಬಗ್ಗೆ ಮಸೀದಿಯಲ್ಲಿ ಚರ್ಚೆಯಾಗತೊಡಗಿತು.

'ಯತೀಂ ಹುಡುಗಿ ಹಲೀಮಾಳನ್ನು ಸಾಕುವ ಹೊಣೆ ಈ ಜಮಾಅತ್‌ನವರದ್ದು. ಹಾಗಾಗಿ ಯಾರಾದರು ಮುಂದೆ ಬರಬೇಕು ' ಎಂದು ಮಸೀದಿಯ ಖತೀಬ್ ಕರೆ ನೀಡಿದರು.

ನನಗೆ ಮನೆಗೆಲಸ ಮಾಡಲು ಸಾಧ್ಯವಾಗುತ್ತಿಲ್ಲ. ಯಾರಾದರೊಬ್ಬರನ್ನು ಕರೆದುಕೊಂಡು ಬನ್ನಿ ಎಂದು ಹೆಂಡತಿ ಆಗಾಗ ಹೇಳುತ್ತಿದ್ದುದು, ಮಸೀದಿಯ ಅಧ್ಯಕ್ಷ ಅದ್ರಾಮ ಹಾಜಿಗೆ

ನೆನಪಾಯಿತು. ಇದೇ ಹಲೀಮಾಳನ್ನು ನಾನೇ ಮನೆಗೆ ಕರೆದುಕೊಂಡು ಹೋದರೆ ಹೇಗೆ ? ಊರವರ ಮುಂದೆ ಸಾಕುವ ಹೊಣೆ ಹೊತ್ತಂತೆಯೂ ಆಗುತ್ತದೆ. ಮನೆಗೆಲಸಕ್ಕೊಬ್ಬಳನ್ನು ನೇಮಿಸಿದಂತೆಯೂ ಆಗುತ್ತದೆ ಎಂದು ಭಾವಿಸಿದ ಅದ್ರಾಮ ಹಾಜಿ, 'ಈ ಜಮಾಅತ್‌ನ ಕಷ್ಟ, ಸುಖದಲ್ಲಿ ಭಾಗಿಯಾಗುವುದು ಜಮಾಅತ್‌ನ ಅಧ್ಯಕ್ಷನಾದ ನನ್ನ ಕರ್ತವ್ಯವಾಗಿದೆ. ಹಾಗಾಗಿ ಹಲೀಮಾಳನ್ನು ಸಾಕುವ ಜವಬ್ದಾರಿ ನನಗಿರಲಿ' ಎಂದು ಹೇಳಿದರು. ಅಲ್ಲಿ ಸೇರಿದವರು ಅದ್ರಾಮ ಹಾಜಿಯ ಉದಾರತೆಯನ್ನು ಕೊಂಡಾಡಿದರು.

* * *

'ಅಮ್ಮಾ... ಯಾಕಮ್ಮ ಅಳುತ್ತಿದ್ದೀರಿ. ಏನಾಯಿತು. ಅಳಬೇಡಿ ಅಮ್ಮಾ... ಶಾಲೆಗೆ ಹೋಗುವ ಸಮಯವಾಯಿತು. ಚಾ ಕೊಡಿ ಅಮ್ಮಾ...'- ಲತೀಫ್ ತನ್ನ ತಾಯಿಯನ್ನು ಸಮಾಧಾನ ಪಡಿಸುತ್ತಾ ಶಾಲೆಗೆ ಹೊರಡಲು ಅನುವಾದ.

ಕುಳಿತಲ್ಲೇ ಯೋಚನಾ ಲಹರಿಯಿಂದಾಗಿ ಇಳಿದ ಕಣ್ಣೀರನ್ನು ಒರೆಸಿದ ಹಲೀಮಾ, ಮಗನಿಗೆ ಚಾ, ತಿಂಡಿ ಕೊಟ್ಟು ಆತ ತಿನ್ನುವುದನ್ನೇ ಪ್ರೀತಿಯಿಂದ ನೋಡತೊಡಗಿದಳು.

ಹಾಗೇ ಮಗನಿಗೆ ಸ್ನಾನ ಮಾಡಿಸಿ, ಬಟ್ಟೆ ಬರೆ ತೊಡಿಸಿ, ಹಳೆಯ ಹರಿದ ಚೀಲವನ್ನು ಆಕೆಯ ಭುಜಕ್ಕೆ ಸಿಕ್ಕಿಸಿ ಅಂಗಳ ಇಳಿಸಿದಳು. 'ಅಮ್ಮಾ... ಈವತ್ತು ಖಂಡಿತಾ ಅಪ್ಪ ಬರ್‍ತಾರೆ. ನಾನು ಶಾಲೆಯಿಂದ ಬೇಗ ಬರ್‍ತೇನೆ' ಎಂದು ಲತೀಫ್ ಹೇಳುತ್ತಾ, ಐಸ್‌ಕ್ಯಾಂಡಿ ತಿನ್ನಲು ಎಂಟಾಣೆ ಕೇಳಿದ. ಅಲ್ಲೇ ಕಿಟಕಿಯ ಬಾಗಿಲಿನ ಎಡೆಯಲ್ಲಿ ಸಿಕ್ಕಿಸಿಟ್ಟಿದ್ದ ಎಂಟಾಣೆಯನ್ನು ಮಗನಿಗೆ ಕೊಡುತ್ತಾ ಪ್ರೀತಿಯಿಂದ ತಲೆ ಸವರಿದಳು. ಹಣ ಸಿಕ್ಕಿದ ಕುಶಿಯಲ್ಲಿ ಲತೀಫ್, ಡುರ್‍ರ್... ಅಂತ ಬಸ್‌ನ ಶಬ್ದ ಹೊರಡಿಸಿದಂತೆ ಮಾಡಿ ಓಡಿ ಹೋದ.

ಮಗ ಮರೆಯಾಗುವವರೆಗೂ ಅಲ್ಲೇ ನಿಂತು ನೋಡಿದ ಹಲೀಮಾ, ಅಲ್ಲಿಂದ ಒಳ ಹೊಕ್ಕು ತಿಂಡಿ ತಿಂದು ಚಾ ಕುಡಿದು ಪಾತ್ರೆ ತೊಳೆದಿಟ್ಟಳು. ಹಾಗೇ ಬಾಗಿಲ ಬಳಿಯಲ್ಲೇ ಕುಳಿತು ಬೀಡಿ ಸೂಪನ್ನು ಮಡಿಲಿಗೇರಿಸಿದಳು. ಆವಾಗ, ಅವಳಿಗೆ ಬದುಕಿನ ದಿನಗಳು ನೆನಪಾಗತೊಡಗಿದವು.

* * *

ಅದ್ರಾಮ ಹಾಜಿಯ ಮನೆ ಸೇರಿದ ಮೇಲೆ ಹಲೀಮಾಳ ಬದುಕು ಹಸನಾಗಲಿಲ್ಲ. ಮದ್ರಸಕ್ಕೆ ಹೋಗುವುದು ನಿಂತಿತು. ದಿನವಿಡೀ ಕೆಲಸ ಮಾಡುವುದು ಆಕೆಗೆ ಅನಿವಾರ್ಯ ವಾಯಿತು. ಮುಂಜಾನೆ ಎದ್ದು ಕೆಲಸ ಮಾಡಲು ಕೈ ಹಿಕ್ಕಿದರೆ, ಹಾಜಿಯಾರರ ಮನೆಯವರು ರಾತ್ರಿ ಊಟ ಮಾಡಿದ ಬಟ್ಟಲು ತೊಳೆಯುವವರೆಗೂ ಕೆಲಸ ಮಾಡಬೇಕಾಗಿತ್ತು.

ಹಲೀಮಾಳನ್ನು ತನ್ನ ಮಗಳ ಹಾಗೆ ನೋಡಿಕೊಳ್ಳುತ್ತೇನೆ ಎಂದು ಆಶ್ವಾಸನೆ ಕೊಟ್ಟು ಮನೆಗೆ ಕರೆತಂದಿದ್ದ ಹಾಜಿಯಾರರು ಹಾಗೇ ನಡೆದುಕೊಳ್ಳಲೇ ಇಲ್ಲ. ತನ್ನ, ಹೆಂಡತಿ ಮತ್ತು ಮಕ್ಕಳ ಚಾಕರಿ ಮಾಡಿಸಿದರಲ್ಲದೆ, 'ಹೆಂಗಸು' ಆಗಿದ್ದಾಳೆ ಎಂಬ ನೆಪವೊಡ್ಡಿ ಮದ್ರಸಕ್ಕೆ ಹೋಗದಂತೆಯೂ ನೋಡಿಕೊಂಡರು.

ಅದ್ರಾಮ ಹಾಜಿಯ ಹೆಂಡತಿ ಬೆಳಿಗ್ಗೆ ಎಂಟು ಗಂಟೆಗೆ ಎದ್ದು, ತಿಂಡಿ ತಿಂದು, ಟಿ.ವಿ.ಯ ಮುಂದೆ ಕೂತು ಬಿಡುತ್ತಾರೆ. ಊಟ, ಚಾ, ತಿಂಡಿ ಎಲ್ಲವೂ ಅವರಿಗೆ ಟಿ.ವಿಯ ಮುಂದೆಯೇ ಆಗಬೇಕು. ಮನೆಯ ಎಲ್ಲಾ ಕೆಲಸವನ್ನು ಹಲೀಮಾಳ ತಲೆಗೆ ಹಾಕಿ ಇಡೀ ದಿನ ಟಿ.ವಿ.ಯ ಮುಂದೆ ಕುಳಿತು ಅಹಂಕಾರ ಮೆರೆಯುತ್ತಾರೆ.

ಅಂತೂ ಹಾಜಿಯಾರರ ಮನೆಯಲ್ಲಿ ಹಲೀಮಾ ಬಹಳ ಕಷ್ಟದಲ್ಲಿ ಎರಡು ವರ್ಷ ಕಳೆದಳು. ಎಲ್ಲಾ ನೋವನ್ನು ನುಂಗಿದಳು. ಈಗ ಹಲೀಮಾಳಿಗೆ ಹದಿನಾರು ವರ್ಷ ಪ್ರಾಯ. ನೋಡಲು ತುಂಬಾ ಚೆಂದ ಕಾಣುತ್ತಾಳೆ. ಇತ್ತೀಚಿನ ದಿನಗಳಲ್ಲಿ ಹಲೀಮಾಳನ್ನು ಹಾಜಿಯಾರರು ಕೆಟ್ಟದೃಷ್ಟಿಯಿಂದ ನೋಡುತ್ತಾರೆ. ಅವರ ಮನದಲ್ಲಿ ನೂರಾರು ಕೆಟ್ಟ ಭಾವನೆಗಳು. ಕೆಲಸದ ನೆಪದಲ್ಲಿ ಹತ್ತಿರ ಕರೆದು ಮೈ ಮುಟ್ಟಿ ಅದರಲ್ಲೇ ವಿಚಿತ್ರ ಸುಖ ಪಡೆಯತೊಡಗಿದರು.

ಆ ದಿನ ಮನೆಯಲ್ಲಿ ಹಲೀಮಾ ಮತ್ತು ಹಾಜಿಯಾರರಲ್ಲದೆ ಬೇರೆ ಯಾರೂ ಇರಲಿಲ್ಲ. ಸದಾ ಟಿ.ವಿ.ಯ ಮುಂದೆ ಕುಳಿತಿದ್ದ ಹಾಜಿಯಾರರ ಹೆಂಡತಿ, ತನ್ನ ತಮ್ಮನಿಗೆ ಹೆಣ್ಣು ನೋಡುವುದಕ್ಕಾಗಿ ಅವನ ಆಮಂತ್ರಣದ ಮೇರೆಗೆ ತವರು ಮನೆಗೆ ಹೋಗಿದ್ದರು.

ಹೆಂಡತಿ ಇಲ್ಲದೆ, ಏಕಾಂಗಿಯಾಗಿದ್ದಾಗಲೇ ಹಾಜಿಯಾರರ ಮನಸ್ಸು ವಿಕೃತಗೊಳ್ಳ ತೊಡಗಿತು. ಅವರು ಮುಸ್ಸಂಜೆಯಾಗುವುದನ್ನೇ ಕಾದರು. ಆದರೆ, ಹಾಜಿಯಾರರಿಗೆ ಸಮಯವೇ ಹೋಗುವುದಿಲ್ಲ. ಅಂಗಡಿ, ತೋಟ, ಮಸೀದಿ, ಹೊಟೇಲ್ ಅಂತೆಲ್ಲಾ ಅತ್ತಿತ್ತ ಓಡಾಡಿದರು. ಅವರಿಗೆ ಪ್ರತೀ ಕ್ಷಣ ಕೂಡ ಒಂದೊಂದು ವರ್ಷದ ಹಾಗೆ ಕಾಣತೊಡಗಿತು. ಆಗಾಗ ವಾಚ್ ನೋಡುತ್ತಲೇ ಇದ್ದರು. ಅಂತೂ ರಾತ್ರಿ ಎಂಟು ಗಂಟೆಯಾಗುವಾಗ ಮನೆ ಸೇರಿದರು.

ಪ್ರತೀ ದಿನ ರಾತ್ರಿ ಒಂಬತ್ತು ಗಂಟೆಗೆ ಮನೆ ಸೇರುತ್ತಿದ್ದ ಹಾಜಿಯಾರರು ಆ ದಿನ ಬೇಗ ಬಂದುದನ್ನು ಕಂಡ ಹಲೀಮಾಳಿಗೆ ಆಶ್ಚರ್ಯವಾಯಿತು. ಏನೋ ಆಪತ್ತು ಕಾದಿದೆ ಎಂದು ಭಾವಿಸಿ ದಳು. ಆದರೂ ಆ ಮನೆಗೆ ಸೇರಿದ ಕರ್ಮಕ್ಕಾಗಿ ದುರಂತಗಳನ್ನು ಎದುರಿಸಬೇಕಾಗಿತ್ತು. ಆಕೆ ಉಪಾಯವಿಲ್ಲದೆ ಹಾಜಿಯಾರರಿಗೆ ಊಟ ಬಡಿಸಿದಳು. ಅನ್ನ ಗಂಟಲಿಗೆ ಇಳಿಯುತ್ತಿದ್ದಂತೆಯೇ ಹಾಜಿಯಾರರು ಆಸೆಯಿಂದ ಹಲೀಮಾಳತ್ತ ಕೆಟ್ಟ ದೃಷ್ಟಿ ಹಾಯಿಸಿ ನಗು ಚೆಲ್ಲಿದರು. ಹಾಗೇ ಕೈ ತೊಳೆದು ಮಲಗಲೆಂದು ತನ್ನ ಕೋಣೆಯೊಳ ಹೊಕ್ಕರು. ಕುಡಿಯಲು ನೀರು ತಾ ಎಂದರು. ಹಲೀಮಾ ನೀರು ಕೊಂಡು ಹೋಗಿ ಕೊಟ್ಟು ಹೊರಗೆ ಬರುವಷ್ಟರಲ್ಲಿ ಹಾಜಿಯಾರರು ಆಕೆಯ ಕೈಯನ್ನು ಬಲವಾಗಿ ಹಿಡಿದರು. ಹಲೀಮಾ ಕೊಸರಿದರೂ ಹಾಜಿಯಾರರು ಬಿಡಲಿಲ್ಲ. ಮಂಚಕ್ಕೆ ಎಳೆದು ಅಪ್ಪಿ ಹಿಡಿದರು.

ಹಲೀಮಾಳಿಗೆ ಸಿಡಿಲು ಬಡಿದಂತಾಯಿತು. ದೇಹ ಗಡಗಡ ನಡುಗುತೊಡಗಿತು. ಏನು ಮಾಡಬೇಕು ಎಂದು ಅವಳಿಗೆ ಆ ಕ್ಷಣ ಗೊತ್ತಾಗಲಿಲ್ಲ. ಹಾಜಿಯಾರರ ಹಿಡಿತ ಗಟ್ಟಿಯಾಗುತ್ತಾ ಹೋದಂತೆಯೇ, ಹಲೀಮಾ ಉರುಳಿಗೆ ಸಿಲುಕಿದ ಮೊಲದಂತೆ ಚಡಪಡಿಸತೊಡಗಿದಳು. ಅದ್ಯಾವುದೋ ಧೈರ್ಯದಿಂದ ಆಕೆ, ಹಾಜಿಯಾರರ ಕೈಯನ್ನು ಕಚ್ಚಿದಳು. 'ಹ್ಹಾ...' ಎಂಬ ಶಬ್ದ ಹಾಜಿಯಾರರ ಬಾಯಿಯಿಂದ ಹೊರಬಂತು. ಅವರಿಗೆ ನೋವು ತಡೆಯಲಾಗಲಿಲ್ಲ. ಕೈ ಸಡಿಲಾಯಿತು.

ಹಾವಿನ ಬಾಯಿಯಿಂದ ತಪ್ಪಿದ ಕಪ್ಪೆಯ ಹಾಗೆ, ಒಂದೇ ನೆಗೆತಕ್ಕೆ ಹಲೀಮಾ ಆ ಮನೆಯಿಂದ ಹೊರ ಬಂದಳು. ಸುತ್ತಮುತ್ತ ಕತ್ತಲು. ಆದರೆ, ಹಾಜಿಯಾರರ ಉಪಟಳದ ಮುಂದೆ ಆ ಕತ್ತಲು ಅವಳಿಗೆ ಕಗ್ಗತ್ತಲೇ ಅಲ್ಲ. ಮತ್ತೆ ಹಾವಿನ ಹಾಗೆ ಬಂದು ಕಚ್ಚಿ ಹಿಡಿದಾರು ಎಂದು ಭಾವಿಸಿದ ಹಲೀಮಾ, ಅಲ್ಲಿಂದ ಓಟಕ್ಕಿತ್ತಳು. ಎಲ್ಲಿಗೆ ಹೋಗಬೇಕು ಎಂದು ಅವಳಿಗೆ ದಾರಿ ಕಾಣಲಿಲ್ಲ. ತಟ್ಟನೆ ಅವಳಿಗೆ ಮಸೀದಿಯ ಖತೀಬರ ನೆನಪಾಯಿತು. ಹಾಗೇ ಓಡಿ ಆ ಮನೆ ಸೇರಿದಳು.

ಖತೀಬರು ಆಗಷ್ಟೇ ಊಟ ಮಾಡಿ ಕೈ ತೊಳೆಯುತ್ತಿದ್ದರು. ಏಕಾಏಕಿ ಹಲೀಮಾ ಮನೆಯೊಳಗೆ ನುಗ್ಗಿದ್ದನ್ನು ಕಂಡು ಅವರು ಆಶ್ಚರ್ಯಗೊಂಡರು. ಏನು ಸಂಗತಿ ಎಂದು ಕೇಳಿದರು. ಹಾಜಿಯಾರರ ಮನೆ ಸೇರಿದ ನಂತರ ಅಲ್ಲಿ ನಡೆದ ಎಲ್ಲಾ ವಿಷಯವನ್ನೂ ಬಿಡಿಸಿ ಹೇಳಿದಳು.

ಹಲೀಮಾಳ ಮೈಗೆ ಹಾಜಿಯಾರರು ಕೈ ಹಾಕಿದ್ದಾರೆ ಎಂಬ ವಿಷಯ ಕೇಳಿದಾಗ, ಖತೀಬರ ದೇಹದ ರೋಮಗಳು ಎದ್ದು ನಿಲ್ಲತೊಡಗಿದವು. ಅವರು ಕಣ್ಮುಚ್ಚಿ ಆಕಾಶ ನೋಡುತ್ತಾ 'ಯಾ ಅಲ್ಲಾಹ್'ಎಂದರು.

'ಹಲೀಮಾ... ಅಲ್ಲಾಹು ದೊಡ್ಡವನು. ಅವನಿಗೆ ಇದ್ಯಾವುದೂ ಒಂದು ಲೆಕ್ಕವಲ್ಲ. ನೀನೇನು ಹೆದರಬೇಡ. ಇದು ನಿನ್ನದೇ ಮನೆ ಅಂತ ಭಾವಿಸಿಕೋ' ಎಂದು ಹೇಳಿದ ಖತೀಬರು ತನ್ನ ಹೆಂಡತಿಯನ್ನು ಕರೆದು ಹಲೀಮಾಳನ್ನು ಒಳಗೆ ಕರೆದುಕೊಂಡು ಹೋಗುವಂತೆ ಹೇಳಿದರು.

ಹಲೀಮಾಳ ಹಿತದೃಷ್ಟಿಯಿಂದ ಮಸೀದಿಯ ಖತೀಬರು ಆ ಕಹಿ ಘಟನೆಯನ್ನು ಇತರರ ಕಿವಿಗೆ ಬೀಳದಂತೆ ನೋಡಿಕೊಂಡರು. ಹಾಗೇ ಅವಳನ್ನು ತನ್ನ ಮಗಳ ಹಾಗೆ ನೋಡಿಕೊಂಡರು. ಪಕ್ಕದ ಅಂಗಡಿಯ ಅಬೊಕೊರು ಎಂಬಾತ ಹಲೀಮಾಳನ್ನು ತಾನು ಸಾಕುತ್ತೇನೆ ಎಂದು ಹೇಳಿದರೂ, ಆತನ ನಡತೆ ಚೆನ್ನಾಗಿಲ್ಲದ್ದನ್ನು ಮೊದಲೇ ಅರಿತಿದ್ದ ಖತೀಬರು, ಅವನ ಬೇಡಿಕೆಗೆ ಸಮ್ಮತಿಸಲಿಲ್ಲ.

* * *

ಐದಾರು ತಿಂಗಳ ಹಿಂದೆ ಕೇರಳದಿಂದ ಬಂದಿದ್ದ ಮೊಯಿದಿನ್ ಊರಲ್ಲೇ ಮೇಸ್ತ್ರಿ ಕೆಲಸ ಮಾಡುತ್ತಿದ್ದ. ಅಬೊಕೊರುವಿನ ಅಂಗಡಿಯ ಬಳಿ ಇದ್ದ ಕೋಣೆಯನ್ನು ಬಾಡಿಗೆಗೆ ಹಿಡಿದಿದ್ದ. ಹಾಗಾಗಿ ಅಬೊಕೊರು ಮತ್ತು ಮೊಯಿದಿನ್ ಆತ್ಮೀಯರಾಗಿ ಬಿಟ್ಟಿದ್ದರು. ಆ ಆತ್ಮೀಯತೆಯ ನಡುವೆಯೇ ಮದುವೆಯ ಪ್ರಸ್ತಾಪವೂ ಬಂತು.

ಹಲೀಮಾಳನ್ನು ಮೊಯಿದಿನ್‌ಗೆ ಮದುವೆ ಮಾಡಿಕೊಟ್ಟರೆ ಹೇಗೆ ಎಂದು ಅಬೊಕೊರು ಖತೀಬರಲ್ಲಿ ಕೇಳಿದಾಗ, ಅವರು ಅದನ್ನು ಜಮಾಅತರ ಗಮನಕ್ಕೆ ತಂದರು. ಹಾಗೇ ಬಿರುಸಿನ ಮಾತುಕತೆ ನಡೆಯಿತಲ್ಲದೆ ಕೆಲವೇ ದಿನದಲ್ಲಿ ಹಲೀಮಾಳ ಮದುವೆ ನೆರವೇರಿಸಿಕೊಡಲಾಯಿತು.

ಹಲೀಮಾಳ ತಂದೆ ಇರುವಾಗ ಇದ್ದ ಒಂದುವರೆ ಎಕ್ರೆ ಜಮೀನು ಇದೀಗ ಕೇವಲ ೨೦ ಸೆಂಟ್ಸ್‌ಗೆ ಇಳಿದಿದೆ. ಉಳಿದ ಜಮೀನನ್ನು ಅದ್ರಮಾಜಿ ಮತ್ತವರ ಗೆಳೆಯರು ಸೇರಿ ಒಳಗೆ ಹಾಕಿದ್ದರು. ಅದನ್ನು ಪ್ರತಿಭಟಿಸಲಾಗದ ಹಲೀಮಾ, ಗಂಡ ಮೊಯಿದಿನ್‌ನಲ್ಲಿ ಹೇಳಿ ಆ ಜಮೀನಿಗೆ ಬೇಲಿ ಹಾಕಿಸಿ ಬಂದೋಬಸ್ತ್ ಮಾಡಿಸಿದಳು.

ದಿನ ಉರುಳುತ್ತಲೇ ಇತ್ತು. ಹಲೀಮಾ ಗರ್ಭಿಣಿಯಾದಳು. ಮೊಯಿದಿನ್‌ನ ಜೀವನದಲ್ಲೂ ಬದಲಾವಣೆಗಳು ಕಂಡು ಬಂತು. ಒಳ್ಳೆಯತನ ದೂರವಾಗಿ ಕೆಟ್ಟ ಹವ್ಯಾಸಗಳು ಆತನಿಗೆ ಕರಗತವಾದವು. ಹಾಗಾಗಿ ಸಂಸಾರ ಮುಳುಗುವ ದೋಣಿಯಂತಾಯಿತು. ಅದರ ಮಧ್ಯೆಯೇ ಹಲೀಮಾ ಗಂಡು ಮಗುವಿಗೆ ಜನ್ಮ ನೀಡಿದಳು. ಲತೀಫ್‌ಗೆ ಆರು ತಿಂಗಳಾಗುತ್ತಲೇ ಮೊಯಿದಿನ್ ತನ್ನ ಹೆಂಡತಿಯಲ್ಲಿ ಗಲ್ಫ್‌ಗೆ ಹೋಗುವ ಇಂಗಿತ ವ್ಯಕ್ತಪಡಿಸಿದ.

'ಹಲೀಮಾ... ಈ ಊರಲ್ಲಿ ದುಡಿಯುತ್ತಲೇ ಇದ್ದರೆ ನಮ್ಮ ಬದುಕು ಎಂದೂ ಹಸನಾಗದು. ಕೈ ತುಂಬಾ ಸಂಪಾದಿಸಬೇಕೆಂದಿದ್ದರೆ, ಗಲ್ಫ್‌ಗೆ ಹೋಗಲೇಬೇಕು. ನೀನು ನಿನ್ನಲ್ಲಿದ್ದ ಚಿನ್ನಾಭರಣ ಕೊಡು' ಎಂದು ಮೊಯಿದಿನ್ ಕೇಳಿದ.

ಹಲೀಮಾ ಆತನ ಪ್ರಸ್ತಾಪವನ್ನು ವಿರೋಧಿಸಿದಳು. ಆದರೆ, ಅದನ್ನು ಮೊಯಿದಿನ್ ಗಣನೆಗೆ ತೆಗೆದುಕೊಳ್ಳಲಿಲ್ಲ. ಆಕೆಯ ನೋವನ್ನು ಅರ್ಥ ಮಾಡಿಕೊಳ್ಳಲೂ ಇಲ್ಲ. ಆಕೆಗೆ ತಿಳಿಯದಂತೆ, ೨೦ ಸೆಂಟ್ಸ್ ಜಾಗವನ್ನು ಸಹಕಾರಿ ಸೊಸೈಟಿಯಲ್ಲಿ ಅಡವಿಟ್ಟು ಅದರಿಂದ ಸಿಕ್ಕಿದ ಹಣ ಮತ್ತು ಹಲೀಮಾಳ ಮೈಮೇಲಿದ್ದ ಚಿನ್ನವನ್ನು ಮಾರಿ ಸಿಕ್ಕಿದ ಹಣವನ್ನು ಕೈಗೆತ್ತಿಕೊಂಡು ಹೋದ ಮೊಯಿದಿನ್ ನಂತರ ಬರಲೇ ಇಲ್ಲ.

ಗಂಡ ಮೋಸ ಮಾಡಿ ಓಡಿ ಹೋಗಿದ್ದಾನೆ ಎಂಬುದನ್ನು ತಿಳಿಯಲು ಹಲೀಮಾಳಿಗೆ ಹೆಚ್ಚು ದಿನ ಬೇಕಾಗಲಿಲ್ಲ. ಹೋದ ನಂತರ ಅವನಿಂದ ಯಾವುದೇ ಸುದ್ದಿ ಬಾರದ ಕಾರಣ, ಹಲೀಮಾ ತನ್ನ ಮತ್ತು ಮಗನ ಬದುಕು ಸಾಗಿಸಲು ಬೀಡಿ ಸುರುಟತೊಡಗಿದಳು. ಬಿಡುವಿದ್ದಾಗ, ಪಕ್ಕದ ಅಂಗಡಿಯ ಅಬೊಕೊರುವಿನ ಮನೆಯಲ್ಲಿ ಕೆಲಸ ಮಾಡತೊಡಗಿದಳು. ಆದರೆ ಅಲ್ಲಿ ಮಾನ ಮರ್ಯಾದೆ ಕಾಪಾಡಲು ಅವಳು ಹೆಣಗಾಡಬೇಕಾಯಿತು.

ಹಲೀಮಾಳಿಗೆ ಮಸೀದಿಯ ಅಧ್ಯಕ್ಷ ಅದ್ರಾಮ ಹಾಜಿ ಮತ್ತು ಅಂಗಡಿಯ ಅಬೊಕೊರಿನ ದುಷ್ಟ ಮುಖಗಳು ಎದುರಾದವು. ಒಳ್ಳೆಯವರ ಭಂಗಿ ಕೊಟ್ಟು ಅವರು ಮಾಡುವ ದಗಲ್ಬಾಜಿಗಳು ಅವಳಿಗೆ ಹೇಸಿಗೆ ಹುಟ್ಟಿಸಿದವು. ಒಂಟಿ ಹೆಣ್ಣನ್ನು ಅವರು ಕಾಣುವ ದೃಷ್ಟಿ, ಮಾನ ಮರ್ಯಾದೆ

ಬಿಟ್ಟು, ಅಲ್ಲಾಹನ ಬಗ್ಗೆಯೂ ಭಯ ತಾಳದೆ ಅವರು ತೋರುವ ವರ್ತನೆ ಅವಳಿಗೆ ರೋಷ ಉಕ್ಕಿಸಿತು.

ಊರಲ್ಲಿರುವ ಕೆಲವು ಸಂಘಟನೆಯ ಕಾರ್ಯಕರ್ತರು ಆಕೆಗೆ ಉಪಕಾರ ಮಾಡುವ ವೇಷದಲ್ಲಿ ಬಂದು ತನ್ನ ನೀಚ ಬುದ್ಧಿಯನ್ನು ಹೊರಗೆಡಹಿದ್ದನ್ನು ಕಂಡೂ ಆಕ್ರೋಶಿತಳಾದಳು. ಆದರೆ, ತನಗೆ ಎದುರಾದ ಎಲ್ಲಾ ಕಷ್ಟ, ಆಪತ್ತನ್ನು ಅಲ್ಲಾಹನ ಮೇಲೆ ಹಾಕಿ, ಮಗ ಲತೀಫ್‌ಗಾಗಿ ಉಸಿರು ಇರುವವರೆಗೂ ಬದುಕುವ ದಿಟ್ಟ ಹೆಜ್ಜೆ ಹಾಕಿದಳು.

ಇವೆಲ್ಲದರ ನಡುವೆ ಆಗಾಗ ಬಂದು ಸಹಾಯ ಮಾಡುವ ಮಸೀದಿಯ ಖತೀಬರು ಮತ್ತು ಜವುಳಿ ವ್ಯಾಪಾರಿ ಉಸ್ಮನಾಕ ಹಾಗೂ ಅವರ ಮಗ ಖಾದರ್‌ನ ಒಳ್ಳೆಯತನಗಳೂ ಹಲೀಮಾಳಿಗೆ ನೆನಪಾಗಿ ಬದುಕಲು ಧೈರ್ಯ ತುಂಬಿಸಿದವು.

ಮಸೀದಿಯ ವಂತಿಗೆ ಸಂಗ್ರಹಿಸಲು ಬರುತ್ತಿದ್ದ ಹಮೀದ್, ತುಸು ಹೆಚ್ಚು ಹಲೀಮಾಳ ಮನೆಯಲ್ಲಿ ಕುಳಿತುಕೊಂಡು, 'ನಿನ್ನ ಗಂಡ ಮತ್ತೆ ಬರುವುದಿಲ್ಲ. ನೀನು ಮದುವೆಯಾಗು' ಎಂದು ಒತ್ತಾಯಿಸುತ್ತಲೇ ಇದ್ದ. ಆದರೆ ಹಲೀಮಾ ಅದನ್ನು ಸ್ಪಷ್ಟವಾಗಿ ನಿರಾಕರಿಸುತ್ತಿದ್ದಳು. ಇದ್ದಕ್ಕಿದ್ದ ಹಾಗೆ ಅದೊಂದು ದಿನ ಆತ ಹಲೀಮಾಳ ಜತೆ ಅನುಚಿತವಾಗಿ ವರ್ತಿಸತೊಡಗಿದ. ತನ್ನ ಬದುಕಿನಲ್ಲಿ ಇಂಥ ಕಿರುಕುಳವನ್ನೇ ಎದುರಿಸಿ ನೊಂದಿದ್ದ ಹಲೀಮಾಳಿಗೆ ಆ ದಿನ ಎಲ್ಲಿಂದ ಧೈರ್ಯ ಬಂತೋ ಏನೋ... ಹಿಡಿಸೂಡಿ ಕೈಗೆತ್ತಿಕೊಂಡು ಆತನಿಗೆ ಸನ್ಮಾನ ಮಾಡಿದಳು.

'ದಿಕ್ಕುದೆಸೆ ಇಲ್ಲದ ಕೇರಳದಿಂದ ಬಂದ ಮೊಯಿದಿನ್‌ಗೆ ನನ್ನನ್ನು ಮದುವೆ ಮಾಡಿಕೊಡುವಾಗ ಇವರೆಲ್ಲ ಎಲ್ಲಿದ್ದರು, ಸತ್ತಿದ್ದರಾ ?.... ಇವರೆಲ್ಲ ವರದಕ್ಷಿಣೆಗಾಗಿ ಬಾಯಿ ಬಿಡುವ ಈ ರಾಕ್ಷಸರಲ್ವಾ ? ಮದುವೆಗೆ ಮುಂಚೆ ಇತ್ತ ಸುಳಿಯದ ಈ ಕಾಮುಕರು ಈಗ ತ್ರಿಶಂಕು ಸ್ಥಿತಿಯಲ್ಲಿರುವ ನನ್ನಂಥವರ ಮೇಲೆ ಯಾಕೆ ಕಣ್ಣು ಹಾಕುತ್ತಾರೆ ? ಸೇವೆ ಮಾಡುವ ಹೆಸರಲ್ಲಿ ಸಿಕ್ಕಿದ ಅವಕಾಶವನ್ನು ದುರುಪಯೋಗಪಡಿಸಲು ಬರುವ ಈ ಬಿಳಿ ಕಾಲರ್‌ನ ಹಂದಿಗಳ ಮತ್ತೊಂದು ಮುಖವನ್ನು ಬಿಚ್ಚಿ ತೋರಿಸುವವರು ಯಾರು ?'- ಹಲೀಮಾಳ ಆಕ್ರೋಶ ಹೆಚ್ಚುತ್ತಲೇ ಇತ್ತು.

* * *

'ಮನೆಯಲ್ಲಿ ಯಾರೂ ಇಲ್ವಾ ?'

ಧ್ವನಿ ತೇಲಿ ಬಂದಾಗ ಹಲೀಮಾ ಕಣ್ಣು ಹೊರಗೆ ಹಾಕಿದಳು. ಪ್ಯಾಂಟ್ ಶರ್ಟ್ ತೊಟ್ಟು ಟ್ರಿಮ್ಮಾಗಿದ್ದ ನಾಲ್ಕೈದು ಮಂದಿ ಅಲ್ಲಿ ನಿಂತಿದ್ದರು. ಒಬ್ಬನ ಕೈಯಲ್ಲಿ ದೊಡ್ಡ ಪುಸ್ತಕವೊಂದಿತ್ತು. ಅದನ್ನು ಆತ ತಿರುವಿ ನೋಡುತ್ತಿದ್ದ. ಬಂದವರು ಯಾರೂ ಅಂತ ಹಲೀಮಾಳಿಗೆ ಗೊತ್ತಾಗಲಿಲ್ಲ. ಆದರೆ, ಮುಂಜಾನೆ ಕಾಗೆ ಕೂಗಿದ್ದು, ಮಗ ಲತೀಫ್ ನೆಂಟರು ಬರುತ್ತಾರೆ ಎಂದು ಹೇಳಿದ್ದೆಲ್ಲವೂ ಅವಳಿಗೆ ಈಗ ನೆನಪಾಗತೊಡಗಿತು.

'ಹಲೀಮಾ... ಅಂದ್ರೆ ನೀವೇನಾ ?'

'ಹೌದು' ಎಂಬಂತೆ ಮೆಲ್ಲನೆ ತಲೆ ಅಲ್ಲಾಡಿಸಿದಳು.

'ನೋಡಿ, ಅಮ್ಮ... ಆರು ವರ್ಷದ ಹಿಂದೆ ಈ ಮನೆ, ಜಮೀನನ್ನು ಅಡವಿಟ್ಟು ನಮ್ಮ ಸೊಸೈಟಿಯಿಂದ ಇಪ್ಪತ್ತು ಸಾವಿರ ರೂಪಾಯಿ ಸಾಲ ಪಡೆಯಲಾಗಿತ್ತು. ಈವರೆಗೂ ಅದರ ಅಸಲು, ಬಡ್ಡಿ ಕಟ್ಟಲಿಲ್ಲ. ಈಗ ಬಡ್ಡಿಗೆ ಬಡ್ಡಿ ಸೇರಿ ನಲ್ವತ್ತಮೂರು ಸಾವಿರ ರೂಪಾಯಿ ಆಗಿದೆ. ಹಣ ಕಟ್ಟಿ ಅಂತ ನಾವು ಸಾಕಷ್ಟು ಸಲ ನೋಟೀಸ್ ಕಳುಹಿಸಿದ್ದೇವೆ. ಆದರೆ, ಅದಕ್ಕೆ ನಿಮ್ಮಿಂದ ಪ್ರತಿಕ್ರಿಯೆ ಬರಲೇ ಇಲ್ಲ. ಇದೀಗ ಏಲಂ ಮಾಡಲು ನಿರ್ಧರಿಸಲಾಗಿದೆ. ಈಗ ಏಲಂ ಕೂಗಲಾಗುತ್ತದೆ' ಎಂದು ಒಬ್ಬ ಅಧಿಕಾರಿ ಹೇಳುತ್ತಲೇ ಇದ್ದ. ಆತ ಏನು ಹೇಳುತ್ತಿದ್ದಾನೆ ಎಂದು ತಿಳಿಯದೆ ಹಲೀಮಾ ಪಿಳಿ ಪಿಳಿ ಕಣ್ಬಿಟ್ಟಳು. ಸಹಾಯಕ್ಕಾಗಿ ಅತ್ತಿತ್ತ ಕಣ್ಣು ಹಾಯಿಸಿದಳು. ಆದರೆ ಅಲ್ಲಿ ಯಾರೂ ಕಾಣಿಸಲಿಲ್ಲ. ಓದು ಬರಹ ತಿಳಿಯದ ಹಲೀಮಾಳಿಗೆ ಸೊಸೈಟಿಯ ಎಚ್ಚರಿಕೆಯ ನೋಟೀಸ್, ಜಮೀನು ಅಡವಿಟ್ಟದ್ದು ಇತ್ಯಾದಿ ಯಾವುದೂ ಗೊತ್ತಿಲ್ಲ. ಅವಳು ಅಲ್ಲೇ ಮರಗಟ್ಟಿದ ಹಾಗೆ ನಿಂತು ಬಿಟ್ಟಳು.

ಅಷ್ಟರಲ್ಲಿ ಮಸೀದಿಯ ಅಧ್ಯಕ್ಷ ಅದ್ರಮಾಜಿ, ಅಂಗಡಿಯ ಅಬೊಕೊರು ಮತ್ತಿತರ ಕೆಲವರು ಧಾವಿಸಿ ಬರುತ್ತಿರುವುದು ಹಲೀಮಾಳಿಗೆ ಕಾಣಿಸಿತು. ಅವರೆಲ್ಲಾ ತನ್ನ ಪರವಾಗಿ ನಿಲ್ಲಬಹುದು ಎಂದು ಅವಳು ಭಾವಿಸಿದಳು.

ಅಧಿಕಾರಿ ಏಲಂ ಕೂಗತೊಡಗಿದ.

'ಮೂವತ್ತೈದು ಸಾವಿರ'

'ಮೂವತ್ತಾರು' ಅಬೊಕೊರು ಧ್ವನಿಗೂಡಿಸಿದ.

ತನ್ನ ಭೂಮಿ, ತನ್ನ ಮನೆ ಏಲಂ ಆಗುತ್ತಿರುವುದನ್ನು ಅವಳಿಗೆ ಸಹಿಸಲು ಆಗಲಿಲ್ಲ. ಧರಧರನೆ ಧಾವಿಸಿ ಬಂದವರು ತನ್ನ ಪರವಾಗಿಲ್ಲ ಎಂದು ಅವಳಿಗೆ ಮನವರಿಕೆಯಾಯಿತು. ಏಲಂ ಆದ್ರೆ, ತನ್ನ ಗತಿ ಏನು ? ತಾನು ಎಲ್ಲಿಗೆ ಹೋಗಲಿ ? ಯಾರ ಆಶ್ರಯ ಪಡೆಯಲಿ ? ಮಗನನ್ನು ಏನು ಮಾಡಲಿ ?- ಹಲೀಮಾಳಿಗೆ ಆತಂಕ ಹೆಚ್ಚಾಯಿತು. ಆದದ್ದಾಗಲಿ ಎಂದು ಭಾವಿಸಿ ಹಲೀಮಾ, ಅಲ್ಲೇ ನಿಂತಿದ್ದ ಅದ್ರಾಮ ಹಾಜಿಯ ಬಳಿ ಓಡಿ ಹೋದಳು. ಹೇಗಾದರು ಮಾಡಿ ಈ ಏಲಂ ತಪ್ಪಿಸಿ ಎಂದು ಗೋಗೆರದಳು. ಆದರೆ, ಹಲೀಮಾಳ ನೋವು, ಹಾಜಿಯಾರರಿಗೆ ಅರ್ಥ ಆಗಲೇ ಇಲ್ಲ. ಅವರು ತುಟಿಪಿಟಿಕೆತ್ತಲಿಲ್ಲ. ಅಂಗಡಿಯ ಅಬೊಕೊರುವಿನ ಎದುರು ನಿಂತು ದಮ್ಮಯ್ಯ ಹಾಕಿದಳು. ಅವನೂ ಅವಳ ಮಾತನ್ನು ಕಡೆಗಣಿಸಿದ.

ವಿಷಯ ತಿಳಿದ ಮಸೀದಿಯ ಖತೀಬ್ ಅಲ್ಲಿಗೆ ಧಾವಿಸಿ ಬಂದರು. ಅದನ್ನು ಕಂಡ ಹಲೀಮಾ ಅವರಲ್ಲಿ ಸಹಾಯ ಯಾಚಿಸಿದಳು. ಅವರ ಕಣ್ಣಲ್ಲಿ ನೀರು ಚಿಮ್ಮತೊಡಗಿತು.

'ನಲ್ವತ್ತನಾಲ್ಕು ಸಾವಿರ'- ಅಬೊಕೊರುವಿನ ಧ್ವನಿ ಗಟ್ಟಿಯಾಗಿತ್ತು.

'ನಲ್ವತ್ತ ನಾಲ್ಕು ಸಾವಿರ ಒಂದು ಸಲ... ಎರಡು ಸಲ'- ಅಧಿಕಾರಿ ಏಲಂ ಮುಗಿಸುವ ಹಂತಕ್ಕೆ ಬಂದ.

'ನಲ್ವತ್ತೈದು ಸಾವಿರ'- ಅದೇ ಗುಂಪಿನಿಂದ ಒಂದು ಸ್ವರ ಮೊಳಗಿತು. ಎಲ್ಲರೂ ಅತ್ತ ಕಣ್ಣು ಹಾಕಿದರು.

ಜವುಳಿ ವ್ಯಾಪಾರಿ ಉಸ್ಮಾನ್ ಮುಗುಳ್ನಗುತ್ತಿದ್ದ.

'ಎಷ್ಟಾದರು ಸರಿ, ಈ ಮನೆ... ಈ ಜಮೀನು ಬೇರೆಯವರ ಪಾಲಾಗಲು ನಾನು ಬಿಡಲಾರೆ' ಎನ್ನುತ್ತಾ ಉಸ್ಮಾನ್, ಹಲೀಮಾಳ ಮನೆಯ ಅಂಗಳಕ್ಕೆ ಕಾಲಿಟ್ಟ. ಅವನ ಹಿಂದೆ ತಮ್ಮ ರಹೀಂ ಕೂಡ ಬಂದು ನಿಂತ.

ನಲ್ವತ್ತೈದು ಸಾವಿರಕ್ಕಿಂತ ಜಾಸ್ತಿ ಕೂಗಲು ಬೇರೆ ಯಾರೂ ಮುಂದೆ ಬರಲಿಲ್ಲ. ಮನೆ, ಜಾಗ ಉಸ್ಮಾನ್‌ನ ಹೆಸರಿನಲ್ಲಾಯಿತು. ಸೊಸೈಟಿ ಅಧಿಕಾರಿಗಳು ಅಲ್ಲಿಂದ ಕಾಲ್ತೆಗೆದರು. ತನ್ನ ಮನೆಯ ಮುಂದೆ ಸೇರಿರುವ ಜನ, ಅಲ್ಲಿಂದಲೇ ಹೊರ ಬರುತ್ತಿರುವ ದೊಡ್ಡ ದೊಡ್ಡ ಅಧಿಕಾರಿಗಳಂತೆ ಕಾಣುತ್ತಿರುವವರನ್ನು ಲತೀಫ್ ಪಿಳಿ ಪಿಳಿ ಕಣ್ಬಿಟ್ಟು ನೋಡಿದ. ಅವನಿಗೆ ಅವರು ಯಾರು ಎಂದು ಗೊತ್ತಾಗಲಿಲ್ಲ. ಮುಂಜಾನೆ ಕಾಗೆ ಕೂಗಿದ್ದು ನೆನಪಾಯಿತು.

'ಉಸ್ಮಾನ್...'- ಹಾಜಿಯಾರ ಕರೆ.

ಆ ಕರೆಯನ್ನೇ ಪ್ರಶ್ನೆ ಎಂದು ಭಾವಿಸಿದ ಉಸ್ಮಾನ್, ' ಇದನ್ನು ನಾನು ಯಾಕೆ ತೆಗೆದೆ ಎಂಬ ಸಂಶಯ ನಿಮಗಿರಬೇಕು ಅಲ್ಲವಾ ? ಹಲೀಮಾಳ ಮಹರ್ ಹಣದಿಂದ... 'ಎಂದು ಮಾತನ್ನು ಅರ್ಧದಲ್ಲೇ ನಿಲ್ಲಿಸಿದ.

'ಅಂದ್ರೆ... ನಿನ್ನ ಮಾತು ನನಗೆ ಅರ್ಥವಾಗಲಿಲ್ಲ'-

'ಹಾಜಿಯಾರರೇ, ಈ ಲೋಕ ಶಾಶ್ವತ ಅಲ್ಲ. ನೀವು ಒಳ್ಳೆಯವರು, ಗಣ್ಯರು, ಸಮಾಜ ದಲ್ಲಿ ದೊಡ್ಡ ಹೆಸರುಳ್ಳವರು. ಆದರೆ, ನಿಮ್ಮ ಬದುಕಿನ ಶೈಲಿ, ಬಡವರನ್ನು ಶೋಷಿಸುವ, ವಂಚಿಸುವ ನಿಮ್ಮ ಆ ದುರ್ಬುದ್ಧಿಗೊಂದು ಪಾಠ ಕಲಿಯಲು ನಿಮಗೆ ಇದೊಂದು ನಿದರ್ಶನ ಅಷ್ಟೆ. ಈ ಲೋಕಕ್ಕೆ ಅದೆಷ್ಟೋ ಕೋಟಿ ಕೋಟಿ ಜನರು ಬಂದಿದ್ದಾರೆ, ಹೋಗಿದ್ದಾರೆ. ಇನ್ನೂ ಬರಲಿದ್ದಾರೆ. ಹೋಗಲಿದ್ದಾರೆ. ಆದರೆ, ಈ ಲೋಕಕ್ಕೆ ನಾವ್ಯಾಕೆ ಬರುತ್ತೇವೆ. ಏನು ಮಾಡುತ್ತೇವೆ ಎಂಬುದರ ಬಗ್ಗೆ ಹೆಚ್ಚಿನವರು ಯೋಚಿಸುವುದೇ ಇಲ್ಲ. ಈ ಲೋಕ ಶಾಶ್ವತ ಎಂದು ಬಗೆದು ಒಳಗಿಂದೊಳಗೆ ಮಾಡಬಾರದ ಅನ್ಯಾಯ ಎಸಗಿ ಸಮಾಜದ ಮುಂದೆ ನ್ಯಾಯವಂತರಾಗುತ್ತೇವೆ, ಗಣ್ಯರಾಗುತ್ತೇವೆ, ಸಮಾಜ ಸೇವಕರಾಗುತ್ತೇವೆ. ನಾವೂ ಮನುಷ್ಯರು. ನಮ್ಮ ಆಸುಪಾಸು ಇರುವವರೂ ಮನುಷ್ಯರು.

ನಮ್ಮ ಹಾಗೆ ಅವರಿಗೂ ನೋವು, ಹಸಿವು, ದಾಹ ಇದ್ದೇ ಇದೆ '- ಉಸ್ಮಾನ್‌ನ ಮಾತು ಕೇಳಿ ಅಲ್ಲಿ ಸೇರಿದ್ದವರ ಮುಖ ಕಪ್ಪಾಗತೊಡಗಿತು. ಖತೀಬರ ಕಣ್ಣಲ್ಲಿ ಮತ್ತೊಮ್ಮೆ ಕಣ್ಣೀರು.

'ಉಸ್ತಾದ್... ಹಲೀಮಾಳ ಗಂಡ ಅವಳನ್ನು ಬಿಟ್ಟು ಹೋಗಿ ಆರು ವರ್ಷವಾಯಿತು. ಇನ್ನು ಬರುವ ಲಕ್ಷಣ ಗೋಚರಿಸುತ್ತಿಲ್ಲ. ಗಲ್ಫ್‌ನಿಂದ ಬಂದ ನನ್ನ ತಮ್ಮ ರಹೀಂ ಇಲ್ಲೇ ಊರಲ್ಲಿ ವ್ಯಾಪಾರ ಮಾಡಿಕೊಂಡಿರುತ್ತಾನೆ. ಅಲ್ಲದೆ ವರದಕ್ಷಿಣೆ ಇಲ್ಲದೆ ಮಹರ್ ಕೊಟ್ಟು ಮದುವೆಯಾಗಲು ನಿರ್ಧರಿಸಿದ್ದಾನೆ. ಹಲೀಮಾಳಿಗೆ ಕೊಡಬೇಕಾದ ವಧುದಕ್ಷಿಣೆಯ ಹಣದಿಂದ ಈ ಮನೆ ಖರೀದಿಸಿ, ಇದೀಗ ಅದನ್ನು ಅವಳಿಗೇ ಕೊಡಲು ನಿರ್ಧರಿಸಿದ್ದೇವೆ '- ಉಸ್ಮಾನ್ ಹೇಳುತ್ತಲೇ ಇದ್ದ.

ಮಸೀದಿಯ ಖತೀಬರಿಗೆ ಅವನ ಮಾತು ಅರ್ಥವಾಗಲಿಲ್ಲ. ಅವರು ಪಿಳಿ ಪಿಳಿ ಕಣ್ಬಿಟ್ಟರು.

'ಉಸ್ತಾದ್, ಹಲೀಮಾಳ ವಿಷಯ ತಿಳಿದು ನನ್ನ ತಮ್ಮ ರಹೀಮ್ ಒಂದು ನಿರ್ಧಾರಕ್ಕೆ ಬಂದಿದ್ದಾನೆ. ಅಂದ್ರೆ ಹಲೀಮಾಳ ಒಪ್ಪಿಗೆ ಇದ್ರೆ, ಶರೀಅತ್‌ನಲ್ಲಿ ಅವಕಾಶವಿದ್ದರೆ, ಅವಳನ್ನು ಮದುವೆ ಯಾಗಬೇಕೆಂದಿದ್ದಾನೆ'- ಉಸ್ಮಾನ್ ಮಾತು ನಿಲ್ಲಿಸಿದಾಗ, ಹಲೀಮಾಳ ಮುಖ ಅರಳತೊಡಗಿತು.

'ಅಲ್‌ಹಂದುಲಿಲ್ಲಾಹ್'- ಹಲೀಮಾಳ ಮುಖ ಕಂಡು ಖತೀಬರ ಮುಖದಲ್ಲಿ ನಗೆ ಚಿಮ್ಮಿತು. ಅದು ಅವಳ ಒಪ್ಪಿಗೆ ಎಂದೇ ಅವರು ಭಾವಿಸಿದರು. ಮನೆಯ ಅಂಗಳದಲ್ಲಿ ಏನು ನಡೆಯುತ್ತಿದೆ ಎಂಬುದನ್ನು ತಿಳಿಯಲಾಗದೆ ಲತೀಫ್ ಪಿಳಿ ಪಿಳಿ ಕಣ್ಬಿಟ್ಟು ತಾಯಿ ಹಲೀಮಾಳ ಸೀರೆ ಹಿಡಿಯತೊಡಗಿದ. ರಹೀಂನ ಮುಖದಲ್ಲಿ ನಗು ಕಂಡೊಡನೆ ಹಲೀಮಾಳ ಹೃದಯದಲ್ಲಿ ಭಾವನೆಗಳು ಮೊಳಕೆಯೊಡತೊಡಗಿತು.

ಅನಿರೀಕ್ಷಿತವಾಗಿ ನಡೆದ ಈ ಘಟನೆಯಿಂದ ತತ್ತರಿಸಿದ ಅದ್ರಮಾಜಿ ದಿಕ್ಕು ತಪ್ಪಿದ ಹಾವಿನ ಹಾಗೆ ಹೊರಳಾಡುತ್ತಾ ಹೋಗುತ್ತಿರುವುದನ್ನು ಹಲೀಮಾ ಕಂಡಳು.

* * *

# ಚಿನ್ನದಂತಹ ಹುಡುಗಿ

ಮುಹಮ್ಮದ್ ಕುಳಾಯಿ

'ಏನು, ಇನ್ನೂ ಬಿದ್ದಿದ್ದೀರಲ್ಲ. ನಿಮ್ಮ ತಾಯಿಯ ಆರ್ಭಟ ಕೇಳುವುದಿಲ್ವಾ ?'- ಅವನು ಕಣ್ಣು ತೆರೆಯುವ ಮುನ್ನವೇ ಅವಳು ಬಾಯ್ತೆರೆದಳು. ಅವಳ ಈ ಮಾತು ಅವನಿಗೆ ಈಗ ಹಾಡಾಗಿ ಮಾರ್ಪಟ್ಟಿದೆ. ಆದರೆ, ಈ ದಿನ ಬೆಳ್ಳಂಬೆಳಗ್ಗೆಯೇ ಶುರು ಮಾಡಿ ಬಿಟ್ಟಿದ್ದಳು.

'ಏನು, ಕೇಳುವುದಿಲ್ಲವಾ ? ಕಿವಿಗೆ ಹತ್ತಿ ಇಟ್ಟಿದ್ದೀರಾ ? ಛೆ, ನೀವೂ ಒಂದು ಗಂಡಸಾ ? ಇದೂ ಒಂದು ಮನೆಯಾ ? ಇದು ನರಕ, ನರಕ, ನರಕ!.'ಅವಳು ಮತ್ತೆ ಕಿಡಿಕಾರಿದಳು.

'ಹೌದು ಇವಳೇ... ಇದು ನರಕ, ನೀ ಯಾವಾಗ ಈ ಮನೆಗೆ ಬಂದು ಬಿಟ್ಟೆಯಾ... ಆ ಕ್ಷಣದಿಂದ ಈ ಮನೆ ನರಕವಾಗಿದೆ '- ಅವನು ಎದ್ದು ಬಾತ್‌ರೂಮ್‌ಗೆ ಹೊಕ್ಕ.

ಅವಳು ಮತ್ತೆ ಬಂದು ಅವನಿಗೆ ಅಡ್ಡ ನಿಂತು, ' ನೋಡಿ... ಎಲ್ಲಾದರು ಆಗಬಹುದು. ಮಸೀದಿಯ ಹಿಂಬದಿಯಲ್ಲಾದರೂ ಆದೀತು. ನಮಗೊಂದು ಮನೆ ನೋಡಿ. ನನಗಿನ್ನು ಈ ಮನೆಯಲ್ಲಿರಲು ಸಾಧ್ಯವಿಲ್ಲ' ಎಂದಳು.

ಅವನು ಮಾತನಾಡಲಿಲ್ಲ. ಅವನೀಗ ಮಾತನಾಡುವುದೇ ಇಲ್ಲ. ಮನೆಯಲ್ಲಿರುವಾಗ ಲೆಲ್ಲಾ ಕಣ್ಣು, ಬಾಯಿ ಮುಚ್ಚಿ ಸುಮ್ಮನಿರುತ್ತಾನೆ. ಅದೀಗ ಅವನಿಗೆ ಅಭ್ಯಾಸವೂ ಆಗಿದೆ.

ತಂದೆಯ ಕೋಣೆಯಲ್ಲಿದ್ದ ತಾಯಿ ಕೂಗುತ್ತಲೇ ಏನೋ ಹೇಳುತ್ತಿದ್ದುದು ಅವನಿಗೆ ಕೇಳಿಸಿತು. ಅವನು ಚಾ ಕುಡಿದು, ತಿಂಡಿ ತಿಂದು ಹೊರಡುವುದರಲ್ಲಿದ್ದ. ಅಷ್ಟರಲ್ಲಿ ತಮ್ಮ ಬಂದು 'ಅಪ್ಪ ಕರೆಯುತ್ತಾರೆ' ಎಂದ. ಅವನು ಎದ್ದು ಹೋಗಿ ತಂದೆಯ ಮುಂದೆ ನಿಂತ. ಕಲ್ಲಿನ ಹಾಗೆ ತಾಯಿಯ ಪಕ್ಕ ಕುಳಿತ ತಂದೆ ಯಾವುದೋ ಗಾಢ ಆಲೋಚನೆಯಲ್ಲಿ ಮುಳುಗಿದ್ದಂತೆ ಅವನಿಗೆ ಕಂಡಿತು.

'ಬಾ... ಮಗನೇ... ಬಾ...'

ಅವನು ಹೋಗಿ ತಾಯಿಯ ಬಳಿ ಕುಳಿತ.

ತಂದೆ ತಲೆ ಎತ್ತಿ ಮಗನ ಮುಖ ನೋಡಿದರು.

'ಮೋನೇ...' ಅಂತ ಪ್ರೀತಿಯಿಂದ ಕರೆದರು.

'ನಿನ್ನ ಹೆಂಡತಿ ಆಮಿನಾಳ ಮಾತು ಕೇಳಿಸಿತಲ್ಲ' ತಂದೆಯ ಸ್ವರ ಕ್ಷೀಣಿಸಿತು.

ಅವನು ಮತ್ತೆ ತಾಯಿಗೆ ಹತ್ತಿರವಾಗಿ ಕುಳಿತ.

'ಅವಳು ಹೇಳುವುದೂ ಸರಿ ಮಗನೇ. ಎಷ್ಟಾದರು ಇನ್ನು ಅವಳಿಗೆ ಈ ಮನೆಯಲ್ಲಿ ಸರಿ ಹೋಗಲಿಕ್ಕಿಲ್ಲ. ನೀನು ಎಲ್ಲಾದರೊಂದು ಕಡೆ ಮನೆ ನೋಡು. ಸದ್ಯಕ್ಕೆ ಬಾಡಿಗೆಗಾದರೂ ಆದೀತು. ಈ ಕಿರಿ ಕಿರಿ ತಪ್ಪೀತು ' ತಂದೆ ಹೇಳುತ್ತಿದ್ದರು.

ಅವನಿಗೆ ಈಗ ಏನು ಹೇಳಬೇಕು ಎಂದು ಗೊತ್ತಾಗಲಿಲ್ಲ. ತಾಯಿಯ ಮಡಿಲಿಗೆ ತಲೆ ಇಟ್ಟು ಕಣ್ಣೀರು ಹಾಕಲಾ ಎಂದು ಅನಿಸಿತು. ಆದರೂ ತಾಳ್ಮೆ ವಹಿಸಿದ. ತುಟಿಪಿಟಿಕೆತ್ತಲಿಲ್ಲ. ಕಣ್ಣು, ಬಾಯಿ ಮುಚ್ಚಿ ಸುಮ್ಮನೆ ಕುಳಿತ. ತಂದೆ ಇನ್ನೂ ಏನೋ ಹೇಳುತ್ತಿದ್ದರು...

'ಮನೆ ನೋಡಿದಿರಾ ?'- ಗಂಡ ಮನೆಗೆ ಕಾಲಿಟ್ಟೊಡನೆ ಆಮಿನಾ ಕೇಳುವ ಪ್ರಶ್ನೆಯಿದು.

'ಆ... ನೋಡ್ತಾ ಇದ್ದೇನೆ '- ಅವನು ದಿನಾ ಹೇಳುವ ಮಾತಿದು.

ಆ ಮಾತು ಸುಳ್ಳು ಎಂದು ಅವನಿಗಿಂತ ಅವಳಿಗೇ ಸ್ಪಷ್ಟವಾಗಿ ಗೊತ್ತು.

ಅಂದು ಮಧ್ಯಾಹ್ನದ ಊಟಕ್ಕೆ ಅವನು ಮನೆಯತ್ತ ಹೊರಟು ಬಂದಿದ್ದ. ದೂರದಿಂದಲೇ ಅವಳ ಬೊಬ್ಬೆ ನಾಲ್ಕು ಗೋಡೆ ದಾಟಿ ಅವನ ಕಿವಿಗೆ ಬಡಿಯುತ್ತಿತ್ತು. ಅವನು ಸ್ವಲ್ಪ ಹೊತ್ತು ಅಲ್ಲೇ ನಿಂತು ಯೋಚಿಸತೊಡಗಿದ. ಮನೆಗೆ ಹೋಗುವುದು ಬೇಡ ಎಂದು ಮನಸ್ಸು ಹೇಳುತ್ತಲಿತ್ತು. ಹಾಗೇ ಖಾಲಿ ಹೊಟ್ಟೆಯ ಮೇಲೆ ಕೈ ಇಟ್ಟು ಹೆಜ್ಜೆಹಾಕತೊಡಗಿದ.

ರಾತ್ರಿ ಬರುವಾಗ ಅವಳು ಬಾಗಿಲಿಗೆ ಅಡ್ಡ ನಿಂತಳು.

'ಏನಾಯಿತು ?'

ಅವನು ಮಾತನಾಡಲಿಲ್ಲ.

'ನನ್ನ ಮಾತು ಕೇಳ್ತದಾ... ಮನೆಯ ವಿಷಯ ಏನಾಯಿತು ?'

ಅವನು ತಂದೆಯ ಕೋಣೆಯತ್ತ ಕಣ್ಣು ಹಾಯಿಸಿದ. ಆ ಕೋಣೆಯ ಬಾಗಿಲು ಮುಚ್ಚಿತ್ತು.

'ನೋಡಿ, ನನಗಿಲ್ಲಿ ಸಾಕಾಯಿತು. ಇನ್ನು ಒಂದು ವಾರದೊಳಗೆ ನೀವು ಬೇರೆ ಮನೆ ಮಾಡದಿದ್ದರೆ, ನಿಮ್ಮ ಕಣ್ಮುಂದೆಯೇ ಇರುವ ಬಾವಿಗೆ ಹಾರುವೆ'- ಹಾಗಂತ ಹೇಳುತ್ತಾ ಮನೆಯ ಅಂಗಳದಲ್ಲಿದ್ದ ಬಾವಿಯತ್ತ ಕೈ ತೋರಿಸಿದಳು. ಅವನಿಗೆ ಉಸಿರೆತ್ತದಂತಾಯಿತು. ಉಪಾಯ ವಿಲ್ಲದೆ ತನ್ನ ಕೋಣೆಯತ್ತ ಹೆಜ್ಜೆ ಹಾಕಿದ.

ಎರಡು ದಿನ ಉರುಳಿತು.

ಅವನನ್ನು ತಂದೆ ತನ್ನ ಕೋಣೆಗೆ ಕರೆಸಿದರು. ಹತ್ತಿರ ಕೂರಿಸಿದರು.

'ಮಗನೇ... ನಾನೊಂದು ಮನೆ ನೋಡಿದ್ದೇನೆ'

ತಂದೆಯ ಮಾತಿಗೆ ಅವನಲ್ಲಿ ಉತ್ತರವೇ ಇಲ್ಲ.

'ಒಳ್ಳೆಯ ಮನೆ. ತಿಂಗಳಿಗೆ ಐನೂರು ರೂಪಾಯಿ ಬಾಡಿಗೆ. ಸ್ವಲ್ಪ ದೂರ ಅಷ್ಟೆ. ಒಂದಷ್ಟು ದಿನ ಸುಧಾರಿಸು. ಮತ್ತೆ ಏನಾದರೊಂದು ವ್ಯವಸ್ಥೆ ಮಾಡುವ' ತಂದೆ ಹೇಳಿದರು.

ಅವನು ಎದ್ದು ನಿಂತ. ತಂದೆ ಆ ಮನೆಯ ವಿಳಾಸ ನೀಡುತ್ತಾ, 'ನೀನೊಮ್ಮೆ ಹೋಗಿ ಮನೆ ನೋಡಿ ಬಾ' ಎಂದು ಹೇಳಿದರು.

ಅಂದು ಅವನು ಹೆಂಡತಿಯ ಜತೆಗೂಡಿ ಬಾಡಿಗೆ ಮನೆಗೆ ಹೊರಡಲು ನಿರ್ಧರಿಸಿದ. ಅವನಿಗೆ ಈಗ ೩೦ವರ್ಷ ಪ್ರಾಯ. ಎರಡು ವರ್ಷ ವಿದೇಶದಲ್ಲಿದ್ದಾಗ ಹೊರತುಪಡಿಸಿದರೆ ಮತ್ತೆ, ಒಂದೇ ಒಂದು ರಾತ್ರಿಯೂ ಅವ ಮನೆ ಬಿಟ್ಟು ಬೇರೆ ಕಡೆ ಇದ್ದವನಲ್ಲ. ಆದರೆ, ಇಂದು ಹೆಂಡತಿಗಾಗಿ ಮನೆ ಬಿಟ್ಟು ಹೋಗಬೇಕಾಗಿದೆ.

ಅಂಗಳ ಇಳಿದ ಮಗನನ್ನು ತಾಯಿ ಮತ್ತೆ ಕೂಗಿ ಕರೆದರು.

'ಮಗನೇ... ಆಗಾಗ ಬಂದು ಹೋಗುತ್ತಿರು. ನಿನ್ನನ್ನು ನೋಡದಿದ್ದರೆ, ನನಗೆ ನಿದ್ದೆ ಬಾರದು' ತಾಯಿಯ ಕಣ್ಣಲ್ಲಿ ಕಣ್ಣೀರು. ಅವನು ಮಾತನಾಡಲಿಲ್ಲ. ಆದರೆ, ಅವನ ಕಣ್ಣಲ್ಲಿ ನೀರು ಆಟವಾಡತೊಡಗಿತು. ಮೆಟ್ಟಲು ದಾಟಿ ನಿಂತ ಹೆಂಡತಿಯನ್ನು ನೋಡಿದ. ಅವಳು ಮದುಮಗಳ ಹಾಗೆ ಶೃಂಗರಿಸಿ ನಿಂತಿದ್ದಳು. ಮುಖ ಸಂತಸದಿಂದ ಅರಳುತ್ತಿತ್ತು.

* * *

ಅವನಿಗೆ ಈಗ ತಾಹಿರಾ ಮನೆ ಬಿಟ್ಟು ಹೋದ ನೆನಪು ಕಾಡತೊಡಗಿತು.

ಅದು ಏಳೆಂಟು ವರ್ಷದ ಹಿಂದಿನ ಘಟನೆ.

ಆವಾಗ ಅವನು ಕಾಲೇಜಿಗೆ ಹೋಗುತ್ತಿದ್ದ.

ಒಂದು ಸಂಜೆ ಕಾಲೇಜ್ ಬಿಟ್ಟು ಮನೆಗೆ ಬಂದವ, ತಾಯಿಯನ್ನು ಹುಡುಕುತ್ತಾ ಅಡುಗೆ ಕೋಣೆಯೊಳಗೆ ಹೊಕ್ಕಾಗ ಒಬ್ಬಳು ಹುಡುಗಿ ಎದುರಾದಳು. ಅವಳ ಮೈಗೆ ತನ್ನ ಮೈ ತಾಗುವುದನ್ನು ತಪ್ಪಿಸುವ ಸಲುವಾಗಿ ಕಸರತ್ತು ಮಾಡಿದಾಗ ನಿಯಂತ್ರಣ ತಪ್ಪಿ ಜಾರಿ ಬಿದ್ದ. ನಾಚಿದರೂ, ಅಲ್ಲಿಂದಲೇ ಹುಡುಗಿಯನ್ನು ಕಣ್ಣೆತ್ತಿ ನೋಡಿದ. ಅವಳು ಕಿಲಕಿಲನೆ ನಗುತ್ತಿದ್ದಳು. ಆ ನಗುವಿನಿಂದ ಅವನ ಮೈಮನದಲ್ಲಿ ರಕ್ತ ಸಂಚರಿಸಿದಂತಾಯಿತು. ಅವಳು ಹೋಗಿ ಅವನ ತಾಯಿಯ ಹಿಂದೆ ನಿಂತು ಮತ್ತೆ ಮತ್ತೆ ನಗತೊಡಗಿದಳು. ಕೋಪ ಬಂದರೂ ಅದನ್ನು ತೋರಿಸಿಕೊಳ್ಳದೆ ಮೆಲ್ಲನೆ ಎದ್ದು ನಿಂತ.

'ಅಮ್ಮಾ... ಯಾರೀ ಹೆಣ್ಣು ?'- ಅವನ ಮಾತಲ್ಲಿ ಸ್ವಲ್ಪ ಕೋಪವಿತ್ತು.

'ನಿನ್ನೆಯೇ ನಾನು ಹೇಳಿದೆನಲ್ಲ, ನಮ್ಮ ಅಂಗಳದಲ್ಲಿರುವ ಬಾಡಿಗೆಯ ಮನೆಗೆ ತಂದೆ ಮತ್ತು ಮಗಳು ಬರಲಿದ್ದಾರೆ ಅಂತ. ಅವರ ಏಕೈಕ ಮಗಳಿವಳು, ತಾಹಿರಾ ಅಂತ'

ಅವನು ತನ್ನ ತಾಯಿಯ ಹಿಂದೆ ನಿಂತ ಚಿನ್ನದಂತಹ ಹುಡುಗಿಯನ್ನು ಮತ್ತೊಮ್ಮೆ ನೋಡಿದ. ಅವಳ ಚೆಂದವನ್ನು ಎಷ್ಟು ನೋಡಿದರೂ ಸಾಕಾಗದು.

'ಯಾಕೆ, ನಗಾಡಿದ್ದು ? ನಾನು ಬಿದ್ದದ್ದಕ್ಕಾ ?'- ಅವನು ತುಸು ಕೋಪದಿಂದ ಆದರೆ, ಮೆತ್ತಗೆ ಕೇಳಿದ. ಅವಳು ಕುಶಿಯಿಂದ ನಗುತ್ತಾ ತನ್ನ ಮನೆಯತ್ತ ಓಡಿ ಹೋದಳು.

ಅವಳ ಓಟವನ್ನು ನೋಡುತ್ತಲೇ, 'ಹುಡುಗಿ ತುಂಬ ಚೆಂದ ಇದ್ದಾಳೆ, ಅಲ್ವ ಅಮ್ಮಾ?' ಎಂದು ಕೇಳಿದ.

'ಹೌದು, ತುಂಬಾ ಒಳ್ಳೆಯ ಹುಡುಗಿ'

'ನಾನು ಮದುವೆಯಾಗುವುದಾದರೆ, ಇದೇ ಹುಡುಗಿಯನ್ನು'- ಅವನು ಆವತ್ತೇ ನಿರ್ಧರಿಸಿದ.

ಹೀಗೆ ಒಂದು ವರ್ಷ ಉರುಳಿತು.

'ಅಮ್ಮಾ... ತಾಹಿರಾ ಹೇಗೆ ?'

'ತುಂಬಾ ಒಳ್ಳೆಯ ಹುಡುಗಿ'

'ಹಾಗಲ್ಲ ಅಮ್ಮಾ... ತಾಹಿರಾಳನ್ನು ನಾನು ಮದುವೆಯಾದರೆ ಹೇಗೆ ?'

'ಮದುವೆಯಾ ?'- ಅವನ ತಾಯಿ ನಕ್ಕರು.

'ಹೌದು ಅಮ್ಮಾ.... ನಾನು ಮದುವೆಯಾಗಲಾ ?'

'ಮದುವೆಗೆ ಯಾಕೆ ಇಷ್ಟು ತುರ್ತು. ನಿನ್ನ ಕಾಲೇಜ್ ಮುಗಿಯಲಿ, ಮತ್ತೆ ನೋಡುವ'

'ಅದು ಈವತ್ತಲ್ಲದಿದ್ದರೆ, ನಾಳೆಯಾದರೂ ಆಗುತ್ತದೆ. ತಾಹಿರಾ ನಿಮಗೆ ಇಷ್ಟವಾ, ಹೇಳಿ ?'

'ಮದುವೆಯಾಗುವವ ನೀನಲ್ವಾ ? ನಿನಗೆ ಇಷ್ಟವಾದರೆ, ನನಗೂ ಇಷ್ಟ'. ತಾಯಿಯ ಒಪ್ಪಿಗೆ ಸಿಕ್ಕಿದ ನಂತರ, ತಾಹಿರಾಳನ್ನು ಅವನು ತುಂಬಾ ಪ್ರೀತಿಸತೊಡಗಿದ.

ಈಗ ಅವಳು ಅವನಿಗೆ ನೂರುಪಟ್ಟು ಚೆಂದ ಕಾಣುತ್ತಿದ್ದಳು.

ಅವನ ಕಾಲೇಜ್ ವ್ಯಾಸಾಂಗ ಮುಗಿಯುತ್ತಲೇ ಇಬ್ಬರ ನಡುವಿನ ಸಂಬಂಧದ ಬಗ್ಗೆ ಅಕ್ಕಪಕ್ಕದವರು ಮಾತನಾಡತೊಡಗಿದರು. ಅವಳೀಗ ಅವನನ್ನು ಕದ್ದು ನೋಡುತ್ತಾ ಕುಶಿ ಪಡುತ್ತಿದ್ದಳು.

ಆ ದಿನ ತಾಹಿರಾಳ ತಂದೆ, ಅವನ ತಂದೆಯ ಮುಂದೆ ಬಂದು ಕೂತಿದ್ದರು. ಸ್ವಲ್ಪ ಸಮಯದ ನಂತರ ಮಗಳ ಮದುವೆಯ ಬಗ್ಗೆ ಪ್ರಸ್ತಾಪ ಎತ್ತಿದರು.

'ಹ್ಞಾಂ'- ಅವನ ತಂದೆ ಉಸಿರೆತ್ತಿದರು.

'ನನ್ನ ಮಗಳ ಮತ್ತು ನಿಮ್ಮ ಮಗನ ನಡುವಿನ ಸಂಬಂಧ ನಿಮಗೆ ಗೊತ್ತಿರಬಹುದು ಎಂದು ನಾನು ಭಾವಿಸುವೆ'

ಅವರು ಮಾತನಾಡಲಿಲ್ಲ.

'ನನ್ನ ಏಕೈಕ ಮಗಳಿವಳು. ಅವಳು ನನ್ನ ಮಗಳಷ್ಟೇ ಅಲ್ಲ, ನನ್ನ ಪ್ರಾಣ ಕೂಡ. ಅವಳಿಗೆ ತಾಯಿ, ತಂದೆ ಎಲ್ಲಾ ನಾನೇ. ನೀವು ದೊಡ್ಡ ಮನಸ್ಸು ಮಾಡಿ ನನ್ನ ಮಗಳನ್ನು ನಿಮ್ಮ ಮಗನಿಗೆ ತೆಗೆದುಕೊಳ್ಳಬೇಕು'- ಅವರ ಕಣ್ಣಲ್ಲಿ ನೀರು ಇಳಿಯತೊಡಗಿತು.

ಅವರು ಕೆಲ ಕ್ಷಣ ಸುಮ್ಮನೆ ಕುಳಿತರು.

'ಮದುವೆಗೆ ಮುಂಚೆ ಅವನಿಗೊಂದು ಕೆಲಸವಾಗಬೇಕಲ್ಲ. ಅವನನ್ನು ಗಲ್ಫ್‌ಗೆ ಕಳುಹಿಸ ಬೇಕೆಂದು ಯೋಚಿಸುತ್ತಿದ್ದೇನೆ '

'ಅಲ್ಲಿಗೆ ಹೋಗಿ ಬರಲು ಮತ್ತೆರಡು ವರ್ಷ ಬೇಕಾಗುತ್ತದೆ. ಅದಕ್ಕಿಂತ ಮುಂಚೆಯೇ ಮದುವೆಯಾದರೆ ಒಳ್ಳೆಯದಲ್ವಾ ?'

'ಅದ್ಹೇಗೆ ಆಗುತ್ತೆ. ಮದುವೆಗೆ ಯಾಕೆ ಇಷ್ಟು ತುರ್ತು. ಮೊದಲು ಅವನೊಂದು ದಾರಿಗೆ ಬರಲಿ. ಮತ್ತೆ ಮದುವೆ' ಅವರ ಸ್ವರದಲ್ಲಿ ಗಡುಸಿತ್ತು.

ಆ ಮಾತು ಕೇಳಿ ಅವಳ ತಂದೆ ಬೇಸರಗೊಂಡರು. ಸ್ವಲ್ಪ ಹೊತ್ತು ಕಲ್ಲಿನ ಹಾಗೆ ಕುಳಿತುಕೊಂಡ ಅವರು, 'ಎರಡು ವರ್ಷದ ನಂತರವೇ ಮದುವೆ ಮಾಡೋಣ. ಆದರೆ, ಈಗಲೇ ನಿಶ್ಚಯ ಮಾಡಿಕೊಂಡರೆ ಹೇಗೆ ?'ಎಂದು ಕೇಳಿದರು.

'ಅದೆಲ್ಲಾ ಈಗ ಯಾಕೆ ? ಸುಮ್ಮನೆ ಖರ್ಚು ಅಷ್ಟೆ' ಅವರ ನಿರ್ಧಾರ ಅಚಲವಾಗಿತ್ತು.

ಅವಳ ತಂದೆ ಮೌನವಾದರು.

ಒಂದು ತಿಂಗಳ ನಂತರ ಅವನು ಗಲ್ಫ್‌ಗೆ ಹಾರಿದ. ಅದಕ್ಕೂ ಮುಂಚೆ ಅವಳ ತಂದೆ ಕೈ ಹಿಡಿದು ತಾಹಿರಾಳನ್ನು ಮದುವೆಯಾಗುವ ಆಶ್ವಾಸನೆ ಕೊಟ್ಟ.

ಎರಡು ವರ್ಷವೂ ಉರುಳಿತು.

ಅವನು ಗಲ್ಫ್‌ನಿಂದ ಬಂದು ಎರಡು ವಾರ ಕಳೆದಿತ್ತು.

ಅವಳ ತಂದೆ ಮತ್ತೊಮ್ಮೆ ಅವನ ತಂದೆಯ ಮುಂದೆ ಹೋಗಿ ಕುಳಿತರು.

'ನಾನೇ ನಿಮ್ಮನ್ನು ಬರುವಂತೆ ಹೇಳಿ ಕಳುಹಿಸುತ್ತಿದ್ದೆ. ನೀವೇ ಬಂದಿರಿ, ಒಳ್ಳೆಯದಾಯಿತು. ಹೇಳಿ... ಮದುವೆಯ ಬಗ್ಗೆ ನಿಮ್ಮ ಅಭಿಪ್ರಾಯ ತಿಳಿಸಿ' ಅವನ ತಂದೆ ಮಾತಿಗಿಳಿದರು.

'ನನ್ನದೆಂಥ ಅಭಿಪ್ರಾಯ. ಎಲ್ಲಾ ನೀವೇ ಹೇಳಬೇಕು. ನಾನು ಕೇಳ್ತೇನೆ ಅಷ್ಟೆ' ಅವಳ ತಂದೆ ಉಸುರಿದರು.

'ಹಾಗಿದ್ದರೆ, ಕೇಳಿ. ನನ್ನ ಮಗನಿಗೆ ಈಗಾಗಲೇ ಕೆಲವು ಕಡೆಯಿಂದ ಮದುವೆ ಪ್ರಸ್ತಾಪ ಬಂದಿದೆ. ನಾನು ಯಾರಿಗೂ ಮಾತು ಕೊಟ್ಟಿಲ್ಲ. ನಿಮ್ಮಲ್ಲೇ ಒಂದು ಮಾತು ಕೇಳೋಣ ಅಂತ ಸುಮ್ಮನಿದ್ದೆ. ಈವತ್ತು ಬೆಳಿಗ್ಗೆ ಅಡಕೆ ವ್ಯಾಪಾರಿ ಖಾದರ್ ಹಾಜಿ ಬಂದಿದ್ದರು. ೫೦ ಪವನು ಚಿನ್ನ ಮತ್ತು ೫೦ ಸಾವಿರ ನಗದು ಕೊಡುತ್ತೇನೆ ಎಂದರು. ನಾನು ಹಣ ತೆಗೆಯುವುದಿಲ್ಲ ಅಂತ ಹೇಳಿದೆ. ಹಾಗಿದ್ರೆ, ೫೦ ಪವನು ಮತ್ತು ಒಂದು ಸ್ಕೂಟರ್ ಕೊಡುತ್ತೇನೆ ಅಂದ್ರು. ನಾನು ಅವರನ್ನು ಎರಡು ದಿನ ಬಿಟ್ಟು ಬನ್ನಿ ಎಂದಿದ್ದೇನೆ. ಇನ್ನು ನಿಮ್ಮ ಅಭಿಪ್ರಾಯ ತಿಳಿಸಿ'- ಅವನ ತಂದೆಯ ಮಾತು ಕೇಳಿ ಅವಳ ತಂದೆಯ ಎದೆಗೆ ಯಾರೋ ಚೂರಿ ಹಾಕಿದಂತಾಯಿತು. ಅವರು ಸಹಾಯಕ್ಕಾಗಿ 'ಅವನ ' ಮುಖ ನೋಡಿದರು. ಅವನು ಎತ್ತಲೋ ಮುಖ ಹಾಕಿ ಸುಮ್ಮನೆ ಕುಳಿತಿದ್ದ.

ಅಲ್ಲಿ ಸೂಜಿ ಬಿದ್ದರೂ ಕೇಳದಷ್ಟು ಮೌನ.

ನಂತರ ಅವನ ತಂದೆಯೇ ಬಾಯ್ತೆರೆದರು.

'ನೀವು ನಿಮ್ಮ ಮಗಳಿಗೆ ೫೦ ಪವನು ಚಿನ್ನಾಭರಣ ಹಾಕಬೇಕು'- ಅವಳ ತಂದೆ ಅವರ ಮುಖ ನೋಡಿದರು.

'ಹೌದು. ಇದು ಕೊನೆಯ ಮಾತು. ನಾಳೆ ಸಂಜೆಯೊಳಗೆ ತಿಳಿಸಿ ಬಿಡಿ'- ಮತ್ತೊಂದು ಮಾತು ಸೇರಿಸಿದರು.

'ಕ್ಷಮಿಸಿ. ನನ್ನಿಂದ ಅಷ್ಟು ಸಾಧ್ಯವಿಲ್ಲ. ನಾನು ಬಡವ'

'ನಾನು ಹೇಳುವಂತದ್ದೆಲ್ಲಾ ಹೇಳಿಯಾಯಿತು. ಇನ್ನು ಆ ಬಗ್ಗೆ ಹೇಳಲಿಕ್ಕೆ ಏನೂ ಇಲ್ಲ' ಎನ್ನುತ್ತಾ ಅವನ ತಂದೆ ಎದ್ದು ಒಳ ಹೋದರು. ಅವರ ಹಿಂದೆ 'ಅವನೂ' ಹೋದ.

ಅವಳ ತಂದೆಗೆ ಏನು ಮಾಡಬೇಕು ಎಂದು ತೋಚಲಿಲ್ಲ. ಎದ್ದು ಮೆಟ್ಟಿಲು ಇಳಿಯುತ್ತಿದ್ದಂತೆಯೇ ತನ್ನ ಮಗಳು ಮುಂಬಾಗಿಲಲ್ಲೇ ನಿಂತು ಕಾಯುತ್ತಿರುವುದು ಕಾಣಿಸಿತು.

'ತಾಹಿರಾ... ತಾಹಿರಾ...' ಅವರ ಸ್ವರ ಕ್ಷೀಣಿಸಿತು. ದುಃಖ ಉಮ್ಮಳಿಸಿ ಬಂದಂತಾಯಿತು.

ಮರುದಿನವೂ ಅವಳ ತಂದೆ ಅವನ ತಂದೆಯ ಮುಂದೆ ಹೋಗಿ ನಿಂತರು.

'ಏನು?' ಅವರ ಧ್ವನಿಯಲ್ಲಿ ಗಡುಸಿತ್ತು.

'ನಾವು ಈ ಮನೆ ಬಿಡಲಿದ್ದೇವೆ'

ಅವನ ತಂದೆಯ ಬಾಯಿ ಚಲಿಸಲಿಲ್ಲ.

ಅವಳ ತಂದೆ 'ಅವನಿಗಾಗಿ' ಕಣ್ಣು ಹಾಯಿಸಿದರು. ಆದರೆ, ಅವನೆಲ್ಲೂ ಕಾಣಿಸಲಿಲ್ಲ. ಅವರಿಗೆ ಅಲ್ಲಿ ಹೆಚ್ಚು ಹೊತ್ತು ನಿಲ್ಲಲಿಕ್ಕೆ ಆಗಲಿಲ್ಲ. ಸೀದಾ ಎದ್ದು ಹೋದರು. ಹಾಗೇ ಮನೆಯಿಂದ ಮಗಳನ್ನು ಜತೆಗೂಡಿಸಿ ಹೆಜ್ಜೆ ಹಾಕಿಸಿದರು.

ಅವನು ಕಿಟಕಿಯ ಬಾಗಿಲು ಸರಿಸಿ ಇಣುಕಿ ನೋಡಿದ.

ತಾಹಿರಾ ಕಣ್ಣೀರು ಹಾಕುತ್ತಲೇ ತಂದೆಯ ಹಿಂದೆ ಮೆಲ್ಲನೆ ನಡೆಯುತ್ತಿದ್ದಳು...

* * *

'ಏನು ನಿಂತಿದ್ದೀರಾ ?' ಆಮಿನಾ ಆರ್ಭಟಿಸಿದಳು.

ಅವನು ಉಸಿರು ಬಿಟ್ಟ. ಹಾಗೇ ಕಾರು ಹತ್ತಿದ.

ಆ ಬಾಡಿಗೆ ಮನೆ ನೋಡಿ ಆಮಿನಾ ಕುಶಿ ಪಟ್ಟಳು. ಮನೆ ತುಂಬಾ ಓಡಾಡಿದಳು. ಹಾಗೇ ಮನೆಪ್ರವೇಶದ ಹೆಸರಲ್ಲಿ ಮಾಡಿದ ವಿಶೇಷ ತಿಂಡಿಯನ್ನು ಗಂಡನ ಮುಂದೆ ತಂದಿಡುತ್ತಾ, 'ಇದನ್ನು ಧನಿಯ ಮನೆಯವರಿಗೆ ಕೊಟ್ಟು ಬನ್ನಿ' ಎಂದಳು.

ಅವನು ಅದನ್ನು ಕೈಗೆತ್ತಿಕೊಂಡ. ಹಾಗೇ ಆ ಮನೆಯತ್ತ ಹೆಜ್ಜೆ ಹಾಕಿದ. ದೊಡ್ಡದಾದ ಗೇಟು ತೆರೆದ. ಅದು ಅರಮನೆಯಂತಿತ್ತು. ಅತ್ತಿತ್ತ ಕಣ್ಣು ಹಾಯಿಸಿದ. ಹೂದೋಟ ಕಣ್ಸೆಳೆಯುತ್ತಿತ್ತು. ಬೆಲೆ ಬಾಳುವ ಕಾರು ಎದುರಲ್ಲೇ ನಿಂತಿತ್ತು. ಮನೆಯ ಯಜಮಾನರು ಅಗರ್ಭ ಶ್ರೀಮಂತರು ಎಂದು ಅವನಿಗೆ ಗೊತ್ತಾಯಿತು. ಹೆದರುತ್ತಲೇ ಆ ಮನೆಯ ಬೆಲ್ ಅದುಮಿದ.

ಬಾಗಿಲು ತೆರೆಯಲ್ಪಟ್ಟಿತು.

ಅವನಿಗೆ ಒಮ್ಮೆಲೆ ಸಿಡಿಲು ಬಡಿದಂತಾಯಿತು. ಮತ್ತೊಮ್ಮೆ ನೋಡಿದ.

'ಹೌದು... ತಾಹಿರಾ... ತಾಹಿರಾ' ಅವನು ಧೃಡಪಡಿಸಿಕೊಂಡ.

'ಯಾರು ತಾಹಿರಾ ?' ಒಳಗಿಂದ ಗಂಡಸಿನ ಧ್ವನಿ.

'ಬನ್ನಿ... ಬೇಗ ಬನ್ನಿ... ನನ್ನ ಪರಿಚಯದ...' ಅವಳು ಕೂಗಿ ತನ್ನ ಗಂಡನನ್ನು ಕರೆದಳು. ಹಾಗೇ ಗಂಡನನ್ನು ಅವನಿಗೆ ಪರಿಚಯ ಮಾಡಿಕೊಟ್ಟಳು.

ಆ ಮಾತು ಕೇಳಿ ಅವನು ಕಂಬದ ಹಾಗೆ ನಿಂತು ಬಿಟ್ಟ.

# ನಿಖಾಹ್

ಫಕ್ರುದ್ದೀನ್ ಇರುವೈಲ್

ಅಬ್ದುಲ್ಲ ಗಲ್ಫ್‌ಗೆ ಹೊರಟು ನಿಂತಿದ್ದ. ಸಕೀನಾ ಒಳಕೋಣೆಯ ಬಾಗಿಲ ಬಳಿ ನಿಂತು ಕಣ್ಣೀರಿಳಿಸುತ್ತಿದ್ದಳು. ಅವಳ ಮನದಲ್ಲೀಗ ಹೇಳಿಕೊಳ್ಳಲಾಗದ ನೋವು. ಆ ನೋವು, ಆ ದುಃಖ ಅವಳಿಗಲ್ಲದೆ ಬೇರೆ ಯಾರಿಗೂ ಗೊತ್ತಾಗದು. ಮದುವೆಯಾಗಿ ಕೇವಲ ಹದಿನೈದು ದಿನವಷ್ಟೆ ಉರುಳಿದೆ. ಅಷ್ಟರಲ್ಲೇ ಗಂಡ ವಿದೇಶಕ್ಕೆ ಹೊರಟು ನಿಂತದ್ದನ್ನು ಅವಳಿಗೆ ನೋಡಲು ಆಗುವುದೇ ಇಲ್ಲ.

ಅಬ್ದುಲ್ಲ ಅಂಗಳಕ್ಕಿಳಿಯುವ ಮುನ್ನ ಮತ್ತೊಮ್ಮೆ ಹೆಂಡತಿಯನ್ನು ನೋಡಿದ. ಅವಳ ಕಣ್ಣಲ್ಲಿ ನೀರು ಆಟವಾಡುತ್ತಿತ್ತು. ಪ್ರೀತಿಯ ಹೆಂಡತಿಯ ವೇದನೆ, ಅವಳ ಭಾವನೆಯನ್ನು ಅರಿಯುವುದಕ್ಕಿಂತಲೂ ಅವನಿಗೆ ಸೌದಿ ಅರೇಬಿಯಾದಲ್ಲಿ ಸಿಗುವ ಹಣದ ಗಂಟಿನ ಮೇಲೆಯೇ ಹೆಚ್ಚು ಪ್ರೀತಿ !.

'ಬರ್‍ತೇನೆ' ಎಂದು ಹೇಳುತ್ತಾ ಅಬ್ದುಲ್ಲ ಅಂಗಳ ಇಳಿಯುವಾಗ, ಸಕೀನಾಳಿಗೆ ತಲೆತಿರುಗಿದಂತಾಯಿತು. ಅವಳು ಸೀದಾ ತನ್ನ ಕೋಣೆಯೊಳಗೆ ಹೊಕ್ಕು ಮಂಚದ ಮೇಲೆ ಬಿದ್ದುಕೊಂಡಳು. ಕೂಗಿ ಕೂಗಿ ಕಣ್ಣೀರಿಳಿಸುತ್ತಲೇ ತನ್ನ ನೋವನ್ನು ಹೊರಗೆಡಹಿದಳು.

'ನೀವು ಸೌದಿಗೆ ಹೋದರೆ, ಮತ್ತೆ ಬರುವುದು ಯಾವಾಗ?'- ಮೊದಲ ರಾತ್ರಿ ಸಕೀನಾ ತನ್ನ ಗಂಡನಲ್ಲಿ ಕೇಳಿದ್ದಳು.

'ಮೂರೇ ಮೂರು ವರ್ಷದಲ್ಲಿ ನಾನು ಮರಳಿ ಬರುವೆ'

ಅಬ್ದುಲ್ಲನಿಗೆ ಹಾಗೇ ಹೇಳುವುದು ಸುಲಭ. ಆದರೆ, ಅದೆಷ್ಟು ನೋವಿನ, ದುಃಖದ ಸಂಗತಿ. ಆ ಮಾತು ಕೇಳಿದಾಗ, ಸಕೀನಾಳ ಎದೆಗೆ ಚೂರಿಯಿಂದ ತಿವಿದಂತಾಯಿತು.

'ನಿಮಗೆ ಹಾಗೆಲ್ಲ ಹೇಳಲು ಸುಲಭ. ಆದರೆ, ಮೂರು ವರ್ಷ ಅಂದ್ರೆ ಮೂರು ದಿನ ಅಲ್ಲವಲ್ಲ, ಮೂವತ್ತಾರು ತಿಂಗಳು. ಒಂದು ಸಾವಿರದ ತೊಂಬತ್ತೈದು ದಿನ ಅಂತ ನಿಮಗೆ ಗೊತ್ತಾ ?'

'ನಾನು ಸುಮ್ಮನೆ ಹೋಗುವುದಾ ? ದುಡಿಯಲು ಅಲ್ವಾ ? ಅಲ್ಲಿ ತಿಂಗಳಿಗೆ ೨೦ ಸಾವಿರ ರೂಪಾಯಿ ಸಂಬಳ ಸಿಗುತ್ತೆ. ಇಲ್ಲಿ ಅದು ಸಾಧ್ಯಾನಾ ?'

'ಹಾಗಿದ್ದರೆ, ನಿಮ್ಜೊತೆ ನಾನು ಬರುವೆ'

'ಅದಾಗದು ಸಕೀನಾ. ನಿನ್ನನ್ನು ಕರೆದುಕೊಂಡು ಹೋದರೆ, ನನ್ನ ತಂದೆ, ತಾಯಿ ನನ್ನ ಮುಖಕ್ಕೆ ಉಬ್ಬಿಯಾರು'

'ಮದುವೆಯಾದ ನಂತರ ಎಷ್ಟು ಮಂದಿ ಹೆಂಡತಿಯನ್ನು ಕರೆದುಕೊಂಡು ಹೋಗುತ್ತಾರೆ, ಗೊತ್ತಾ ?'

'ಇತರರ ವಿಷಯ ನಮಗೆ ಬೇಡ. ನಾನು ನಿನ್ನನ್ನು ಕರೆದುಕೊಂಡು ಹೋಗುವುದಿಲ್ಲ'

'ಹಾಗಿದ್ದರೆ, ನೀವು ಅಲ್ಲಿನ ಕಸಬು ಬಿಟ್ಟು ಬಿಡಿ. ಇಲ್ಲೇ ಏನಾದರು ಮಾಡಿ. ನಿಮ್ಮ ತಮ್ಮ ಹಸೈನ ಇಲ್ಲೇ ವ್ಯಾಪಾರ ಮಾಡ್ತಾ ಇದ್ದಾರಲ್ಲ'

'ನಿನಗೆ ಅದೆಲ್ಲಾ ಯಾಕೆ, ನಾನು ಮೂರು ವರ್ಷದ ನಂತರ ಬರುವೆ. ಅಷ್ಟರವರೆಗೆ ಕಾದಿರು'

ಅಂತೂ ಅಬ್ದುಲ್ಲ ಗಲ್ಫ್‌ಗೆ ಹಾರಿ ಹೋಗುವಾಗ ಹೆಂಡತಿಯ ಜತೆ ಪ್ರೀತಿಯ ಮಾತೂ ಇರಲಿಲ್ಲ. ಸಕೀನಾ ಚಿಂತೆಯಲ್ಲೇ ಮುಳುಗಿ ಹೋದಳು.

* * *

ಹಾಜಿ ಇಬ್ರಾಹಿಮರಿಗೆ ಇಬ್ಬರೂ ಗಂಡ್ಮಕ್ಕಳು. ದೊಡ್ಡವ ಅಬ್ದುಲ್ಲ, ಗಲ್ಫ್‌ನಲ್ಲಿ ದುಡಿಯುತ್ತಿದ್ದಾನೆ. ಸಣ್ಣವ ಹಸೈನ, ಊರಲ್ಲೇ ಅಂಗಡಿ ವ್ಯಾಪಾರ ಮಾಡಿಕೊಂಡಿದ್ದಾನೆ. ಬಿ.ಕಾಂ. ಪದವಿ ಪಡೆದರೂ ಸರ್ಕಾರಿ ಉದ್ಯೋಗಕ್ಕೆ ಹಾತೊರೆಯದ ಹಸೈನ ಬ್ಯಾಂಕ್‌ನಿಂದ ಲೋನ್ ಮಾಡಿ ಮೂಡಬಿದ್ರೆಯಲ್ಲೊಂದು ಅಂಗಡಿ ತೆರೆದಿದ್ದ. ದಿನ ಉರುಳುತ್ತಿದ್ದಂತೆಯೇ ಅವನ ಅದೃಷ್ಟಕ್ಕೆ ವ್ಯಾಪಾರ ಕುದುರಿತು. ಕೈ ತುಂಬ ಹಣವೂ ಸೇರಿತು. ಹಾಗಾಗಿ ಅವನೀಗ ದೊಡ್ಡ ಮನುಷ್ಯ! ಹಾಗಂತ, ಒಳ್ಳೆಯತನ ಇಲ್ಲ ಅಂತಲ್ಲ. ಪ್ರತೀ ದಿನ ಐದು ಸಲ ನಮಾಜ್ ಮಾಡುತ್ತಿದ್ದ. ಬಡವರತ್ತ ಕರುಣೆಯ ನೋಟ ಬೀರುತ್ತಿದ್ದ. ಕೈಲಾದಷ್ಟು ಸಹಾಯ ಮಾಡುತ್ತಿದ್ದ.

ಅಬ್ದುಲ್ಲನ ಮದುವೆಯ ನಂತರ ಹಸೈನನಿಗೆ ಸಾಕಷ್ಟು ವರದಕ್ಷಿಣೆ ಕೊಡುವ ವಿವಾಹ ಸಂಬಂಧದ ಪ್ರಸ್ತಾಪ ಬಂದಿತ್ತು. ಆದರೆ, ಅವನು ವರದಕ್ಷಿಣೆಗಾಗಿ ಆಸೆ ಪಡಲಿಲ್ಲ. ಹೆಣ್ಣು ಹೆತ್ತವರ ದುಃಖ ಅದೆಂಥದ್ದು ಅಂತ ಅವನಿಗೆ ಚೆನ್ನಾಗಿ ಗೊತ್ತು. ಅದೆಷ್ಟು ಹೆಣ್ಮಕ್ಕಳು ಮದುವೆಯಾಗದೆ ಮನೆಯಲ್ಲೇ ಬಾಕಿ ಉಳಿದದ್ದೂ ಗೊತ್ತಿತ್ತು. ಹಾಗಾಗಿ ಬಡ ಹುಡುಗಿಯನ್ನು ಮದುವೆಯಾಗಲು ಅವ ನಿರ್ಧರಿಸಿದ್ದ.

* * *

ಅಬ್ದುಲ್ಲ ಸೌದಿಗೆ ತೆರಳಿ ಎರಡು ತಿಂಗಳಾಗಿತ್ತು. ಸಕೀನಾಳ ಹೊಟ್ಟೆಯಲ್ಲಿ ಅಬ್ದುಲ್ಲನ ಪ್ರತಿರೂಪ ಮೂಡುತ್ತಿತ್ತು. ಅಂದ್ರೆ, ಸಕೀನಾ ಇದೀಗ ಗರ್ಭಿಣಿ. ಆ ಕುಶಿಯನ್ನು ದೂರವಾಣಿ ಮೂಲಕ ಗಂಡನಿಗೆ ತಿಳಿಸಿದಾಗ, 'ಪ್ರತೀ ತಿಂಗಳು ವೈದ್ಯರ ಬಳಿ ಹೋಗಿ ಪರೀಕ್ಷಿಸಬೇಕು' ಎಂದು ಸೂಚಿಸಿದ್ದ. ಹಾಗೇ ಸಕೀನಾ ಪ್ರತೀ ತಿಂಗಳು ವೈದ್ಯರ ಬಳಿ ಹೋಗಿ ಪರೀಕ್ಷಿಸುತ್ತಿದ್ದಳು.

ದಿನ ಉರುಳುತ್ತಿತ್ತು.

ಗಂಡ ತನ್ನ ಬಳಿ ಇಲ್ಲ ಎಂಬ ದುಃಖ, ನೋವು ಸಕೀನಾಳಿಗಿತ್ತು. ಕ್ಷಣ ಕ್ಷಣಕ್ಕೂ ಅವಳಿಗೆ ಗಂಡನ ಮುಖ ತೇಲಿ ಬರುತ್ತಿತ್ತು. ಅರಮನೆಯಂತಹ ಆ ಮನೆಯಲ್ಲಿ ಯಾವುದರಲ್ಲೂ ಕೊರತೆ ಇಲ್ಲ. ಆದರೆ, ಗಂಡನ ನೆನಪು ಆದಾಗಲೆಲ್ಲಾ ಅವಳಿಗೆ ಆ ಅರಮನೆ ಶೂನ್ಯದಂತೆ ಭಾಸವಾಗುತ್ತಿತ್ತು. ಹೊಟ್ಟೆಯಲ್ಲಿರುವ ಅಬ್ದುಲ್ಲನ ಪ್ರತಿರೂಪ ಅಲ್ಲಾಡುತ್ತಿದ್ದಾಗ ಅವಳು ತನ್ನ ನೋವನ್ನು ಮರೆಯಲು ಯತ್ನಿಸುವಳು.

ಸಕೀನಾಳಿಗೆ ಇದೀಗ ಏಳು ತಿಂಗಳು. ಬಯಕೆಯ ಔತಣ ಕೂಟಕ್ಕೂ ದಿನ ನಿಗದಿಪಡಿಸಲಾಯಿತು. ಎರಡೂ ಮನೆಯಲ್ಲೂ ಆ ಸಂಭ್ರಮವನ್ನು ಎದುರು ನೋಡಲು ತುದಿಗಾಲಲ್ಲಿ ನಿಂತಿದ್ದರು. ಅದೊಂದು ದಿನ ಸಕೀನಾ ಮಹಡಿಯಿಂದ ಕೆಳಗೆ ಇಳಿಯುವಾಗ ತಲೆ ತಿರುಗಿ ಬಿದ್ದಳು. ಹೊಟ್ಟೆಗೆ ಪೆಟ್ಟು ಬಿತ್ತು. ಎಚ್ಚರವೂ ತಪ್ಪಿತು.

ಸಕೀನಾಳನ್ನು ಆಸ್ಪತ್ರೆಗೆ ದಾಖಲಿಸಲಾಯಿತು. ವೈದ್ಯರು ಶಸ್ತ್ರಚಿಕಿತ್ಸೆ ಮಾಡಿ ಅವಳ ಪ್ರಾಣ ಉಳಿಸಲು ಹೆಣಗಾಡತೊಡಗಿದರು. ಅಂತೂ ಸಕೀನಾಳ ಪ್ರಾಣ ಉಳಿಯಿತು. ಆದರೆ ಗರ್ಭಕೋಶಕ್ಕೆ ಪೆಟ್ಟು ಬಿದ್ದ ಕಾರಣ ಮಗು ಇಹಲೋಕ ತ್ಯಜಿಸಿತು.

ಸಕೀನಾಳಿಗೆ ಎಚ್ಚರ ಬಂದು ಕಣ್ತೆರೆದು ನೋಡಿದಾಗ, ಎದುರಲ್ಲಿ ತನ್ನ ತಂದೆ, ತಾಯಿ, ಅತ್ತೆ, ಮಾವ, ಮೈದುನ... ಹೀಗೆ ಎಲ್ಲರೂ ನಿಂತಿದ್ದರು. ಅವಳ ಕಣ್ಣಲ್ಲಿ ನೀರು ಆಟವಾಡತೊಡಗಿತು. ಅವಳಿಗೆ ಅರಿವಿಲ್ಲದಂತೆ ಕೈ ತನ್ನ ಹೊಟ್ಟೆಯನ್ನು ಸವರತೊಡಗಿತು. ಹೊಟ್ಟೆ ಖಾಲಿಯಾದಂತೆ ಭಾಸವಾಯಿತು.

'ಅಮ್ಮಾ... ನನ್ನ ಮಗು ಎಲ್ಲಿ ?'

ಆದರೆ, ಮಗಳ ಆ ಪ್ರಶ್ನೆಗೆ ತಾಯಿ ಉತ್ತರಿಸಲಿಲ್ಲ. ಅವರು ಏನನ್ನೂ ಹೇಳಲಾಗದೆ ಅಳತೊಡಗಿದರು. ಅಂತೂ ಅವರು ಮಗುವಿನ ಬಗ್ಗೆ ಹೇಳಿ ಕಣ್ಣೀರೊರೆಸಿದರು. ಆ ಸಂಗತಿ ಕೇಳಿ ಸಕೀನಾ ಬಿಕ್ಕಳಿಸಿ ಅಳತೊಡಗಿದಳು. ನಾಲ್ಕೈದು ದಿನದ ನಂತರ ಸಕೀನಾಳನ್ನು ಅವಳ ಹೆತ್ತವರು ಮನೆಗೆ ಕರೆದು ಕೊಂಡು ಹೋದರು.

ಊರಲ್ಲಿ ನಡೆದ ಎಲ್ಲಾ ಸಂಗತಿ, ಗಲ್ಫ್‌ನಲ್ಲಿರುವ ಅಬ್ದುಲ್ಲನಿಗೂ ಗೊತ್ತಾಯಿತು. 'ಏನು, ಅವಳ ಗರ್ಭಕೋಶ ತೆಗೆದಾಯಿತಾ? ಅವಳಿಗೆ ಇನ್ನು ಮಕ್ಕಳಾಗುವುದಿಲ್ಲ. ಅಂಥ ಹೆಣ್ಣು ನನಗೆ ಬೇಡ. ನನಗೆ ಬೇರೆ ಹೆಣ್ಣನ್ನು ನೋಡಿ. ನಾನವಳಿಗೆ ತಲಾಖ್ ಪತ್ರ ಕಳುಹಿಸುವೆ' ಎಂದು ಅಬ್ದುಲ್ಲ ಅಲ್ಲಿಂದಲೇ ಅಬ್ಬರಿಸಿದ.

ಒಂದು ತಿಂಗಳ ರಜೆ ಹಾಕಿ ಅಬ್ದುಲ್ಲ ಊರಿಗೆ ಬಂದ. ಅಣ್ಣನನ್ನು ನೋಡಿ ತಮ್ಮನಿಗೆ ಆಶ್ಚರ್ಯವಾಯಿತು. 'ಅಣ್ಣಾ... ನೀನು ಸಕೀನಾಳಿಗೆ ತಲಾಖ್ ಕೊಡುವುದು ಸರಿಯಲ್ಲ. ನೀನು ತಪ್ಪು ಮಾಡುತ್ತಿದ್ದೀ'ಎಂದು ತಮ್ಮ ಅಣ್ಣನಲ್ಲಿ ಹೇಳಿದ.

'ನೀನು ನನಗೆ ಬುದ್ಧಿ ಹೇಳಬೇಡ. ನನ್ನ ನಂತರ ನನ್ನ ವಂಶ ನಿಲ್ಲಬಾರದು. ನನಗೆ ಮಕ್ಕಳಾಗದ ಹೆಂಡತಿ ಬೇಡ' ಅಬ್ದುಲ್ಲ ಅದನ್ನೇ ಪುನರುಚ್ಚರಿಸಿದ.

'ನೀನು ತಲಾಖ್ ಕೊಟ್ಟರೆ ಸಕೀನಾಳ ಗತಿ?'

'ಅದು ನನಗೆ ಗೊತ್ತಿಲ್ಲ. ಅದು ಅವಳ ಹಣೆಬರಹ'

ಅಣ್ಣನ ಮಾತು ಕೇಳಿ ಹಸೈನ ದುಃಖಿತನಾದ. ಅವನ ಕಣ್ಣಲ್ಲಿ ಧಾರಾಕಾರ ನೀರು ಇಳಿಯತೊಡಗಿತು.

ತವರು ಮನೆಯಲ್ಲಿದ್ದ ಸಕೀನಾಳಿಗೆ ಗಂಡನಿಂದ ಬಂದ ತಲಾಖ್ ಪತ್ರ ಕಂಡು ಕರುಳು ಹಿಂಡಿದಂತಾಯಿತು.

'ಯಾ ಅಲ್ಲಾಹ್... ನಾನೆಂಥ ತಪ್ಪು ಮಾಡಿದೆ ? ನನಗೆ ಯಾಕೆ ಈ ಶಿಕ್ಷೆ ?'- ಹಾಗಂತ ಕೇಳಿ ಅಳತೊಡಗಿದಳು. ಮಗಳ ಅವಸ್ಥೆ ಕಂಡು ಸಕೀನಾಳ ಹೆತ್ತವರೂ ಕಣ್ಣೀರಿಳಿಸಿದರು.

* * *

ಅದೊಂದು ಸಂಜೆ. ಅಬ್ದುಲ್ಲನ ತಮ್ಮ ಹಸೈನ, ಸಕೀನಾಳ ತವರು ಮನೆಗೆ ಕಾಲಿಟ್ಟ. ಹಸೈನನ್ನು ಕಂಡು ಅವರಿಗೆ ಆಶ್ಚರ್ಯ.

'ನನ್ನ ಮಗಳನ್ನು ದಾರಿಯಲ್ಲಿ ಹಾಕಿದ ದೊಡ್ಡ ಮನೆಯವರು ಇತ್ತ ಕಡೆ ಯಾಕೆ ಬಂದದ್ದೆಂದು ಗೊತ್ತಾಗಲಿಲ್ಲವಲ್ಲ'- ಸಕೀನಾಳ ತಂದೆ ವ್ಯಂಗವಾಡಿದರು.

'ನನ್ನ ಅಣ್ಣ ಮಾಡಿದ ತಪ್ಪನ್ನು ಸರಿ ಮಾಡಲು ನಾನು ಬಂದಿದ್ದೇನೆ'

'ನಿನ್ನ ಮಾತು ನನಗೆ ಅರ್ಥ ಆಗಲಿಲ್ಲ'

'ನಿಮ್ಮ ಮಗಳು ಸಕೀನಾಳನ್ನು ನಾನು ಮದುವೆಯಾಗುತ್ತೇನೆ'

'ಹ್ಞಾಂ'

'ಹೌದು. ಇನ್ಯಾರೂ ಅವಳನ್ನು ಮದುವೆಯಾಗಲಾರರು. ಅದಕ್ಕಾಗಿ ನಾನೇ ಅವಳನ್ನು ಮದುವೆಯಾಗುವೆ. ಅವಳ ಗುಣ ಸ್ವಭಾವ ನನಗೆ ಹಿಡಿಸಿದೆ. ಅವಳಿಗೆ ನಾನು ಬಾಳು ಕೊಡುವೆ'.

ಆ ಮಾತು ಕೇಳಿ ಎಲ್ಲರೂ ಆಶ್ಚರ್ಯಚಕಿತರಾದರು.

'ಹಸೈನ, ನೀನು ಏನು ಹೇಳ್ತಾ ಇದ್ದೀಯಾ ? ಸಕೀನಾಳಿಗೆ ಮಕ್ಕಳಾಗುವುದಿಲ್ಲ ಎಂದು ಗೊತ್ತಿದ್ದೂ'

'ನನಗೆಲ್ಲ ಗೊತ್ತು ಮಾವ, ನನಗೆ ಬೇಕಾದದ್ದು ಸಕೀನಾಳ ನಗು ಮುಖ. ನೀವು ಒಳ್ಳೆಯ ಮನಸ್ಸು ಮಾಡಿ ನನಗೆ ಮದುವೆ ಮಾಡಿ ಕೊಡಿ'

'ಇದಕ್ಕೆ ನಿನ್ನ ತಂದೆ, ತಾಯಿಯ ಒಪ್ಪಿಗೆ ಇದೆಯಾ ?'

'ಅವರು ಒಪ್ಪಿಗೆ ಕೊಡುವುದಿಲ್ಲಾಂತ ನನಗೆ ಗೊತ್ತು. ನಾನು ನನ್ನ ಸಂಪಾದನೆಯಲ್ಲಿ ಬೇರೆ ಮನೆ ಮಾಡುವೆ. ನೀವು ಮದುವೆ ಮಾಡಿಕೊಟ್ಟರೆ ನಾವು ಆ ಮನೆಯಲ್ಲೇ ಬದುಕು ಸಾಗಿಸುವೆವು'

' ಸಕೀನಾ ಒಪ್ಪಿಗೆ ಕೊಟ್ಟರೆ ನಮ್ಮ ಅಭ್ಯಂತರವಿಲ್ಲ'- ಹಾಗಂತ ಹೇಳುತ್ತಾ ಮಗಳ ಮುಖ ನೋಡಿದಾಗ, ಸಕೀನಾಳ ಮುಖ ರಂಗೇರತೊಡಗಿತು. ನಾಚಿಕಿಯಿಂದ ಒಳಗೆ ಓಡಿದಳು. ಸಕೀನಾಳ ತಂದೆ ಹಸೈನನ್ನು ಅಪ್ಪಿ ಹಿಡಿದರು.

* * *

# ಕನಸು

ಪಿ. ಹುಸೈನ್ ಕಾಟಿಪಳ್ಳ

ಹೊರಗಡೆ ಸೈಕಲ್ ಬೆಲ್‌ನ ಶಬ್ದ.

ಯಾವುದೋ ಗುಂಗಿನಲ್ಲಿದ್ದ ಮೈಮುನಾ ಮಡಿಲಲ್ಲಿದ್ದ ಬೀಡಿಯ ಸೂಪನ್ನು ಕೆಳಗಿಟ್ಟು, ಬಾಗಿಲನ್ನು ಸರಿಸಿ ಹೊರಗೆ ಕತ್ತು ಹಾಕಿದಳು. ಎದುರಲ್ಲೊಬ್ಬ ಅಂಚೆ ಪೇದೆ ನಿಂತಿದ್ದ. ತಕ್ಷಣ ಮೈಮುನಾ ತನ್ನ ಸೀರೆಯ ಸೆರಗನ್ನು ತಲೆಗೆ ಹಾಕಿ 'ಏನು?' ಎಂಬಂತೆ ಪ್ರಶ್ನಿಸಿದಳು.

'ನಿಮಗೊಂದು ಕಾಗದ ಬಂದಿದೆ ' ಎನ್ನುತ್ತಾ ಅಂಚೆ ಪೇದೆ ನೀಲಿ ಬಣ್ಣದ ಕವರಿನ ಕಾಗದವನ್ನು ಮೈಮುನಾಳ ಕೈಯಲ್ಲಿ ಕೊಟ್ಟು ಸೈಕಲ್ ಏರಿದ.

'ಕಾಗದ... ತನಗೆ '- ಮೈಮುನಾಳ ದೇಹ ಮರಗಟ್ಟಿದಂತಾಯಿತು, ಆಶ್ಚರ್ಯಚಕಿತಳಾದಳು. ೩೫ ವರ್ಷದ ಜೀವನದಲ್ಲಿ ಅವಳಿಗೆ ಯಾರಿಂದಲೂ ಪತ್ರ ಬಂದದ್ದಿಲ್ಲ. ಕನಸಲ್ಲೂ ಕಾಣದ ಈ ಕಾಗದ ಯಾರದ್ದಾಗಿರಬಹುದು ? ನನಗೆ ಕಾಗದ ಬರೆಯುವವರು ಯಾರು ? ಬೇರೆ ಯಾರಿಗೋ ಬಂದದ್ದನ್ನು ತಪ್ಪಿ ನನಗೆ ಕೊಟ್ಟಿರಬಹುದಾ ?-ಪ್ರಶ್ನಿಸುತ್ತಲೇ ಕಾಗದವನ್ನು ತಿರುಗಿಸಿ ನೋಡತೊಡಗಿದಳು. ಅವಳಿಗೆ ಯಾರದ್ದು, ಏನು ಎಂಬುದು ಗೊತ್ತಾಗಲೇ ಇಲ್ಲ. ಓದು ಬರಹ ತಿಳಿಯದೆ ಅವಳಿಗೆ ವಿಷಯ ಗೊತ್ತಾಗುವುದಾದರೂ ಹೇಗೆ ?.

'ಮೋಳೇ...' ಅಂತ ಕೂಗಿ ಮಗಳನ್ನು ಕರೆದಳು. ಹಾಗೇ ಕಾಗದ ಕೊಟ್ಟು ಯಾರದ್ದು ಅಂತ ನೋಡು ಎಂದಳು. ಆಮಿನಾ ಕಾಗದ ಓದಿ ಹೇಳುತ್ತಿದ್ದಂತೆಯೇ ಮೈಮುನಾಳ ಕಣ್ಣು ತುಂಬಿ ಬಂತು. ಮನದಲ್ಲಿ ಅಹ್ಲಾದಕತೆ ಉಂಟಾದಂತಾಯಿತು. ಮನದ ಮೂಲೆಯಲ್ಲಿ ಮರೆಮಾಚಿದ್ದ ನೆನಪುಗಳಿಗೆ ಮತ್ತೆ ಜೀವ ಸಿಕ್ಕಿದಂತಾಯಿತು.

'ನನ್ನ ಗಂಡ ನಾಳೆ ಬರ್ತಾರೆ'

ಮೈಮುನಾಳಿಗೆ ತನ್ನ ಕಣ್ಣನ್ನೇ ನಂಬಲು ಆಗಲಿಲ್ಲ. ಮತ್ತೊಮ್ಮೆ ಆ ಕಾಗದವನ್ನು ಓದಿಸುತ್ತಾಳೆ. ಹಾಗೇ ಅವಳ ನೆನಪುಗಳು ೧೫ ವರ್ಷದ ಹಿಂದೆ ಓಡುತ್ತದೆ.

* * *

ಆವಾಗ ಮೈಮುನಾಳಿಗೆ ೧೮ವರ್ಷ ಪ್ರಾಯ. ಬಾಲ್ಯದಲ್ಲೇ ತಂದೆಯನ್ನು ಕಳಕೊಂಡಿದ್ದ ಆಕೆಗೆ ತಾಯಿಯೇ ಎಲ್ಲಾ ಪ್ರೀತಿಯನ್ನು ತುಂಬಿಕೊಟ್ಟಿದ್ದರು. ಪಾತುಮ್ಮ ದಿನವಿಡೀ ಬೀಡಿ ಕಟ್ಟುತ್ತಾರೆ. ಮಗಳನ್ನು ಕಷ್ಟದಲ್ಲೇ ಸಾಕುತ್ತಾರೆ. ಆದರೆ ಪಾತುಮ್ಮರಿಗೆ ರೋಗ ತಪ್ಪುವುದೇ ಇಲ್ಲ. ಇತ್ತೀಚೆಗೆ ಅವಳು ಬೀಡಿ ಕಟ್ಟುವ ಸ್ಥಿತಿಯಲ್ಲೂ ಇರಲಿಲ್ಲ. ಹಾಗಾಗಿ ಎಲ್ಲಾ ಕೆಲಸ ಕಾರ್ಯಗಳನ್ನು ಮೈಮುನಾ ಶ್ರದ್ಧೆಯಿಂದ ಮಾಡುತ್ತಿದ್ದಳು. ಆದರೆ ಅದರಿಂದ ತಾಯಿಯ ಔಷಧಿಗೆ ಹಣ ಹೊಂದಿಸಲು ಸಾಧ್ಯವಾಗುತ್ತಿರಲಿಲ್ಲ. ದಿನ ಉರುಳುತ್ತಲೇ ಪಾತುಮ್ಮರ ಉಬ್ಬಸ ಉಲ್ಬಣ ಗೊಳ್ಳತೊಡಗಿತು.

ಪಾತುಮ್ಮರಿಗೆ ಮಗಳದ್ದೇ ಚಿಂತೆ. ಕಣ್ಮುಚ್ಚುವ ಮುನ್ನ ಮಗಳ ಮದುವೆಯಾಗಿದ್ದರೆ... ಎಂದು ಅವರು ಆಶಿಸುತ್ತಿದ್ದರು. ಒಂದಷ್ಟು ಕಪ್ಪು, ದಪ್ಪವಿರುವ ಮೈಮುನಾಳನ್ನು ಚೆಂದದ ಹುಡುಗಿ ಅಂತ ಹೇಳಲಾಗದು. ಅಕ್ಕಪಕ್ಕದವರು ತಮಾಷೆ ಮಾಡುತ್ತಿದ್ದುದೂ ಮೈಮುನಾಳ ಕಿವಿಗೆ ಬಿದ್ದಿತ್ತು. ಕರ್ಗಿ, ವೋಟಿ ಅಂತ ಕೆಲವರು ಕರೆಯುತ್ತಿದ್ದಾಗ ಮೈಮುನಾಳಿಗೆ ಯಾರೋ ತಿವಿದಂತಾಗುತ್ತಿತ್ತು. ಆವಾಗ ಅವಳು ಕನ್ನಡಿಯ ಮುಂದೆ ನಿಂತು ತನ್ನನ್ನು ತಾನೇ ನೋಡುತ್ತಾ ಕಣ್ಣೀರು ಹಾಕುತ್ತಿದ್ದಳು. ವಧುಪರೀಕ್ಷೆ ಮಾಡಿ ಹೆಣ್ಣು ಕಪ್ಪು ಅಂತ ಹೇಳಿ ಹೋದ ಮೇಲಂತೂ ಅವಳ ಆ ದುಃಖ ಇಮ್ಮಡಿಗೊಂಡಿತ್ತು. ಹೀಗೆ ಅನೇಕ ಬಾರಿ ಅವಳನ್ನು ನೋಡಿ ಹೋಗುತ್ತಿದ್ದರು. ಆ ರಾತ್ರಿಗಳಲ್ಲಿ ಅವಳಿಗೆ ನಿದ್ದೆಯೇ ಬರುತ್ತಿರಲಿಲ್ಲ.

ದಿನ ಉರುಳುತ್ತಲೇ ಇತ್ತು.

ಮೈಮುನಾಳಿಗೆ ೨೦ವರ್ಷ ದಾಟಿತ್ತು. ಪಾತುಮ್ಮರ ರೋಗ ಕೂಡ ಉಲ್ಬಣಗೊಂಡಿತ್ತು. ದಿನವಿಡೀ ಕೆಮ್ಮು. ಒಮ್ಮೊಮ್ಮೆ ಕೆಮ್ಮುವಾಗ ರಕ್ತವೂ ಬರುತ್ತಿತ್ತು. ತಾಯಿಯ ಸ್ಥಿತಿ ನೋಡುವಾಗ ಮೈಮುನಾಳಿಗೆ ಹೆದರಿಕೆ ಶುರುವಾಗುತ್ತಿತ್ತು. ತಾಯಿಗೆ ಏನಾದರು ಆದರೆ, ನನಗೆ ಯಾರು ಗತಿ ಎಂದು ಆತಂಕಿಸುತ್ತಿದ್ದಳು.

ಅದೊಂದು ದಿನ ಪಕ್ಕದ ಮನೆಯ ಅಬ್ದುಲ್ಲ ಪಾತುಮ್ಮರ ಮನೆಗೆ ಬಂದಿದ್ದ. ಅವನು ಅದೇ ಊರಿನ ಮಲೆಯಾಳಿಯ ಹೊಟೇಲಲ್ಲಿ ಕೆಲಸ ಮಾಡುತ್ತಿದ್ದ. ವಾರಕ್ಕೊಮ್ಮೆ ಪಾತುಮ್ಮರ ಮನೆಗೆ ಬಂದು ಹೋಗುತ್ತಲೇ ಕಷ್ಟ ಸುಖದ ಬಗ್ಗೆ ಮಾತನಾಡಿ ಹೋಗುತ್ತಿದ್ದ. ಪಾತುಮ್ಮರ ಮನೆಯ ಬಗ್ಗೆ ಚೆನ್ನಾಗಿ ತಿಳಿದುಕೊಂಡಿದ್ದ ಆತ ಮೈಮುನಾಳಿಗೆ ವರ ಸಂಬಂಧ ತಂದಿದ್ದ.

'ಪಾತುಮ್ಮಾದ, ನಮ್ಮ ಹೊಟೇಲಲ್ಲಿ ಹಸನ್ ಎಂಬಾತ ಕೆಲಸಕ್ಕಿದ್ದಾನೆ. ಕೇರಳದವ. ನೋಡಲು ತುಂಬಾ ಚೆಂದ ಇದ್ದಾನೆ. ಒಳ್ಳೆಯ ಗುಣ ಸ್ವಭಾವ. ಈ ಕಡೆ ಬಂದು ಆರು ತಿಂಗಳಾ ಯಿತು. ಅವನಿಗೆ ಸಂಬಂಧಿಕರು ಅಂತ ಯಾರೂ ಇಲ್ಲವಂತೆ. ಮೊನ್ನೆ ಹೀಗೆ, ಮಾತನಾಡುತ್ತಲೇ ಮದುವೆಯ ಬಗ್ಗೆ ಪ್ರಸ್ತಾಪ ಎತ್ತಿದ. ವರದಕ್ಷಿಣೆ ಬೇಡವಂತೆ. ಒಳ್ಳೆಯ ಗುಣ ಸ್ವಭಾವದ ಹುಡುಗಿ ಬೇಕು ಅಂತ ಹೇಳ್ತಾನೆ. ನಮ್ಮ ಮೈಮುನಾಳಿಗೆ ಹೇಳಿಸಿದ ಹುಡುಗ' ಎಂದು ಅಬ್ದುಲ್ಲ ನುಡಿದ.

'ನೀನು ಹೇಳುವುದೆಲ್ಲ ಸರಿ, ಆದರೆ ಅವ ಮಲೆಯಾಳಿ ಅಲ್ವಾ ? ಮೈಮುನಾಳಿಗೆ ಹೊಂದಾಣಿಕೆಯಾಗದಿದ್ದರೆ ? ಅವಳು ಏನು ಹೇಳ್ತಾರೆ ನೋಡುವ'ಪಾತುಮ್ಮ ಹೇಳಿದರು.

'ಅದೆಲ್ಲಾ ನೋಡಲು ಹೋದರೆ, ಆಗುತ್ತಾ ? ಎಷ್ಟು ಮಲೆಯಾಳಿಗಳು ಇಲ್ಲಿಯ ಹುಡುಗಿಯರನ್ನು ಮದುವೆ ಮಾಡಿ ಸುಖ ಸಂಸಾರ ನಡೆಸುತ್ತಿದ್ದಾರೆ. ನಮ್ಮ ಜಮಾಅತ್‌ನ ಅಧ್ಯಕ್ಷ ಮೊಮ್ಮದಾಕ ಮಲೆಯಾಳಿ ಅಲ್ವಾ ? ಎಷ್ಟು ವರ್ಷದಿಂದ ಇಲ್ಲೇ ಇದ್ದಾರೆ. ಅವರಿಗೆ ಸಿಗುವ ಮರ್ಯಾದೆ ಎಷ್ಟೂಂತ ಗೊತ್ತಲ್ವಾ ?' ಅಬ್ದುಲ್ಲ ಹೇಳಿದ.

ತಾಯಿ ಮತ್ತು ಅಬ್ದುಲ್ಲನ ಮಧ್ಯೆ ನಡೆಯುವ ಮಾತುಕತೆ, ಮೈಮುನಾಳ ಕಿವಿಗೆ ಬೀಳುತ್ತಿತ್ತು. ಅವಳ ಮನಸ್ಸು ಪುಳಕಿತಗೊಳ್ಳತೊಡಗಿತು. ಆದರೂ ಒಳಗಿಂದೊಳಗೆ ಆತಂಕ ಇದ್ದೇ ಇತ್ತು. 'ನನ್ನನ್ನು ನೋಡಿದ ಮೇಲೆ ಅವರು ಏನು ಹೇಳ್ತಾರೋ ಏನೋ ?' ಎಂದು ಅವಳ ಮನಸ್ಸು ಕೇಳತೊಡಗಿತು.

'ಮೈಮುನಾಳ ಅಭಿಪ್ರಾಯ ಕೇಳಿ ನಾಳೆ ನನ್ನಲ್ಲಿ ಹೇಳಿ ' ಎನ್ನುತ್ತಾ ಅಬ್ದುಲ್ಲ ಅಲ್ಲಿಂದ ಎದ್ದು ಹೋದ.

ಆ ರಾತ್ರಿ ಮೈಮುನಾಳಿಗೆ ನಿದ್ದೆಯೇ ಇಲ್ಲ. ಅವರು ನನ್ನನ್ನು ಒಪ್ಪಿಯಾರಾ ? ಹುಡುಗಿ ಕಪ್ಪು ಅಂತ ಹೇಳಿ ಕೈ ಬಿಟ್ಟು ಹೋದರೆ ? ಮದುವೆಯೇ ಬೇಡ ಎಂದು ಹಟ ಹಿಡಿದು ಕೂರಲೇ ? ಅಂದಹಾಗೆ, ನಾಳೆ ತಾಯಿಗೆ ಏನಾದರು ಹೆಚ್ಚು ಕಮ್ಮಿಯಾದರೆ, ನಾನೇನು ಮಾಡಲಿ ? ನನಗೆ ಯಾರಿದ್ದಾರೆ ?- ಮನಸ್ಸು ತುಂಬಾ ಅದೇ ಪ್ರಶ್ನೆ, ಅದೇ ಯೋಚನೆ.

ಗೋಡೆ ಗಡಿಯಾರ ರಾತ್ರಿಯ ಹನ್ನೆರಡು, ಒಂದು, ಎರಡು ಗಂಟೆ ಬಡಿಯುತ್ತಲೇ ಇತ್ತು. ಅಂತೂ... ಇಂತು ಆಲೋಚನೆ ಮಾಡಿದ ಮೈಮುನಾ ಮರುದಿನ ತನ್ನ ತಾಯಿಯಲ್ಲಿ ಮದುವೆಗೆ ಒಪ್ಪಿಗೆ ಸೂಚಿಸಿದಳು.

ಮರುದಿನ ಸಂಜೆ ಅಬ್ದುಲ್ಲ ಆ ಮನೆಯೊಳ ಹೊಕ್ಕಿದ್ದ. ಮೈಮುನಾ ಒಪ್ಪಿಗೆ ಕೊಟ್ಟದ್ದನ್ನು ತಿಳಿದು ತುಂಬಾ ಸಂತಸಗೊಂಡ. ನಂತರ ಮಾತುಕತೆ ಮುಂದುವರಿಯಿತು. ಹಸನ್ ಗೆಳೆಯ ಅಬ್ದುಲ್ಲನ ಜತೆಗೂಡಿ ಹುಡುಗಿ ನೋಡಲು ಬಂದ. ಹಲವು ವಧುಪರೀಕ್ಷೆ ಎದುರಿಸಿ ಸೋಲು

ಅನುಭವಿಸಿದ್ದ ಮೈಮುನಾಳಿಗೆ ಸಹಜವಾಗಿ ಆವತ್ತೂ ಆತಂಕ ಎದುರಾಯಿತು. ಅವಳನ್ನು ನೋಡುತ್ತಲೇ, ಹಸನ್ ಮದುವೆಗ ಒಪ್ಪಿಗೆ ಕೊಟ್ಟ. ಮೈಮುನಾಳ ಸಂತಸಕ್ಕೆ ಪಾರವೇ ಇರಲಿಲ್ಲ. ಸ್ವರ್ಗದ ಎಲ್ಲಾ ಬಾಗಿಲುಗಳು ಅವಳಿಗೆ ತೆರೆದಂತಾಯಿತು.

ಎರಡು ವಾರದ ನಂತರ ಮಸೀದಿಯಲ್ಲೇ ಅತ್ಯಂತ ಸರಳ ರೀತಿಯಲ್ಲಿ ಮದುವೆಯಾಯಿತು. ಮೈಮುನಾಳ ಮನೆಯಲ್ಲೇ ತುಪ್ಪದೂಟ, ಮಾಂಸದ ಪದಾರ್ಥದ ಔತಣ ಕೂಟ ಏರ್ಪಡಿಸ ಲಾಗಿತ್ತು. ಅದರ ಖರ್ಚನ್ನು ಹಸನ್ ಭರಿಸಿದ್ದ. ಬೀಡಿ ಬ್ರಾಂಚಿಯ ಅಬೊಕರಾಕ, ಮಸೀದಿಯ ಅಧ್ಯಕ್ಷ ಮೊಮ್ಮದಾಕ ಕೊಟ್ಟ ಹಣದಿಂದ ಕೆಂಪು ಬಣ್ಣದ ರೇಷ್ಮೆ ಸೀರೆಯನ್ನು ಖರೀದಿಸಲಾಗಿತ್ತು. ಆ ಸೀರೆ ಉಟ್ಟ ಮೇಲಂತೂ ಮೈಮುನಾ ಆಕರ್ಷವಾಗಿ ಕಾಣುತ್ತಿದ್ದಳು. ಅವಳ ಕತ್ತಿಗೆ ಹಾಕಲು ಹಸನ್ ಚಿನ್ನದ ಸರ ಕೊಟ್ಟಿದ್ದ. ಅಂತೂ ಮದುವೆಯ ಏರ್ಪಾಡು ಅಬ್ಬುಲ್ಲನದ್ದಾಗಿತ್ತು.

ದಿನ ಉರುಳುತ್ತಲೇ ಇತ್ತು. ಮೈಮುನಾಳಿಗೆ ಭೂಲೋಕವೇ ತನ್ನ ಕೈಗೆ ಸಿಕ್ಕಿದ ಹಾಗಾಗಿತ್ತು. ತನ್ನೆಲ್ಲಾ ಪ್ರೀತಿಯನ್ನು ಹಸನ್‌ಗೆ ಸುರಿದಿದ್ದಳು. ಮನಸ್ಸು ತುಂಬಾ ಸಂತಸಪಟ್ಟಿದ್ದಳು.

ಎರಡು ತಿಂಗಳು ಉರುಳಿತ್ತು. ಹಾಸಿಗೆ ಹಿಡಿದಿದ್ದ ಪಾತುಮ್ಮ ಅಸ್ತಂಗತರಾಗಿದ್ದರು. ಮದುವೆಯ ನಂತರ ಹಸನ್ ಸರಿಯಾಗಿ ಕೆಲಸಕ್ಕೆ ಹೋಗದ ಕಾರಣ ಅವನು ಕೆಲಸ ಕಳಕೊಂಡಿದ್ದ. ಮೈಮುನಾ ಕಟ್ಟುತ್ತಿದ್ದ ಬೀಡಿಯಿಂದಲೇ ಅವರ ಸಂಸಾರ ಸಾಗುತ್ತಿತ್ತು.

ಇದೀಗ ಹಸನ್ ಬದಲಾಗತೊಡಗಿದ. ಮಾತು ಮಾತಿಗೆ ಕೋಪಿಸತೊಡಗಿದ. ತನ್ನಿಂದಲೇ ಏನೋ ತಪ್ಪು ಸಂಭವಿಸಿರಬೇಕು ಎಂದು ಭಾವಿಸಿ ಮೈಮುನಾ ತಾಳ್ಮೆ ವಹಿಸುತ್ತಿದ್ದಳು. ನಯಾ ಪೈಸೆ ವರದಕ್ಷಿಣೆ ಪಡೆಯದೆ ಮದುವೆಯಾದ ಗಂಡನ ಮನಸ್ಸು ನೋಯಿಸಬಾರದು ಎಂದು ಭಾವಿಸಿ ಆದಷ್ಟು ಜಾಗ್ರತೆಯಿಂದ ಇದ್ದಳು. ಹಸನ್ ಎಷ್ಟೇ ಕೋಪಿಸಿದರೂ ಅದನ್ನು ಗಂಭೀರವಾಗಿ ಪರಿಗಣಿಸದೆ ಸುಮ್ಮನಾಗುತ್ತಿದ್ದಳು. ಆದರೆ, ಹಸನ್‌ನಲ್ಲಿ ಸುಧಾರಿಸುವ ಲಕ್ಷಣಗಳು ಗೋಚರಿಸಲಿಲ್ಲ.

ಅಂತೂ ಭಾರೀ ಕಷ್ಟದಲ್ಲೇ ಒಂದು ವರ್ಷ ಉರುಳಿತು. ಮೈಮುನ ತುಂಬು ಗರ್ಭಿಣಿ ಯಾಗಿದ್ದಳು. ಇತ್ತೀಚೆಗೆ ಹಸನ್ ದುಡಿಯುವುದನ್ನು ಸಂಪೂರ್ಣ ಮರೆತಿದ್ದ. ತನ್ನ ಖರ್ಚಿಗಾಗಿ ಹೆಂಡತಿಯ ಬೀಡಿಯ ಹಣಕ್ಕಾಗಿ ದುಂಬಾಲು ಬೀಳುತ್ತಿದ್ದ. ಆದರೆ ಗರ್ಭಿಣಿಯಾದ ನಂತರ ಆಕೆಗೆ ಸರಿಯಾಗಿ ಬೀಡಿ ಕಟ್ಟಲು ಆಗುತ್ತಿರಲಿಲ್ಲ. ಹಾಗಾಗಿ ಒಂದು ಹೊತ್ತು ಊಟ ಮಾಡಿದರೆ, ಮತ್ತೊಂದು ಹೊತ್ತು ಹಸಿವಿನಿಂದ ಇರುತ್ತಿದ್ದರೂ ಅದನ್ನು ಹಸನ್‌ನಲ್ಲಿ ಹೇಳಲಾಗದ ಸ್ಥಿತಿಯಲ್ಲಿ ದ್ದಳು. ತನ್ನ ನೋವನ್ನು ಹೇಳಿಕೊಂಡರೆ, ಮೈಗೆ ಹಾರಿ ಕಿರುಚಾಡಿದರೆ... ಎಂದು ಆತಂಕಿಸುತ್ತಿದ್ದಳು.

ಅದೊಂದು ದಿನ ಮನದಲ್ಲೇ ಕರಗುತ್ತಿದ್ದ ನೋವಿನ ಕಟ್ಟೆ ಹೊಡೆಯಿತು. ಗಂಡ ಹೆಂಡತಿಯ ಮಧ್ಯೆ ವಾಕ್ಸಮರವೇ ನಡೆಯಿತು. ಮೈಮುನಾ ತನ್ನ ಕಷ್ಟ, ನೋವನ್ನು ಕೂಗಿ ಹೇಳಿಕೊಂಡರೂ, ಅದನ್ನು ಹಸನ್ ಅರ್ಥ ಮಾಡಿಕೊಳ್ಳಲಿಲ್ಲ.

'ಚೆಂದ ಇಲ್ಲದ ನಿನ್ನನ್ನು ನಯಾ ಪೈಸೆ ವರದಕ್ಷಿಣೆ ಇಲ್ಲದೆ ಮದುವೆಯಾದದ್ದೇ ದೊಡ್ಡದು. ಇದೀಗ ನಾಲಗೆ ತೋರಿಸುತ್ತೀಯಾ ?' ಎಂದು ಕೇಳಿ ಚೆನ್ನಾಗಿ ಹೊಡೆದ.

ಮಧ್ಯರಾತ್ರಿಯವರೆಗೂ ಅಳುತ್ತಿದ್ದ ಮೈಮುನಾಳಿಗೆ ನಿದ್ದೆ ಯಾವಾಗ ಬಂತೆಂದು ಗೊತ್ತಾಗಲೇ ಇಲ್ಲ. ಮರುದಿನ ಬೆಳಿಗ್ಗೆ ಎದ್ದು ನೋಡಿದಾಗ, ಹಸನ್ ಕಾಣೆಯಾಗಿದ್ದ. ಅವನ ಬಟ್ಟೆಬರೆಯೂ ಮಾಯವಾಗಿತ್ತು. ಮೈಮುನಾಳಿಗೆ ತನ್ನನ್ನು ಯಾರೋ ಆಕಾಶದಿಂದ ದೂಡಿ ಹಾಕಿದಂತಾಯಿತು.

ದಿನ, ತಿಂಗಳು, ವರ್ಷ ಉರುಳುತ್ತಿತ್ತು. ಗಂಡನ ನೆನಪು ಕಾಡುತ್ತಲೇ ಇತ್ತು. ಪುಟ್ಟ ಮಗಳು ಆಮಿನಾಳ ಜತೆ ಸಂಭಾಷಿಸುತ್ತಲೇ ಗಂಡನನ್ನು ಮರೆಯಲು ಯತ್ನಿಸಿದಳು. ಆದರೆ, ಆಕೆಗೆ ಗಂಡನನ್ನು ಮರೆಯಲು ಆಗಲೇ ಇಲ್ಲ. ಅವತ್ತು ಗಂಡನ ಜತೆ ಸೆಣಸಬಾರದಿತ್ತು. ಅದು ತನ್ನ ತಪ್ಪು ಎಂದು ಆಗಾಗ ತನ್ನಲ್ಲಿ ಹೇಳುತ್ತಿದ್ದಳು. ಒಂದಲ್ಲ ಒಂದು ದಿನ ಖಂಡಿತಾ ಗಂಡ ಬಂದಾರು ಎಂಬ ವಿಶ್ವಾಸ ವ್ಯಕ್ತಪಡಿಸುತ್ತಿದ್ದಳು.

* * *

ಮೈಮುನಾ ತುಂಬಾ ಗೆಲುವಿನಿಂದಿದ್ದಳು. ಆ ಕಾಗದ ಅವಳ ಹದಿನಾಲ್ಕು ವರ್ಷದ ಎಲ್ಲಾ ನೋವು, ದುಃಖವನ್ನು ದೂರ ಮಾಡಿತ್ತು. ಸಂತಸ ತಡೆಯಲಾಗದೆ ಆಕೆಗೆ ಮಾತೇ ಹೊರಡಲಿಲ್ಲ. ಮಗಳು ಆಮಿನಾಳಿಗಂತೂ ತಾಯಿಯ ಈ ಸಂತಸ ಕಂಡು ಆಶ್ಚರ್ಯವಾಗಿತ್ತು. ಅವಳು ಅದೇನೋ ಹೇಳಿದಾಗ, ಮೈಮುನಾ ಬೈಯ್ದು ಸುಮ್ಮನಿರುವಂತೆ ಹೇಳಿದಳು.

ಅವತ್ತಿಡೀ ಮೈಮುನಾಳಿಗೆ ಭಾವನೆಗಳ ಲಹರಿ. ನಾಳೆ ಗಂಡ ಬರುತ್ತಾರೆ. ಆವಾಗ ನಾನು ಹೇಗೆ ಅವರನ್ನು ಎದುರಿಸಬೇಕು ಎಂದು ಯೋಚಿಸಿದಳು. ನಾಳೆ ಅವರು ಬಂದಾಗ, ತನ್ನನ್ನು ಬಿಟ್ಟು ಹೋದ ಬಗ್ಗೆ ಏನನ್ನೂ ಕೇಳಬಾರದು. ಈ ೧೪ವರ್ಷ ಅವರು ಎಷ್ಟು ಕಷ್ಟದಲ್ಲಿ ದ್ದರೋ ಏನೋ ?ಎಂದು ಪ್ರಶ್ನಿಸಿದ ಮೈಮುನಾಳಿಗೆ ಮನದ ಮೂಲೆಯಲ್ಲೊಂದು ಸಂಶಯವೂ ಗರಿಕೆದರಿ ನಿಂತಿತು. ತನ್ನ ಮೇಲೆ ಪ್ರೀತಿ ಇಟ್ಟು ಬರುವುದಾ ? ಅಥವಾ ಮತ್ತೆ ನನ್ನನ್ನು ವಂಚಿಸಲಾ ? ಎಂಬ ಸಂಶಯವಾಯಿತಾದರೂ ಸಮಾಧಾನ ತಂದುಕೊಂಡಳು. ಗಂಡ ಬೈಯ್ದು, ಹೊಡೆದರೂ ಎದುರಾಡಬಾರದು ಎಂದು ನಿರ್ಧರಿಸಿದಳು.

ಗಂಡನಿಲ್ಲದ ಆ ಹದಿನಾಲ್ಕು ವರ್ಷ ಪಟ್ಟಪಾಡು ಅಷ್ಟಿಷ್ಟಲ್ಲ. ಕೆಲವರು ಕಾಮದ ದೃಷ್ಟಿಯಿಂದ ನೋಡಿದ್ದು, ನಾನಾ ರೀತಿ ಮಾತನಾಡಿದ್ದೆಲ್ಲವೂ ಮೈಮುನಾಳ ಕಣ್ಮುಂದೆ ತೇಲಿ ಬರುತ್ತಿದೆ. ಅಬ್ದುಲ್ಲನ ಮನೆಯವರು ಪಕ್ಕದಲ್ಲಿ ಇಲ್ಲದಿದ್ದರೆ, ಮೈಮುನಾ ಪ್ರಾಣತ್ಯಾಗ ಮಾಡುತ್ತಿದ್ದಳೋ ಏನೋ ?.

ಬೆಳ್ಳಂಬೆಳಗ್ಗೆಯೇ ಮೈಮುನಾ ಗಂಡನ ಆಗಮನವನ್ನು ಎದುರು ನೋಡತೊಡಗಿದಳು. ಬೀಡಿಯ ಸೂಪನ್ನು ಮಡಿಲಿಗೇರಿಸದಿರಲು ನಿರ್ಧರಿಸಿದಳು. ಡಬ್ಬಿಗೆ ಹಾಕಿಟ್ಟ ಹಣವನ್ನೆಲ್ಲಾ ಹೊರಗೆಳೆದು ಒಳ್ಳೆಯ ಮೀನು ಖರೀದಿಸಿದಳು. ಅಂಗಳದಲ್ಲೇ ಬೆಳೆದ ತರಕಾರಿ ಕೊಯ್ದು ಪಲ್ಯ ಮಾಡಿದಳು. ಪಕ್ಕದ ಅಂಗಡಿಯಿಂದ ನಾಲ್ಕು ಹಪ್ಪಳವನ್ನು ಮಗಳಲ್ಲಿ ತರಿಸಿದಳು.

ಮಗಳಿಗೆ ಒಳ್ಳೆಯ ಬಟ್ಟೆಬರೆ ತೊಡಿಸಿದಳು. ಪೆರ್ನಾಲ್ ಹಬ್ಬಕ್ಕೆ ಕಂತಿನ ಮೂಲಕ ತೆಗೆದ ಒಳ್ಳೆಯ ಸೀರೆಯನ್ನು ತಾನು ಉಟ್ಟಳು. ಒಟ್ಟಿನಲ್ಲಿ ಆ ದಿನ ಅವಳಿಗೆ ಪೆರ್ನಾಲ್ ಹಬ್ಬದಷ್ಟು ಕುಶಿಯಾಯಿತು.

ಕ್ಷಣ ಉರುಳುತ್ತಿತ್ತು. ಅವಳ ಮನಸ್ಸು ಗೊಂದಲದ ಗೂಡಾಗತೊಡಗಿತು. ಯಾರೋ ತಮಾಶೆಗಾಗಿ ಕಾಗದ ಬರೆದು ಹಾಕಿದ್ದಾರಾ ?ಎಂಬ ಸಂಶಯ ಸುಳಿದಾಡಿದಾಗ ದೇಹ ಬಿಸಿ ಏರತೊಡಗಿತು.

ಮಧ್ಯಾಹ್ನ ೧೨ ಗಂಟೆಯಾಗಿತ್ತು.

'ಮೈಮುನಾ'- ದಪ್ಪ ಸ್ವರವೊಂದು ಹೊರಗಿನಿಂದ ಕೇಳಿ ಬಂತು.

ಮೈಮುನ ತಟ್ಟನೆ ಎದ್ದು ನಿಂತಳು. ಹಾಗೇ ಕಿವಿಯಾಲಿಸಿದಳು.

'ಮೈಮುನಾ'- ಮತ್ತೊಮ್ಮೆ ಅದೇ ಧ್ವನಿ.

ಬಿರುಸಿನ ಹೆಜ್ಜೆ ಹಾಕಿ, ತಟ್ಟನೆ ಬಾಗಿಲು ತೆರೆದಳು. ಹೊರಗಡೆ ಹಸನ್ ನಿಂತಿದ್ದ. ಒಂದಷ್ಟು ಮುಂಗೂದಲು ಬಿಳಿಯಾಗಿತ್ತು. ಅದು ಬಿಟ್ಟರೆ, ಉಳಿದಂತೆ ಆ ಹಸನ್‌ನಲ್ಲಿ ಯಾವುದೇ ವ್ಯತ್ಯಾಸವಿಲ್ಲ. ಮುಖದಲ್ಲಿ ಅದೇ ಗರ್ವ. ಅದೇ ನೋಟ, ಅದೇ ಚೆಂದ.

ಹಸನ್‌ನ ಬಳಿ ಬುರ್ಖಾ ತೊಟ್ಟಿದ್ದ ಚೆಂದದ ಹುಡುಗಿಯೂ ನಿಂತಿದ್ದಳು. ಮೈಮುನಾ ಆ ಹೆಣ್ಮಗಳ ಮುಖ ನೋಡಿದಳು.

'ಮೈಮುನಾ, ಇದು ಜಮೀಲಾ ಅಂತ. ನನ್ನ ಹೆಂಡತಿ. ಇನ್ನಿವಳು ಇಲ್ಲೇ ಇರ್‍ತಾಳೆ '- ಹಸನ್‌ನ ಬಾಯಿಯಿಂದ ಉದುರುತ್ತಿದ್ದ ಶಬ್ದಗಳು ಕುದಿಯುವ ಎಣ್ಣೆಯಾಗಿ ಮೈಮುನಾಳ ಕಿವಿಗೆ ಬಿದ್ದಂತಾಯಿತು. ಹಸನ್ ಸೀದಾ ಮನೆಯೊಳಗೆ ಹೆಜ್ಜೆ ಹಾಕಿದ. ಅವನ ಹೆಂಡತಿಯೂ ಅವನ ಹಿಂದೆ ಹೆಜ್ಜೆ ಹಾಕಿದಳು.

* * *

# ನಿನ್ನ ಕತ್ತಿ ನಾಣೆ

ಹಂಝು ಮಲಾರ್

ಆಗ ತಾನೇ ಶಾಲೆ ಬಿಟ್ಟು ಮನೆಗೆ ಕಾಲಿಟ್ಟ ಮುಕ್ತಾರ್ ಕೈ ಕಾಲು ತೊಳೆದು ಬೆಲ್ಲ ಮತ್ತು ನೀರನ್ನು ಕುಡಿದು ಹೊಟ್ಟೆ ತುಂಬಿಸುವ ಪ್ರಯತ್ನ ಮಾಡಿದ. ಹಾಗೇ ಶಾಲೆಯ ಪುಸ್ತಕಗಳನ್ನು ನೆಲದಲ್ಲೇ ಹರಡಿ ಬರೆಯಲು ಕೂತ.

'ಮೋನೇ, ಏನು ಮಾಡ್ತಾ ಇದ್ದೀಯಾ ?'- ಮಗ ಬರೆಯುತ್ತಿದ್ದಾನೆ ಎಂದು ಗೊತ್ತಿದ್ದೂ ಕೂಡಾ ಅದ್ದಾಕ ಕೇಳಿದ. 'ಲೆಕ್ಕ ಬರೆಯುತ್ತಿದ್ದೇನೆ ಅಬ್ಬಾ'ಎಂದು ಹೇಳಿ ಮುಕ್ತಾರ್ ನಕ್ಕ. 'ಸಾಕು ಮೋನೇ, ಲೆಕ್ಕ ಬರೆದದ್ದು ಸಾಕು. ನಾಳೆಯಿಂದ ನೀನು ಶಾಲೆಗೆ ಹೋಗಬೇಡ'- ಅದ್ದಾಕ ಕಡ್ಡಿ ಮುರಿದಂತೆ ಹೇಳಿದ.

'ಎಂತದ್ದು ಅಬ್ಬಾ... ನಾಡದು ಆಗಸ್ಟ್ ೧೫ರಂದು ಸ್ವಾತಂತ್ರ್ಯ ದಿನಾಚರಣೆ ಅಲ್ವಾ ? ಆವತ್ತು ಶಾಲೆಯಲ್ಲಿ ನನ್ನ ಭಾಷಣ ಇದೆ. ಟೀಚರ್ ಬರೆದು ಕೊಟ್ಟದ್ದನ್ನು ನಾನು ಬಾಯಿ ಪಾಠ ಮಾಡಿಯಾಗಿದೆ. ಅದನ್ನು ನಾಳೆ ಕೂಡಾ ಹೇಳಬೇಕಾಗಿದೆ. ಭಾಷಣ ಸರಿ ಉಂಟೋ, ತಪ್ಪು ಉಂಟೋ ಎಂದು ಟೀಚರ್ ನಾಳೆ ನೋಡುತ್ತೇನೆ ಎಂದಿದ್ದಾರೆ' ಎನ್ನುತ್ತಾ ಮುಕ್ತಾರ್ ತಂದೆಯ ಮುಖ ನೋಡಿದ.

'ಸರಿ ತಪ್ಪು ಅಲ್ಲೇ ಇರಲಿ ಮೋನೇ. ನೀನು ಭಾಷಣ ಮಾಡಿ ಏನು ಆಗಲಿಕ್ಕೆ ಉಂಟು ? ನಿನ್ನನ್ನು ಶಾಲೆಗೆ ಕಳುಹಿಸಲು ನನಗೆ ಸಾಧ್ಯವಾಗುತ್ತಿಲ್ಲ. ಕೈಯಲ್ಲಿ ಸ್ವಲ್ಪವೂ ಕಾಸಿಲ್ಲ. ನಾಳೆಯಿಂದ ನೀನು ಏನಾದರು ಕೆಲಸ ಮಾಡಲಿಕ್ಕೆ ಹೋಗು. ಸಂಜೆಯಾಗುವಾಗ ಹಣ ತಂದು ಕೊಡು'- ಅದ್ದಾಕ ಮಗನ ಮುಖ ನೋಡಿದ. ಇಬ್ಬರೂ ಕೆಲಕಾಲ ಪರಸ್ಪರ ಮುಖ ನೋಡುತ್ತಲೇ ಇದ್ದರು.

'ನಾನೆಂಥ ಕೆಲಸ ಮಾಡುವುದು ಅಬ್ಬಾ ... ? ಅರ್ಧದಲ್ಲಿ ಶಾಲೆ ಬಿಡುವುದು ಎಂದರೆ'-

ಮುಕ್ತಾರ್ ಉಪಾಯವಿಲ್ಲದೆ, ಅಲ್ಲೇ ಮಲಗಿದ್ದ ತನ್ನ ಉಮ್ಮನ ಮುಖವನ್ನು ನೋಡಿದ. ಮುದುಡಿ ಮುದ್ದೆಯಂತಿದ್ದ ನೆಬಿಸಾ ಕುಟುಂ ಕುಟುಂ ಅಂತ ಕೆಮ್ಮುತ್ತಿದ್ದಳು.

'ಹೌದ ಉಮ್ಮಾ... ನಾಳೆಯಿಂದ ನಾನು ಶಾಲೆಗೆ ಹೋಗುವುದು ಬೇಡವಾ ?'- ಮುಕ್ತಾರ್ ಕೇಳಿದ.

ಆಕೆ ಉತ್ತರಿಸಲಿಲ್ಲ.

ಮುಕ್ತಾರ್ ಮತ್ತೊಮ್ಮೆ ತಂದೆಯ ಮುಖ ನೋಡಿದ. ಆ ಮುಖವೂ ಕೂಡಾ ಅದನ್ನೇ ಮತ್ತೆ ಮತ್ತೆ ಒತ್ತಿ ಹೇಳುತ್ತಿತ್ತು. ಹಾಗಾಗಿ ಉಪಾಯವಿಲ್ಲದೆ ಮುಕ್ತಾರ್ ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದ ಪುಸ್ತಕವನ್ನು ಚೀಲದೊಳಗೆ ತುಂಬಿಸತೊಡಗಿದ. ಅವನ ಕಣ್ಣಲ್ಲಿ ನೀರು ಆಟವಾಡುತ್ತಿತ್ತು. ಆದರೆ ತಂದೆಯ ಮಾತಿಗೆ ವಿರೋಧ ವ್ಯಕ್ತಪಡಿಸುವಂತಿಲ್ಲ. ವಯಸ್ಸು ಹತ್ತಾದರೂ ಕೂಡಾ ಅವನಿಗೂ ಮನೆಯ ಪರಿಸ್ಥಿತಿಯ ಬಗ್ಗೆ ಚೆನ್ನಾಗಿ ಗೊತ್ತಿದೆ. ಈ ಚೀಲವನ್ನು ನಾಳೆ ನಾನು ಮೇಲ್ಮನೆಯ ಬಾವಾಕನ ಮಗ ಭಾಷಾನಿಗೆ ಮತ್ತೆ ವಾಪಾಸು ಕೊಡಲಾ ? ಎರಡು ವರ್ಷದ ಹಿಂದೆ ಇದು ನಿನಗೆ ಎಂದು ಅವ ಕೊಟ್ಟಿದ್ದ. ಆದರೆ ನಾನಿನ್ನು ಶಾಲೆಗೆ ಹೋಗುವುದಿಲ್ಲ ಎಂದು ಗೊತ್ತಾದ ಮೇಲೆ ಅವ ಬಂದು ಕೇಳಿ ಕಿರಿ ಕಿರಿ ಮಾಡುವುದಕ್ಕಿಂತ ನಾನೇ ಕೊಂಡು ಹೋಗಿ ಕೊಡುವುದು ಒಳ್ಳೆಯ ದಲ್ಲವಾ ?- ಮುಕ್ತಾರ್ ತನ್ನಲ್ಲೇ ಕೇಳಿದ. ಆದರೆ ತಕ್ಷಣಕ್ಕೆ ಅವನಿಗೆ ಏನು ಮಾಡಬೇಕು ಎಂದು ಗೊತ್ತಾಗಲಿಲ್ಲ.

ಮಗ್ರಿಬ್ ಬಾಂಗ್ ಮೊಳಗಿತು. ಮುಕ್ತಾರ್ ತನ್ನ ತಂದೆಯ ಮುಖ ನೋಡಿದ. ರಾತ್ರಿಯ ಮದ್ರಸಕ್ಕೆ ಹೋಗಬೇಕಾ ಎಂಬ ಪ್ರಶ್ನಾರ್ಥದ ಮುಖ ಅದಾಗಿತ್ತು. ' ಯಾಸೀನ್ 'ಓದಲು ಗೊತ್ತುಂಟಲ್ಲ, ಅಷ್ಟು ಸಾಕು. ಮದ್ರಸಕ್ಕೂ ನೀನು ಹೋಗುವುದು ಬೇಡ. ನಾಳೆಯಿಂದ ನೀನು ಕೆಲಸಕ್ಕೆ ಹೋಗು 'ಎಂದು ಅದ್ದಾಕ ಹೇಳಿದ.

ಆವಾಗಲೂ ಮುಕ್ತಾರ್‌ನ ಕಣ್ಣಲ್ಲಿ ನೀರು ಆಟವಾಡುತ್ತಿತ್ತು. ಈಗ ನಮಾಜ್ ಮಾಡಲು ಮಸೀದಿಗೆ ಹೋಗಲಾ ? ಮಸೀದಿಗೆ ಹೋದ ಮೇಲೆ ಮದ್ರಸಕ್ಕೆ ಹೋಗದಿದ್ದರೆ ಉಸ್ತಾದ್ ಹೊಡೆಯಲಿಕ್ಕಿಲ್ಲವಾ ? ಅವರಿಗೆ 'ಚಬುಕಿನ' ಬೆತ್ತದಲ್ಲಿ ಹೊಡೆಯುವುದು ಎಂದರೆ ಎಲ್ಲಿಲ್ಲದ ಕುಶಿ ಅಲ್ವಾ?. ಅದರಲ್ಲೂ ನನ್ನಂಥವರಿಗೆ...' ಎಂದು ಹೇಳಿದ ಮುಕ್ತಾರ್ ಮತ್ತೆ ಮಾತು ಮುಂದುವರಿಸಲಾಗದೆ ಅತ್ತು ಬಿಟ್ಟ.

ಸ್ವಲ್ಪ ಸಮಯದ ನಂತರ ಒಬ್ಬ ಹುಡುಗ ಅಂಗಳದಲ್ಲಿ ನಿಂತು ಮುಕ್ತಾರ್... ಮುಕ್ತಾರ್ ಎಂದು ಕೂಗಿ ಕರೆದ. ಯಾರು ಯಾರು ಎಂದು ಕೇಳುತ್ತಾ ಅದ್ದಾಕ ಅಂಗಳಕ್ಕೆ ಇಣುಕಿದ. 'ನಾನು ಕಾಕ, ಮುಕ್ತಾರ್ ಮದ್ರಸಕ್ಕೆ ಬರುವುದಿಲ್ಲವಾ ಎಂದು ನೋಡಿಕೊಂಡು ಬಾ ಅಂತ ಉಸ್ತಾದರು ನನ್ನನ್ನು ಕಳುಹಿಸಿದ್ದಾರೆ' ಎಂದು ಒಂದೇ ಉಸಿರಿಗೆ ಪಕ್ಕದ ಮನೆಯ ಬಿಶಾರಾ ಹೇಳಿದ.

'ಅವನು ಇಂದಿನಿಂದ ಮದ್ರಸಕ್ಕೆ ಬರುವುದಿಲ್ಲ. ಹಾಗಂತ ಉಸ್ತಾದರಲ್ಲಿ ನಾನೇ ಹೇಳಿದ್ದು ಅಂತ ಹೇಳು' ಎಂದು ಹೇಳಿದ ಅದ್ದಾಕ ಬಾಗಿಲು ಮುಚ್ಚಿದ. ಬಿಶಾರಾ ಹಾಗೇ ಹೋಗಿ ಹೇಳಿದಾಗ ಉಸ್ತಾದರಿಗೆ ಉತ್ತರ ಸಿಗದ ಪ್ರಶ್ನೆಗಳೇ ಎದುರಾದವು.

ಅದ್ದಾಕನಿಗೆ ಕಳೆದ ಎರಡು ತಿಂಗಳಿನಿಂದ ಯಾವುದೇ ಕೆಲಸ ಮಾಡಲು ಆಗುತ್ತಿಲ್ಲ. ಈ ಹಿಂದೆ ತೋಟ, ಗದ್ದೆ ಕೆಲಸ ಮಾಡುತ್ತಿದ್ದ ಅವನಿಗೆ ಇದೀಗ ಇಲಿ ಜ್ವರ ಕಾಣಿಸಿದೆ. ಇಲಿಯ ಮೂತ್ರ, ರಕ್ತ, ದೇಹದಿಂದ ಹರಡಿದ ರೋಗ ಅವನ ನಿದ್ದೆಯನ್ನೇ ಕೆಡಿಸಿತ್ತು. ಹಾಗಾಗಿ ಮಾನಸಿಕ ವಾಗಿ ನೊಂದಿದ್ದ ಅದ್ದಾಕನಿಗೆ ಈಗ ಕೆಲಸ ಮಾಡಲೂ ಆಗುತ್ತಿಲ್ಲ. ಅದೆಷ್ಟೋ ವರ್ಷ ಗದ್ದೆಯ ಕೆಲಸದಲ್ಲೇ ಮುಳುಗಿದ್ದ ಆತ ಮಳೆಗಾಲ, ಬೇಸಿಗೆ ಕಾಲ ಎಂಬ ತಾರತಮ್ಯ ಇಲ್ಲದೆ ಚಪ್ಪಲಿ ಕೂಡಾ ಹಾಕದೆ ಕೆಲಸ ಮಾಡುತ್ತಿದ್ದ. ನೀರು ನಿಲ್ಲಲು ಕಟ್ಟೆ ಹಾಕುತ್ತಾ, ಸರಾಗವಾಗಿ ಹರಿದು ಹೋಗಲು ಅದನ್ನು ಮತ್ತೆ ತೆಗೆಯುತ್ತಾ, ಜಾನುವಾರುಗಳು ಗದ್ದೆಗೆ ಇಳಿಯದಂತೆ ಎಚ್ಚರ ವಹಿಸುತ್ತಲೇ ಇದ್ದ. ಹಾಗಾಗಿ ಅವನಿಗೆ ಗೊತ್ತಿಲ್ಲದಂತೆ ಇಳಿ ಜ್ವರ ಕಾಣಿಸಿತ್ತು. ಆರಂಭದಲ್ಲಿ ಅದನ್ನು ಲಘುವಾಗಿ ಕಂಡಿದ್ದರೂ ಕೂಡಾ ನಂತರ ಮೂಗಿನಲ್ಲಿ ರಕ್ತ ಹೊರ ಬರತೊಡಗಿದಾಗ ದೊಡ್ಡಾಸ್ಪತ್ರೆಯ ವೈದ್ಯರಿಗೆ ತೋರಿಸಿದ್ದ. ಅವರು ಹೇಳಿದ ಮೇಲೆಯೇ ತನಗೆ ಇಲಿ ಜ್ವರ ರೋಗವಿರುವುದು ಅವನಿಗೆ ಗೊತ್ತಾಗಿತ್ತು. ಅದಾದ ಮೇಲೆ ಅವನಿಗೆ ಒಂಥರಾ ಕೀಳರಿಮೆಯೂ ಉಂಟಾಗಿತ್ತು. ಸೋಮಾರಿ ತನವೂ ಹೆಚ್ಚಿತು.

ಹೆಂಡತಿ ನೆಬಿಸಾ ಕಳೆದ ಎರಡು ವರ್ಷದಿಂದ ಉಬ್ಬಸ ರೋಗದಿಂದ ನರಳುತ್ತಿದ್ದಾಳೆ. ಬೀಡಿ ಕಟ್ಟದೆ ಅದೆಷ್ಟೋ ತಿಂಗಳಾಯಿತು. ನೋಡಲು ಊದುಬತ್ತಿಯ ಹಾಗೇ ಕಾಣುವ ಆಕೆಗೆ, ತಾನು ಇಂದಲ್ಲ ನಾಳೆ ಖಂಡಿತಾ ಕಣ್ಮುಚ್ಚಲಿದ್ದೇನೆ ಎಂಬ ಭಾವನೆ ಉಂಟಾಗಿದೆ.

ಹತ್ತು ವರ್ಷದ ಮುಕ್ತಾರ್ ನೆಬಿಸಾ ಮತ್ತು ಅದ್ದಾಕನ ಮೊದಲ ಮಗ. ಶಾಲೆಯಲ್ಲಿ ಐದನೇ ತರಗತಿ ಓದುತ್ತಿದ್ದ. ಕಲಿಯುವುದರಲ್ಲೂ ಹುಷಾರ್ ಎಂದು ಅವನ ಟೀಚರ್ ಹೇಳಿದ್ದು ನೆಬಿಸಾಳ ಕಿವಿಗೂ ಬಿದ್ದಿದೆ.

ಮುಕ್ತಾರ್‌ನ ನಂತರ ತಲಾ ವರ್ಷಕ್ಕೊಬ್ಬರಂತೆ ನಾಲ್ಕು ಹೆಣ್ಮಕ್ಕಳನ್ನು ನೆಬಿಸಾ ಹೆತ್ತಿದ್ದಾಳೆ. ಅವರು ಕ್ರಮವಾಗಿ ಆರು, ಏಳು, ಎಂಟು, ಒಂಬತ್ತು ವರ್ಷದ ಹುಡುಗಿಯರಾಗಿ ದ್ದರು. ಒಂಬತ್ತು ವರ್ಷದ ಹುಡುಗಿ ಇದೀಗ ಶಾಲೆಗೆ ಹೋಗುವುದಿಲ್ಲ. ತಾಯಿ ಹಾಸಿಗೆ ಹಿಡಿದ ನಂತರ ಆಕೆ ಮನೆಗೆಲಸದಲ್ಲಿ ತೊಡಗಿಸಿಕೊಂಡಿದ್ದಾಳೆ. ಉಳಿದ ಮೂರು ಮಂದಿ ಮನೆ ಪಕ್ಕದಲ್ಲೇ ಇರುವ ಖಾಸಗಿ ವ್ಯಕ್ತಿಯೊಬ್ಬರು ನಡೆಸುವ ಶಾಲೆಗೆ ಹೋಗುತ್ತಾರೆ. ಆದರೆ ಅವರಿಗೆ ಸರಿಯಾದ ಪುಸ್ತಕ, ಬಟ್ಟೆ ಬರೆ ಇತ್ಯಾದಿ ಯಾವುದೂ ಇಲ್ಲ. ಮಕ್ಕಳನ್ನು ಶಾಲೆಗೆ ಕಳುಹಿಸಲು ಅದ್ದಾಕನಿಗೂ ಮನಸ್ಸಿಲ್ಲ. ಹುಡುಗಿಯರು ಕಲಿತು ಏನಾಗಲಿಕ್ಕಿದೆ ಎಂಬ ಭಾವನೆ ಅವನದ್ದಾಗಿದೆ.

ಊರಿನ ಗದ್ದೆ, ತೋಟದ ಕೆಲಸಕ್ಕೆ ಹೋಗುತ್ತಿದ್ದ ಅದ್ದಾಕ ಕಷ್ಟದಲ್ಲೇ ಮಕ್ಕಳ ಹೊಟ್ಟೆಗೆ ಅನ್ನ ಹಾಕುತ್ತಿದ್ದ. ಆದರೆ ಇತ್ತೀಚೆಗೆ ಕೆಲಸಕ್ಕೆ ಹೋಗಲಾಗದ್ದರಿಂದ ಅವನ ಸಹಿತ ಹೆಂಡತಿ

ಮಕ್ಕಳು ಹಸಿವಿನಿಂದ ಇರಬೇಕಾಗಿದೆ. ನಮಗಿಬ್ಬರಿಗೂ ದುಡಿಯಲು ಆಗುತ್ತಿಲ್ಲ. ಹೀಗೆ ಎಲ್ಲರೂ ಸುಮ್ಮನೆ ಕೂತರೆ ನಮ್ಮ ಹೊಟ್ಟೆ ಹೇಗೆ ತುಂಬುವುದು? ಆರಂಭದಲ್ಲಿ ತೋಟ, ಗದ್ದೆಯ ಯಜಮಾನರು ಅಲ್ಪಸ್ವಲ್ಪ ಅಕ್ಕಿ, ತೆಂಗಿನ ಕಾಯಿ ಮತ್ತಿತ್ಯಾದಿ ಸಾಮಾನು ಕೊಡುತ್ತಿದ್ದರು. ಅದರಿಂದಲೇ ಜೀವನ ಸಾಗುತ್ತಿತ್ತು. ಆದರೆ ಅವರಾದರು ಎಷ್ಟೂಂತ ಕೊಡುತ್ತಾರೆ ಎಂದು ಅದ್ದಾಕ ಹೆಂಡತಿಯಲ್ಲಿ ಆಗಾಗ ಹೇಳುತ್ತಿದ್ದ.

ಇತ್ತೀಚೆಗೆ ಮಕ್ಕಳಿಗೆ ಹಸಿವಿನಿಂದ ಇರುವುದು ಅಭ್ಯಾಸವಾಗಿ ಹೋಗಿದೆ. ಹೆಚ್ಚಾಗಿ ಅಂಗಡಿಯ ತುಂಡು ಬ್ರೆಡ್‌ಗಳೇ ಅವರ ಆಹಾರವಾಗಿತ್ತು. ಯಾವಾಗಲಾದರೊಮ್ಮೆ ಗಂಜಿ ಕುಡಿಯುತ್ತಾರೆ. ಉಳಿದಂತೆ, ಬೆಲ್ಲ -ನೀರು, ನೀರುಳ್ಳಿಯೇ ಅವರ ಆಹಾರ.

ಆ ರಾತ್ರಿ ಕೂಡಾ ಎಂದಿನಂತೆ ಮಕ್ಕಳು ಬ್ರೆಡ್ ತಿಂದು ಮಲಗಿದರು. ಮರುದಿನ ಮುಂಜಾನೆ ಮುಕ್ತಾರ್‌ನಿಗೆ ಬೇಗನೆ ಎಚ್ಚರವಾಗಿತ್ತು. ಎದ್ದವನೇ ಸೀದಾ ಖಾಲಿ ಚೀಲವನ್ನು ಕೈಯಲ್ಲಿಡಿದು ಭಾಷಾನ ಮನೆಗೆ ಸಾಗಿದ. ಆ ಮನೆಯ ದೊಡ್ಡ ಗೇಟ್‌ನ ಮುಂದೆ ನಿಂತು ಭಾಷಾನನ್ನು ಕೂಗಿ ಕರೆದ ಮುಕ್ತಾರ್, ಅವ ಕೊಟ್ಟಿದ್ದ ಚೀಲವನ್ನು ತೋರಿಸುತ್ತಾ 'ಇಂದಿನಿಂದ ನಾನು ಶಾಲೆಗೆ ಹೋಗುವುದಿಲ್ಲ, ಅಬ್ಬ ಬೇಡ ಎಂದಿದ್ದಾರೆ 'ಎಂದ.

ಆ ಮಾತು ಕೇಳಿ ಭಾಷಾನಿಗೆ ಆಶ್ಚರ್ಯವಾಗಿತ್ತು. 'ನಿನಗೇನು ಹುಚ್ಚಾ... ಶಾಲೆಯಲ್ಲಿ ಧರ್ಮಕ್ಕೆ ಬಿಸಿಯೂಟ ಸಿಗುವಾಗ' ಎಂದು ಆತ ಹೇಳಿ ಮುಕ್ತಾರ್‌ನ ಮುಖ ನೋಡಿದ. ' ನಾನು ಶಾಲೆಯಲ್ಲಿ ಬಿಸಿಯೂಟ ಮಾಡಿ ಹೊಟ್ಟೆ ತುಂಬಿಸಬಹುದು. ಆದರೆ ಮನೆಯಲ್ಲಿ ಎಲ್ಲರೂ ಉಪವಾಸ ಬೀಳುತ್ತಾರಲ್ಲ. ಹಾಗಾಗಿ ಇಂದಿನಿಂದ ನಾನು ಕೆಲಸಕ್ಕೆ ಹೋಗಬೇಕಾಗಿದೆ '

'ನೀನು ಎಂಥ ಕೆಲಸ ಮಾಡುವುದು ?'

'ಗೊತ್ತಿಲ್ಲ, ನೋಡಬೇಕು. ಮೈಕಾಲಕ್ಕೆ ಹೋಗಿ ಕೆಲಸ ಉಂಟಾ ಅಂತ ಕೇಳಿ ನೋಡು ಎಂದು ಅಬ್ಬ ಹೇಳಿದ್ದಾರೆ'

'ಅಬ್ಬಾ. ಮೈಕಾಲವ. ಅಷ್ಟು ದೂರಕ್ಕೆ ನೀನು ಹೋಗುವುದಾ ?ಅಲ್ಲಿ ಕಾರು, ಬಸ್ಸೂ...'

'ಏನು ಮಾಡುವುದು ಹೇಳು, ನನ್ನ ಹಣೆಯಲ್ಲಿ ಅದನ್ನು ಬರೆದಿದ್ದರೆ ?' ಎಂದು ಹೇಳಿ ಮುಕ್ತಾರ್ ಅಲ್ಲಿಂದ ಕಾಲ್ತೆಗೆದ. ಕಿಸೆಯಲ್ಲಿದ್ದ ಐದು ರೂಪಾಯಿಯ ನೋಟನ್ನು ಮುಕ್ತಾರ್‌ನ ಕೈಗಿತ್ತ ಅದ್ದಾಕ 'ಮೈಕಾಲಕ್ಕೆ ಹೋಗಿ ಅಂಗಡಿ, ಹೊಟೇಲಲ್ಲಿ ಕೆಲಸ ಉಂಟಾ ಎಂದು ಕೇಳಿ ನೋಡು 'ಎಂದು ಸಲಹೆ ನೀಡಿದ.

ಅದರಂತೆ ಮುಕ್ತಾರ್ ಬಸ್ ಹಿಡಿಯಲೆಂದು ಮನೆಯಿಂದ ಹೊರಟ. ಖಾಲಿ ಕೈಯಾಡಿಸಿ ಕೊಂಡು ನಡೆದುಕೊಂಡು ಹೋಗುತ್ತಿದ್ದ ಮುಕ್ತಾರ್‌ನನ್ನು ಕಂಡ ಅವನ ತರಗತಿಯ ಇತರ ಕೆಲವು ವಿದ್ಯಾರ್ಥಿಗಳು, 'ಏನು ಮುಕ್ತಾರ್. ಈವತ್ತು ರಜೆಯಾ?' ಎಂದು ಕೇಳಿದರು. 'ಈವತ್ತು

ಮಾತ್ರವಲ್ಲ. ಇನ್ಮುಂದೆ ನನಗೆ ರಜೆಯೇ' ಎಂದು ಹೇಳಿದಾಗ ಅವರಿಗೆ ಆಶ್ಚರ್ಯವಾಗಿತ್ತು. ತಮಾಷೆಗೆ ಇದನ್ನು ಇವ ಹೇಳುತ್ತಿದ್ದಾನೆ ಎಂದು ಆರಂಭದಲ್ಲಿ ಅವರು ಭಾವಿಸಿದ್ದರೂ ಕೂಡಾ ಆ ಮಾತಿನಲ್ಲಿರುವ ನೋವನ್ನು ಅರ್ಥೈಸಿಕೊಂಡು 'ಛೆ... ಛೆ... ಏನಾಯಿತು? ಟೀಚರಲ್ಲಿ ಹೇಳಬೇಕಾ ?' ಎಂದೆಲ್ಲಾ ಅವರು ಕೇಳಿದರು. ಮತ್ತೊಬ್ಬ ಹುಡುಗ, 'ಚಿಂತಿಲ್ಲ ಬಿಸಿಯೂಟ ಉಳಿಯಿತು' ಎಂದೂ ಹೇಳಿಕೊಂಡು ನಕ್ಕ.

ಮುಕ್ತಾರ್ ಅಲ್ಲಿ ಹೆಚ್ಚು ಹೊತ್ತು ಮಾತನಾಡಲು ನಿಲ್ಲದೆ ಸೀದಾ ಬಸ್ ನಿಲ್ದಾಣಕ್ಕೆ ಬಂದ. ಅವನಿಗೆ ಬಸ್‌ನಲ್ಲಿ ಹೋಗಿಯೂ ಹೆಚ್ಚು ಅನುಭವವಿಲ್ಲ. ಹಿಂದೊಮ್ಮೆ ಎಡವಿ ಬಿದ್ದು ಕಾಲು ನೋವಾದಾಗ ತಂದೆ ವೈದ್ಯರ ಬಳಿ ತನ್ನನ್ನು ಬಸ್‌ನಲ್ಲಿ ಕರೆದುಕೊಂಡು ಹೋದ ನೆನಪು ಅವನಿಗಾಯಿತು. ಹೋಗಿ ಬರಲು ಐದು ರೂಪಾಯಿ ಬಸ್‌ಗೆ ಸಾಕು. ಮತ್ತೆ ಮಧ್ಯಾಹ್ನದ ಊಟಕ್ಕೇನು ಮಾಡುವುದು ಎಂಬ ಚಿಂತೆ ಅವನಿಗೆ ಈಗ ಕಾಡತೊಡಗಿತು.

ಇಲ್ಲಿ ತುಂಬಾ ಬುರ್ಖಾ ಧರಿಸಿದ ಮಹಿಳೆಯರಿದ್ದಾರೆ. ಬಸ್‌ಗೆ ಹತ್ತಿ ನಾನು ಅವರ ಬಳಿಯಲ್ಲೇ ನಿಂತರೆ, ಬಸ್ ಕಂಡೆಕ್ಟರ್ ನನ್ನನ್ನು ಈ ಮಹಿಳೆಯರಿಗೆ ಸೇರಿದ ಹುಡುಗ ಎಂದು ಭಾವಿಸಿ ಟಿಕೆಟ್ ತೆಗೆದುಕೊಳ್ಳಲಾರನು ಎಂದು ಯೋಚಿಸಿದ ಮುಕ್ತಾರ್ ಅದರಂತೆ ಮಾಡಲು ನಿರ್ಧರಿಸಿದ. ಹಾಗೇ ಬಸ್ ಬಂದೊಡನೆ ಸೀದಾ ಅದೇ ಸ್ಟಾಪ್‌ನಲ್ಲಿ ಹತ್ತಿದ್ದ ಬುರ್ಖಾ ಧರಿಸಿದ ಮಹಿಳೆಯರ ಬಳಿ ಹೋಗಿ ನಿಂತ.

ಕಂಡೆಕ್ಟರ್ ಟಿಕೆಟ್ ಟಿಕೆಟ್ ಎನ್ನುತ್ತಾ ಅತ್ತಿತ್ತ ಓಡಾಡಿದಾಗ ಮುಕ್ತಾರ್ ಎಲ್ಲೋ ನೋಡುವಂತೆ ನಟಿಸತೊಡಗಿದ. ಹಾಗೇ ಮಂಗಳೂರು ತಲುಪಿದಾಗ ತಟ್ಟನೆ ಇಳಿದು ದರದರನೆ ಹೆಜ್ಜೆ ಹಾಕಿದ. ಐದು ರೂಪಾಯಿ ಕೈಯಲ್ಲಿದೆಯಾ ಎಂದು ನೋಡಿ ಖಾತ್ರಿಪಡಿಸಿಕೊಂಡ.

ತಂದೆ ಹೇಳಿ ಕೊಟ್ಟಂತೆ, ಮುಕ್ತಾರ್ ಮೊದಲು ಹೊಟೇಲ್‌ವೊಂದಕ್ಕೆ ಹೋಗಿ ಕೆಲಸ ಕೇಳಿದ. ಕ್ಯಾಶ್ ಕೌಂಟರ್‌ನಲ್ಲಿ ಕುಳಿತ ವ್ಯಕ್ತಿ ಸದ್ಯ ಕೆಲಸ ಇಲ್ಲ , ಇನ್ನೊಮ್ಮೆ ಬಾ ನೋಡುವಾ ಎಂದು ಹೇಳಿದ. ಅದಾದ ಮೇಲೆ ಮತ್ತೊಂದು ಹೊಟೇಲಿಗೆ ಹೋದ. ನಿನ್ನಿಂದ ಏನು ಕೆಲಸ ಮಾಡಲು ಸಾಧ್ಯ ಮಾರಯಾ ? ಒಂದು ಕೊಡ ನೀರು ತುಂಬಲು ನಿನಗೆ ಸಾಧ್ಯವಾಗದು ಎಂದು ಅದರ ಮಾಲಕ ಹೇಳಿದ. ಹಾಗೇ ಮುಕ್ತಾರ್ ಮತ್ತೊಂದು ಹೊಟೇಲಿಗೆ ಕಾಲಿಟ್ಟು ಕೆಲಸ ಕೇಳಿದ.

'ನಿನ್ನ ಜಾತಿ ಯಾವುದು ?'

'ಜಾತಿ ಅಂದರೆ'

'ನಿನ್ನ ಹೆಸರೇನು ?'

'ಮುಕ್ತಾರ್'

'ಓ. ಹೋ... ಬ್ಯಾರಿಯಾ ... ಹೋಗು ಹೋಗು, ಮುಂದೆ ಹೋಗು'

ಮುಕ್ತಾರ್ ಅಲ್ಲಿಂದ ಸೀದಾ ಮತ್ತೊಂದು ಹೊಟೇಲಿಗೆ ಹೋಗಿ ಕೆಲಸ ಕೇಳಿದ.

'ನಿನಗೆ ಎಷ್ಟು ವರ್ಷ ?'

'೧೦ ವರ್ಷ'

'ಇಲ್ಲಿ ಕೆಲಸ ಉಂಟು. ಆದರೆ ಬಾಲಕಾರ್ಮಿಕರಿಗೆ ಕೆಲಸ ಕೊಟ್ಟರೆ ನಾವು ಜೈಲಿಗೆ ಹೋಗಬೇಕಾಗುತ್ತದೆ'

ಆ ಮಾತನ್ನು ಅರ್ಥೈಸದ ಮುಕ್ತಾರ್ ಕೆಲಸ ಉಂಟು ಎಂಬ ಮಾತನ್ನೇ ಮುಂದಿಟ್ಟು ಕೊಂಡು, 'ಏನು ಬೇಕಾದರು ಕೆಲಸ ಮಾಡುತ್ತೇನೆ 'ಎಂದ.

'ನೀನು ಏನು ಬೇಕಾದರು ಕೆಲಸ ಮಾಡುತ್ತೀಯಾ... ಆದರೆ ನಿನಗೆ ವಯಸ್ಸಾಗಲಿಲ್ಲ ವಲ್ಲ. ೧೪ ವರ್ಷಕ್ಕಿಂತ ಕಡಿಮೆ ವಯಸ್ಸಿನವರಿಗೆ ಕೆಲಸ ಕೊಡಬಾರದು ಎಂದು ಸರ್ಕಾರ ಕಾನೂನು ತಂದಿದೆ. ನಿನಗೆ ಗೊತ್ತಿಲ್ವಾ ?'

'ಹಾಗಿದ್ದರೆ ನಮ್ಮಂಥವರು ಏನು ಮಾಡಬೇಕು ? ನನ್ನ ತಂದೆ, ತಾಯಿ, ತಂಗಿಯರಿಗೆ ಸರ್ಕಾರ ಊಟ ಕೊಡುತ್ತದಾ ?'-ಮುಕ್ತಾರ್ ಬುದ್ಧಿ ಚುರುಕುಗೊಳಿಸಿದ.

'ಅದೆಲ್ಲಾ ನಮಗೆ ಗೊತ್ತಿಲ್ಲಪ್ಪ. ನಿನಗೆ ೧೪ವರ್ಷವಾಗಿದ್ದರೆ ನಾನು ಕೆಲಸ ಕೊಡುತ್ತಿದ್ದೆ. ಆದರೆ ಏನು ಮಾಡುವುದು ?'ಎಂದು ಹೊಟೇಲ್ ಮಾಲಿಕನೇ ಮುಕ್ತಾರ್‌ನಲ್ಲಿ ಪ್ರಶ್ನಿಸಿದ.

'ಕಾಕಾ, ನನಗೆ ಹಸಿವಾಗುತ್ತದೆ. ಏನಾದರು ತಿನ್ನಲಿಕ್ಕೆ ಉಂಟಾ ?' ಮುಕ್ತಾರ್ ಕೈ ಚಾಚಿ ಕೇಳಿದ.

'ಈಗ ಇಲ್ಲ. ಸಂಜೆ ಬಾ, ಉಳಿದಿದ್ದರೆ ಕೊಡುವ'

ಆ ಮಾತು ಕೇಳಿ ಮುಕ್ತಾರ್‌ನ ಕಣ್ಣಲ್ಲಿ ನೀರು ಆಟವಾಡತೊಡಗಿತು. ಸಂಜೆಯವರೆಗೆ ನಾನು ಹಸಿವಿನಿಂದ ಇರಬೇಕಾ ? ನಮ್ಮ ನೋವು ಇವರಿಗೆ ಯಾಕೆ ಅರ್ಥವಾಗುವುದಿಲ್ಲ. ಕೆಲಸ ಕೊಡಲು ಕಾನೂನು ಅಡ್ಡಿ ಅಂತ ಹೇಳ್ತಾರೆ. ಸ್ವಲ್ಪ ತಿಂಡಿ ಕೊಡಿ ಎಂದರೆ ಸಂಜೆ ಬಾ ಅನ್ತಾರೆ ಎಂದು ತನ್ನಲ್ಲೇ ಹೇಳಿ ಸುಮ್ಮನೆ ಅಲ್ಲಿಂದ ಮುಂದಕ್ಕೆ ಸಾಗಿದ. ಇನ್ನು ಯಾವ ಹೊಟೇಲಿನವರೂ ಕೂಡಾ ಕೆಲಸ ಕೊಡಲಿಕ್ಕಿಲ್ಲ. ಹಾಗಾಗಿ ಅಂಗಡಿಯವರಲ್ಲಿ ಕೆಲಸ ಕೇಳೋಣ ಎಂದು ಭಾವಿಸಿ ಅಲ್ಲಿದ್ದ ನಾಲ್ಕೈದು ಜಿನಸಿ ಅಂಗಡಿಗೆ ಹೋಗಿ ಕೆಲಸ ಕೇಳಿದ. ಅವರೆಲ್ಲಾ ನೀನು ಬಾಲ ಕಾರ್ಮಿಕ, ನಿನಗೆ ಕೆಲಸ ಕೊಡಲು ಆಗುವುದಿಲ್ಲ ಎಂದರು.

ಮುಕ್ತಾರ್‌ಗೆ ಮಾತು ಮಾತಿಗೂ 'ನಿಂಡೆ ಕಲ್ತಾಣೆ '(ನಿನ್ನ ಕತ್ತಿನಾಣೆ) ಎನ್ನುವ ಅಭ್ಯಾಸ ಇದೆ. ತನ್ನ ಹರೆಯದ ಹುಡುಗರು ಏನೇ ಮಾತೇ ಆಡಲಿ, 'ನಿಂಡೆ ಕಲ್ತಾಣೆ' ಎನ್ನದೆ ಇರಲು

ಅವನಿಗೆ ಆಗುವುದಿಲ್ಲ. ದೊಡ್ಡವರಲ್ಲಿ 'ನಿಂಜಲೆ ಕಲ್ತಾನೆ' (ನಿಮ್ಮ ಕತ್ತಿನಾಣೆ) ಎಂದು ಹೇಳುತ್ತಾನೆ.

ಅದಲ್ಲದೆ ತನಗಿಂತ ಒಂದಷ್ಟು ದೊಡ್ಡವರಲ್ಲಿ 'ಕಾಕ, ಎಟ್ಟಾಣ' (ಅಣ್ಣಾ, ಎಂಟಾಣೆ) ಎಂದು ಕೇಳುತ್ತಿದ್ದ. ಹಾಗೇ ಅವರು ಕೊಟ್ಟ ಎಂಟಾಣೆಯಿಂದ ಏನಾದರು ತಿಂದು ಕುಶಿ ಪಡುತ್ತಿದ್ದ.

ಇದೀಗ ಮಂಗಳೂರಿನಲ್ಲಿ ಕೆಲಸ ಕೇಳುವಾಗಲೂ ಕೂಡಾ 'ಕಾಕ, ಎಟ್ಟಾಣ 'ಎಂದು ಕೇಳಿದ್ದ. ಅವರು ಇಲ್ಲ ಎನ್ನದೆ ಎಂಟಾಣೆ ಕೊಟ್ಟಿದ್ದರು. ಆವಾಗಲೇ ಅವನಿಗೆ ತನ್ನ ತಪ್ಪಿನ ಅರಿವು ಆಗಿತ್ತು. ತಾನಿನ್ನು ಎಂಟಾಣೆ ಕೇಳಬಾರದು. ಆ ಎಂಟಾಣೆಯಿಂದ ಮನೆಯವರ ಹೊಟ್ಟೆ ತುಂಬುವುದಿಲ್ಲ ಎಂದು ತನ್ನಲ್ಲೇ ಹೇಳುತ್ತಾ ಎಂಟಾಣೆಯ ಪ್ರಸ್ತಾಪವನ್ನು ಅಲ್ಲಿಗೇ ಬಿಟ್ಟಿದ್ದ. ಆದರೂ ಕೂಡಾ ಎದುರು ಸಿಕ್ಕಿದ ಹಿರಿಯರಲ್ಲಿ ಮಾತು ಮಾತಿಗೂ 'ನಿಂಜಲೆ ಕಲ್ತಾಣೆ' ಎನ್ನುತ್ತಿದ್ದ. ಹಾಗಾಗಿ ಅಪರಿಚಿತನಾದರೂ ಅನೇಕ ಮಂದಿಗೆ ಮುಕ್ತಾರ್‌ನನ್ನು ಮಾತನಾಡಿಸುವುದರಲ್ಲೇ ಒಂದು ಕುಶಿ ಸಿಗುತ್ತಿತ್ತು. ಆದರೆ ಯಾರೂ ಕೂಡಾ ಕೆಲಸ ಕೊಡಲಿಲ್ಲ.

ಹೀಗೆ ಮಂಗಳೂರಿನ ಗಲ್ಲಿ ಗಲ್ಲಿಯಲ್ಲಿ ಅಲೆಯುತ್ತಿದ್ದಾಗ ಒಂದು ಶಾಲೆ ಅವನ ಕಣ್ಣಿಗೆ ಬಿತ್ತು. ಆ ಮಕ್ಕಳು ಮಧ್ಯಾಹ್ನದ ಬಿಸಿಯೂಟ ಸವಿಯುವುದರ ಕುಶಿಯಲ್ಲಿದ್ದರು. ತಾನೂ ಕೂಡಾ ಈವತ್ತು ಶಾಲೆಗೆ ಹೋಗಿದ್ದರೆ ಬಿಸಿಯೂಟ ಮಾಡುತ್ತಿದ್ದೆ. ಆದರೆ ನಮ್ಮ ಬಡತನವೇ ನನ್ನನ್ನು ಈ ಸಣ್ಣ ಪ್ರಾಯದಲ್ಲಿ ಕೆಲಸಕ್ಕಾಗಿ ಹುಡುಕುವಂತೆ ಮಾಡಿತು ಎಂದು ಮುಕ್ತಾರ್ ಹೇಳಿಕೊಂಡು ಮಕ್ಕಳನ್ನೇ ನೋಡತೊಡಗಿದ.

ಈಗ ಅವನಿಗೆ ಹಸಿವು ತಾಳಲಿಕ್ಕೆ ಆಗುವುದಿಲ್ಲ. ಹೊಟ್ಟೆ ತುಂಬಾ ಒಳ ಹೋಗಿತ್ತು. ತೊಟ್ಟಿದ್ದ ಹಳೆಯ ತೇಪೆ ಹಾಕಿದ ಪ್ಯಾಂಟ್ ಕೂಡಾ ಜಾರತೊಡಗಿ ಕಲ್ಲಾದರು ತಿಂದು ಹೊಟ್ಟೆ ತಣಿಸಲಾ ಎಂದು ಒಂದು ಕ್ಷಣ ಅವ ಯೋಚಿಸಿ ಅಲ್ಲೇ ಇದ್ದ ನಳ್ಳಿ ನೀರಿಗೆ ಬಾಯಿ ಹಾಕಿದ. ನೀರು ಕುಡಿದು ಹಸಿವು ನೀಗಿಸುವ ಪ್ರಯತ್ನ ಮಾಡಿದರೂ ಅದಾಗಲಿಲ್ಲ. ಅತ್ತಿತ್ತ ಒಂದು ಕ್ಷಣ ನೋಡುತ್ತಾ, ಅಲ್ಲೇ ಇದ್ದ ಗೇರುಮರದ ಕೆಲವು ಎಲೆಗಳನ್ನು ಕಿತ್ತು ಕೈಯಲ್ಲಿ ಚೆನ್ನಾಗಿ ಅಮುಕ ತೊಡಗಿದ. ಅದಕ್ಕೆ ಸ್ವಲ್ಪ ನೀರನ್ನೂ ಸೇರಿಸಿದ. ಹಾಗೇ ಅದೊಂದು ಉಂಡೆಯಾಕಾರಕ್ಕೆ ಬಂದ ಮೇಲೆ ಮೆಲ್ಲನೆ ಅದನ್ನು ನುಂಗಿ ಮತ್ತಷ್ಟು ನೀರು ಕುಡಿದ. ಹಾಗೇ ಸ್ವಲ್ಪ ಮಟ್ಟಿನ ಹಸಿವನ್ನು ದೂರ ಮಾಡಿದ ತೃಪ್ತಿಯಿಂದ ಮತ್ತೆ ಮುನ್ನಡೆದ.

ಹೀಗೆ ಮಧ್ಯಾಹ್ನದವರೆಗೂ ಮಂಗಳೂರಿನ ಗಲ್ಲಿ ಗಲ್ಲಿಯಲ್ಲಿ ಕೆಲಸ ಹುಡುಕಿದ. ಕೆಲವು ಕಛೇರಿಗೂ ಕಾಲಿಟ್ಟು ಕೆಲಸ ಉಂಟಾ ಎಂದು ಕೇಳಿದ. ಆವಾಗ ಕೆಲವು ಮಂದಿ ಹೋಗು, ಇಲ್ಲ ಎಂದು ಒಂದೇ ಉಸಿರಿನಲ್ಲಿ ಹೇಳಿದರೆ, ಇನ್ನು ಕೆಲವು ಮಂದಿ ಸ್ವಲ್ಪ ಸಮಾಧಾನದಿಂದ ವಿವರ ಕೇಳಿ ಪಡೆಯುತ್ತಿದ್ದರು. ಮುಕ್ತಾರ್ ಯಾವುದೇ ಸಂಕೋಚ ಇಲ್ಲದೆ ತನ್ನ ಮನೆಯ ಸಂಗತಿಗಳನ್ನು ಹೇಳುತ್ತಿದ್ದ. ಅವರು ಅದನ್ನೆಲ್ಲಾ ಕೇಳಿಸಿಕೊಂಡು ಛೇ... ಛೇ... ಎನ್ನುತ್ತಿದ್ದರೇ ಹೊರತು ಇದು ನಿನಗಿರಲಿ ಎನ್ನುತ್ತಾ ಹತ್ತು ರೂಪಾಯಿ ನೀಡುವಷ್ಟೂ ಮುಕ್ತ ಮನಸ್ಸು ಮಾಡಲಿಲ್ಲ.

ಸಂಜೆ ಮೂರು ಗಂಟೆಯಾಗಿತ್ತು. ಮುಕ್ತಾರ್ ಎಲ್ಲೂ ಸುಮ್ಮನೆ ನಿಂತು ನೋಡಲಿಲ್ಲ. ಒಂದು ಗಲ್ಲಿಯಿಂದ ಮತ್ತೊಂದು ಗಲ್ಲಿಗೆ ಕಾಲಿಟ್ಟ ಕೆಲಸ ಕೇಳುತ್ತಲೇ ಇದ್ದ. ಅದೊಂದು ಕಟ್ಟಡದ ನಾಲ್ಕು ಮಹಡಿ ಹತ್ತಿದಾಗ ಅವನಿಗೆ ಹಸಿವು ಮತ್ತೆ ಶುರುವಾಯಿತು. ಇನ್ನೆಷ್ಟು ಕ್ಷಣ ನಾನು ಈ ಹೊಟ್ಟೆಯನ್ನು ಹೀಗೆ ಹಸಿವಿನಲ್ಲಿಡಲಿ ಎಂದು ಯೋಚಿಸಿದ ಮುಕ್ತಾರ್, ಅಲ್ಲೇ ಕಛೇರಿಯೊಂದರ ಎದುರಲ್ಲೇ ಕುರ್ಚಿಯಲ್ಲಿ ಕೂತಿದ್ದ ವ್ಯಕ್ತಿಯಲ್ಲಿ ಕೆಲಸ ಉಂಟಾ ಎಂದು ಕೇಳಿದ. ಇಲ್ಲ ಎಂಬ ಉತ್ತರ ಆ ವ್ಯಕ್ತಿಯಂದ ಬಂದರೂ ಕೂಡಾ 'ಕಾಕಾ...' ಎಂದು ಕರೆದ ಮುಕ್ತಾರ್, ತನ್ನ ಎಲ್ಲಾ ಸಂಕಷ್ಟವನ್ನು ಆತನಲ್ಲಿ ಹೇಳುತ್ತಾ, 'ಹೊಟ್ಟೆ ತುಂಬಾ ಹಸಿಯುತ್ತಿದೆ. ಏನಾದರು ತಿನ್ನಲು ಇದ್ದರೆ ಕೊಡಿ' ಎಂದು ಕೇಳಿದ. ಮುಕ್ತಾರ್‌ನ ಆ ಅಂಗಲಾಚುವಿಕೆ ಆತನ ಹೃದಯ ಮೀಟಿತ್ತು. ಅಲ್ಲಿ ತಿನ್ನಲಿಕ್ಕೆ ಆಗುವಂತದ್ದು ಏನೂ ಇರಲಿಲ್ಲ. ಹುಡುಗನಿಗೆ ತುಂಬಾ ಹಸಿವಾಗಿದೆ ನಿಜ ಎಂದು ಖಾತ್ರಿಪಡಿಸಿದ ಆತ ೫೦ರೂಪಾಯಿಯ ಒಂದು ಹಸಿ ನೋಟನ್ನು ಮುಕ್ತಾರ್‌ನ ಕೈಗಿತ್ತು, ಹೋಗು ಹೊಟ್ಟೆ ತುಂಬಾ ತಿನ್ನು ಎಂದ.

ಆ ನೋಟನ್ನು ಕಂಡೊಡನೆ ಮುಕ್ತಾರ್‌ನ ಹಸಿವೂ ದೂರವಾಯಿತು. ಅವನಿಗೆ ತಕ್ಷಣ ತನ್ನ ತಂದೆ, ತಾಯಿ, ತಂಗಿಯಂದಿರ ನೆನಪಾಯಿತು. ಈ ಹಣದಿಂದ ಊರಲ್ಲಿ ಸಾಮಾನು ಖರೀದಿಸಿ ದರೆ ಮನೆಯವರೆಲ್ಲಾ ಒಟ್ಟಾಗಿ ಕೂತು ತಿನ್ನಬಹುದು ಎಂದು ಯೋಚಿಸಿ ಅದನ್ನು ತನ್ನ ಕಿಸೆಯಲ್ಲಿ ಭದ್ರವಾಗಿಟ್ಟುಕೊಂಡ.

ಇನ್ನೀಗ ಕೆಲಸ ಹುಡುಕಿದ್ದು ಸಾಕು, ಹಸಿವನ್ನು ಹೇಗಾದರೂ ಕಟ್ಟಿ ನಿಲ್ಲಿಸಿ ಬೇಗ ಮನೆಗೆ ಹೋಗಿ ಸಾಮಾನು ಖರೀದಿಸಿ ಎಲ್ಲರೂ ಹೊಟ್ಟೆ ತುಂಬಾ ತಿನ್ನಬೇಕು ಎಂದು ನಿರ್ಧರಿಸಿ ತನ್ನೂರಿನ ಬಸ್ ಹಿಡಿಯಲು ಮುಂದಾದ.

ಹಾಗೇ ನಡೆಯುತ್ತಿದ್ದಂತೆಯೇ ದೊಡ್ಡದಾದ ಒಂದು ಹಾಲ್ ಅವನಿಗೆ ಕಾಣಿಸಿತು. ಅಲ್ಲಿ ಶ್ರೀಮಂತರ ಮದುವೆ ನಡೆಯುತ್ತಿದೆ ಎಂದು ಮುಕ್ತಾರ್ ತಿಳಿದುಕೊಂಡ. ಅಲ್ಲೇನಾದರು ಪಾತ್ರೆ ತೊಳೆಯುವ ಕೆಲಸ ಸಿಕ್ಕಿದರೆ ಕೈಗೆ ಸ್ವಲ್ಪ ಹಣ ಸಿಕ್ಕೀತು ಎಂದು ಆಶಿಸಿದ ಆತ ಆ ಹಾಲ್‌ನತ್ತ ನಡೆದ. ಎಲ್ಲರೂ ಅಂದ ಚಂದದ ಬಟ್ಟೆ ಬರೆ ಧರಿಸಿದ್ದರು. ತನ್ನ ಪ್ರಾಯದ ಮಕ್ಕಳೂ ಕೂಡಾ ಕೋಟ್ ಪ್ಯಾಂಟ್ ಹಾಕಿ ಟೈ ಕಟ್ಟಿದ್ದನ್ನು ಮುಕ್ತಾರ್ ಕಂಡ. ಈ ದಾರಿಯಾಗಿ ಹೋದರೆ ಯಾರೂ ನನ್ನನ್ನು ಒಳಗೆ ಪ್ರವೇಶಿಸಲು ಬಿಡಲಾರರು ಎಂದು ಭಾವಿಸಿ ಸೀದಾ ಹಾಲ್‌ನ ಹಿಂಬದಿಗೆ ಹೋದ. ಅಲ್ಲಿ ಕೆಲವು ಮಂದಿ ಪಾತ್ರೆ ತೊಳೆಯುತ್ತಿದ್ದುದನ್ನು, ತಿಂದು ಅಳಿದುಳಿದುದನ್ನು ಒಂದೆಡೆ ಎಸೆದದ್ದನ್ನು ಮುಕ್ತಾರ್ ಗಮನಿಸಿದ. ಅದನ್ನು ಒಂದು ತೊಟ್ಟೆಗೆ ಹಾಕಿ ಮನೆಗೆ ಕೊಂಡು ಹೋಗಲಾ ಎಂದು ಅವನ ಮನಸ್ಸು ಕೇಳತೊಡಗಿತು. ಆದರೂ ಅವನಿಗೆ ಧೈರ್ಯ ಬರಲಿಲ್ಲ.

'ಕಾಕಾ...' ದೀನ ಧ್ವನಿಯಲ್ಲಿ ಮುಕ್ತಾರ್ ಕೂಗಿದ.

ಪಾತ್ರೆ ತೊಳೆಯುತ್ತಿದ್ದವರು ಅತ್ತ ಕಣ್ಣು ಹಾಯಿಸಿ 'ಏನು' ಎಂದು ಕಣ್ಣಲ್ಲೇ ಕೇಳಿದರು.

'ಪಾತ್ರೆ ತೊಳೆಯಬೇಕಾ ?'

'ಪಾತ್ರೆ ತೊಳೆಯುತ್ತೀಯಾ ? ಬಾ... ಬಾ... ಇಲ್ಲಿ ಪಾತ್ರೆ ತೊಳೆಯಲು ಜನ ಕಮ್ಮಿ ಉಂಟು' ಎಂದು ಹೇಳಿದ ಒಬ್ಬ ಹಿಂಬಾಗಿಲ ಗೇಟು ತೆರೆದ. ಹಾಗೇ ಮುಕ್ತಾರ್ ಪಾತ್ರೆ ತೊಳೆಯಲು ಮುಂದಾದ. ಕಾಯಿಸಿದ ಕೋಳಿ, ಜುಲೇಬಿ, ಬಿರಿಯಾನಿ, ಐಸ್‌ಕ್ರೀಂ ಇತ್ಯಾದಿಯನ್ನು ಅರ್ಧರ್ಧ ತಿಂದು ಬಿಟ್ಟಿರುವ ಪ್ಲೇಟ್ ಕಂಡು ಅವನ ಬಾಯಲ್ಲಿ ನೀರೂರಿತು. ಇದನ್ನು ಒಂದು ತೊಟ್ಟೆಗೆ ಹಾಕಲಾ ಎಂದು ಅವನ ಮನಸ್ಸು ಮತ್ತೊಮ್ಮೆ ಕೇಳಿತು.

ಪಾತ್ರೆ ತೊಳೆಯುತ್ತಿದ್ದ ಇತರರು ಬೇಗ ಬೇಗ ಎಂದಾಗ, ಮುಕ್ತಾರ್ ಉಪಾಯವಿಲ್ಲದೆ ಲಗುಬಗನೆ ಪ್ಲೇಟ್‌ಗಳನ್ನು ತೊಳೆಯತೊಡಗಿದ. ಚೆನ್ನಾಗಿ ತೊಳೆ, ಹೋಗುವಾಗ ನಿನಗೆ ಸ್ವಲ್ಪ ಕಾಸು ಮತ್ತು ಬಿರಿಯಾನಿ, ಕೋಳಿ ಕಾಯಿಸಿದ್ದು ಎಲ್ಲಾ ಕೊಡುತ್ತೇವೆ ಎಂದು ಅಲ್ಲಿದ್ದ ಒಬ್ಬಾತ ಹೇಳಿದಾಗ, ಮುಕ್ತಾರ್ ಪಾತ್ರೆ ತೊಳೆಯುವುದನ್ನು ಮತ್ತಷ್ಟು ಬಿರುಸುಗೊಳಿಸಿದ. ಇವರು ಎಷ್ಟು ಬಿರಿಯಾನಿ ಮತ್ತು ಕಾಯಿಸಿದ ಕೋಳಿಯ ತುಂಡು ಕೊಟ್ಟಾರು ? ಎಂದು ತನ್ನಲ್ಲೇ ಕೇಳಿಕೊಂಡು ಕಡಿಮೆ ಕೊಟ್ಟರೆ, ಮನೆಯಲ್ಲಿರುವವರ ಸಂಖ್ಯೆ ಹೇಳಿ ಹೆಚ್ಚು ತೆಗೆದುಕೊಳ್ಳಬೇಕು ಎಂದೂ ಭಾವಿಸಿದ.

ಮುಸ್ಸಂಜೆಯವರೆಗೂ ಅಲ್ಲಿ ಪಾತ್ರೆ, ಪಗಡೆ ಇತ್ಯಾದಿಯನ್ನು ತೊಳೆದ ಮುಕ್ತಾರ್‌ನ ಸೊಂಟದಲ್ಲಿ ನೋವು ಕಾಣಿಸಿಕೊಂಡಿತ್ತು. ಆದರೂ ಬಿರಿಯಾನಿ ಸಿಗುವ ಕುಶಿಯಲ್ಲಿ ಆ ನೋವನ್ನು ಮರೆಯತೊಡಗಿದ. ಅಲ್ಲಿದ್ದವರೆಲ್ಲಾ ಮುಕ್ತಾರ್‌ನನ್ನು ಮಾತನಾಡಿಸುವ ಪ್ರಯತ್ನ ಮಾಡಿದರು. ಮುಕ್ತಾರ್ ಮಾತಿನ ಮಧ್ಯೆ 'ನಿಮ್ಮ ಕತ್ತಿನಾಣೆ' ಎಂದು ಹೇಳುತ್ತಿದ್ದ. ಅದು ಕೇಳುಗರಿಗೆ ಮತ್ತಷ್ಟು ಕುಶಿ ಉಂಟು ಮಾಡಿತ್ತಾದರೂ ಕೆಲವರು ಮುಸಿ ಮುಸಿ ನಕ್ಕು ಬಿಟ್ಟರು.

ಅಷ್ಟರಲ್ಲಿ ಅಲ್ಲಿಗೆ ಬಂದ ಒಬ್ಬರು ಮುಕ್ತಾರ್‌ಗೆ ನೂರರ ನೋಟು ಕೊಟ್ಟರಲ್ಲದೆ ಅಳಿದುಳಿದ ಬಿರಿಯಾನಿ, ಕೋಳಿ ತುಂಡಲ್ಲಿ ಸ್ವಲ್ಪ ಇವನಿಗೂ ಕೊಡಿ ಎಂದು ಸೂಚಿಸಿದರು. ಅದರಂತೆ ಇತರ ಕೆಲಸದಾಳುಗಳು ಒಂದು ತೊಟ್ಟೆಯಲ್ಲಿ ಅದನ್ನು ಹಾಕಿ ಕೊಟ್ಟರು.

ಮುಕ್ತಾರ್ ಎರಡು ಕಡೆ ಸಿಕ್ಕಿದ ೧೫೦ ರೂಪಾಯಿಯನ್ನು ಒಟ್ಟು ಮಾಡಿ ಪ್ಯಾಂಟಿನ ಜೇಬಲ್ಲಿ ಭದ್ರವಾಗಿಟ್ಟ. ತನ್ನ ತಂದೆ ಕೊಟ್ಟ ಹಣವನ್ನು ಬಸ್‌ಗೆ ಕೊಡಲು ಕೈಯಲ್ಲಿಡಿದುಕೊಂಡ. ಹಾಗೇ ತೊಟ್ಟೆಯನ್ನು ಭುಜಕ್ಕೇರಿಸಿ ಓಡೋಡಿ ಬಂದು ಬಸ್ ಹಿಡಿದ.

ರಾತ್ರಿಯಾದರೂ ಮಗ ಬಾರದ್ದನ್ನು ಕಂಡು ನೆಬಿಸಾಳಿಗೆ ಆತಂಕ ಶುರುವಾಗಿತ್ತು. ಆಕೆ ಗಂಡನನ್ನು ತರಾಟೆಗೆ ತೆಗೆದುಕೊಂಡಳು. ಅದ್ದಾಕನಿಗೂ ಕೂಡಾ ಆತಂಕ ಶುರುವಾಯಿತು.

ತಂಗಿಯಂದಿರೂ ಕೂಡಾ ಅಣ್ಣನನ್ನು ಎದುರು ನೋಡುತ್ತಿದ್ದರು. ಅಷ್ಟರಲ್ಲಿ ಮುಕ್ತಾರ್ ಮನೆಗೆ ಕಾಲಿಟ್ಟು ಯಾ ಅಲ್ಲಾ ಎನ್ನುತ್ತಾ ಹಣವನ್ನೂ, ಬಿರಿಯಾನಿ, ಕೋಳಿಯ ತುಂಡನ್ನೂ ಎಲ್ಲರ ಮುಂದೆ ಬಿಚ್ಚಿಟ್ಟು ತನ್ನಿಡೀ ದಿನದ ದಿನಚರಿಯನ್ನು ಹೇಳತೊಡಗಿದ.

ಮಗನ ಮಾತು ಕೇಳಿ ನೆಬಿಸಾಳಿಗೆ ಪಾಪ ಎನಿಸಿತು. ಇದುವರೆಗೂ ತಿಂದಿರದ, ಬಣ್ಣ ಯಾವುದು ಅಂತಲೂ ನೋಡಿರದ ಬಿರಿಯಾನಿಯನ್ನು ತಿನ್ನಲು ತಂಗಿಯರು ಹಾತೊರೆಯತೊಡಗಿದರು. ಮುಂದೇನು ಮಾಡುವುದು ? ಬಾಲಕಾರ್ಮಿಕ ಅಂತ ಹೇಳಿ ಕೆಲಸ ಕೊಡದಿದ್ದರೆ ನಮ್ಮ ಹೊಟ್ಟೆ ತುಂಬಿವುದು ಹೇಗೆ ? ಎಂದು ಅದ್ದಾಕ ಕೇಳಿದರೂ ಆತನಿಗೆ ಉತ್ತರ ಸಿಗಲಿಲ್ಲ.

ಮುಕ್ತಾರ್ ನಾಳೆಯ ಬಗ್ಗೆ ಯೋಚಿಸದೆ, 'ಅಲ್ಲಾಹು ಈವತ್ತು ನಮ್ಮತ್ತ ಕಣ್ಣು ಹಾಯಿಸಿದ್ದಾನೆ. ಹಾಗಾಗಿ ಜೀವಮಾನದಲ್ಲಿ ತಿಂದಿರದ ಬಿರಿಯಾನಿ, ಕೋಳಿ ತುಂಡನ್ನು ನಾವಿಂದು ತಿನ್ನುವಂತಾಯಿತು 'ಎಂದು ಹೇಳುತ್ತಾ ಹಣವನ್ನು ತಂದೆಯ ಕೈಗಿತ್ತ. ಹಾಗೇ ತಾನು ತಿನ್ನುವ ಮೊದಲು ಒಂದು ತುತ್ತು ಬಿರಿಯಾನಿಯನ್ನು ತನ್ನ ಚಿಕ್ಕ ತಂಗಿಯ ಬಾಯಿಗಿಡುತ್ತಾ, 'ತಿನ್ನು, ನಮಗೆ ಈವತ್ತು ಪೆರ್ನಾಳ್' ಎಂದು ಹೇಳಿ ನಕ್ಕ. ತಂಗಿಯಂದಿರು ಅವನ ನಗುವಿಗೆ ಪ್ರತಿಯಾಗಿ ನಕ್ಕು ಸಂತಸಗೊಂಡರು. ಬಡತನದ ನಡುವೆಯೂ ಸಂತಸದ ಕ್ಷಣ ನಗೆ ಚೆಲ್ಲುವ ಮಕ್ಕಳನ್ನು ನೋಡಿದ ಅದ್ದಾಕ ಮತ್ತು ನೆಬಿಸಾಳ ತುಟಿಯಲ್ಲೂ ನಗು ಅರಳಿತು.

ಎಲ್ಲರೂ ಬಿರಿಯಾನಿ ತಿನ್ನಲು ಅಣಿಯಾದರೆ, ಮುಕ್ತಾರ್‌ನ ದೊಡ್ಡ ತಂಗಿ 'ಕಾಕಾ... ನಿಜಕ್ಕೂ ಇದು ಎಲ್ಲಿಂದ ?'ಎಂದು ಕೇಳಿ ಸಂಶಯಗೊಂಡಳು. ತಂಗಿಯ ಮನದ ಇಂಗಿತವನ್ನು ಗ್ರಹಿಸಿದ ಮುಕ್ತಾರ್, 'ನಿನ್ನ ಕತ್ತಿನಾಣೆ' ಎಂದು ಬಾಯ್ತೆರೆಯುವಷ್ಟರಲ್ಲಿ 'ಆಯ್ತಾಯ್ತು, ನೀವಿನ್ನು ಚರ್ಚೆ ಮಾಡಬೇಡಿ' ಎನ್ನುತ್ತಾ ನೆಬಿಸಾ ಮಕ್ಕಳ ಮಾತಿಗೆ ಕಡಿವಾಣ ಹಾಕಿದಳು.

* * *

# ಆಮಿನಾ

ಯು.ಎ. ಕಾಸಿಂ ಉಳ್ಳಾಲ್

---

ಆಮಿನಾ

ಇಬ್ಬರು ಹೆಣ್ಮಕ್ಕಳ ತಾಯಿ. ಒಬ್ಬ ಮಗಳಿಗೆ ಎಂಟು, ಮತ್ತೊಬ್ಬಳಿಗೆ ಏಳು ವರ್ಷ ಪ್ರಾಯ.

ಬಾಪಾಕ.

ಸಣ್ಣ ಪ್ರಾಯದಿಂದಲೇ ಬೀಡಿ ಎಳೆಯುವ ಅಭ್ಯಾಸ ರೂಢಿಸಿಕೊಂಡ ಕಾರಣದಿಂದಲೋ ಏನೋ, ವಯಸ್ಸಾಗದೇ ಮುದುಕರಾಗಿದ್ದಾರೆ.

ಆಲಿ ಮಂದಾದ.

ಉಬ್ಬಸ ರೋಗಿ. ಹೊಟ್ಟೆಗೆ ಹಾಕಲೇ ಹಣವಿಲ್ಲದ ಕಾರಣ ಸರಿಯಾದ ಮದ್ದು ಕೂಡಾ ಮಾಡದೆ ರೋಗ ಉಲ್ಬಣಗೊಂಡಿದೆ. ಆಗಾಗ ಕೆಮ್ಮುತ್ತಲೇ ಇರುತ್ತಾರೆ.

ಮನೆ.

ಸರ್ಕಾರಿ ಜಾಗದಲ್ಲಿದೆ. ಹದಿನೆಂಟು ವರ್ಷದ ಹಿಂದೆ ಬಿದಿರು, ಸೋಗೆ ಬಳಸಿ ಕಟ್ಟಿದ ಗುಡಿಸಲು.

ನೀರು.

ಮನೆಯಿಂದ ಸ್ವಲ್ಪ ದೂರದಲ್ಲಿ ಸರ್ಕಾರಿ ಬಾವಿ ಇದೆ. ಅದರಿಂದಲೇ ನೀರು ಸೇದಲಾಗುತ್ತದೆ.

ಆದಾಯ.

**ಆಲಿ ಮಂದಾದ** ಎಲೆ ಕತ್ತರಿಸಿ ಹಾಕುತ್ತಾರೆ. ಮಗಳು ಆಮಿನಾ ಬೀಡಿ ಕಟ್ಟುತ್ತಾಳೆ. ಬಾವಾಕ ಅದನ್ನು ಬೀಡಿ ಬ್ರಾಂಚಿಗೆ ಕೊಂಡು ಹೋಗಿ ಕೊಡುತ್ತಾರೆ.

### ಮನೆಯಲ್ಲಿ...

ಬಾವಾಕ, ಆಲಿಮಂದಾದ, ಆಮಿನಾ ಮತ್ತವಳ ಇಬ್ಬರು ಹೆಣ್ಮಕ್ಕಳು. ಆ ಮಕ್ಕಳು ಒಂದು ಮೈಲು ದೂರದಲ್ಲಿರುವ ಶಾಲೆಗೆ ಹೋಗುತ್ತಾರೆ. ಪಕ್ಕದ ಮನೆಯ ಮಧ್ಯಮ ವರ್ಗದ ಮಕ್ಕಳ ಹರಿದ ಬಟ್ಟೆಯನ್ನೇ ಧರಿಸುತ್ತಾರೆ. ಮಕ್ಕಳು ಏನು ಕಲಿಯುತ್ತಾರೆ, ಎಷ್ಟು ಕಲಿತಿದ್ದಾರೆ ಎಂದು ಕೇಳಿ ತಿಳಿಯುವ ಜಾಣ್ಮೆ ಆಮಿನಾಳಿಗಿಲ್ಲ.

### ಆಮಿನಾಳ ಮೊದಲ ಮದುವೆ

ಆಮಿನಾಳಿಗೆ ಸಣ್ಣ ಪ್ರಾಯದಲ್ಲೇ ಮದುವೆಯಾಗಿದೆ. ಕೇರಳದಿಂದ ಬಂದು ಕೂಲಿ ಕೆಲಸ ಮಾಡುತ್ತಿದ್ದ ಆಮುವನ್ನು ಆಮಿನಾಳಿಗೆ ಮದುವೆ ಮಾಡಿಕೊಡಲಾಗಿತ್ತು. ಆಮಿನಾಳ ಹೊಟ್ಟೆಯಲ್ಲಿ ಎರಡನೇ ಮಗು ಬೆಳೆಯುತ್ತಿರುವಾಗಲೇ ಆಮು ಊರು ಬಿಟ್ಟಿದ್ದ. ಆತ ಕಳುಹಿಸಿ ಕೊಟ್ಟಿದ್ದ ತಲಾಖ್ ಪತ್ರವನ್ನು ಬಾವಾಕ ಆಮಿನಾಳಿಗೆ ತಿಳಿಸದೆ ಮುಚ್ಚಿಟ್ಟಿದ್ದರು.

ಗಂಡನಿಗಾಗಿ ಕಾದು ಕಾದು ಆಮಿನಾ ನಿರಾಶಳಾದಳು. ವರ್ಷ ಉರುಳುತ್ತಲೇ ಆಮಿನಾಳ ನೆನಪಿನಿಂದ ಆಮು ದೂರವಾಗಿದ್ದ. ಹತ್ತಿರ ಇರುವಾಗಲೂ ಆಮು ಆಮಿನಾಳಿಗೆ ಸುಖವನ್ನೇನೂ ಕೊಟ್ಟಿಲ್ಲ. ಮದುವೆಯಾದ ಕೆಲವು ದಿನದವರೆಗೂ ಒಳ್ಳೆಯವನ ಹಾಗೆ ಕಂಡ ಆಮು ನಂತರ ಕುಡಿಯಲು ಶುರು ಮಾಡಿದ್ದ.

ಮದುವೆಗೆ ಮುಂಚೆ ಬೀಡಿ ಕಟ್ಟಿಯೇ ತಂದೆ ತಾಯಿಯನ್ನು ಸಾಕುತ್ತಿದ್ದ ಆಮಿನಾಳಿಗೆ ತದನಂತರ ಗಂಡನಿಗೆ ಊಟ ಹಾಕುವ ಜವಬ್ದಾರಿಯೂ ಬಿತ್ತು. ಆತ ಓಡಿ ಹೋದ ಮೇಲೆ ಅವ ಕೊಟ್ಟು ಹೋದ ಇಬ್ಬರು ಹೆಣ್ಮಕ್ಕಳನ್ನು ಸಾಕುವ ಹೊಣೆಯೂ ಬಿತ್ತು.

ಬಾವಾಕರ ಮನೆಯವರಿಗೆ ಸೀಕು ಬಂದರೆ, ಅದರಷ್ಟಕ್ಕೆ ಅದು ಗುಣವಾಗಬೇಕು. ಮದ್ದು ಮಾಡಿ ಅವರಿಗೆ ಗೊತ್ತಿಲ್ಲ. ಅಂದರೆ, ಮದ್ದು ಮಾಡಲು ಹಣವೇ ಇಲ್ಲ. ದುಡಿದದ್ದೆಲ್ಲವೂ ಹೊಟ್ಟೆ ತುಂಬಿಸುವುದರಲ್ಲೇ ಖಾಲಿಯಾಗುತ್ತದೆ.

ಇತ್ತೀಚೆಗೆ ಬಾವಾಕನಿಗೊಂದು ಕೆಲಸ ಸಿಕ್ಕಿದೆ. ಅಂದ್ರೆ, ಪಕ್ಕದ ಪೆಟ್ರೋಲ್ ಪಂಪ್‌ನಲ್ಲಿ ಕಾವಲುಗಾರ. ಹಾಗಾಗಿ ಅವರು ರಾತ್ರಿ ಮನೆಗೆ ಮಲಗಲು ಬರುವುದಿಲ್ಲ. ಆದರೆ, ಅವರು ದುಡಿದದ್ದು ಅವರ ಬೀಡಿ, ಚಹಾಕ್ಕೆ ಸರಿಯಾಗುತ್ತದೆ. ಉಳಿತಾಯ ಶೂನ್ಯ!.

### ಎರಡನೇ ಮದುವೆ

ಒಂದು ದಿನ.

ಜೋರಾಗಿ ಮಳೆ ಸುರಿಯುತ್ತಿತ್ತು. ಬಾವಾಕ ಪೆಟ್ರೋಲ್ ಪಂಪ್‌ನ ಬಳಿ ಇರುವ ಶೆಡ್‌ನ ಬಾಗಿಲ ಬಳಿಯಲ್ಲೇ ನಿಂತಿದ್ದರು. ಅಷ್ಟರಲ್ಲಿ ಲಾರಿಯೊಂದು ಪೆಟ್ರೋಲ್ ಪಂಪ್‌ನೊಳ ಪ್ರವೇಶಿಸಿತು. ಚಳಿಯಿಂದ ಗಡಗಡ ಅಂತ ಇಬ್ಬರೂ ನಡುಗುತ್ತಿದ್ದರು.

'ಇಲ್ಲಿ ಚಹಾದ ಹೊಟೇಲ್ ಉಂಟಾ ?'- ಬಾವಾಕನಲ್ಲಿ ಅವರು ಕೇಳಿದರು.

'ಇತ್ತು. ಈಗಷ್ಟೇ ಅವರು ಬಾಗಿಲು ಹಾಕಿ ಹೋದರು'ಎನ್ನುತ್ತಾ ಬಾವಾಕ ಬೀಡಿ ಹೊತ್ತಿಸಿ ತುಟಿಗಿಟ್ಟರು.

ಸ್ವಲ್ಪ ಹೊತ್ತು ಮಾತುಕತೆಯೇ ಇಲ್ಲ.

'ನೀವು ಯಾರು, ಎಲ್ಲಿಂದ ಬಂದಿದ್ದೀರಿ ?'- ಬಾವಾಕ ಮೌನ ಮುರಿದರು.

ಅವರು ಅದ್ಯಾವುದೋ ಊರ ಹೆಸರು ಹೇಳಿದರು. ಆದರೆ, ಅದು ಬಾವಾಕನಿಗೆ ಅರ್ಥವಾಗಲಿಲ್ಲ. ಅವರು ಯುವಕರನ್ನೇ ಕಣ್ಣಿಟ್ಟು ನೋಡಿದರು. ಚಳಿಯಿಂದ ನಡುಗುತ್ತಿದ್ದ ಅವರನ್ನು ಕಂಡು ಬಾವಾಕರಿಗೆ ಪಾಪ ಅನಿಸಿತು.

'ಇಲ್ಲೇ ನನ್ನ ಮನೆ ಇದೆ. ಸ್ವಲ್ಪ 'ಕನ್ನ' (ಹಾಲು ಹಾಕದ ಚಹಾ) ತರುತ್ತೇನೆ' ಎಂದು ಹೇಳುತ್ತಾ ಬಾವಾಕ ಸೀದಾ ಮನೆಯತ್ತ ಹೆಜ್ಜೆ ಹಾಕಿದರು. ಮಗಳನ್ನು ಎಬ್ಬಿಸಿ 'ಸ್ವಲ್ಪ ಕನ್ನ ಮಾಡಿ ಕೊಡಮ್ಮಾ' ಎಂದು ಕೇಳಿದರು.

ರಾತ್ರೋ ರಾತ್ರಿ ಬಂದು ತಂದೆ ಹೀಗೆ ಕೇಳಿದ್ದು ಮಗಳು ಆಮಿನಾಳಿಗೆ ಸರಿ ಕಾಣಲಿಲ್ಲ. ಅವಳು ಅಸಮಾಧಾನ ಸೂಚಿಸುತ್ತಲೇ 'ಕನ್ನ' ಮಾಡಿ ಕೊಟ್ಟಳು. ಬಾವಾಕ ಅದನ್ನು ಕೊಂಡು ಹೋಗಿ ಅಪರಿಚಿತರಿಗೆ ಕೊಟ್ಟರಲ್ಲದೆ ತಾನೂ ಸ್ವಲ್ಪ ಕುಡಿದು ಬೀಡಿ ಹೊತ್ತಿಸಿದರು. ದಮ್ಮು ಎಳೆಯುತ್ತಲೇ ಕೆಮ್ಮತೊಡಗಿದರು.

ಅಪರಿಚಿತ ಯುವಕರಿಗೆ ಬಾವಾಕರ ಮೇಲೆ ತುಂಬಾ ಪ್ರೀತಿ, ವಿಶ್ವಾಸ ಉಕ್ಕಿತು. ಒಬ್ಬಾತ ಬಾವಾಕನಿಗೆ ಹತ್ತು ರೂಪಾಯಿ ಕೊಟ್ಟ. ಬಾವಾಕನಿಗೆ ಎಲ್ಲಿಲ್ಲದ ಕುಶಿಯಾಯಿತು.

ಮಳೆ ಸುರಿಯುತ್ತಲೇ ಇತ್ತು. ಮೂವರಿಗೆ ನಿದ್ದೆ ಇಲ್ಲ. ಸಮಯ ಕಳೆಯಲು ಮಾತನಾಡ ತೊಡಗಿದರು. ಮಾತಿನ ಮಧ್ಯೆ, ಬಾವಾಕರ ಮನೆಯ ಸಂಗತಿಯೂ ಹೊರ ಬಿತ್ತು. ಅದನ್ನು ಕೇಳಿದ ಆಗಂತುಕರು ಕನಿಕರಪಡತೊಡಗಿದರು.

'ನೀವು ಕೊಡುವುದಾದರೆ, ನಿಮ್ಮ ಮಗಳನ್ನು ನಾನು ಮದುವೆಯಾಗುವೆ. ಯೋಚಿಸಿ ನೋಡಿ. ಎರಡು ದಿನ ಬಿಟ್ಟು ಬರುವೆ'- ಒಬ್ಬಾತ ಹೇಳಿದ.

ಪಕ್ಕದ ಮಸೀದಿಯಿಂದ ಮುಂಜಾನೆಯ ಬಾಂಗ್ ಮೊಳಗತೊಡಗಿತು. ಇಬ್ಬರೂ ಲಾರಿ ಹತ್ತಿದರು.

ಬಾವಾಕ ತುಂಬಾ ಕುಶಿಪಟ್ಟರು. ಈ ದಿನದಲ್ಲೂ ಇಂಥ ಒಳ್ಳೆಯವರಿದ್ದಾರಾ ಎಂದು ಅವರು ತನ್ನಲ್ಲೇ ಪ್ರಶ್ನಿಸಿಕೊಂಡರು. 'ನನ್ನ ಆಮಿನಾಳನ್ನು ಮದುವೆಯಾಗುತ್ತಾನಂತೆ. ಅಲ್ ಹಂದುಲಿಲ್ಲಾಹ್. ಎಲ್ಲವೂ ಅಲ್ಲಾಹನ ವಿಧಿ. ಅದನ್ನು ತಪ್ಪಿಸಲು ನಮಗೆ ಸಾಧ್ಯವೇ?' ಬಾವಾಕ ಆಕಾಶ ನೋಡಿದರು. ಅವರಿಗೆ ಕುಶಿ ತಡೆಯಲಾಗುತ್ತಿಲ್ಲ.

ಮನೆಗೆ ಕಾಲಿಟ್ಟೊಡನೆ ಹೆಂಡತಿಯಲ್ಲಿ ಮಗಳ ಮದುವೆಯ ಪ್ರಸ್ತಾಪ ಎತ್ತಿದರು. ಆಲಿಮಂದಾದ ಕೂಡ ಸಂತಸದಿಂದ ನಲಿದಾಡತೊಡಗಿದರು. ಆಮಿನಾ ಕೇಳಿಯೂ ಕೇಳಿಸದಂತೆ ಅತ್ತಿತ್ತ ಹೆಜ್ಜೆ ಹಾಕತೊಡಗಿದಳು.

'ಮೋಳೇ... ನಿನಗೆ ಮರು ಮದುವೆ ಮಾಡಬೇಕೆಂದಿದ್ದೇವೆ'- ಬಾವಾಕ ಮಗಳಲ್ಲಿ ಹೇಳಿದರು.

ಆಮಿನಾ ಮೌನವಾದಳು. ಅದು ಸಮ್ಮತಿಯ ಲಕ್ಷಣ ಎಂದು ಬಗೆದು ಬಾವಾಕ ಮುಂದಿನ ಕಾರ್ಯಕ್ಕೆ ಓಡಾಡಿದರು.

'ನಾನು ಮುದುಕಿಯೇನೂ ಅಲ್ಲವಲ್ಲ. ಮರು ಮದುವೆ ಆದರೇನು ತಪ್ಪು? ಯುವಕ ನಂತೆ, ಲಾರಿ ಚಾಲಕನಂತೆ, ಕೈ ತುಂಬಾ ಹಣವಿರಬೇಕು. ಇಲ್ಲದಿದ್ದರೆ 'ಕಾಸಿ' ಕೇಳುತ್ತಿರಲಿಲ್ಲವಾ ?. ಗಂಡ ಬಿಟ್ಟು ಹೋದದ್ದಕ್ಕೆ ನಾನ್ಯಾಕೆ ನನ್ನ ಜೀವನ ಹಾಳು ಮಾಡಲಿ ? ನನ್ನ ಪ್ರಾಯದವರು ಈಗ ಸುಖ ಸಂಸಾರ ಮಾಡುತ್ತಿಲ್ವಾ ?'- ಆಮಿನಾ ತನ್ನಲ್ಲಿ ಪ್ರಶ್ನಿಸುತ್ತಲೇ ಇದ್ದಳು.

ಸಂಜೆಯಾಯಿತು. ಅದೇ ಲಾರಿ ಪೆಟ್ರೋಲ್ ಪಂಪ್‌ನ ಮುಂದೆ ಬಂತು ನಿಂತಿತು. ಯುವಕ ಗಟ್ಟಿಮುಟ್ಟಾಗಿದ್ದ. ರಾತ್ರಿಗಿಂತಲೂ ಈಗ ತುಂಬಾ ಚೆಂದ ಕಾಣುತ್ತಾನೆ. ಬಲಕೈಗೆ ಕಟ್ಟಿದ ವಾಚ್, ನಡುಬೆರಳಿಗೆ ಹಾಕಿದ ಉಂಗುರ ಪಳ ಪಳ ಹೊಳೆಯುತ್ತಿದೆ. ಅವನನ್ನು ಬಾವಾಕ ಮತ್ತೊಮ್ಮೆ ಕಣ್ಣೆಟ್ಟು ನೋಡಿದರು.

'ಏನಾಯಿತು. ಮನೆಯವರ ಒಪ್ಪಿಗೆ ಸಿಕ್ಕಿತಾ ?' ಯುವಕ ಕೇಳಿದ.

'ಒಪ್ಪಿಗೆ ಸಿಕ್ಕಿದೆ. ಆದರೆ, ನಾವು ತುಂಬಾ ಬಡವರು. ಗುಡಿಸಲೇ ನಮ್ಮ ಮನೆ' ಬಾವಾಕ ನುಡಿದರು.

'ತೊಂದರೆ ಇಲ್ಲ. ನನಗೆ ನಿಮ್ಮ ಮಗಳು ಹಿಡಿಸಿದರೆ ಸಾಕು' ಆತ ಉಸುರಿದ.

ಬಾವಾಕ ಹೆಜ್ಜೆ ಹಾಕಿದರು. ಅವರ ಹಿಂದೆ ಆತನೂ ಹೆಜ್ಜೆ ಹಾಕಿದ. ಕಿರಿದಾದ ಓರೆ ಕೋರೆಯ ಕಾಲು ದಾರಿ ಬಳಸಿದ ನಂತರ ಆ ಗುಡಿಸಲು ತಲುಪಿದರು. ಒಳ ನುಗ್ಗಿದ ಬಾವಾಕ ಗಡಿಬಿಡಿ ಮಾಡತೊಡಗಿದರು.

'ಒಂದು ಕುರ್ಚಿ ಹಾಕಲೂ ನಮಗೆ ತಾಕತ್ತಿಲ್ಲ' ಎಂದು ಬಾವಾಕ ಪರೋಕ್ಷವಾಗಿ ತನ್ನ ಬಡತನವನ್ನು ಮತ್ತೊಮ್ಮೆ ಯುವಕನ ಮುಂದೆ ತೆರೆದಿಡುತ್ತಾ, ಚಾಪೆ ಹಾಕಿದರು. ಹಾಗೇ ಒಳ

ಹೊಕ್ಕು 'ಮೋಳೇ...' ಎಂದು ಕೂಗಿ ಕರೆದು, 'ನೋಡು, ನಿನ್ನನ್ನು 'ನೋಡಲು' ಬಂದಿದ್ದಾನೆ. ಸ್ವಲ್ಪ ಈಚೆ ಬಾ...' ಎಂದು ಹೇಳಿದರು. ಆಮಿನಾ ನಾಚಿ ನಿಂತಳು. ಯುವಕ ಕಣ್ತುಂಬುವ ಹಾಗೆ ನೋಡಿ ನಕ್ಕ. ಆಮಿನಾ ಕೂಡ ಯುವಕನ ಚೆಂದ ಕಂಡು ಕನಸಲ್ಲಿ ತೇಲಿ ಹೋದಳು. ಆಲಿಮಂದಾದ ಯುವಕನನ್ನು ನೋಡಿ ತುಂಬಾ ಕುಶಿ ಪಟ್ಟರು.

'ನಿಮ್ಮ ಮನೆಯ ಹೆಂಗಸರು ಯಾವಾಗ ಬರುತ್ತಾರೆ'- ಬಾವಾಕ ಕೇಳಿದರು.

'ಅದೆಲ್ಲ ಬೇಡ. ನಮ್ಮೂರು ತುಂಬಾ ದೂರ ಇದೆ. ಅಲ್ಲದೆ ಈ ಮನೆಯ ಹುಡುಗಿಯನ್ನು ನಾನು ಮದುವೆಯಾಗುವುದು ಅವರಿಗೆ ಇಷ್ಟವಿರಲಿಕ್ಕಿಲ್ಲ. ನಾನು ನಿಮ್ಮ ಬಡತನ ಕಂಡು ಈ ನಿರ್ಧಾರಕ್ಕೆ ಬಂದಿದ್ದೇನೆ. ಇಲ್ಲೇ ಮಸೀದಿಯಲ್ಲಿ ನಿಕಾಹ್ ವಿಧಿ ಪೂರೈಸೋಣ' ಎಂದು ಹೇಳುತ್ತಲೇ ಯುವಕ ತನ್ನಲ್ಲಿದ್ದ ಉಂಗುರ ಕಳಚಿ ಆಮಿನಾಳ ಬೆರಳಿಗೆ ಹಾಕಿ, ಅವಳ ಮುಖ ದಿಟ್ಟಿಸಿದ. ಆಮಿನಾ ನಗುತ್ತಿದ್ದಳು.

'ಸರಿ, ನೀನು ಹೇಳಿದ ಹಾಗೆ ಮಾಡೋಣ. ಮಸೀದಿಯ ಖತೀಬರಲ್ಲಿ ಕೇಳಿ ದಿನ ಇಡುವ' ಎಂದು ಬಾವಾಕ ಹೇಳಿದರು.

'ಹಾಗೇ ಮಾಡಿ. ಎರಡು ದಿನ ಕಳೆದ ಮೇಲೆ ಈ ಕಡೆ ಬರ್ತೇನೆ' ಎಂದು ಹೇಳುತ್ತಾ ಮತ್ತೊಮ್ಮೆ ಆಮಿನಾಳನ್ನು ನೋಡಿ ಅಲ್ಲಿಂದ ಹೊರಟು ಹೋದ. ಅವನ ಹಿಂದೆ ಬಾವಾಕ ಕೂಡ ಹೆಜ್ಜೆ ಹಾಕಿದರು. ಲಾರಿ ಹತ್ತುತ್ತಿದ್ದಂತೆಯೇ ಬಾವಾಕನ ಕೈಗೆ ಯುವಕ ಐನೂರು ರೂಪಾಯಿ ಕೊಟ್ಟ. ಕ್ಷಣಾರ್ಧದಲ್ಲಿ ಅಷ್ಟು ಹಣ ನೋಡಿ, ಬಾವಾಕ ಆಶ್ಚರ್ಯಚಕಿತರಾದರು. ಅವರ ನಾಲಗೆ ಚಲಿಸಲೇ ಇಲ್ಲ.

ಮರುದಿನ ಬಾವಾಕ ಮಸೀದಿಗೆ ಹೋಗಿ ಖತೀಬರಲ್ಲಿ ಎಲ್ಲಾ ಸಂಗತಿಯನ್ನು ಬಿಡಿಸಿ ಹೇಳಿದರು.

'ಇದೇನು ಬಾವಾಕ. ತಲಾಖ್‌ನ ಪತ್ರವಾ? ಇದಕ್ಕೆ ಸೀಲೂ ಇಲ್ಲ. ಖತೀಬರ ಸಹಿಯೂ ಇಲ್ಲ. ಅವನು ಈಗ ಎಲ್ಲಿದ್ದಾನೆ ಅಂತ ಹುಡುಕಬಹುದಾ?' ಎಂದು ಮಸೀದಿಯ ಖತೀಬರು ಕೇಳಿದರು.

'ಅವನು ಈ ಕಡೆ ಬರದೆ ಎಷ್ಟು ವರ್ಷವಾಯಿತೋ ಏನೋ... ಉಸ್ತಾದ್, ನಿಮ್ಮ ಕಾಲಿಗೆ ಅಡ್ಡ ಬೀಳುತ್ತೇನೆ. ನನ್ನ ಮಗಳಿಗೆ ಬಂದ ಈ ಸಂಬಂಧವನ್ನು ಉಳಿಸುವ ಹೊಣೆ ನಿಮ್ಮದು' ಎಂದು ಬಾವಾಕ ಖತೀಬರ ಕಾಲಿಗೆ ಬಿದ್ದರು. ಹಾಗೇ ಮಗಳ, ತನ್ನ ಮನೆಯ ಕಷ್ಟವನ್ನು ಬಿಡಿಸಿಟ್ಟರು.

ಅದನ್ನೆಲ್ಲಾ ಕೇಳಿದ ಮೇಲೆ, ಖತೀಬರಿಗೂ ಪಾಪ ಎನಿಸಿತು.

'ನೋಡಿ ಬಾವಾಕ. ಹುಡುಗನ ಊರೆಲ್ಲಿ, ಜಮಾತ್ ಯಾವುದು, ಯಾರ ಮಗ, ಈ ಹಿಂದೆ ಮದುವೆ ಆಗಿದ್ದಾನಾ, ಯಾರಿಗಾದರು ಪರಿಚಿತನಾ ?' ಎಂಬ ಪ್ರಶ್ನೆಯನ್ನು ಖತೀಬರು ಕೇಳುತ್ತಾ ಹೋದರು.

'ಇಲ್ಲ ಉಸ್ತಾದ್, ಅದ್ಯಾವುದೂ ನನಗೆ ಗೊತ್ತಿಲ್ಲ. ಅದನ್ನೆಲ್ಲಾ ನೀವೇ ಸರಿ ಮಾಡಬೇಕು. ನಿಮ್ಮ ಮಗಳೇ ಎಂದು ಭಾವಿಸಿ ನೀವು ಒಳ್ಳೆಯ ಮನಸ್ಸು ಮಾಡಬೇಕು'- ಬಾವಾಕ ಖತೀಬರ ಕೈ ಹಿಡಿದು ಬೇಡಿದರು, ಕೂಗಿದರು.

ಅಂತೂ ಅದೊಂದು ರಾತ್ರಿ ಮಸೀದಿಯಲ್ಲೇ ಆಮಿನಾಳ ಎರಡನೇ ಮದುವೆಯಾಯಿತು. ಮದುಮಗನ ಕಡೆಯಿಂದ ನಾಲ್ಕು ಮಂದಿ ಬಂದಿದ್ದರು. ಖತೀಬು, ಮುಕ್ರಿಕ, ಉಸ್ತಾದರಿಗೆ ಬಾವಾಕ ಕವರ್ (ಹಣ) ನೀಡಿದರು.

ಮದುವೆಯ ಮರುದಿನ ಆಮಿನಾಳನ್ನು ಅವಳ ಗಂಡ ' ಮೈಕಾಲ 'ಕ್ಕೆ (ಮಂಗಳೂರು) ಕರೆದುಕೊಂಡು ಹೋದನಲ್ಲದೆ ಆಮಿನಾಳಿಗೆ ಬೇಕಾದ ಬಟ್ಟೆ ಬರೆ, ಚಪ್ಪಲಿ, ಬ್ಯಾಗ್, ಅತ್ತೆ ಮತ್ತು ಮಾವನಿಗೆ ಬಟ್ಟೆ ಬರೆ, ಅಲ್ಲದೆ ಮನೆಗೆ ಬೇಕಾದ ಟೇಬಲ್, ಕುರ್ಚಿ, ಹಾಸಿಗೆ, ತಲೆದಿಂಬು, ಚಾಪೆ ಇತ್ಯಾದಿಯನ್ನೂ ತೆಗೆದುಕೊಟ್ಟ. ಸಾಮಾನನ್ನು ನೋಡಿ ಆಮಿನಾಳ ಕಣ್ತುಂಬಿ ಬಂತು.

ಅಂಗಡಿಗಳಿಂದ ಖರೀದಿಸಿದ ಸಾಮಾನನ್ನು ರಿಕ್ಷಾದಲ್ಲಿ ಹಾಕಿದರು. ಆ ರಿಕ್ಷ ಬಾವಾಕರ ಮನೆಯ ಮುಂದೆ ನಿಂತಾಗ ಆಸುಪಾಸಿನ ಮನೆಯ ಕಿಟಕಿಯಿಂದ ಹಲವು ಕಣ್ಣುಗಳು ಹೊರಗೆ ಕುತೂಹಲದಿಂದ ಇಣುಕತೊಡಗಿತು.

ಅವರಷ್ಟೇ ಅಲ್ಲ, ಆಲಿಮಂದಾದ ಮತ್ತು ಬಾವಾಕ ಕೂಡಾ ಮೂಗಿನ ಮೇಲೆ ಬೆರಳಿಟ್ಟರು. ಅವರು ಕನಸು ಮನಸ್ಸಿನಲ್ಲೂ ಇದನ್ನೆಲ್ಲಾ ನೆನಸಿರಲಿಲ್ಲ.

'ಗಂಡಸು ಅಂದ್ರೆ ಬಾವಾಕ... ಬಂಗಾರ್ ಮಾಡಿಟ್ಟು ಕಾದರೂ, ನಿಮಗೊಂದು ಗಂಡು ಸಿಗಲಿಲ್ಲ. ಬಾವಾಕನನ್ನು ನೋಡಿ, ಸುದ್ದಿ ಹೆಸರಿಲ್ಲದೆ ಆಮಿನಾಳಿಗೆ ಮದುವೆ ಮಾಡಿಬಿಟ್ಟರು'- ಹಾಗಂತ ಹೇಳುತ್ತಾ ಅನೇಕ ಹೆಂಗಸರು ತಮ್ಮ ಗಂಡಂದಿರನ್ನು ತರಾಟೆಗೆ ತೆಗೆದುಕೊಳ್ಳ ತೊಡಗಿದರು.

ಮರುದಿನ ಕೂಡಾ ಗಂಡ ಹೆಂಡತಿ, ರಿಕ್ಷಾದಲ್ಲೇ ಒಂದು ಗೋಣಿ ಅಕ್ಕಿ ಮತ್ತಿತರ ಸಾಮಾನನ್ನು ತಂದು ಹಾಕಿದರು. ನನ್ನ ಸಂಕಷ್ಟವನ್ನು ಅರಿತ ಅಲ್ಲಾಹುವೇ ಇಂಥ ಒಳ್ಳೆಯ ಗಂಡನನ್ನು ನನಗೆ ದಯಪಾಲಿಸಿದ್ದಾನೆ ಎಂದು ಆಮಿನಾ ಆಗಾಗ ಹೇಳತೊಡಗಿದಳು. ಆಲಿ ಮಂದಾದ ಅಗರ್‌ಬತ್ತಿ ಹೊತ್ತಿಸಿದರಲ್ಲದೆ, ಖತೀಬರನ್ನು ಕರೆಯಿಸಿ ದುಆ ಮಾಡಿಸಿದರು.

ಈಗ ಬಾವಾಕ ಅತ್ತಿತ್ತ ಹೋಗುವಾಗ ಶುಭ್ರವಾದ ವೇಸ್ಟಿ (ಲುಂಗಿ)ಧರಿಸುತ್ತಾರೆ. ಮನೆಯಲ್ಲೂ ಅಷ್ಟೇ, ಪ್ರತಿ ದಿನವೂ ಕೋಳಿ ಸಾರು. ಆಲಿಮಂದಾದರ ಉಬ್ಬಸ ಈಗ ಕಡಿಮೆ

ಯಾಗಿದೆ. ಆಮಿನಾಳ ಮಕ್ಕಳು ಹೊಸ ಬಟ್ಟೆ ಬರೆ ಧರಿಸಿಯೇ ಶಾಲೆಗೆ ಹೋಗುತ್ತಾರೆ. ಮನೆಯಲ್ಲಿ ಯಾರಿಗೂ, ಯಾವುದಕ್ಕೂ ಕೊರತೆ ಇಲ್ಲ.

ಆಮಿನಾಳಿಗೆ ಈಗ ಸ್ವರ್ಗ ಸುಖ ಸಿಕ್ಕಿದಷ್ಟು ಕುಶಿಯಾಗುತ್ತದೆ. ಗಂಡ ಮನೆಯಲ್ಲೇ ಕುಳಿತು ನೀರಿನ ಹಾಗೆ ಹಣ ಖರ್ಚು ಮಾಡುತ್ತಿದ್ದಾನೆ. ಲೆಕ್ಕಕ್ಕಿಂತ ಜಾಸ್ತಿ ಬೀಡಿ ಸೇದಬಾರದು ಎಂದೂ ಮಾವನಿಗೆ ತಾಕೀತು ಮಾಡಿದ್ದಾನೆ.

ಮದುಮಗ ಕೆಲಸಕ್ಕೆ ಯಾಕೆ ಹೋಗಲಿಲ್ಲ ಎಂದು ಕೇಳುವ ಧೈರ್ಯ ಯಾರಿಗೂ ಇಲ್ಲ. ಅಲ್ಲದೆ ಗಂಡ ತನ್ನ ಬಳಿಯಲ್ಲೇ ಇರಲಿ ಎಂದು ಆಮಿನಾ ಆಶಿಸುತ್ತಾಳೆ.

**ಒಂದುವರೆ ತಿಂಗಳು ಉರುಳಿತು...**

ಆಮಿನಾಳ ದೇಹ ಗಟ್ಟಿಯಾಗಿದೆ. ದುಂಡು ದುಂಡಾದ ಮುಖ ಮತ್ತೆ ಮತ್ತೆ ನೋಡುವಂತಹ ಬಣ್ಣಕ್ಕೆ ತಿರುಗಿದೆ. ಅಂದಹಾಗೆ, ಎರಡು ಬಾರಿ ತಲೆ ತಿರುಗಿ ಬಿದ್ದಿದ್ದಾಳೆ, ವಾಂತಿ ಮಾಡಿದ್ದಾಳೆ. ಹೊಸ ಜೀವಿಯ ಆಗಮನದ ನಿರೀಕ್ಷೆ ಎಲ್ಲರಿಗೂ ಇತ್ತು. ಆ ಕುಶಿಯಿಂದ ಮನೆಯವರು ಕುಣಿದಾಡಿದರು. ಮುಂದೆ ಒಂದಲ್ಲ, ಎರಡು ಮಕ್ಕಳ ತಾಯಿಯಾದಳು.

ಆಮಿನಾಳ ಗಂಡನಿಗೆ ದಿನಪತ್ರಿಕೆ ಓದುವ ಚಟವಿದೆ. ಅದಕ್ಕಾಗಿ ಪ್ರತೀ ದಿನ ಒಂದಷ್ಟು ದೂರ ಇರುವ ಅಂಗಡಿಗೆ ನಡೆದುಕೊಂಡು ಹೋಗುತ್ತಾನೆ.

ಆಮಿನಾ ರಾತ್ರಿ ಹಗಲು ಗಂಡನ ಬಳಿಯಲ್ಲೇ ಇರುತ್ತಾಳೆ. ಹಾಗಾಗಿ ಅಕ್ಕಪಕ್ಕದ ಮನೆಯವರಿಗೆ ಅವಳು ಕಾಣಲು ಸಿಗುತ್ತಿಲ್ಲ. ಬೀಡಿ ಕಟ್ಟದೆ ತಿಂಗಳು ಉರುಳಿದೆ. ಈಗೀಗ ಸಂಬಂಧಿಕರೂ ಆ ಮನೆಯ ಹೊಸ್ತಿಲು ತುಳಿಯತೊಡಗಿದರು.

**ಒಂದು ದಿನ...**

ಆಮಿನಾಳ ಗಂಡನ ಗೆಳೆಯ, ಅವನ ಮದುವೆಗೆ ಬರುವಂತೆ ಆಹ್ವಾನಿಸಿದ. ಮನೆಯ ಎಲ್ಲರೂ ಬರಬೇಕು ಎಂದು ವಿಶೇಷ ಆಮಂತ್ರಣ ನೀಡಿದ. ಅವ ಬಂದು ಕರೆದು ಹೋದ ನಂತರ ಆಮಿನಾಳಿಗೆ ಗಂಡನ ಜತೆ ಆ ಮದುವೆಗೆ ಹೋಗಬೇಕು ಎಂಬ ಆಶೆ ಅತಿಯಾಯಿತು.

ಆಮಿನಾಳ ಬಾಲ್ಯದ ಗೆಳತಿ ರೆಹನಾ ಆಗಾಗ ಮಾತನಾಡುತ್ತಲೇ ಇರುತ್ತಾಳೆ. ಮಾತಿನ ಮಧ್ಯೆಯೇ ಆಮಿನಾ, ಮದುವೆಗೆ ಹೋಗಲು ಚಿನ್ನಾಭರಣ ಕೊಡುವಂತೆ ರೆಹನಾಳಲ್ಲಿ ವಿನಂತಿಸಿದಳು. ಅವಳು ತನ್ನಲ್ಲಿದ್ದ ಹತ್ತು ಪವನು ಚಿನ್ನಾಭರಣವನ್ನು ಆಮಿನಾಳಿಗೆ ಕೊಟ್ಟಳು.

'ನಾನೂ ಮದುವೆಗೆ ಬರ್ತೇನೆ. ಆಚೆ ಮನೆಯ ರೆಹನಾಳಿಂದ ಚಿನ್ನ ತೆಗೆದುಕೊಂಡಿದ್ದೇನೆ' ಎಂದು ಆಮಿನಾ ಹೇಳಿದಳು.

'ಬಾಕಿದ್ದವರ ಚಿನ್ನಾಭರಣ ಯಾಕೆ ಹಾಕಬೇಕು. ನಾನು ಕೊಟ್ಟದ್ದೇ ಸಾಕಾಗುತ್ತಿತ್ತಲ್ಲಾ'

'ಹಾಗೇನೂ ಇಲ್ಲ. ಅವಳು ತುಂಬಾ ಒಳ್ಳೆಯವಳು. ಉದಾರಿ. ಇದ್ದದ್ದೇ ಇಷ್ಟು. ಅದನ್ನೆಲ್ಲಾ ಕೊಟ್ಟಿದ್ದಾಳೆ'- ಎನ್ನುತ್ತಾ ಆಮಿನಾ ಎಲ್ಲಾ ಚಿನ್ನಾಭರಣವನ್ನು ತೋರಿಸಿದಳು.

'ಆಯಿತು, ಜಾಗ್ರತೆಯಲ್ಲಿ ತೆಗೆದಿಡು. ಮೊದಲೇ ಗುಡಿಸಲು'- ಆತ ಉಸುರಿದ.

ಆಮಿನಾ ತಕ್ಷಣ ಎಲ್ಲಾ ಚಿನ್ನಾಭರಣವನ್ನು ಯಾರಿಗೂ ಕಾಣದ ಹಾಗೆ ಬಚ್ಚಿಟ್ಟಳು.

ಮದುವೆಗೆ ನಿನ್ನ ಮಕ್ಕಳೂ ಬರಲಿ ಎಂದು ಆತ ಹೇಳಿದ ಮೇಲೆ ಆಮಿನಾಳಿಗೆ ಗಂಡನ ಮೇಲೆ ಮತ್ತಷ್ಟು ಪ್ರೀತಿ ಉಕ್ಕಿತು. ಅವಳು ಒಮ್ಮೆಯೂ ತನ್ನ ಮಕ್ಕಳನ್ನು ಯಾವ ಮದುವೆ, ಮುಂಜಿಗೂ ಕರೆದುಕೊಂಡು ಹೋಗಿಲ್ಲ. ಈಗ ಗಂಡನ ಒತ್ತಾಸೆಯಿಂದ ಆಕೆ ಪುಳಕಿತಳಾದಳು.

ಎಂದಿನಂತೆ ಆ ದಿನ ಕೂಡ, ಆತ ಪೇಪರ್ ಓದಲೆಂದು ಮನೆಯಿಂದ ಹೊರಟು ಹೋದ. ಆಮಿನಾ ಮಕ್ಕಳಿಗೆ ಸ್ನಾನ ಮಾಡಿಸಿ, ತಾನೂ ಸ್ನಾನ ಮಾಡಿ ಸೀರೆ, ರವಕೆ ತೊಟ್ಟು ಚಿನ್ನಾಭರಣಕ್ಕಾಗಿ ಪೆಟ್ಟಿಗೆ ತೆರೆದಾಗ, ಅದು ಖಾಲಿಯಾಗಿತ್ತು.

ಆಮಿನಾ ಆಶ್ಚರ್ಯಚಕಿತಳಾದಳು. ಕೈ ತಪ್ಪಿ ಎಲ್ಲೋ ಇಟ್ಟಿದ್ದೇನೋ ಏನೋ, ಎಂಬಂತೆ ಮತ್ತಷ್ಟು ಹುಡುಕಾಡಿದಳು. ಆದರೆ ಎಲ್ಲೂ ಕಾಣದಿದ್ದಾಗ ಬೊಬ್ಬೆ ಹಾಕಿದಳು. ಹೆಂಗಸರು, ಮಕ್ಕಳು, ಯುವಕರು, ಮಧ್ಯ ವಯಸ್ಕರು ಹೀಗೆ ಎಲ್ಲರೂ ಅತ್ತ ಓಡಿ ಬಂದರು. ವಿಷಯ ಕೇಳಿ ತಿಳಿದು, ಮೂಗಿನ ಮೇಲೆ ಬೆರಳಿಟ್ಟರು.

'ಅವನು ಯಾರೋ, ಏನೋ... ? ಮದುಮಗನಾಗಿ ಬಂದು, ಕಳ್ಳನಾಗಿ ಹೋದನಾ?'- ತಲೆಗೊಂದರಂತೆ ಪ್ರಶ್ನೆ ಕೇಳಿ ಬಂದವು. ವಿಷಯ ತಿಳಿದ ರೆಹನಾ ಓಡಿ ಬಂದು, ತನ್ನ ಚಿನ್ನಾಭರಣ ಕೈಯಾರ ಕಳಕೊಂಡ ಬಗ್ಗೆ ಚೀರಾಡಿದಳು.

ಪೇಪರ್ ಓದಲು ಹೋದ 'ಮದುಮಗ'ನನ್ನು ನೋಡಿಕೊಂಡು ಬರುವಂತೆ ಮಕ್ಕಳನ್ನು ಅತ್ತ ಕಳುಹಿಸಿಕೊಟ್ಟ ಆಮಿನಾ, ಬಾವಾಕ, ಆಲಿಮಂದಾದ ಅಳುತ್ತಲೇ ಇದ್ದರು. ಅತ್ತ, ವೇಗವಾಗಿ ಚಲಿಸುತ್ತಿದ್ದ ಬಸ್‌ನಲ್ಲಿ ಆರಾಮವಾಗಿ ಕುಳಿತಿದ್ದ ಆಮಿನಾಳ ಗಂಡ ಸಂತಸದ ನಗೆ ಚೆಲ್ಲುತ್ತಿದ್ದ.

* * *

# ಅನುಗ್ರಹ

ಹಾಜಿ ಯು. ಬಶೀರ್ ಅಹಮದ್

ಎರಡು ವರ್ಷದ ಹಿಂದೆಯಷ್ಟೇ ಟೈಲರಿಂಗ್ ಕಲಿತಿರುವ ಕಾಸಿಂ, ಉಮರಾಕರ ಬಾಡಿಗೆ ಕೋಣೆಯ ಜಗಲಿಯಲ್ಲಿ ಬಾಡಿಗೆಯ ಹೊಲಿಗೆ ಮಿಷನ್ ಹಾಕಿದ್ದಾನೆ. ಆ ಊರಲ್ಲಿ ಅವನನ್ನು ಬಿಟ್ಟರೆ ರವಕೆ, ಚೂಡಿದಾರವನ್ನು ಹೊಲಿಯಲು ಬೇರೆ ಯಾರೂ ಇಲ್ಲ.

ಪಟ್ಟಣದಲ್ಲೊಂದು ಟೈಲರಿಂಗ್ ಶಾಪ್ ತೆರೆಯಬೇಕು ಎಂಬುದು ಅವನಿಗೆ ಇತ್ತೀಚೆಗೆ ಅನಿಸುತ್ತಿತ್ತು. ಅಲ್ಲದೆ ಅದವನ ಅಪರಿಮಿತ ಆಶೆಯೂ ಆಗಿತ್ತು. ಮನೆಯ ಜಗಲಿಯಲ್ಲಿ ಕುಳಿತು ಹೊಲಿಯುವ ಯಾವನೇ ಟೈಲರ್‌ಗೂ ಇದೀಗ ಬೆಲೆ ಇಲ್ಲ ಎಂಬುದು ಕಾಸಿಂ ಕಂಡುಕೊಂಡ ಸತ್ಯ. ಹಳ್ಳಿಗರೂ ಫ್ಯಾಶನ್‌ಗೆ ಮರುಳಾಗಿದ್ದಾರೆ ಎಂಬುದು ಅವನಿಗೆ ಸ್ಪಷ್ಟವಾಗಿ ಮನವರಿಕೆಯಾಗಿದೆ.

ಹಳ್ಳಿಯಲ್ಲಿ ಪ್ರತಿಯೊಂದಕ್ಕೂ ಚರ್ಚೆ ಮಾಡುತ್ತಾರೆ. ಹಣ ಕೊಡುವಾಗ ಮೇಲೆ ಕೆಳಗೆ ನೋಡುತ್ತಾರೆ. ಆದರೆ ಪಟ್ಟಣದಲ್ಲಿ ಹಾಗಲ್ಲ, ಅಲ್ಲಿ ಹೇಳಿದ ರೇಟು !. ಅದರಲ್ಲಿ ಚರ್ಚೆ ಇಲ್ಲವೇ ಇಲ್ಲ.

ಪಟ್ಟಣದಲ್ಲಿ ಶಾಪ್ ತೆರೆಯಬೇಕಾದರೆ, ಈ ಹಳೆಯ ಮಿಶನ್ ಬದಲು ಹೊಸ ಮಿಶನ್ ಹಾಕಬೇಕು. ಅಲ್ಲದೆ ಇಂಟೀರಿಯರ್ ಡೆಕೊರೇಶನ್ ಮಾಡಬೇಕು. ಅದಕ್ಕೆ ಕೈ ತುಂಬ ಹಣ ಬೇಕು. ಇಂಟೀರಿಯರ್ ಡೆಕೊರೇಶನ್ ಮಾಡಿದರೆ, ಗ್ರಾಹಕರೂ ಸಾಲುಗಟ್ಟಿ ನಿಲ್ಲುತ್ತಾರೆ ಎಂದೆಲ್ಲಾ ಕಾಸಿಂ ಭಾವಿಸಿದ್ದ.

ಆಯಿಶಾ...

ಕಾಸಿಂನ ಬಾಡಿಗೆ ಮನೆಯ ಯಜಮಾನ ಉಮರಾಕರ ಏಕೈಕ ಮಗಳು. ಕಾಸಿಂಗಿಂತ ಎಂಟು ವರ್ಷ ಕಿರಿಯವಳು. ಕಾಸಿಂನ ನಡತೆ, ಸ್ವಭಾವವನ್ನು ಕಂಡು ಉಮರಾಕರಿಗೆ ತುಂಬಾ

ಕುಶಿಪಟ್ಟಿದ್ದರಲ್ಲದೆ, ಮುಂದೊಂದು ದಿನ ಕಾಸಿಂಗೆ ತನ್ನ ಮಗಳನ್ನು ಮದುವೆ ಮಾಡಿಕೊಡಬೇಕು ಎಂದು ಭಾವಿಸಿ ಅಫನಿಗೆ ಅಲ್ಲಿ ಬಾಡಿಗೆಗೆ ಸ್ಥಳ ಕೊಟ್ಟಿದ್ದರು.

ಉಮರಾಕರ ಹೆಂಡತಿ ಮೈಮುನಾ ಅಹಂಕಾರಿ ಹೆಂಗಸು. ಶ್ರೀಮಂತ ಕುಟುಂಬದಿಂದ ಬಂದವಳು ಎಂಬ ಜಂಭ. ಮಾತು ಮಾತಿಗೂ ಅವಳಲ್ಲಿ ಅಹಂಕಾರ ಮೇಲ್ಪೈಸುತ್ತಿತ್ತು. ಬಾಯಿ ಕೂಡಾ ಬೊಂಬಾಯಿ. ತಲೆ ತುಂಬಾ ದೊಡ್ಡ ದೊಡ್ಡ ಯೋಜನೆ, ರೂಪುರೇಶಗಳು. ತನ್ನ ಮಗಳಿಗೆ ಕಾರಲ್ಲಿ ಬರುವ ಗಂಡನೇ ಆಗಬೇಕು ಎಂದು ಅವರು ಆಗಾಗ ಹೇಳುತ್ತಿದ್ದರು.

ಹಾಗೇ ಹೇಳುವುದಾದರೆ, ಉಮರಾಕ ಕೂಡ ಒಂದು ಕಾಲದಲ್ಲಿ ಕಾರಲ್ಲಿ ತಿರುಗಾಡುತ್ತಿದ್ದವರು. ತನ್ನ ತಂದೆ ಇಹಲೋಕ ತ್ಯಜಿಸುವಾಗ ಐದು ಮಂದಿ ಸಹೋದರರಿಗೆ ಇನ್ನೂ ಮದುವೆಯಾಗಿರಲಿಲ್ಲ. ಅವರ ಮದುವೆ ಮಾಡಿ ಮುಗಿಸುವಾಗ ತಂದೆ ಮಾಡಿಟ್ಟಿದ್ದ ಬಹುತೇಕ ಆಸ್ತಿ ಖಾಲಿಯಾಗಿತ್ತು.

ಹಾಗಂತ ಉಮರಾಕ ಹತಾಶರಾಗಿರಲಿಲ್ಲ. ತನ್ನ ಹಣೆಬರಹಕ್ಕೆ ಮರುಗಲಿಲ್ಲ. ಇದ್ದ ಸಂಪತ್ತಿನಲ್ಲೇ ಸುಖ ಕಾಣಲು ಆಶಿಸಿದ್ದರು. ಅದರ ನಡುವೆ ಬಡವರನ್ನು ಪ್ರೀತಿಯಿಂದ ಕಾಣುತ್ತಿದ್ದರು. ದುಡಿಯುವ ಯುವಕರನ್ನು ಕಂಡಾಗ ಹೆಮ್ಮೆ ಪಡುತ್ತಿದ್ದರು. ಅವರಿಗೆ ಏನಾದರೊಂದು ಸಲಹೆ ಕೊಡುತ್ತಿದ್ದರು. ಅಲ್ಲದೆ ತನ್ನ ಕೈಲಾದ ಸಹಾಯ ಮಾಡುತ್ತಿದ್ದರು.

ಆದರೆ ಉಮರಾಕರ ನಿಲುವಿಗೆ, ಅವರ ಹೆಂಡತಿ ಮೈಮುನಾ ತುಂಬಾ ವ್ಯತಿರಿಕ್ತವಾಗಿದ್ದರು. ಅವರಿಗೆ ಬಡವರನ್ನು ಕಂಡರೆ ಆಗದು. ಪ್ರತೀ ಕ್ಷಣವೂ ಧಿಮಾಕು ಪ್ರದರ್ಶಿಸುತ್ತಿದ್ದರು. ಹೀಗಿರುವಾಗ ಹೆಂಡತಿಯ ಜತೆ ಕಾಸಿಂಗೆ ಮಗಳನ್ನು ಕಟ್ಟಿಕೊಡುವ ಪ್ರಸ್ತಾಪ ಎತ್ತುವುದು ಸರಿಯಲ್ಲ ಎಂದು ಉಮರಾಕ ಭಾವಿಸಿ ಸುಮ್ಮನಾಗಿದ್ದರು.

ಆಯಿಶಾ ಕೂಡ ಕಾಸಿಂನ ಬಗ್ಗೆ ಕನಸು ಕಾಣತೊಡಗಿದ್ದಳು. ಒಂದೆರಡು ಸಲ ಕದ್ದು ಮುಚ್ಚಿ ನೋಡಿದ ಮೇಲಂತೂ ತನಗೆ ಇವರೇ ಸೂಕ್ತ ಗಂಡ ಎಂದು ಭಾವಿಸಿದ್ದಳು. ಆದರೆ, ತನ್ನಾಶೆಯನ್ನು ತಂದೆ ಅಥವಾ ತಾಯಿಯಲ್ಲಿ ಹೇಳಲಾಗದೆ ಚಡಪಡಿಸಿದ್ದಳು. ಕಾಸಿಂ ಕೂಡ ಆಯಿಶಾಳನ್ನು ಒಮ್ಮೆ ನೋಡಿದ್ದ. ಅದರ ನಂತರ ಅವ ಪಟ್ಟಣಕ್ಕೆ ಹೋಗುವ ತನ್ನ ನಿರ್ಧಾರವನ್ನು ಸಡಿಲಿಸಿದ್ದ.

ಪೆರ್ನಾಳ್ ಹಬ್ಬಕ್ಕೆ ಕಾಸಿಂನ ಕೈಯಿಂದಲೇ ಚೂಡಿದಾರ ಹೊಲಿಸಬೇಕು, ಆವಾಗ ಅವರ ಮನದ ಆಶೆಯನ್ನು ತಿಳಿದುಕೊಳ್ಳಬೇಕು ಎಂದು ಆಯಿಶಾ ಯೋಜನೆ ರೂಪಿಸಿದ್ದಳು.

ಪೆರ್ನಾಳ್‌ಗೆ ಕೆಲವೇ ಕೆಲವು ದಿನ ಮುಂಚೆ ಆಯಿಶಾ, ಕಾಸಿಂನ ಬಳಿ ಹೋದಳು. ಅವಳ ಚೆಂದ ಕಂಡು ಕಾಸಿಂ ಮೂರ್ಛೆ ಹೋಗುವುದೊಂದೇ ಬಾಕಿ. ಅವನಿಗೆ ನಿಂತಲ್ಲಿ ನಿಲ್ಲಲಿಕ್ಕೆ ಆಗಲಿಲ್ಲ. ಆಯಿಶಾಳನ್ನು ಅವ ಅತ್ಯಂತ ಸಮೀಪದಿಂದ ನೋಡುತ್ತಿದ್ದಾನೆ. ಅವನಿಗೆ ತನ್ನ ಕಣ್ಣನ್ನು

ನಂಬಲಿಕ್ಕೆ ಆಗಲಿಲ್ಲ. ಇಷ್ಟೊಂದು ಚೆಂದದ ಹುಡುಗಿ ಈ ಮನೆಯೊಳಗಿತ್ತಾ ಎಂಬ ಪ್ರಶ್ನೆ ಎದುರಾಯಿತಲ್ಲದೆ, ಮನದಲ್ಲಿ ನೂರಾರು ಭಾವನೆಗಳು ಉಂಟಾದವು. ಕಾಸಿಂನ ನೋಟಕ್ಕೆ ಪ್ರತಿಯಾಗಿ ಆಯಿಶಾ ಕೂಡ ನೋಡಿದಳು. ಆ ನೋಟದಲ್ಲೇ ಪ್ರೀತಿ ಮೊಳಕೆಯೊಡೆದವು. ಆಯಿಶಾ... ಅಂತ ತಾಯಿ ಕೂಗಿ ಕರೆಯದೇ ಇದ್ದಿದ್ದರೆ, ಆಯಿಶಾ ಅಲ್ಲೇ ನಿಲ್ಲುತ್ತಿದ್ದಳೋ ಏನೋ?.

ಆಯಿಶಾಳನ್ನು ಹತ್ತಿರದಿಂದ ನೋಡಿದ ಮೇಲಂತೂ ಕಾಸಿಂನಿಗೆ ಅವಳದ್ದೇ ನೆನಪು. ಉಮರಾಕ ಒಳ್ಳೆಯ ಮನಸ್ಸು ಮಾಡಿ ಈ ಹುಡುಗಿಯನ್ನು ತನಗೆ ಮದುವೆ ಮಾಡಿಕೊಡಲಿ ಎಂದು ಅವ ಹಂಬಲಿಸಿದ. ಆದರೆ, ಉಮರಾಕರ ಹೆಂಡತಿ ಮೈಮುನಾರನ್ನು ನೆನೆದಾಗ ತನ್ನೆಲ್ಲಾ ಆಸೆಗೆ ತಣ್ಣೀರು ಎರೆಚಿದಂತಾಯಿತು.

ಏನೇ ಆಗಲಿ, ಈ ಬಗ್ಗೆ ಉಮರಾಕರಲ್ಲೊಂದು ಮಾತು ಕೇಳೋಣ ಎಂದು ಭಾವಿಸಿ ವಿರಾಜಪೇಟೆಯಲ್ಲಿದ್ದ ಅಣ್ಣ ಮೂಸಾನಿಗೆ ಸುದ್ದಿ ಮುಟ್ಟಿಸಿದ.

ಕಾರಲ್ಲಿ ತಿರುಗಾಡುವ ಅಳಿಯನ ಕನಸು ಕಂಡಿದ್ದ ಮೈಮುನಾ ತನ್ನ ಮಗಳಿಗೆ ಒಳ್ಳೆಯ ತರವಾಡಿನ ಶ್ರೀಮಂತ ಕುಟುಂಬದ ಸಂಬಂಧವಿದ್ದರೆ ತಿಳಿಸಿ ಎಂದು ಹಲವರಲ್ಲಿ ಮೈಮುನಾ ಹೇಳಿಕೊಂಡಿದ್ದರು. ಅಲ್ಲದೆ ನೂರು ಪವನು ಚಿನ್ನಾಭರಣ ಮತ್ತು ಕಾರು ಕೊಡಲು ಸಿದ್ಧ ಎಂದೂ ಹೇಳಿದ್ದರು. ದಳ್ಳಾಲಿ ಆದಮಾಕ ಶ್ರೀಮಂತ ಕುಟುಂಬದ ವಿವಾಹ ಸಂಬಂಧದ ಪ್ರಸ್ತಾಪ ಮುಂದಿಟ್ಟಾಗ ಮೈಮುನಾ ತುಂಬಾ ಗೆಲುವು ಪಡೆದಿದ್ದರು.

ವಿಷಯ ತಿಳಿದ ಮೂಸಾ ಸೀದಾ ವಿರಾಜಪೇಟೆಯಿಂದ ಕಾಸಿಂನ ಬಳಿ ಬಂದಿದ್ದ. ಹಾಗೇ ಉಮರಾಕರಲ್ಲಿ ಮಾತನಾಡುವ ಸಲುವಾಗಿ ಅವರ ಮನೆಗೂ ಹೋದ. ಆದರೆ, ಅಲ್ಲಿ ಉಮರಾಕ ಇರಲಿಲ್ಲ. ತನ್ನ ತಮ್ಮ ಕಾಸಿಂನ ಮನದ ಇಂಗಿತವನ್ನು ಮೈಮುನಾರಲ್ಲಿ ಹೇಳಿದಾಗ, ಆಕೆ ಕೆರಳಿ ಕೆಂಡವಾದರು.

'ನನ್ನ ಮಗಳನ್ನು ಕೇಳಲು ಅವನಿಗೆ ಯಾವ ಯೋಗ್ಯತೆ ಇದೆ ? ಒಂದು ಸ್ವಂತ ಮನೆ ಇಲ್ಲ. ಟೈಲರಿಂಗ್ ಶಾಪ್ ಇಲ್ಲ. ಮಿಶನ್ ಕೂಡ ಇಲ್ಲ. ಬಾಡಿಗೆ ಕೋಣೆಯ ಜಗಲಿಯಲ್ಲಿ ಕುಳಿತು ನಾಲ್ಕು ರವಕೆ ಹೊಲಿಯತೊಡಗಿದರೆ, ಅವ ದೊಡ್ಡ ಜನ ಆದನಾ ?'- ಮೈಮುನಾ ಆರ್ಭಟಿಸುತ್ತಿದ್ದರು. ತಾಯಿಯ ಮಾತು ಕೇಳಿದ ಆಯಿಶಾಳಿಗೆ ಸಿಡಿಲು ಬಡಿದಂತಾಯಿತು. ಆಕೆಗೆ ತಾಯಿಯ ಮೇಲೆ ತುಂಬಾ ಸಿಟ್ಟು ಬಂತು.

'ಕಾಸಿಂ ಯಾವುದರಲ್ಲಿ ಕಡಿಮೆ ಇದ್ದಾರೆ ? ಚೆಂದ ಇಲ್ವಾ?, ಸ್ವಂತ ಉದ್ಯೋಗ ಇಲ್ವಾ?, ಗುಣ ಸ್ವಭಾವ ಒಳ್ಳೆಯದಿಲ್ವಾ ? ಕಾಸಿಂರಿಗೆ ನನ್ನನ್ನು ಮದುವೆ ಮಾಡಿಕೊಟ್ಟರೆ, ಇಲ್ಲೇ ಕೊನೆಯ ದಿನದವರೆಗೂ ಇದ್ದು, ಹೆತ್ತವರನ್ನು ಆರೈಕೆ ಮಾಡುವ ಸೌಭಾಗ್ಯ ಸಿಗುತ್ತಿತ್ತಲ್ಲಾ ... ?' ಆಯಿಶಾಳ ಯೋಚನಾ ಲಹರಿ ಮುಂದುವರಿಯುತ್ತಲೇ ಇತ್ತು. ಕ್ಷಣಗಳು ಉದುರಿದಾಗ, ಕಾಸಿಂನ ಮುಖ

ನೆನಪಾದಾಗ ಆಯಿಶಾ ದುಃಖದಿಂದ ಮರುಗಿದಳು. ಕಾಸಿಂನ ಅಣ್ಣ ಮೂಸಾ ಅಂಗಳವಿಳಿದು ಹೋಗುವುದನ್ನು ಆಯಿಶಾಳಿಗೆ ನೋಡಲು ಆಗಲಿಲ್ಲ.

* * *

ವಿರಾಜಪೇಟೆಯ ಅಬ್ದುಲ್ಲಾಕರ ಮಗ ನಝೀರ್‌ನಿಗೆ ಕೇರಳದ ಕಣ್ಣೂರಿನಲ್ಲಿ ವ್ಯಾಪಾರ. ಒಳ್ಳೆಯ ಕುಟುಂಬ. ಕೈತುಂಬ ಹಣವೂ ಇದೆ. ಕಾರು ಮತ್ತು ನೂರು ಪವನು ಚಿನ್ನಾಭರಣ ಕೊಡುವುದಕ್ಕೆ ಯಾವುದೇ ಅಡ್ಡಿ ಇಲ್ಲ. ನಾಳೆಯೇ ಹುಡುಗಿ ನೋಡಲು ಬರ್ತ್ತಾರೆ... ಎಂದೆಲ್ಲಾ ಹೇಳಿದ ದಳ್ಳಾಲಿ ಆದಮಾಕ, ಹುಡುಗನ ಫೋಟೋ ತೋರಿಸಿದರು. ಆ ಫೋಟೋ ನೋಡಿದ ಮೈಮುನಾ ತುಂಬಾ ಕುಶಿಗೊಂಡರು.

ಆ ದಿನ ಉಮರಾಕ ಮನೆಯಲ್ಲಿರಲಿಲ್ಲ. ಮರುದಿನ ಗಂಡ ಬಂದೊಡನೆ ಮೈಮುನಾ ಎಲ್ಲಾ ವಿಷಯ ಊದಿದರು. ಹೆಂಡತಿಯ ಮಾತು ಕೇಳಿ ಉಮರಾಕರ ತಲೆ ತಿರುಗತೊಡಗಿತು.

'ಮೈಮುನಾ... ನನಗೆ ಇರುವುದು ಒಬ್ಬಳೇ ಮಗಳು. ಅವಳನ್ನು ದೂರದೂರಿಗೆ ಮದುವೆ ಮಾಡಿಕೊಟ್ಟರೆ, ಮನೆ ಖಾಲಿಯಾಗುತ್ತದೆ. ಟೈಲರ್ ಕಾಸಿಂ ಒಳ್ಳೆಯ ಹುಡುಗ. ದಿನದಲ್ಲಿ ಐದು ಬಾರಿ ಕ್ಲಪ್ತ ಸಮಯಕ್ಕೆ ನಮಾಝ್ ಮಾಡುತ್ತಾನೆ. ಅವಳಿಗೆ ಆಯಿಶಾಳನ್ನು ಮದುವೆ ಮಾಡಿಕೊಟ್ಟರೆ ನಮಗೆ ಯಾವುದೇ ತೊಂದರೆಯಾಗದು. ಇಲ್ಲೇ ನಮ್ಮ ಕಣ್ಮುಂದೆಯೇ ಇರುತ್ತಾಳೆ. ಇಳಿ ವಯಸ್ಸಿನಲ್ಲಿ ನಮ್ಮನ್ನು ನೋಡಲು ಒಬ್ಬರು ಬೇಕಾಗಿದ್ದಾರೆ. ಆಯಿಶಾ ಇಲ್ಲೇ ಇದ್ದರೆ, ನಮಗೆ ಯಾವುದೇ ಹೆದರಿಕೆ ಇಲ್ಲ' ಎಂದು ಉಮರಾಕ ಹೇಳಿಕೊಂಡರು. ಮೈಮುನಾ ಮಾತನಾಡಲಿಲ್ಲ.

'ಆಯಿಶಾಳಿಗೂ ಕಾಸಿಂನ ಮೇಲೆ ಇಷ್ಟವಿದೆ'- ಉಮರಾಕ ಉಸುರಿದರು.

ಆವಾಗಲೂ ಮೈಮುನಾ ಮಾತನಾಡಲಿಲ್ಲ.

'ಹೇಳು ಮೈಮುನಾ...'

'ನೀವು ಸುಮ್ಮನೆ ಕೂತ್ಕೊಳ್ಳೀರಾ... ಅಲ್ಲಾ. ಹ್ಞಂ, ಅವನಿಗೆ ಇರಲೊಂದು ಸ್ವಂತ ಮನೆ ಇಲ್ಲ. ಸ್ವಂತ ಹೊಲಿಗೆ ಮಿಶನ್ ಕೂಡ ಇಲ್ಲ. ಶಾಪ್ ಕೂಡಾ ಸ್ವಂತದ್ದಿಲ್ಲ. ಅಂಥ ಬಿಕನಾಸಿಗೆ ನಮ್ಮ ಮುದ್ದುಮಗಳು ಆಯಿಶಾಳನ್ನು ಮದುವೆ 'ಮಾಡಿ ಕೊಡುವುದಾ?'- ಮೈಮುನಾ ಕಿಡಿಕಾರತೊಡಗಿದರು.

'ನೋಡು, ಮೈಮುನಾ... ಅಲ್ಲಾಹನನ್ನು ಮರೆತು ಮಾತನಾಡಬೇಡ. ಊರಿನ ಕಳ್ಳನಾದರೂ ಆದೀತು, ಪರವೂರಿನ ಸುಭಗ ಅಲ್ಲ. ಕಾಸಿಂನನ್ನು ನಾವು ಎರಡು ವರ್ಷದಿಂದ ನೋಡುತ್ತಲೇ ಇದ್ದೇವೆ. ಒಳ್ಳೆಯ ಗುಣ ಸ್ವಭಾವದ ಹುಡುಗ'- ಉಮರಾಕ ಹೆಂಡತಿಯ ಮುಖ ನೋಡಿದರು.

'ಆ ಬಗ್ಗೆ ನೀವು ನನ್ನಲ್ಲಿ ಮಾತನಾಡುವುದೇ ಬೇಡ. ನಿಮಗೆ ಬೆಳ್ಳಗಿದ್ದದ್ದೆಲ್ಲಾ ಹಾಲು. ನಾನು ವಿರಾಜಪೇಟೆಯವರನ್ನು ಬರಲಿಕ್ಕೆ ಹೇಳಿದ್ದೇನೆ. ಆಯಿಶಾಳಿಗೆ ದಲ್ಲಾಳಿ ಆದಮಾಕ ತೋರಿಸಿದ ಹುಡುಗನೇ ಆಗಬೇಕು'ಎನ್ನುತ್ತಾ ಮೈಮುನಾ ಹಟಕಟ್ಟಿದರು.

ನಾಲ್ಕು ದಿನ ಕಳೆಯಿತು. ದಲ್ಲಾಳಿ ಆದಮಾಕ ವಿರಾಜಪೇಟೆಯ ಹುಡುಗನನ್ನು ಕರೆ ತಂದರು. ಆಯಿಶಾಳ ವಧುಪರೀಕ್ಷೆಯೂ ನಡೆಯಿತು. ಅವ ಐದು ಪವನ್ ತೂಕದ ಚಿನ್ನದ ಮಾಲೆ ಹಾಕಿ ಹೋದ.

ಈ ಸಂಗತಿ ತಿಳಿದ ಕಾಸಿಂ ಹುಚ್ಚನಂತಾದ. ಹಾಗಾಗಿ ಇದೀಗ ಅವನು ಬಟ್ಟೆಬರೆ ಹೊಲಿಯಲು ಅಂಗಡಿಗೆ ಹೋಗುವುದೇ ಇಲ್ಲ. ಹೋದರೂ ಸರಿ ಹೊಲಿಯುವುದಿಲ್ಲ. ಆಯಿಶಾಳಿಗೂ ಮನ ತುಂಬ ಕಾಸಿಂನದ್ದೇ ನೆನಪು. ಅವಳೀಗ ಕ್ಷಣ ಕ್ಷಣಕ್ಕೂ ಕಾಸಿಂರನ್ನು ತನಗೆ ದಯಪಾಲಿಸು ಎಂದು ಅಲ್ಲಾಹನಲ್ಲಿ ಬೇಡುತ್ತಾಳೆ.

ತನ್ನ ಹೆಂಡತಿಯ ಹಟದಿಂದಾಗಿ ಎರಡು ಜೀವದ ಬೇಗುದಿಯನ್ನು ಉಮರಾಕ ಚೆನ್ನಾಗಿ ಅರ್ಥಮಾಡಿಕೊಂಡಿದ್ದಾರೆ. ಆದರೂ ಅವರಿಗೆ ಏನೂ ಮಾಡಲು ಸಾಧ್ಯವಾಗುತ್ತಿಲ್ಲ.

ಅಂತೂ ನರ್ಖೀರ್ ಮತ್ತು ಆಯಿಶಾರ ಮದುವೆಗೆ ದಿನ ನಿಗದಿಪಡಿಸಲಾಯಿತು.

ಅಂದು ಭಾನುವಾರ.

ಆಯಿಶಾಳ ಮದುವೆಯ ದಿನ.

ಮದುಮಗನ ಕಡೆಯಿಂದ ಕೆಲವು ಮಂದಿ ಮದುಮಗಳ ಮನೆಗೆ ಬಂದು ನಿಖಾಹ್ ಮಾಡಿ ಮದುಮಗಳನ್ನು ಕರೆದುಕೊಂಡು ಹೋಗಲು ನಿರ್ಧರಿಸಿದ್ದರು. ಒಂದೆಡೆ ಬಿರಿಯಾನಿ ಬೇಯುತ್ತಿತ್ತು. ಮತ್ತೊಂದೆಡೆ ಕೋಳಿ ಕಾಯಿಸಲಾಗುತ್ತಿತ್ತು. ಮೈಕ್‌ನಿಂದ ಹಾಡೂ ಕೇಳಿಸುತ್ತಿತ್ತು. ಅಂಗಳದಲ್ಲಿ ಶಾಮಿಯಾನ ಹಾಕಲಾಗಿತ್ತು. ಮಕ್ಕಳ ಓಡಾಟ, ಚಿರಿಪಿರಿ ಕೇಳುತ್ತಲೇ ಇತ್ತು. ಮದುಮಗಳು ಆಯಿಶಾಳನ್ನು ಸುತ್ತುವರಿದಿದ್ದ ಹೆಂಗಸರು ಆಕೆಯನ್ನು ಶೃಂಗರಿಸುತ್ತಿದ್ದರು. ಖತೀಬರನ್ನು ಕರೆದುಕೊಂಡು ಹೋಗಲು ಜನ ಹೋಗಿದ್ದರು.

ಬಂದರು... ಬಂದರು... ಒಂದು ಬಸ್, ನಾಲ್ಕು ಕಾರಿನಿಂದ ಜನರು ಇಳಿದು ಬಂದರು. ಎಲ್ಲರನ್ನೂ 'ಬರು... ಬರು... ದೈಕೊರು' ಅಂತ ಸ್ವಾಗತಿಸಿ ಕೂತ್ಕೊಳಿಸಲಾಯಿತು. ಹಾಗೇ ಕುಡಿಯಲು ಶರ್ಬತ್ ಕೊಡಲಾಯಿತು.

ನಿಖಾಹ್‌ನ ಸೋಫಾಕ್ಕೆ ಬಿಳಿ ಬಟ್ಟೆ ಹಾಸಲಾಗಿತ್ತು. ಅತ್ತರ್‌ನ ಪರಿಮಳದೊಂದಿಗೆ ಖತೀಬರು ಹಾಜರಾದರು. ಮದುಮಗನನ್ನು ಸೋಫಾದ ಮೇಲೆ ಕೂತ್ಕೊಳಿಸಲಾಯಿತು.

ನಿಖಾಹ್‌ನ ಧ್ವನಿ ಮೊಳಗಿಸಲು ಖತೀಬರು ಅನುವಾದರು. ಅಷ್ಟರಲ್ಲಿ ಒಂದು ರಿಕ್ಷಾ ಬಂದು ನಿಂತಿತು. ಅದರಿಂದ ಒಬ್ಬಳು ಹೆಂಗಸು, ಒಂದು ಮಗು, ಇಬ್ಬರು ಗಂಡಸರು ಇಳಿದರು. ಮಗುವನ್ನು ಹೆಗಲ ಮೇಲೇರಿಸಿದ್ದ ಹೆಂಗಸು ನಿಖಾಹ್ ನಡೆಯುವ ಸ್ಥಳಕ್ಕೇ ಧಾವಿಸಿ ಬಂದಳು.

ಎಲ್ಲರಿಗೂ ಆಶ್ಚರ್ಯ, ಏನು ಏನು ಎಂಬ ಪ್ರಶ್ನಾರ್ಥಕ ಚಿನ್ಹೆಗಳು ಪ್ರತಿಯೊಬ್ಬರ ಹುಬ್ಬಿನ ಮೇಲೆ ಕಾಣಿಸುತ್ತಿತ್ತು.

ಹೆಂಗಸು ಆ ಮಗುವನ್ನು ಮದುಮಗನ ಮಡಿಲಲ್ಲಿರಿಸಿದಳು. ಹಾಗೇ ಆತನ ಕೆನ್ನೆಗೆ ಎರಡು ಬಾರಿಸಿದಳು.

'ಇನ್ನೂ ಒಂದು ಬೇಕಾ' ಎಂದು ಕೇಳಿದಳು.

ಎಲ್ಲರೂ ಪಿಳಿ ಪಿಳಿ ಕಣ್ಬಿಟ್ಟರು.

'ಮೂರು ವರ್ಷದ ಹಿಂದೆ ಒಂದು ಲಕ್ಷ ಹಣ, ಐವತ್ತು ಪವನು ಚಿನ್ನಾಭರಣ ಪಡೆದು ನನ್ನನ್ನು ಮದುವೆಯಾಗಿ, ಈ ಒಂದು ಹೆಣ್ಮಗುವನ್ನು ಕೊಟ್ಟು ಖರ್ಚಿಗೆ ನಯಾ ಪೈಸೆಯನ್ನೂ ಕೊಡದೆ ಇದೀಗ ಇಲ್ಲಿ ಮದುವೆಯಾಗಲು ಬಂದಿದ್ದೀಯಾ?. ಇದಕ್ಕಿಂತಲೂ ಮುಂಚೆ ಎರಡು ಮದುವೆಯಾಗಿದ್ದೀಯಲ್ಲಾ. ಇದೀಗ ಮತ್ತೆ ಇಲ್ಲೊಂದು ಮದುವೆಯಾಗಲೂ ಬಂದಿದ್ದೀ. ನಿನ್ನನ್ನು ಹೀಗೆ ಬಿಟ್ಟರೆ' ಎನ್ನುತ್ತಾ ಆ ಹೆಂಗಸು ಹಲ್ಲು ಕಡಿದಳು.

ಆಕೆಯ ಮಾತಿನಲ್ಲಿ ಸುಳ್ಳಿರಲಿಲ್ಲ. ಆ ಕಣ್ಣು, ಆ ಮೂಗು, ಆ ಮುಖ, ಆ ಹುಬ್ಬು ಎಲ್ಲವೂ ಸತ್ಯವನ್ನೇ ಹೇಳುತ್ತಿತ್ತು. ಆ ಮಾತು ಕೇಳಿದ ಯುವಕರ ಗುಂಪೊಂದು ಆನೆಯಂತೆ ನುಗ್ಗಿ ಬಂತು. ಹಾಗೇ ಮದುಮಗನನ್ನು ಕುಳಿತಲ್ಲಿಂದ ಎಬ್ಬಿಸಿದರು.

'ಈ ಹೆಂಗಸು ಹೇಳಿದ್ದು ಸತ್ಯಾನಾ... ಇದು ನಿನ್ನ ಮಗು ಹೌದಾ ?' ಎಂದು ಕೇಳಿ ಆತನ ಉತ್ತರಕ್ಕೂ ಕಾಯದೆ ಹಿಂದೆ ಮುಂದೆ ನೋಡದೆ ಚೆನ್ನಾಗಿ ಬಾರಿಸಿದರು.

ಸೇರಿದವರಿಗೆ ತಾವು ಕನಸು ಕಾಣುತ್ತಿದ್ದೇವಾ ? ಎಂದು ಅನಿಸತೊಡಗಿತ್ತು.

ಸಂತೋಷದ ಸಮಾರಂಭವೊಂದು ದುಃಖದ ಕಡಲಲ್ಲಿ ತೇಲಿ ಹೋಯಿತು. ಮದುವೆಯ ಮನೆ ಮಸನದ ಮನೆಯಂತಾಯಿತು. ಎಲ್ಲವೂ ಸ್ತಬ್ಧವಾಯಿತು.

ವಿಷಯ ತಿಳಿದ ಮೈಮುನಾ ಮೂರ್ಛೆ ಹೋದರು. ಉಮರಾಕ ತಲೆಗೆ ಕೈ ಹೊತ್ತು ಕೂತರು. ಹೆಂಗಸರು ತಲೆಗೊಂದರಂತೆ ಮಾತನಾಡತೊಡಗಿದರು.

'ಇನ್ನೇನು ಮಾಡುವುದು ?'- ಎಲ್ಲರ ಪ್ರಶ್ನೆಯೂ ಅದೇ ಆಗಿತ್ತು.

ಹೆಂಗಸರ ಬೊಬ್ಬೆ, ಗಂಡಸರ ಗಲಾಟೆಯ ಆರ್ಭಟ ಹೆಚ್ಚುತ್ತಲಿತ್ತು.

ಆಯಿಶಾಳ ಕಣ್ಣಲ್ಲಿ ನೀರು ಇಳಿಯುತ್ತಿಲ್ಲ. ಅವಳು ಮರಗಟ್ಟಿದ ಹಾಗೆ ಸುಮ್ಮನೆ ಕುಳಿತುಕೊಂಡಿದ್ದಳು.

'ಆದದ್ದೆಲ್ಲಾ ಒಳ್ಳೆಯದಕ್ಕೇ. ನಿಖಾಹ್‌ಗಿಂತ ಮುಂಚೆ ಗೊತ್ತಾದ ಕಾರಣ ನಾವು ಬಚಾವ್ ಆದೆವು ' ಎನ್ನುತ್ತಾ ಸುಣ್ಣದ ವ್ಯಾಪಾರಿ ಮೂಸಬಾಕ ಮಾತಿಗೆ ತೊಡಗಿದರು.

ಉಮರಾಕ ಮಾತನಾಡುತ್ತಿಲ್ಲ. ಅವರು ಸುಮ್ಮನೆ ಕುಳಿತಿದ್ದರು.

'ಮಾತನಾಡಿ ಉಮರಾಕ, ಮಾತನಾಡಿ. ನೀವೇ ಹೀಗೆ ಸುಮ್ಮನೆ ಕುಳಿತರೆ ಹೇಗೆ?' ಎಂದು ಮೂಸಬಾಕ ಕೇಳಿದಾಗ, ' ನಾನೇನು ಮಾಡಲಿ ಮೂಸಬಾಕ'ಎಂದು ಉಮರಾಕ ತನ್ನ ಅಸಹಾಯಕತೆ ವ್ಯಕ್ತಪಡಿಸಿದರು.

'ನಾನೊಂದು ಮಾತು ಹೇಳ್ತೇನೆ, ಆದೀತಾ ?'

'ಹೇಳಿ, ಮೂಸಬಾಕ '- ಉಮರಾಕರ ಧ್ವನಿ ಕ್ಷೀಣಿಸಿತ್ತು.

'ಆ ಕಾಸಿಂ ಇದ್ದಾನಲ್ಲ, ಅವನನ್ನು...'

'ಹೌದು. ಆದರೆ ಅವ ಎಲ್ಲಿದ್ದಾನೆ. ಅಲ್ಲದೆ ಅವನಾಗಿಯೇ ಕೇಳಲು ಬಂದಾಗ ನಾವು ತಿರಸ್ಕರಿಸಿದ್ದೇವೆ. ಈಗ ಅವ ಒಪ್ಪುತ್ತಾನೆ ಅಂತ ಯಾವ ಗ್ಯಾರಂಟಿ ?'

'ನೀವು ಒಪ್ಪಿಗೆ ಕೊಡಿ. ಅವನನ್ನು ಒಪ್ಪಿಸುವ ಜವಬ್ದಾರಿ ನನ್ನದು. ಎಲ್ಲಿದ್ದರೂ ಹುಡುಕಿಕೊಂಡು ಬಂದು ನಿಮ್ಮ ಮಗಳ ಕೈ ಹಿಡಿಸುತ್ತೇನೆ '

'ಹ್ಞೂಂ'- ಉಮರಾಕರ ಕ್ಷೀಣ ಧ್ವನಿ ಹೊರಟಿತು.

ಮೂಸಬಾಕ ಹಿಂದೆ ಮುಂದೆ ನೋಡಲಿಲ್ಲ. ನಾಲ್ಕು ಮಂದಿಯನ್ನು ಜತೆಗೂಡಿಸಿಕೊಂಡು ಅಲ್ಲಿಂದ ಹೊರಟು ಹೋದರು.

ಕಾಸಿಂ, ವಿರಾಜಪೇಟೆಯ ಬಸ್ ನಿಲ್ದಾಣದಲ್ಲಿದ್ದ. ಗಡ್ಡ ಬೋಳಿಸದೆ ಒಂದು ವಾರವಾಗಿತ್ತು. ಅವನನ್ನು ಕಂಡೊಡನೆ ಹೋದವರ ಎದೆ ಒಮ್ಮೆ ಧಸಕ್ಕೆಂದಿತು. ಹಾಗೇ ಅವನನ್ನು ಎಬ್ಬಿಸಿ ಉಮರಾಕರ ಮನೆಯಲ್ಲಿ ನಡೆದ ಸಂಗತಿ ತಿಳಿಸಿದರು.

'ಇಲ್ಲ... ನಾನು ಅವಳನ್ನು ಮದುವೆಯಾಗಲಾರೆ. ನಾವೇ ಹೋಗಿ ಕೇಳಿದಾಗ, ಅವಳ ತಾಯಿ ನಮ್ಮನ್ನು ನಿರ್ಲಕ್ಷಿಸಿ ಅವಮಾನಿಸಿದ್ದನ್ನು ಮರೆಯಲು ಸಾಧ್ಯ ಇಲ್ಲ' ಎಂದು ಕಾಸಿಂ ಹಟ ಹಿಡಿದ. ಅಲ್ಲದೆ ಆಯಿಶಾಳ ತಾಯಿ ಹೇಳಿದ ಮಾತನ್ನು ಪುನಃ ಉಚ್ಚರಿಸಿದ.

ಮೂಸಬಾಕ ಮಾತುಗಾರ. ಎಂಥವರ ಮನಸ್ಸನ್ನೂ ತನ್ನ ಮಾತಿನ ಮೋಡಿಯಲ್ಲೇ ಬದಲಾಯಿಸಿ ಬಿಡುತ್ತಾರೆ.

'ಕಾಸಿಂ ನಿನ್ನ ಯೋಗ್ಯತೆ ಏನೂಂತ ಅವರಿಗೆ ಈವರೆಗೂ ಗೊತ್ತಿರಲಿಲ್ಲ. ಇದೀಗ ಗೊತ್ತಾಗಿದೆ. ಹಾಗಾಗಿ ನಿನ್ನನ್ನು ಕಂಡು ಮಾತನಾಡಲು ತಿಳಿಸಿದ್ದಾರೆ. ಅಂದಹಾಗೆ, ಆಯಿಶಾ ಕೂಡ ನಿನ್ನನ್ನು ತುಂಬಾ ಇಷ್ಟಪಟ್ಟಿದ್ದಾಳೆ. ನಿನಗೇನು ಬೇಕು ಹೇಳು. ಅದೆಲ್ಲವನ್ನೂ ನಾನು ಕೊಡಿಸುವೆ. ನಿನಗೆ ಹೊಲಿಗೆ ಮಿಶನ್ ಹಾಕಲು ಸಹಾಯ ಮಾಡಿದ ಉಮರಾಕರ ಋಣ ನಿನ್ನ ಮೇಲಿದೆ '- ಎಂದೆಲ್ಲಾ ಮೂಸಬಾಕ ಹೇಳಿದರು.

ಕಾಸಿಂ ಮಾತನಾಡಲಿಲ್ಲ.

'ನೋಡು ಕಾಸಿಂ, ಮಾತನಾಡದೆ ಸುಮ್ಮನಿರಬೇಡ. ನಿನಗೆ ಏನು ಬೇಕು ಹೇಳು. ಈ ದಿನವೇ ಅದೇ ಚಪ್ಪರಲ್ಲಿ ಮದುವೆಯಾಗಬೇಕು'

'ಅಣ್ಣನಲ್ಲಿ ನನಗೊಂದು ಮಾತು ಕೇಳಬೇಕು'

'ಹೋಗೋಣ. ಅವ ಎಲ್ಲಿದ್ದಾನೆ '-ಮೂಸಬಾಕ ಗಡಿಬಿಡಿಯಲ್ಲೇ ಬಟ್ಟೆಯ ತೋಳು ಮಡಚಿದರು.

ಹಾಗೇ ಕಾಸಿಂನ ಅಣ್ಣನನ್ನು ಕಾಣಲಾಯಿತು. ವಿಷಯ ತಿಳಿಸಿದಾಗ ಅವನಿಗೆ ಒಮ್ಮೆಲೆ ಆಶ್ಚರ್ಯವಾಯಿತು. ಆದರೆ, ಆವತ್ತು ಆ ಮನೆಯಲ್ಲಿ ಆದ ಅವಮಾನವನ್ನು ಮರೆಯಲು ಅವನಿಗೆ ಸಾಧ್ಯವಾಗಲಿಲ್ಲ. ಅವನು ಅದನ್ನೇ ನೆನಪಿಸಿದ.

'ಕಳೆದ ಹೋದ ಬಗ್ಗೆ ಮಾತನಾಡಿ ಪ್ರಯೋಜನವಿಲ್ಲ. ಈಗ... ಈಗ ಆಗಬೇಕಾದುದರ ಬಗ್ಗೆ ಒಂದು ನಿರ್ಧಾರಕ್ಕೆ ಬರೋಣ. ಕಾಸಿಂಗೆ ಏನು ಬೇಕು ಹೇಳು'ಮೂಸಬಾಕರ ಸ್ವರ ಗಟ್ಟಿಯಾಗಿತ್ತು.

'ನಿನಗೇನು ಬೇಕು ಹೇಳು, ಕಾಸಿಂ '- ಅಣ್ಣ, ತಮ್ಮನ ಮುಖ ನೋಡಿದ.

'ನನಗೆ ಆಯಿಶಾ ಸಿಕ್ಕಿದರೆ ಸಾಕು '- ಕಾಸಿಂನ ಮುಖ ಅರಳಿತು.

ಹೇಗೂ ಅವರು ಅಲ್ಲಿಂದ ಜತೆಗೂಡಿ ಮಡಿಕೇರಿಗೆ ಬಂದರು. ಸಂಜೆ ೪ಗಂಟೆಗೆ ಅದೇ ಚಪ್ಪರಲ್ಲಿ ಮದುವೆಯಾಯಿತು. ಕಾಸಿಂ ಮತ್ತು ಆಯಿಶಾ ಸತಿಪತಿಯಾದರು. ಆ ಕುಶಿಯಲ್ಲಿ, ಕಾಸಿಂ ಯಾವುದೇ ಬೇಡಿಕೆಯನ್ನು ಮುಂದಿಡದಿದ್ದರೂ ಅವನ ನೂತನ ಟೈಲರ್ ಶಾಪ್‌ಗೆ ಬೇಕಾದ ಎಲ್ಲಾ ವ್ಯವಸ್ಥೆಯನ್ನು ಮಾಡಿಕೊಟ್ಟರು. ಅಲ್ಲದೆ ಉಳಕೊಳ್ಳಲು ಸುಸಜ್ಜಿತ ಮನೆಯನ್ನೂ ಕೂಡ !.

* * *

# ಹರಕೆಯ ಮೊಟ್ಟೆ

ರಮಾ ತುಳುನಾಡು

'ಮುನ್ನೂರ ಅರುವತ್ತು ರೂಪಾಯಿ, ಒಂದು ವಾರ್. ಮುನ್ನೂರ ಅರುವತ್ತು ರೂಪಾಯಿ, ಎರಡು ವಾರ್. ಯಾರಾದರು ಇದ್ದರೆ ಬೇಗ ಹೇಳಿ. ಇದ್ ಈವತ್ತಿನ ಕೊನೆಯ ಏಲಂ 'ಎಂದು ಕೂಗಿದ ಆತ, ಮತ್ತೊಮ್ಮೆ 'ಮುನ್ನೂರ ಅರುವತ್ತು ರೂಪಾಯಿ' ಎಂದ.

ಅವನ ಏಲಂ ಕೂಗು ಇಸುಬಿಗೆ ಕಿರಿಕಿರಿಯಾಯಿತು. ಎಲ್ಲಿ ತನ್ನ ಕಿವಿ ಬಂದ್ ಆದೀತೋ ಎಂದು ಹೆದರಿ, ತನ್ನೆರಡೂ ಕೈಗಳನ್ನು ಕಿವಿಗಿಟ್ಟ. ಅವನ ಹೊಟ್ಟೆಯೊಳಗೆ ಗುಳು ಗುಳು ಎಂಬ ಶಬ್ದವಾಗತೊಡಗಿತು. ಮನಸ್ಸು ತಳಮಳಗೊಂಡಿತು. ದೇಹ ನಡುಗಿದಂತಾಯಿತು. ಅಂಗಿಯ ಕೈ ತೋಳಲ್ಲಿ ಸಿಕ್ಕಿಸಿಟ್ಟಿದ್ದ ಬೀಡಿಯನ್ನು ಹೊತ್ತಿಸಿ ಹೊಗೆ ಬಿಡತೊಡಗಿದ. ಹಾಗೇ ತನ್ನನ್ನು ಯಾರಾದರು ಗಮನಿಸುತ್ತಾರಾ ಎಂದು ಭಾವಿಸಿ ಅತ್ತಿತ್ತ ನೋಡತೊಡಗಿದ.

ಏಲಂನ ಗಡಿಬಿಡಿಯಲ್ಲಿದ್ದ ಕಾರಣ ಯಾರೂ ಇಸುಬುನನ್ನು ಗಮನಿಸಲಿಲ್ಲ. ನಶ್ಯ ಅಥವಾ ಬೀಡಿ ಎಳೆಯಲೆಂದು ಕೆಲವರು ಒಳ ಹೊರಗೆ ಹೋಗಿ ಬರುತ್ತಿದ್ದರು. ಆದರೆ, ಇಸುಬು ಹಾಗೇ ಎದ್ದು ಹೋಗುವ ಸ್ಥಿತಿಯಲ್ಲೇ ಇರಲಿಲ್ಲ. ಕೊನೆಯ ಕ್ಷಣದಲ್ಲಾದರೊಂದು ಅವಕಾಶ ಸಿಕ್ಕೀತು ಎಂದು ಭಾವಿಸಿ ಏಲಂ ಮುಗಿಯುವುದನ್ನೇ ಕಾದು ಕುಳಿತಿದ್ದ. ಆದರೆ, 'ಮೊಟ್ಟೆ 'ತನ್ನ ಕೈ ಜಾರಲಿದೆ ಎಂಬುದು ಅವನಿಗೆ ಮನವರಿಕೆಯಾಗಿತ್ತು.

ಕಳೆದ ಮೂರ್ನಾಲ್ಕು ದಿನದಿಂದೀಚೆಗೆ ನಂಜೂರು ಮಸೀದಿಯಲ್ಲಿ 'ಬದ್ರ್‌ಪಾಟ್ 'ನ ಗೌಜಿ ಇತ್ತು. ಕೇರಳದಿಂದ ಬಂದಿದ್ದ ಒಬ್ಬ ಮುಸ್ಲಿಯಾರ್ ಭಾರೀ ಉತ್ಸಾಹದಿಂದ ಬದ್ರ್‌ಪಾಟ್‌ನ ಹಾಡು ಹಾಡುತ್ತಾ, ಎಳೆ ಎಳೆಯಾಗಿ ಅದರ ಕತೆ ಬಿಡಿಸಿ ಹೇಳುತ್ತಿದ್ದರು. ಅಲ್ಲಿ ಸೇರಿದ್ದವರಿಗೆ ಈ ಕತೆಯನ್ನು ಹಿಂದೊಮ್ಮೆ ಕೇಳಿದ್ದ ನೆನಪಾಯಿತಾದರೂ, ಅದು ಕುತೂಹಲದಿಂದ ಕೂಡಿದ್ದರಿಂದ

ಅವರು ಆಸಕ್ತಿಯಿಂದ ಆಲಿಸತೊಡಗಿದರು. ಮುಸ್ಲಿಯಾರ್‌ರ ಹಾಡಿನ ಧ್ವನಿ, ಹೇಳುವ ಶೈಲಿಯೂ ಆಕರ್ಷಕವಾಗಿತ್ತು.

ಇದೀಗ ಮೂರನೇ ದಿನದ 'ಬದ್ರ್‌ಪಾಟ್'. ಹಾಗಾಗಿ ಜನ ಸಂಖ್ಯೆಯೂ ಹೆಚ್ಚಿತ್ತು. ಆಯಾ ದಿನ ಹರಕೆ ರೂಪದಲ್ಲಿ ಅಥವಾ ದುಆಕ್ಕಾಗಿ ಬಂದ ವಸ್ತುಗಳನ್ನು ಆವತ್ತೇ ಏಲಂ ಕೂಗಲಾಗುತ್ತದೆ. ಬೊಂಡ, ತೆಂಗಿನಕಾಯಿ, ಹಲಸಿನ ಹಣ್ಣು, ಪಪ್ಪಾಯಿ, ಅಕ್ಕಿ, ಸಕ್ಕರೆ ಇತ್ಯಾದಿ ವಸ್ತುಗಳನ್ನು ಪ್ರತಿನಿತ್ಯ ಏಲಂ ಮಾಡಲಾಗುತ್ತಿತ್ತು. ತಮ್ಮ ಸಂಕಷ್ಟ ನಿವಾರಣೆಗೆ ಜನರು ಇದನ್ನು 'ಬದ್ರ್‌ಪಾಟ್'ನ ಮಜ್ಲಿಸ್‌ಗೆ ಕೊಟ್ಟು ವಿಶೇಷ ದುಆ ಮಾಡಿಸಿಕೊಳ್ಳುತ್ತಿದ್ದರು.

ನಂಜೂರು ದರ್ಗಾ ತುಂಬಾ ಪ್ರಸಿದ್ಧಿ ಪಡೆದಿದೆ. ಎಂಥ ಕಷ್ಟ, ನಷ್ಟ, ತೊಂದರೆಯಾದರೂ ಈ ದರ್ಗಾಕ್ಕೆ ಹರಕೆ ಹೊತ್ತರೆ, ಪರಿಹಾರ ಸಿಗುತ್ತದೆ ಎಂಬ ನಂಬಿಕೆ ಆ ಊರಲ್ಲದೆ, ಆಸುಪಾಸಿನ ಜನರಿಗಿತ್ತು.

ಹರಕೆ ರೂಪದಲ್ಲಿ ಬಂದ ವಸ್ತುಗಳನ್ನು ಏಲಂ ಮಾಡುವುದು ಹಲವು ವರ್ಷದಿಂದ ಬಂದ ವಾಡಿಕೆ. ಅದರಿಂದ ದರ್ಗಾದ ಆದಾಯ ಹೆಚ್ಚುತ್ತಿರುವುದು ಸುಳ್ಳಲ್ಲ.

ಹರಕೆ ಕೊಟ್ಟವರು ತಮ್ಮ ಸಂಕಷ್ಟ ಪರಿಹಾರವಾಗುತ್ತದೆ ಎಂದು ನಂಬಿದ್ದರೆ, ಅದನ್ನು ಏಲಂ ಮೂಲಕ ಪಡೆದವರು ಕೂಡಾ ತಮಗೆ ಅದರಿಂದ ಎಲ್ಲವೂ ವೃದ್ಧಿಯಾಗುತ್ತದೆ ಎಂದು ಭಾವಿಸಿದ್ದರು. ಇವೆಲ್ಲದರ ಮಧ್ಯೆ ಏಲಂ ಕೂಗುವ ವ್ಯಕ್ತಿ ಕೂಡಾ ಮಾನಸಿಕವಾಗಿ ತೃಪ್ತಿಪಟ್ಟುಕೊಂಡಿದ್ದರು. ಮಕ್ಕಳ ಸಹಿತ ಹಲವರಿಗೆ ಯಾರು, ಯಾವುದನ್ನು ಎಷ್ಟು ಬೆಲೆಗೆ ಖರೀದಿಸುತ್ತಾರೆ ಎಂದು ತಿಳಿಯುವ ಕುತೂಹಲವಿತ್ತು.

ಆರೇಳು ರೂಪಾಯಿಯ ಬೊಂಡ ಐನೂರು ರೂಪಾಯಿಗೆ ಏಲಂ ಆಗುತ್ತದೆ. ಕಳೆದ ಎರಡು ದಿನದಲ್ಲಿ ಕೋಳಿಯ ಮೊಟ್ಟೆ ಕಡಿಮೆ ಬೆಲೆಗೆ ಏಲಂ ಆಗಿತ್ತು.

ಮೊದಲ ದಿನ ಹರಕೆ ರೂಪದಲ್ಲಿ ಬಂದಿದ್ದ ಇಪ್ಪತ್ತೈದು ಮೊಟ್ಟೆ ಕೇವಲ ನೂರು ರೂಪಾಯಿಗೆ ಏಲಂ ಆಗಿತ್ತು. ಮರುದಿನ ಬಂದಿದ್ದ ಒಂಬತ್ತು ಮೊಟ್ಟೆ ಇಪ್ಪತ್ತು ರೂಪಾಯಿಗೆ ಏಲಂ ಆಗಿತ್ತು. ಇದೀಗ ಮೂರನೇ ದಿನ ಮೊಟ್ಟೆಯನ್ನು ತಾನೇ ಖರೀದಿಸಬೇಕು ಎಂದು ನಿರ್ಧರಿಸಿ ಬಂದಿದ್ದ ಇಸುಬು, ಏಲಂನ ಏರಿಕೆಯನ್ನು ಕಂಡು ಮೂಕವಿಸ್ಮಿತನಾಗಿದ್ದ. ತನಗರಿವಿಲ್ಲದಂತೆ ಅವನಿಗೆ ಎದೆಯಲ್ಲಿ ನೋವು ಕಾಣಿಸಿತು. ಅದು ತಕ್ಷಣದಿಂದ ಇಡೀ ದೇಹಕ್ಕೆ ಪಸರಿಸಿದಂತಾಯಿತು.

'ಯಾ ಅಲ್ಲಾಹ್... ನಾಳೆ ಗುಲಾಬಿ ದಾದಗ್ ಎಂಜನೆ ಮೊಗ ಕಾಟಟ್ಟ್ ?' (ಯಾ ಅಲ್ಲಾಹ್... ನಾಳೆ ಗುಲಾಬಿಯಕ್ಕನಿಗೆ ಹೇಗೆ ಮುಖ ತೋರಿಸಲಿ ?) ಎಂದು ಇಸುಬು ತನ್ನಲ್ಲೇ ಕೇಳುತ್ತಾ ತಲೆ ಅಲ್ಲಾಡಿಸತೊಡಗಿದ.

* * *

ಹಿರಿಯರು ಯೂಸುಫ್ ಅಂತ ಹೆಸರಿಟ್ಟರೂ, ಕಾಲಕ್ರಮೇಣ ಅದು 'ಇಸುಬು' ಅಂತ ಮಾರ್ಪಾಟಾಗಿತ್ತು. ಇಸುಬು ಗುಜರಿ ವ್ಯಾಪಾರಿ. ಹಾಗಾಗಿ ಅವನ ಗುರುತು ಪರಿಚಯ ಕುಂದಾಪುರದ ಬಹುತೇಕ ಮಂದಿಗೆ ಇದೆ. ಯಾಕೆಂದರೆ, ಅವನು ತಿರುಗದ ಊರೇ ಇಲ್ಲ ಎನ್ನಬಹುದು.

ಬೆಳಗಾಗುತ್ತಲೇ, ಗುಜರಿ ಉಂಟಾ ಎಂದು ಊರೂರು ಅಲೆದಾಡುತ್ತಲೇ ಗೋಣಿ ಚೀಲದಲ್ಲಿ ಗುಜರಿ ಸಂಗ್ರಹಿಸುವ ಇಸುಬು ಮುಸ್ಸಂಜೆಯಾದಾಗ ತನ್ನ ಗುಡಿಸಲು ಸೇರುತ್ತಾನೆ. ಹಾಗಂತ ಇಸುಬು ಗುಜರಿ ವ್ಯಾಪಾರದಿಂದ ಗಳಿಸಿದ್ದೇನೂ ಇಲ್ಲ. ನೇರ ನಡೆನುಡಿಯವರಿಗೆ ವ್ಯಾಪಾರ ಹೇಳಿಸಿದ್ದಲ್ಲವಲ್ಲ. ಹಾಗಿದ್ದರೂ, ಊರಲ್ಲಿ ಅವನಿಗೊಂದು ಹೆಸರಿತ್ತು.

ಅವನ ಬಾಲ್ಯದ ಗೆಳೆಯ ಅವುದ್ರಾಮ ಈಗ ಕುಂದಾಪುರದಲ್ಲೇ ಸ್ವಂತ ಅಂಗಡಿ ಮಾಡಿದ್ದಾನೆ. ಕಾರಲ್ಲೇ ತಿರುಗಾಡುತ್ತಾನೆ. ಮೋಸ, ವಂಚನೆಯಿಂದ ಸಂಪಾದನೆ ಮಾಡಿದ ಹಣದಿಂದ ಹತ್ತಿಪ್ಪತ್ತೈದು ಎಕ್ರೆ ಜಾಗ ಖರೀದಿಸಿ ತೋಟ ನಿರ್ಮಿಸಿ, ದೊಡ್ಡ ಬಂಗಲೆಯನ್ನೂ ಕಟ್ಟಿಸಿದ್ದ.

ಆದರೆ ಮೈ ಮುರಿದು ದುಡಿದ ಇಸುಬುವಿನ ಕೈ ಐದು ಸೆಂಟ್ಸ್ ಜಾಗ ಖರೀದಿಸುವಾಗಲೇ ಖಾಲಿಯಾಗಿತ್ತು. ಹಾಗಾಗಿ ಅಲ್ಲಲ್ಲಿಂದ ಕಂಗು, ಸಲಕೆ ತಂದು ಗುಡಿಸಲು ಕಟ್ಟಿದ್ದ. ಇತ್ತೀಚೆಗೆ ಅವನು ಆರ್ಥಿಕವಾಗಿ ಸ್ವಲ್ಪ ಸುಸ್ಥಿತಿಯಲ್ಲಿದ್ದ. ಅದಕ್ಕೆಲ್ಲಾ ಕಾರಣ ಗುಲಾಬಿಯಕ್ಕ. ಹಾಗಿರುವಾಗ ಆ ಗುಲಾಬಿಯಕ್ಕನನ್ನು ಮರೆಯಲು ಹೇಗೆ ಸಾಧ್ಯ ?.

ಗುಲಾಬಿ ಮತ್ತು ಇಸುಬುವಿನ ಮನೆ ಅಕ್ಕಪಕ್ಕವಿದೆ. ಗುಲಾಬಿಯ ಗಂಡ ಗೋಪಾಲ ಕೂಡಾ ಇಸುಬುವಿನ ಆತ್ಮೀಯ ಗೆಳೆಯ. ಅವರಿಬ್ಬರದ್ದು ಎಂಥ ಗೆಳತನ ಅಂತ ಅಲ್ಲಾಹನಿಗೇ ಗೊತ್ತು. ಅವನಿಗೆ ಗಾಯವಾದರೆ, ಇವನಿಗೆ ನೋವು. ಅವನ ಹೊಟ್ಟೆಯಲ್ಲಿ ಇವನ ಹಸಿವು.

ಇಸುಬುವಿನ ತಾಯಿ ಬೀಪಾತುಮ್ಮ 'ಇವೆರಡೂ ಒಂದೇ ಹೊಟ್ಟೆಯಲ್ಲಿತ್ತು' ಅಂತ ಕೆಲವೊಮ್ಮೆ ಹೇಳುವುದೂ ಉಂಟು. ಆವತ್ತಿನಿಂದ ಹಿಡಿದು ಈವರೆಗೂ ಇವರ ಗೆಳೆತನವನ್ನು ಮುರಿಯಲು ಯಾರಿಗೂ ಸಾಧ್ಯವಾಗಲಿಲ್ಲ.

ಇವನ ಪೆರ್ನಾಳ್ ಹಬ್ಬಕ್ಕೆ ಅವನಿಗೆ ಹೊಸ ಬಟ್ಟೆಬರೆ. ಅವನ ಚೌತಿ ಹಬ್ಬಕ್ಕೆ ಇವನ ಮನೆಯಲ್ಲಿ ಪಾಯಸ. ಯಾವತ್ತೋ ಒಂದು ಅಷ್ಟಮಿಯಂದು, ಜಾರುವ ಕಂಗಿಗೆ ಹತ್ತಿಸಲೆಂದು ಇಸುಬುನನ್ನು ಗೋಪಾಲ ಕರೆದುಕೊಂಡು ಹೋದಾಗ ನಡೆದ ರಾಮಾಯಣ ಹೇಳಿ ಮುಗಿಸು ವಂತದ್ದಲ್ಲ!. ಹೀಗೆ ಒಳಿತು, ಕೆಡುಕಿನಲ್ಲಿ ಅವರು ಸಮಪಾಲು. ಗೋಪಾಲನಿಗೆ ಮದುವೆಯಾದಾಗಲಾದರೂ, ಇವರ ನಡುವಿನ ಸಂಬಂಧ ದೂರವಾದೀತು ಎಂದು ಅನೇಕ ಮಂದಿ ಭಾವಿಸಿದ್ದರು. ಆದರೆ, ಗೋಪಾಲನನ್ನು ಕೈ ಹಿಡಿದ ಮೇಲೆ ಗುಲಾಬಿ ಅವರ ಗೆಳೆತನವನ್ನು ಮತ್ತಷ್ಟು ಗಟ್ಟಿಗೊಳಿಸಿದ್ದಳು.

ಇಸುಬು, ಗುಲಾಬಿಯನ್ನು 'ದಾದ' ಎಂದು ಕರೆಯುತ್ತಾನೆ. ಸಣ್ಣ ಪ್ರಾಯದಲ್ಲೇ ಹಳದಿ ರೋಗಕ್ಕೆ ಬಲಿಯಾದ ತಮ್ಮ ಸಂಕರನ ತದ್ರೂಪವನ್ನು ಅವಳು ಇಸುಬುವಿನಲ್ಲಿ ಕಾಣುತ್ತಾಳೆ.

ಈ ಎರಡೂ ಮನೆಯ ನಡುವೆ ಅಡಗಿಸಿಡುವಂತಹ ಸಂಗತಿ ಯಾವುದೂ ಇಲ್ಲ. ಆಚೆ ಮನೆಯ ತಿಳಿಗಂಜಿಗೆ, ಈಚೆ ಮನೆಯ ಉಪ್ಪು ಮೆಣಸಿನಂತೆ ಅವರ ಸಂಬಂಧ ವೃದ್ಧಿಸುತ್ತಾ ಹೋಯಿತು.

ಗುಲಾಬಿಯ ಕೈ ಹಿಡಿದ ನಂತರ ಗೋಪಾಲ ತುಂಬಾ ಸುಧಾರಿಸಿದ್ದ. ಹಳ್ಳಿಯ ಬಡ ಹುಡುಗಿಯೇ ಆಗಬೇಕು ಎಂದು ಹೇಳುತ್ತಿದ್ದ ಗೋಪಾಲನಿಗೆ ಈ ಸಂಬಂಧವನ್ನು ಏರ್ಪಡಿಸಿದ್ದೂ ಇಸುಬು. ಗುಜರಿ ಹೆಕ್ಕಲು ಊರೂರು ಅಲೆದಾಡುವ ಅವನಿಗೆ ಜನರ ಗುರುತು ಪರಿಚಯವಷ್ಟೇ ಅಲ್ಲ, ಅವರ ಕಷ್ಟ ಸುಖವೂ ಗೊತ್ತು. ಗುಲಾಬಿಯನ್ನು ಕಂಡೊಡನೆ, ಇವಳು ಗೋಪಾಲನಿಗೆ ಹೇಳಿಸಿದ ಹುಡುಗಿ ಎಂದು ಭಾವಿಸಿದ್ದ. ಅಲ್ಲದೆ ಯಾವುದೇ ಆಡಂಭರವಿಲ್ಲದೆ ಅತ್ಯಂತ ಸರಳ ರೀತಿಯಲ್ಲೇ ಅವರ ಮದುವೆಯಾಗಿತ್ತು.

ಗೋಪಾಲನಿಗೆ ಈಗ ಭಾರೀ ಕುಶಿ. ನಿಂತಲ್ಲಿ ನಿಲ್ಲುವುದೇ ಇಲ್ಲ. ತಾನು ತಂದೆಯಾಗುತ್ತಿದ್ದೇನೆ ಎಂಬ ಸಂತಸದಿಂದ ನಲಿದಾಡುತ್ತಿದ್ದಾನೆ. ಆದರೆ, ಅವಳ ಹೆರಿಗೆಯ ವ್ಯವಸ್ಥೆಯನ್ನು ಹೇಗೆ ಮಾಡಿ ಮುಗಿಸುವುದು ಎಂಬ ಚಿಂತೆಯಲ್ಲೂ ಬಿದ್ದಿದ್ದ. ಇಬ್ಬರಿಗೂ ಕೂಡು ಕುಟುಂಬ ಅಂತ ಯಾರೂ ಇಲ್ಲ. ಗೋಪಾಲ ಹೆರಿಗೆ ಕುರಿತು ಚಿಂತಿಸಿ ತಲೆಕೆಡಿಸಿಕೊಳ್ಳುತ್ತಿದ್ದಾಗ 'ನಾವಿರುವಾಗ ನೀನ್ಯಾಕೆ ಹೆದರುತ್ತೀಯಾ ?' ಎಂದು ಹೇಳಿ ಇಸುಬಿನ ತಾಯಿ ಧೈರ್ಯಕೊಟ್ಟರು. ನಾವು ನಂಬಿದ ದೇವರು ನಮ್ಮನ್ನು ಕೈ ಬಿಡಲಾರ ಎಂದು ಗೋಪಾಲ ಹೇಳಿ ಸಮಾಧಾನ ಪಟ್ಟುಕೊಂಡ. 'ಗುಲಾಬಿಯ ಹೆರಿಗೆಯ ಜವಬ್ದಾರಿ ನನಗಿರಲಿ' ಎಂದು ಇಸುಬಿನ ತಾಯಿ ಹೇಳಿದಾಗ ಗೋಪಾಲನ ತಲೆನೋವು ನಿವಾರಣೆಯಾಗಿತ್ತು.

ಗೋಪಾಲ, ತನ್ನ ಹೆಂಡತಿ ಗುಲಾಬಿಯ ಆರೈಕೆ ಮಾಡತೊಡಗಿದ. ಬಡತನದಿಂದಲೇ ಹುಟ್ಟಿ ಬೆಳೆದ ಗುಲಾಬಿಗೆ ಅಂಥ ಬಯಕೆ ಏನೂ ಇರಲಿಲ್ಲ. ಆದರೂ 'ದೀಗುಜ್ಜೆ (ದೀವಿ ಹಲಸು) ಪದಾರ್ಥ ತಿನ್ನುವ ಆಸೆಯಾಗಿದೆ. ಎಲ್ಲಾದರು ಸಿಕ್ಕಿದರೆ ತನ್ನಿ'ಎಂದು ಗುಲಾಬಿ ಹೇಳಿದಾಗ, ಗೋಪಾಲನಿಗೆ ನಗು ಬಂದಿತ್ತು. 'ದೀಗುಜ್ಜೆ ಅಲ್ವಾ, ನಾಳೆಯೇ ತರುತ್ತೇನೆ' ಎಂದು ಹೇಳಿದ್ದ.

ಆದರೆ, ಎಲ್ಲಿ ಹುಡುಕಿದರೂ... ಅವನಿಗೆ ದೀಗುಜ್ಜೆ ಸಿಗಲಿಲ್ಲ. ಊರೂರು ಸುತ್ತಿದ ಮೇಲೂ ಸಿಗದಿದ್ದಾಗ ಅವನಿಗೆ ಹತಾಶೆಯಾಯಿತು. ಬೇಸರದಿಂದಲೇ ಮನೆಗೆ ಹೋದ. ಆವಾಗ ಗೋಪಾಲನನ್ನು ಸಮಾಧಾನುಪಡಿಸಿದ್ದೂ ಇಸುಬು.

'ಇದಕ್ಕೆಲ್ಲಾ ಯಾರಾದರು ಬೇಸರಿಸುತ್ತಾರಾ... ನಾಳೆ ನನಗೆ ಉಡುಪಿಗೆ ಹೋಗಲಿಕ್ಕುಂಟು. ಅಲ್ಲಿಂದ ತರುತ್ತೇನೆ' ಎಂದಾಗ, ಗುಲಾಬಿಯೂ, ಗೋಪಾಲನೂ ತುಂಬಾ ಗೆಲುವಾಗಿದ್ದರು.

ಅಂದು ಮುಂಜಾನೆ ನಾಲ್ಕು ಗಂಟೆಗೆ ಗುಲಾಬಿಗೆ ಹೆರಿಗೆ ನೋವು ಕಾಣಿಸಿತು. ವಿಷಯ ತಿಳಿದು ಓಡಿ ಬಂದ ಬೀಪಾತುಮ್ಮಳ ಹಿಡಿತಕ್ಕೂ ಗುಲಾಬಿ ಸಿಗಲಿಲ್ಲ. ಆರು ಗಂಟೆ ವೇಳೆಗೆ

ಗುಲಾಬಿಗೆ ರಕ್ತಸ್ರಾವವಾಯಿತು. ಗೋಪಾಲನ ಕನಸೆಲ್ಲಾ ನುಚ್ಚುನೂರಾದಂತಾಯಿತು. ಗುಲಾಬಿ ಬದುಕುಳಿದದ್ದೇ ಪುಣ್ಯ.

ಇಸುಬುವಿನ ಎದೆಗೆ ಯಾರೋ ಚೂರಿಯಿಂದ ಇರಿದಂತಾಯಿತು. ಗರ್ಭಿಣಿಯ ಬಯಕೆ ಈಡೇರದ ಕಾರಣ ಹೀಗಾಗಿರಬೇಕು ಎಂದು ಆತ ಭಾವಿಸಿದ.

ದಿನ ಉರುಳುತ್ತಿತ್ತು.

ವರ್ಷವೂ ಉರುಳಿತು.

ಗುಲಾಬಿ ಮತ್ತೊಮ್ಮೆ ಗರ್ಭಿಣಿಯಾಗಿದ್ದಳು.

ಗೋಪಾಲನ ಮುಖದಲ್ಲಿ ನಗು ಹೊರಹೊಮ್ಮುತ್ತಿದೆ. ಆದರೂ ಪ್ರಥಮ ಹೆರಿಗೆ ಸಂದರ್ಭದಲ್ಲಾದ ಕಹಿ ಘಟನೆ ನೆನಪಾಗುತ್ತದೆ. ಈ ಬಾರಿ ಮತ್ತೆ ಅಂಥ ಸಂಕಟ ಎದುರಿಸು ವಂತಾಗಬಾರದು ಎಂದು ಅವ ಎಚ್ಚರ ವಹಿಸಿದ್ದ. ಅವನ ಜಾಗೃತ ಪ್ರಜ್ಞೆಗೆ ಇಸುಬು ಕೂಡ ಬೆಂಗಾವಲಾಗಿ ನಿಂತ. ಪ್ರತೀ ತಿಂಗಳು ವೈದ್ಯರ ಬಳಿ ಹೋಗಿ ಪರೀಕ್ಷಿಸತೊಡಗಿದರು. ಬೀಪಾತುಮ್ಮ ಹೆಜ್ಜೆ ಹೆಜ್ಜೆಗೂ ಧೈರ್ಯ ಕೊಟ್ಟರು.

ಗುಲಾಬಿಗೆ ಈಗ ಮೂರು ತಿಂಗಳು.

ಈ ತಿಂಗಳು ಅಂದ್ರೆ ಅಂತಿಂಥ ತಿಂಗಳಲ್ಲ. ಮುತ್ತು ನೆಬಿ ಮುಹಮ್ಮದ್ ಮುಸ್ತಫಾರು (ಪ್ರವಾದಿ ಪೈಗಂಬರ್) ಜನಿಸಿದ ತಿಂಗಳು. ಆ ಪ್ರಯುಕ್ತ ನಂಜೂರು ಮಸೀದಿಯಲ್ಲಿ 'ಬದ್ರ್‌ಪಾಟ್'ನ ಗೌಜಿ. ಊರಿಗೆ ಊರೇ ಉತ್ಸಾಹದಿಂದ ಪಾಲ್ಗೊಳ್ಳುತ್ತಿದೆ.

ಇಸುಬು ಎರಡೂ ದಿನವೂ ಮಸೀದಿಗೆ ಹೋಗಿದ್ದ. ಅಲ್ಲಿ ನಡೆದ ಎಲ್ಲವುಗಳನ್ನೂ ಗುಲಾಬಿ ಮತ್ತು ಗೋಪಾಲರಲ್ಲಿ ಹೇಳಿ ವರ್ಣಿಸಿದ್ದ. ಮಸೀದಿಯಲ್ಲಿ ಕಡಿಮೆ ಬೆಲೆಗೆ ಕೋಳಿ ಮೊಟ್ಟೆ ಏಲಂ ಆಗುತ್ತದೆ ಎಂಬ ಸಂಗತಿ ಗುಲಾಬಿಗೆ ಗೊತ್ತಾದೊಡನೆ, ಆಕೆಗೆ ಹೊಸ ಬಯಕೆಯೊಂದು ಮೊಳಕೆಯೊಡೆಯಿತು. 'ಹರಕೆಯ ಹೆಸರಲ್ಲಿ ಬಂದ ಮೊಟ್ಟೆ ತಿಂದರೆ, ಹೊಟ್ಟೆಯಲ್ಲಿದ್ದ ಮಗುವಿನ ಆರೋಗ್ಯಕ್ಕೆ ಒಳ್ಳೆಯದು' ಎಂದು ಆಕೆ ಭಾವಿಸಿದಳು. ಅದನ್ನು ಇಸುಬುವಿನಲ್ಲಿ ಹೇಳಿಯೂ ಬಿಟ್ಟಳು. ಆವಾಗ ಅವನಿಗೆ ಗುಲಾಬಿಯ ದೀಗುಜ್ಜೆಯ ಬಯಕೆ ನೆನಪಾಯಿತು.

'ಅದಕ್ಕೇನಂತೆ, ಅಕ್ಕಾ... ನಾಳೆಯೇ ಏಲಂ ಮೂಲಕ ಮೊಟ್ಟೆ ಖರೀದಿಸುತ್ತೇನೆ' ಎಂದು ಇಸುಬು ಭರವಸೆ ಕೊಟ್ಟಿದ್ದ.

ಇಸುಬು ಹೇಳಿದ್ದೇನೋ ಹೌದು. ಆದರೆ, ಮಸೀದಿಯಲ್ಲಿ ನಡೆದದ್ದೇ ಬೇರೆ. ಕೊನೆಯ ದಿನ ಹರಕೆ ರೂಪದಲ್ಲಿ ಬೇರೆ ಬೇರೆ ವಸ್ತು ಬಂದಿದ್ದರೂ, ಮೊಟ್ಟೆ ಅಂತ ಒಂದು ಮಾತ್ರ ಬಂದಿತ್ತು. ಒಂದುವರೆ ರೂಪಾಯಿಯ ಮೊಟ್ಟೆ, ಮುನ್ನೂರ ಅರುವತ್ತು ರೂಪಾಯಿಗೆ ಏಲಂ ಆಗುತ್ತಿತ್ತು.

ಮುನ್ನೂರ ಅರುವತ್ತು ರೂಪಾಯಿ !.

ಇಸುಬಿಗೆ ತನ್ನ ಕಣ್ಣಿಗೆ ಬಟ್ಟೆ ಕಟ್ಟಿ ಬಿಟ್ಟಂತಾಯಿತು.

ಅವನ ಕಿಸೆಯಲ್ಲಿ ಅಷ್ಟು ಹಣವೂ ಇತ್ತು. ಪ್ರೀತಿಯ ಗೆಳೆಯನ ಹೆಂಡತಿಗಾಗಿ ಅಷ್ಟು ಹಣ ಖರ್ಚು ಮಾಡಲು ಹಿಂದೇಟು ಹಾಕುವವನೂ ಅಲ್ಲ. ಆದರೆ, ಆ ಕೂಟದಲ್ಲಿ ಅವನಿಗೆ ಉಸಿರೆತ್ತಲು ಅವಕಾಶವೇ ಸಿಗಲಿಲ್ಲ.

ಹಣವಂತರಿಗೆ, ಏಲಂ ಏರಿಸುತ್ತಾ ಹೋಗುವುದು ಕುಶಾಲು. ಅವರೆದುರು ನಿಂತು ಗುಜರಿ ಆಯುವವನು ಏಲಂಗೆ ಸವಾಲು ಎಸೆದರೆ, ಊರವರು ಏನೆಂದಾರು ?. ಅದೂ ಅಲ್ಲದೆ, ಇದೀಗ ಏಲಂ ಕಡೆಯಿಂದ ಕೂಗಿದ್ದು ಊರಿನ ಹಿರಿಯ ಗಣ್ಯ ವ್ಯಕ್ತಿಯೂ ಹಾಮದಾಜಿಯಾರರು.

'ಏನು ಮಾಡಲಿ, ತನ್ನ ಮತ್ತು ಗೋಪಾಲನ ನಡುವಿನ ಗೆಳೆತನ ಊರಿನ ಬಹುತೇಕ ಮಂದಿಯ ಕಣ್ಣು ಕುಕ್ಕಿದೆ. ಹಾಗಿರುವಾಗ ಹಾಜಿಯಾರರಿಗೆ ಎದುರು ನಿಂತು, ಹರಕೆಯ ಮೊಟ್ಟೆಯನ್ನು ಗುಲಾಬಿಗೆ ತೆಗೆದುಕೊಟ್ಟ ವಿಷಯ ಗೊತ್ತಾದರೆ, ಏನು ಹೇಳಿಯಾರು ? ಹಾಗಂತ, ಗರ್ಭಿಣಿಯ ಬಯಕೆಯನ್ನು ಈಡೇರಿಸದಿದ್ದರೆ, ನಾನಿದ್ದೂ ಏನು ಪ್ರಯೋಜನ ? ಅದನ್ನು ಅಲ್ಲಾಹು ಮೆಚ್ಚಿಯಾನಾ ? ನಾಳೆ ಯಾರಾದರು, ಹಾಮದಾಜಿಗೆ ವಿಷಯ ಹೀಗ್ಹೀಗೆ ಅಂತ ಹೇಳಿದರೆ...'- ಇಸುಬು ಯೋಚಿಸುತ್ತಲೇ ಇದ್ದ.

'ಮೂರನೇ ವಾರ್... ಮುನ್ನೂರ ಅರುವತ್ತು ರೂಪಾಯಿ'ಯನ್ನು ಚೆನ್ನಾಗಿ ನೋಡುತ್ತಿದ್ದರು. ನನ್ನ ಮದುವೆಯಾದ ಒಂದೇ ವರ್ಷದಲ್ಲಿ ತಂದೆ ಇಹಲೋಕ ತ್ಯಜಿಸಿದರು. ನಂತರ ಒಂದೊಂದೇ ವರ್ಷದ ಅಂತರದಲ್ಲಿ ಮೂರು ಮಕ್ಕಳನ್ನು ಹೆತ್ತೆ. ಮೂರೂ ಹೆಣ್ಮಕ್ಕಳಾದ ಕಾರಣ ನನ್ನವರು ತುಂಬಾ ಬೇಸರದಿಂದಿದ್ದರು. ಆದರೂ ಮಕ್ಕಳಿಗೆ ಯಾವುದರಲ್ಲೂ ಕೊರತೆ ಇರಲಿಲ್ಲ. ಒಂದು ಗಂಡು ಮಗುವಾಗಲಿ ಎಂದು ಆಗಾಗ ದುಆ ಮಾಡುತ್ತಲೇ ಇದ್ದರು. ಐದು ವರ್ಷದ ನಂತರ ಇಸಾಕ್‌ಗೆ ಜನ್ಮ ನೀಡಿದೆ. ಆ ಕುಶಿಯಲ್ಲಿ ಊರಿಗೆ ಸಿಹಿ ತಿಂಡಿ ಹಂಚಿದರು. ಒಟ್ಟಾರೆ ನಮ್ಮ ಬದುಕು ಹಸನಾಗಿಯೇ ಸಾಗುತ್ತಿತ್ತು. ನನ್ನವರಿಗೆ ಧನಿಯನ್ನು ಕರೆದುಕೊಂಡು ಆಗಾಗ ಕಾಸರಗೋಡಿಗೆ ಹೋಗಲಿಕ್ಕಿತ್ತು. ಹಾಗೇ ಒಂದು ದಿನ ಅಪಘಾತದಲ್ಲಿ ಧನಿ ಸಮೇತ ಅವರು ಮೃತಪಟ್ಟರು' ಎಂದು ಹೇಳಲೂ ನೆಫಿಸಾಳಿಗೆ ಆಗಲಿಲ್ಲ.

ಮೈಮುನಾ, ನೆಫಿಸಾಳ ಮುಖ ನೋಡುತ್ತಾ ಉಗುಳು ನುಂಗಿದಳು.

'ನಂತರ ನಾನು ಏನು ಮಾಡಲಿ ?ಯಾರ ಬಳಿ ಹೋಗಲಿ ? ಅವರೇ ಮಾಡಿಕೊಟ್ಟ ಚಿನ್ನದ ಒಡವೆ ಒಂದೊಂದೇ ಖಾಲಿಯಾತೊಡಗಿತು. ಅಂದ್ರೆ ಅದನ್ನು ಮಾರಿ ಕೆಲಕಾಲ ಮಕ್ಕಳ ಹೊಟ್ಟೆ ತುಂಬಿಸಿದೆ. ಅದೂ ಖಾಲಿಯಾದ ಮೇಲೆ ಉಪಾಯವಿಲ್ಲದೆ ಕೆಲಸ ಹುಡುಕಿ ಮನೆ ಮನೆ ಅಲೆದೆ. ಆದರೆ ಮಕ್ಕಳಿದ್ದ ಕಾರಣ ಯಾರೂ ಕೆಲಸ ಕೊಡಲಿಲ್ಲ. ನನ್ನವರ ಮನೆಯೊಂದಿದೆ.

ಅದಿಲ್ಲದಿದ್ದರೆ ನಾನು ಬೀದಿ ಪಾಲಾಗುತ್ತಿದ್ದೆ. ಆದರೆ, ಎಲ್ಲಿಂದ ಹೊಟ್ಟೆ ತುಂಬಿಸಲಿ, ನನಗೆ ಯಾರಿದ್ದಾರೆ'- ನೆಫಿಸಾ ಮತ್ತೊಮ್ಮೆ ಕಣ್ಣೀರು ಒರೆಸಿದಳು.

'ನೆಫಿಸಾ... ಯಾರೂ ಇಲ್ಲ ಎಂದು ಯಾಕೆ ಹೇಳುತ್ತೀಯಾ.. ನಿನಗೆ ನಾನಿಲ್ವ . ನೀನೇನು ತಲೆಬಿಸಿ ಮಾಡಬೇಡ. ಸ್ವಲ್ಪ ಹೊತ್ತಿನಲ್ಲಿ ನನ್ನವರು ಬರ್ತಾರೆ. ಖಂಡಿತಾ, ಅವರು ಏನಾದರು ಮಾಡುತ್ತಾರೆ'ಎಂದು ಹೇಳಿ ಮೈಮುನಾ, ನೆಫಿಸಾಳಿಗೆ ಧೈರ್ಯ ನೀಡಿದಳು.

ಕಾಲ್ ಬೆಲ್ ರಿಂಗಾಯಿತು.

ಅಸ್ಸಲಾಂ ಅಲೈಕುಂ ಎನ್ನುತ್ತಾ ಬಶೀರ್ ಮನೆಯೊಳ ಹೊಕ್ಕರು. ಅಲ್ಲಿ ಪುಟ್ಟ ಮಕ್ಕಳಿರುವುದನ್ನು ಕಂಡು ಒಮ್ಮೆ ಆಶ್ಚರ್ಯಗೊಂಡು, ಒಳಗೊಮ್ಮೆ ಕಣ್ಣು ಹಾಯಿಸಿದರು. ಹೆಂಡತಿಯ ಜತೆ ಹೆಂಗಸೊಬ್ಬಳು ಮಾತನಾಡುತ್ತಿರುವುದು ಕಂಡಿತು. ಮೈಮುನಾ ಹೊರ ಬಂದು ಎಲ್ಲಾ ವಿಷಯ ತಿಳಿಸಿದಳು.

ಅಲ್ಲೇ ಇದ್ದ ಹೆಣ್ಮಕ್ಕಳನ್ನು ಹತ್ತಿರ ಕರೆದು 'ಹೆಸರೇನು, ಶಾಲೆಗೆ ಹೋಗುತ್ತೀರಾ, ಎಷ್ಟನೇ ಕ್ಲಾಸು' ಎಂದೆಲ್ಲಾ ಔಪಚಾರಿಕವಾಗಿ ಕೇಳಿದರು.

ನೆಫಿಸಾ ಮತ್ತು ಆ ಮಕ್ಕಳ ಕುರಿತು ಬಶೀರ್ ಅಲ್ಲೇ ಕುಳಿತು ಯೋಚಿಸತೊಡಗಿದರು. ಹಾಗೇ ಮನದಲ್ಲೊಂದು ಯೋಜನೆ ರೂಪುಗೊಂಡಿತು. ಮೊದಲು ಮಕ್ಕಳಿಗೆ ಶಿಕ್ಷಣ ಕೊಡಬೇಕು. ನಂತರ ದೊಡ್ಡವಳಿಗೆ ಟೈಲರಿಂಗ್ ಶಿಕ್ಷಣ ಕೊಡಿಸಿ ಒಂದು ಹೊಲಿಗೆ ಯಂತ್ರವನ್ನೂ ತೆಗೆದು ಕೊಡಭೇಕು. ಇದೆಲ್ಲಾ ಆಗಲು ಕೆಲವು ವರ್ಷ ಬೇಕು. ಆವರೆಗೂ ಅವಳ ಮನೆ ಖರ್ಚನ್ನು ನಾನೇ ನೋಡಬೇಕು ಎಂಬ ನಿರ್ಧಾರಕ್ಕೆ ಬಂದ ಬಶೀರ್ ಅದನ್ನು ಹೆಂಡತಿಯ ಮುಂದೆ ಹೇಳಿದರು.

ಗಂಡನ ಆ ನಿರ್ಧಾರ ಕೇಳಿ ಮೈಮುನಾ ಸಂತಸಗೊಂಡಳು. ಓಡಿ ಹೋಗಿ ಬಾಲ್ಯದ ಗೆಳತಿ ನೆಫಿಸಾಳಲ್ಲಿ ಎಲ್ಲವನ್ನೂ ತಿಳಿಸಿದಳು. ಅವಳಿಗೂ ಅದನ್ನು ನಂಬಲಿಕ್ಕೆ ಆಗಲಿಲ್ಲ. ಈ ಕಾಲದಲ್ಲಿ ಇನ್ನೊಬ್ಬರ ಕಷ್ಟಕ್ಕೆ ಹೀಗೆ ಇಷ್ಟೊಂದು ಉದಾರತೆಯಿಂದ ಸ್ಪಂದಿಸುವವರಿದ್ದಾರಾ ? ಎಂದು ನೆಫಿಸಾ ತನ್ನಲ್ಲೇ ಕೇಳಿಕೊಂಡು 'ನಿಮ್ಮ ಈ ಉಪಕಾರವನ್ನು ನಾನು ಯಾವತ್ತೂ ಮರೆಯಲಾರೆ' ಎನ್ನುತ್ತಾ ದುಃಖ, ಸಂತಸದ ಕಣ್ಣೀರು ಹಾಕಿದಳು.

'ಇದು ಉಪಕಾರ ಅಲ್ಲಮ್ಮಾ... ಮನುಷ್ಯತ್ವ. ಕಷ್ಟದಲ್ಲಿರುವವರಿಗೆ ಸಹಾಯ ಮಾಡದಿದ್ದರೆ, ಅವ. ಮನುಷ್ಯನೇ ಅಲ್ಲ' ಎಂದು ಬಶೀರ್ ನುಡಿದರು. ಗಂಡನ ಆ ಮಾತು ಕೇಳಿದ ಮೈಮುನಾ 'ಬಾ... ಅಲ್ಲಾಹನಿಗೆ ಲಕ್ಷ ಲಕ್ಷ ಶುಕ್ರ್ ಹೇಳೋಣ. ಎರಡು ರಕಅತ್ ನಮಾಝ್ ಮಾಡೋಣ'ಎನ್ನುತ್ತಾ ನೆಫಿಸಾಳನ್ನು ಕರೆದಳು. ನೆಫಿಸಾಳಿಗೆ ಕನಸಿನ ಲೋಕಕ್ಕೆ ಹೋಗಿ ಬಂದಂತಹ ಅನುಭವವಾಯಿತು. ಅವಳು ಸಂತಸ ತಡೆಯಲಾರದೆ, ಮೈಮುನಾಳ ಹಿಂದೆ ಹೆಜ್ಜೆ ಹಾಕಿದಳು.

* * *

# ನಮ್ಮಂಥವರು...

ರಝಿಯಾ ಎಸ್‌ಜೆಬಿ, ಹಳೆಯಂಗಡಿ

ಆ ಮನೆಯಲ್ಲಿಡೀ ಸಂಭ್ರಮ, ಸಡಗರ.

ಕೆಲವು ಹೆಂಗಸರು ಕೆಲಸದಲ್ಲಿ, ಮತ್ತೆ ಕೆಲವು ಹೆಂಗಸರು, ಹುಡುಗಿಯರು ಅಲ್ಲಲ್ಲಿ ಕುಳಿತೋ, ನಿಂತು ಮಾತಿನಲ್ಲಿ ತಲ್ಲೀನರಾಗಿದ್ದಾರೆ. ಪುಟ್ಟ ಮಕ್ಕಳು ಅಲ್ಲಿಂದಿಲ್ಲಿಗೆ ಓಡುತ್ತಾ ಆಟವಾಡುತ್ತಿದ್ದರು. ಮಕ್ಕಳ ನಗು, ಕೂಗು, ಹಾರಾಟ, ಚೀರಾಟ ಎಲ್ಲವೂ ಅಲ್ಲಿತ್ತು. ಹಿರಿಯರು ವೀಳ್ಯ ಬಾಯಿಗೆ ಹಾಕುತ್ತಾ ಮೆಲ್ಲುತ್ತಿದ್ದರು. ಯುವಕರು, ಮಧ್ಯ ವಯಸ್ಕರು ಕೆಲಸದಲ್ಲಿ ಮಗ್ನರಾಗಿದ್ದರು.

ಇವೆಲ್ಲದರ ಮಧ್ಯೆ ಮೊಯಿಲಾಂಜಿ ಹಾಡು ಅಲೆ ಅಲೆಯಾಗಿ ತೇಲಿ ಬರುತ್ತಿತ್ತು.

ಮೊಯಿಲಾಂಜಿ ಅರಚ್ಚಲ್ಲೋ ಮಲರ್‌ಕೈಯಿಲ್ ಪದಿಚ್ಚಲ್ಲೊ

ಮೈಕಣ್ಣಿಲ್ ಕಿನಾವಿವಲೊಳಿಪಿಚ್ಚಲ್ಲೊ... ನಲ್ಲ

ಶಾಕಿರಾ ಪೆನ್ನಿವಳ್‌ಕಿನ್ನ್ ನಿಕಾಹಾನಲ್ಲೊ...

(ಮದರಂಗಿ ಅರೆದು ಅಂಗೈಗೆ ಇಟ್ಟಾಯಿತು. ಮಂಪಾದ ಕಣ್ಣಿಗೆ ಕನಸು ಕೊಟ್ಟಾಯಿತು. ಶಾಕಿರಾ ಹೆಣ್ಣಿಗೆ ಈವತ್ತು ಮದುವೆಯಲ್ಲಾ...)

ಅಲ್ಲಿ ಸೇರಿದ್ದ ಹೆಣ್ಮಕ್ಕಳು ಭಾರೀ ಕುಶಿಯಿಂದ ಅದಕ್ಕೆ ಧ್ವನಿಗೂಡಿಸುತ್ತಿದ್ದರು. ನಿನ್ನೆ ಮದರಂಗಿ ರಾತ್ರಿಯಂದೂ ಅವರದ್ದೇ ದರ್ಬಾರು. ಮದುಮಗಳು ಶಾಕಿರಾ ಕೋಣೆಯೊಳಗೆ ಶೃಂಗರಿಸಿದ್ದ ಮಂಚದಲ್ಲಿ ತಲೆ ಅಡ್ಡವಿಟ್ಟು ಕುಳಿತಿದ್ದಳು. ಕೋಣೆಯೊಳ ಹೊಕ್ಕ ಹೆಂಗಸರೆಲ್ಲಾ ಶಾಕಿರಾಳನ್ನು

ತಮಾಷೆ ಮಾಡುತ್ತಿದ್ದರು. ಆದರೆ, ಶಾಕಿರಾ ಯಾರಲ್ಲೂ ಮಾತನಾಡುತ್ತಿರಲಿಲ್ಲ. ಅವಳ ಮನದ ಮೂಲೆಯಲ್ಲಿ ಭಾವನೆಗಳು ಅಲೆದಾಡುತ್ತಿತ್ತು.

ವಧುಪರೀಕ್ಷೆಯ ಸಂದರ್ಭ ನೋಡಿದ್ದ ಮದುಮಗನ ಮುಖ ಈಗ ಅವಳ ಕನಸನ್ನು ಅರಳಿಸುತ್ತಿತ್ತು. ಪ್ರೀತಿಯಿಂದ ಸಾಕಿದ ತಂದೆ, ತಾಯಿಯನ್ನು ಅಗಲುವಾಗಿನ ಬೇಸರದ ಕಣ್ಣೀರು ತೊಯ್ದಾಡತೊಡಗಿತು.

'ಮೋಳೇ, ನಿನ್ನ ನಿಕಾಹ್‌ಗಾಗಿ ನಾವು ಹೋಗುತ್ತಿದ್ದೇವೆ. ನಿನ್ನ ಒಪ್ಪಿಗೆ ತಾನೆ'- ಉಮರಾಕ ಮಗಳ ಬಳಿ ಹೋಗಿ ಕೇಳಿದಾಗಲೂ ಶಾಕಿರಾ ಮಾತನಾಡಲಿಲ್ಲ. ಅಲ್ಲೇ ಕುಳಿತಿದ್ದ ಶಾಹಿದಕ್ಕ ಅವಳನ್ನು ಎಬ್ಬಿಸಿ ಕುಳ್ಳಿರಿಸಿದರು. ಹ್ಞೂಂ ಅನ್ನು ಎಂದರು. ಉಮರಾಕ ಮತ್ತೊಮ್ಮೆ 'ಒಪ್ಪಿಗೆ ತಾನೆ' ಎಂದು ಕೇಳಿದರು. ಶಾಕಿರಾ ಹ್ಞೂಂ ಎಂಬಂತೆ ತಲೆ ಅಲ್ಲಾಡಿಸಿದಳು.

ಹೊರಗೆ ನಿಕಾಹ್ ವಿಧಿ ಪೂರೈಸುವುದಕ್ಕಾಗಿ ಮದುಮಗನ ಮನೆಗೆ ಧಾವಿಸುವ ಧಾವಂತ. ಉಮರಾಕ ಬಿಳಿ ಬಟ್ಟೆ ಬರೆ ಧರಿಸಿದ್ದರು. ಶಾಕಿರಾಳ ತಮ್ಮಂದಿರಾದ ಆರಿಫ್, ಶರೀಫ್ ಮದುಮಗನ ಮನೆಯತ್ತ ಹೊರಟು ನಿಂತಿದ್ದವರಿಗೆ ಕುಡಿಯಲು ಶರ್ಬತ್ತ್ ಕೊಡುತ್ತಿದ್ದರು.

ಕ್ಷಣಾರ್ಧದಲ್ಲಿ ಗಂಡಸರೆಲ್ಲಾ ಮದುಮಗನ ಮನೆಗೆ ವಾಹನವೇರಿ ಹೊರಟು ಹೋದರು. ತದನಂತರ ಆ ಮನೆಯಲ್ಲಿ ಹೆಂಗಸರದ್ದೇ ಕಾರುಬಾರು. ಸೌದಾ, ಹಮೀದಾ, ಹಲೀಮಾ ಹೆಂಗಸರು, ಮಕ್ಕಳಿಗೆ ಕುಡಿಯಲು ಶರ್ಬತ್ ಕೊಡುತ್ತಿದ್ದರು.

ಶಾಕಿರಾಳ ತಂಗಿ ರಹ್ಮತ್‌ಳ ಜತೆ ದೂರದ ಸಂಬಂಧಿ ಹುಡುಗಿ ಸಕೀನಾ ತಿರುಗಾಡುತ್ತಿದ್ದಳು. ಸಕೀನಾ ತಂದೆ ಇಲ್ಲದ ಕಡುಬಡ ಹುಡುಗಿ. ರಹ್ಮತ್‌ಗೆ ಸಕೀನಾ ಅಂದರೆ ತುಂಬಾ ಪ್ರೀತಿ. ತನ್ನ ಹಳೆಯ ಬಟ್ಟೆಬರೆಗಳನ್ನು ಸಕೀನಾಳಿಗೆ ಕೊಡುವಂತೆ ಹೇಳಿ, ಅವಳ ತಾಯಿ ಬಂದಾಗಲೆಲ್ಲಾ ಅದನ್ನು ಕಟ್ಟಿ ಕೊಡುತ್ತಿದ್ದಳು. ಅಕ್ಕನ ಮದುವೆಗೆ ಸಕೀನಾಳನ್ನು ಕರೆದುಕೊಂಡು ಬರಲೇಬೇಕು ಎಂದು ರಹ್ಮತ್ ತಾಕೀತು ಮಾಡಿದ್ದಳು. ಹಾಗಾಗಿ ಅವರು ಶಾಕಿರಾಳ ಮದುವೆಗೆ ಸಕೀನಾಳನ್ನು ಕರೆದುಕೊಂಡು ಬಂದಿದ್ದರು.

ರಹ್ಮತ್ ಕೆಲಸ ಮಾಡುವಾಗಲೆಲ್ಲಾ ಸಕೀನಾ ಕೂಡ ಕೈ ಜೋಡಿಸತೊಡಗಿದಳು. ಹೇಳಿದ ಕೆಲಸಗಳನ್ನು ಮಾಡುತ್ತಾ, ಮನೆಯ ಒಳಗೆ-ಹೊರಗೆ ಹೋಗುತ್ತಾ ಸಕೀನಾ ಎಲ್ಲರ ಕಣ್ಣಿಗೆ ಬಿದ್ದಿದ್ದಳು.

ನಿಕಾಹ್‌ನ ವಿಧಿ ಪೂರೈಸಿಯಾಗಿತ್ತು. ಮದುಮಗನ ಮನೆಯತ್ತ ಹೋದವರು ಮರಳಿ ಬಂದಿದ್ದರು. ಕಾರು, ವ್ಯಾನ್, ಜೀಪಿನಿಂದ ಜನ ಇಳಿಯತೊಡಗಿದರು.

ಅಡಿಗೆ ತಲೆ ಹಾಕಿ ಕುಳಿತಿದ್ದ ಮದುಮಗಳ ಶೃಂಗಾರ ಮಾಡಲಾಗುತ್ತಿತ್ತು. ಶಾಹಿದಕ್ಕ, ಸೌದ, ಫರೀದಾ ಬಾಬಿ ಹೀಗೆ ಎಲ್ಲರ ಕೈ ಶಾಕಿರಾಳ ಮೈಮೇಲೆ ಎಳೆದಾಡಿದವು. ರೇಷ್ಮೆ ಸೀರೆ ತೊಡಿಸುವಾಗ ಕೆಲವರು ಬಾಗಿಲ ಬಳಿ ಬಂದು ಹಾಡತೊಡಗಿದರು. ಅಕ್ಕಳನ್ನು ಶೃಂಗರಿಸುವುದನ್ನು

ತಂಗಿ ರಹ್ಮತ್ ಅಲ್ಲೇ ನಿಂತು ನೋಡುತ್ತಿದ್ದಳು. ಸಕೀನಾ ಕೂಡ ರಹ್ಮತ್‌ಳ ಬಳಿಯಿಂದ ಮಿಸುಕಾಡಲಿಲ್ಲ. ಮದುಮಗಳ ಕಿವಿಗೆ ಬೆಂಡೋಲೆ ಹಾಕುವಾಗ ಅದರ ಅಂಡೆಯೊಂದು ಕೆಳಗೆ ಬಿತ್ತು.

'ರಹ್ಮತ್... ಬಾಗಿಲು ತೆಗೆಯಬೇಡ. ಬೆಂಡೋಲೆಯ ಅಂಡೆ ಕೆಳಗೆ ಬಿದ್ದಿದೆ' ಎಂದು ಶಾಹಿದಕ್ಕ ಹೇಳಿ ಹುಡುಕತೊಡಗಿದರು. ಆದರೆ, ಎಷ್ಟು ಹುಡುಕಾಡಿದರೂ ಬೆಂಡೋಲೆಯ ಅಂಡೆ ಸಿಗಲಿಲ್ಲ. ಎಲ್ಲರಿಗೂ ಆಶ್ಚರ್ಯ, ಆತಂಕ. ಹೊರಗಡೆ ಇದ್ದವರಿಗೆ ಸುದ್ದಿಯಾದರೆ, ಅದೊಂದು ರಂಪಾಟವಾದೀತು ಎಂದು ಭಾವಿಸಿ ಅವರು ಅಲ್ಲೇ ಹುಡುಕತೊಡಗಿದರು. ಆದರೆ ಅದು ಸಿಲೇ ಇಲ್ಲ.

'ಯಾ ಅಲ್ಲಾಹ್... ಏನಾಯಿತು. ಈ ಅಂಡೆ ಸಿಕ್ಕಿದರೆ ನಾನು ಎರಡು ರಕಅತ್ ಸುನ್ನತ್ ನಮಾಜ್ ಮಾಡುವೆ'-ಶಾಹಿದಕ್ಕ ಹರಕೆ ಇಟ್ಟರು. ಒಳಗಂತೂ ಇಲ್ಲ, ಹೊರಗಾದರೂ ಸಿಕ್ಕೀತಾಂತ ನೋಡುವ ಎಂದು ಹೇಳಿ ಬಾಗಿಲು ತೆಗೆದು ಎಲ್ಲರೂ ಹೊರಗೆ ಬಂದರಲ್ಲದೆ, ಹುಡುಕತೊಡಗಿದರು. ಅಲ್ಲಿ ಹೆಂಗಸರು ಗುಂಪು ಗುಂಪಾಗಿದ್ದರೂ ಯಾರ ಕಣ್ಣಿಗೂ ಕಾಣದ ಹಾಗೆ, ಬೆಂಡೋಲೆಯ ಅಂಡೆ ಸಿಕ್ಕಿತು. ಶಾಹಿದಕ್ಕಳಿಗೆ ಸಂತಸದ ಜತೆ ಆಶ್ಚರ್ಯವೂ ಆಯಿತು.

ಮದುಮಗಳು ಶಾಕಿರಾಳನ್ನು ಹೊರಗೆ ಕರೆತರಲಾಯಿತು. ಅಲ್ಲೇ ಕುರ್ಚಿಯ ಪಕ್ಕ ನಿಂತಿದ್ದ ಬೀಪಂದಾದ 'ಒಂದು ಬಿಳಿ ಮುಂಡು ತಾ' ಎಂದು ರಹ್ಮತ್‌ಳಲ್ಲಿ ಹೇಳಿದರು. ರಹ್ಮತ್ ಬಿಳಿ ಮುಂಡು ತಂದು ಬೀಪಂದಾದರ ಕೈಗೆ ಕೊಟ್ಟಳು.

'ಆರ್ ಸೇರ್ ಜಮಾತ್‌ರಂಜಲೇ... ಮೂನ್ ಸೇರ್ ಜಮಾತ್‌ರಂಜಲೇ... ಮುಕ್ರಿ ಮೊಯಿಲಾರ್‌ಮಾರೋ ಪೆಂಞಾಯಿಮ್ಮಾರೆ... ಚುತ್ತು ಸೇರಿಯೋ ಪೆನ್ನಿಂಜಲೇ... ನಿಂಕೆಲ್ಲಾರ್‌ಗುಂ ಪುದೆ ಪೆಣ್ಣ್‌ಗೆ ದಳಿ ಬಿರಿಕ್ಕ್‌ರೆ ಸಮ್ಮತಮಾ?' (ಮುಸ್ಲಿಂ ಮೊಹಲ್ಲಾದ ಜನರೇ... ಮಸೀದಿಯ ಗುರುಗಳ ಪತ್ನಿಯರೇ... ಸುತ್ತಮುತ್ತ ಸೇರಿದ ಹೆಂಗಸರೇ... ನಿಮಗೆ 'ದಳಿ' ಹಾಕುವುದು ಸಮ್ಮತವಾ? ಎಂದು ಬೀಪಂದಾದ ಕೇಳಿದರು. (ಇದು ಬ್ಯಾರಿಗಳ ಮದುವೆಯ ವೇಳೆ ನಡೆಯುವ ಒಂದು ಪದ್ಧತಿಯಾಗಿದೆ. ಮುಸ್ಲಿಮ್ ಮೊಹಲ್ಲಾದ ಎಲ್ಲರ ಒಪ್ಪಿಗೆ ಪಡೆಯುವುದು ಇದರ ತಿರುಳಾಗಿದೆ)

'ನಮಗೆಲ್ಲರಿಗೂ ಒಪ್ಪಿಗೆ'- ಅಲ್ಲಿದ್ದ ಎಲ್ಲರೂ ಹೇಳಿದಾಗ, ಬೀಪಂದಾದ ಬಿಸ್ಮಿ ಹೇಳಿ ಕುರ್ಚಿಗೆ ಬಿಳಿ ಮುಂಡು ಹಾಸಿದರು. ಸೌದ ಬಾಬಿ ಮದುಮಗಳನ್ನು ಕರೆದುಕೊಂಡು ಬಂದು ಬಿಳಿ ಮುಂಡು ಹಾಸಲ್ಪಟ್ಟ ಕುರ್ಚಿಯಲ್ಲಿ ಕುಳಿತುಕೊಂಡಳು. ಒಂದು ದೊಡ್ಡ ಬಟ್ಟಲಲ್ಲಿ ಮೇಣದ ಬತ್ತಿ, ಎಣ್ಣೆ, ಪೌಡರ್, ಕ್ಲಿಪ್, ರಬ್ಬರ್ ಇತ್ಯಾದಿ ವಸ್ತುವನ್ನು ಇಟ್ಟರು. ಬಟ್ಟಲಲ್ಲಿದ್ದ ಮೇಣದ ಬತ್ತಿಯನ್ನು ಇಬ್ಬರು ಪುಟ್ಟ ಬಾಲಕಿಯರು ಕೈಯಲ್ಲಿ ಹಿಡಿದು ಮದುಮಗಳ ಅಕ್ಕಪಕ್ಕ ನಿಂತರು. ಮದುಮಗಳ ಹೂವಿನ ಬಟ್ಟಲನ್ನು ಹಿಡಿದ ಹೆಣ್ಣಿನ ಬಳಿ ಇತರ ಹೆಣ್ಮಕ್ಕಳು ನಾನು ನಾನೂಂತ ಹೇಳಿ ಮುಂದೆ ಬರುತ್ತಿದ್ದರು. ರಹ್ಮತ್ ಅದನ್ನು ಯಾರಿಗೂ ಕೊಡದೆ ಗಟ್ಟಿಯಾಗಿ ಹಿಡಿದಿದ್ದಳು. ಅಷ್ಟರಲ್ಲಿ ಬಿ.ಎ. ಶಂಸುದ್ದೀನ್‌ರ ಹಾಡು ಟೇಪ್‌ರೆಕಾರ್ಡರ್‌ನಲ್ಲಿ ಕೇಳಿ ಬರತೊಡಗಿತು.

ಪುದೆ ಪೆಣ್ಣ್ ಚಮಕೊಗು ದೈಕುರೆಲ್ಲಾ...

ಒಟ್ಟುಗು ಕೈ ಕೊಟ್ಟಿ ಪಾಡುರೆಲ್ಲಾ...

ಪಾ...ಟ್ ಕೇಕೂರೆಲ್ಲಾ.......

(ಮದುಮಗಳನ್ನು ಶೃಂಗರಿಸಲು ಎಲ್ಲರೂ ಕುಳಿತು ಕೊಳ್ಳಿ. ಚಪ್ಪಾಳೆ ತಟ್ಟಿ ಹಾಡಿರಿ)

'ಪೋತು ಬಲೆ' ತೆಗೆದಾದ ನಂತರ ಹೂವಿನ ಎಣ್ಣೆ ಹಾಕಿ ತಲೆ ಬಾಚಲಾಯಿತು.

ಮುತ್ತಾಯೊ ಕಣ್ಮನಿ ಪುದೆಪೆಣ್ಣ್‌ಗ್...

ಕಿನ್‌ಕಾಪುರೆ ತುನಿ ಉರ್‌ತೋ ಈ ಮೇಲ್‌ಗ್

ಎಲ್ಲಾ ಬಂಗಾರ್‌ಡೆಂ... ನಾ ಬೈಕ್‌ರೇ...ಸಂದೋಲತ್ತ್...

( ಮುತ್ತು ಕಣ್ಮನಿ ಮದುಮಗಳ ಈ ಮೈಗೆ ಮಿನುಗುವ ಸೀರೆ ತೊಡಿಸಿ ಎಲ್ಲಾ ಚಿನ್ನವನ್ನು ಹಾಕೋಣ)

ಶರೀಫ್ ಕುಶಿಯಿಂದ ಅತ್ತಿತ್ತ ಓಡಾಡುತ್ತ ಫೋಟೋ ತೆಗೆಯುತ್ತಿದ್ದ. ಪುಟ್ಟ ಮಕ್ಕಳಿಗೆ ಮದುಮಗಳನ್ನು ಕಣ್ತುಂಬ ನೋಡುವ ಆಶೆ. ಮದುಮಗಳ ತಲೆ ತುಂಬ ಮಲ್ಲಿಗೆ ಹೂವು. ಹಾಗಾಗಿ ಅಲ್ಲಿ ಮತ್ತಷ್ಟು ಪರಿಮಳ. ಶಾಕಿರಾಳ ಅಜ್ಜಿ ಮೊಮ್ಮಗಳನ್ನು ನೋಡಲೆಂದು ಅಲ್ಲಿಗೆ ಮೆಲ್ಲನೆ ಬಂದರು. ಹಾಗೇ ಹತ್ತಿರ ನಿಂತು ಕಣ್ತುಂಬುವಂತೆ ನೋಡಿದರು.

'ಶಾಕಿರಾ... ಮದುಮಗನನ್ನು ನೋಡಲು ತವಕಿಸುತ್ತಿರಬೇಕು, ಅಲ್ವಾ?'- ಹಾಗಂತ ಅಜ್ಜಿ ಕೇಳಿದಾಗ ಎಲ್ಲರೂ ಗುಳ್ಳನೆ ನಕ್ಕರು. ಶಾಕಿರಾಳ ಮುಖ ರಂಗೇರತೊಡಗಿತು. ನಾಚಿಕೆಯಿಂದ ತಲೆ ಕೆಳಗೆ ಹಾಕಿ ಕುಳಿತಳು.

ಟೇಪ್‌ರೆಕಾರ್ಡನಿಂದ ಕೇಳಿ ಬರುವ ಹಾಡು, ಅಕ್ಕಪಕ್ಕ ನಿಂತ ಹೆಂಗಸರ ನಗು, ಹಾಸ್ಯದ ಮಾತಿನ ಮಧ್ಯೆ ಮದುಮಗಳನ್ನು ಎಲ್ಲರ ಮುಂದೆಯೇ ಶೃಂಗರಿಸಲಾಯಿತು.

ಅಷ್ಟರಲ್ಲಿ ಯಾರೋ ಬಂದು, ಮದುಮಗ ಬಂದ... ಎಂಬ ಸುದ್ದಿ ಒಳಗೆ ಮಟ್ಟಿಸಿದರು. ತಕ್ಷಣ ಎಲ್ಲರೂ ಗಡಿಬಿಡಿ ಮಾಡತೊಡಗಿದರು. ಹೆಚ್ಚಿನ ಬಹಿರ್ಮುಖಿ ಹೆಂಗಸರು ಮದುಮಗಳ ಹಿಂಬದಿ ನಿಲ್ಲುವ ಪ್ರಯತ್ನ ನಡೆಸತೊಡಗಿದರು.

ಸಾಲಾವಾತೀ... ಅಲನ್ನೇಬಿ... ವಸ್ಸಲಾಮೀ, ಸಲಾಮಿ

ವಹುವ ಖೈರುಲ್ಲಾಲಾ ಮಿಂಬದ್ ರುತ್ತ ಮಾಮೀ...

ಮದುಮಗನನ್ನು ಅರಬಿಕ್ ಹಾಡಿನೊಂದಿಗೆ ಒಳಗೆ ಕರೆದುಕೊಂಡು ಬರಲಾಯಿತು. ಮದುಮಗ ಮನೆಯೊಳಗೆ ಕಾಲಿಟ್ಟೊಡನೆ ಎಲ್ಲರೂ ಏರಿದ ಧ್ವನಿಯಲ್ಲಿ ತಕ್ಬೀರ್ ಹೇಳಿದರು.

ನಾಚಿ ನೀರಾದ ಮದುಮಗ, ಕೆಳಗೆ ತಲೆ ಹಾಕಿ ಕುಳಿತಿದ್ದ ಮದುಮಗಳಿಗೆ 'ಬಂದಿ' ಹಾಕಿದ. ಪಕ್ಕದಲ್ಲೇ ಕುಳಿತು ಹಾಲು ಕುಡಿಯುವಾಗ ಅಲ್ಲೇ ನಿಂತಿದ್ದ ಹೆಂಗಸರಿಂದ ಹಾಸ್ಯದ ಹೊನಲು ಶುರುವಾಯಿತು. ಅದೇ ಹಾಲಿನ ಲೋಟಕ್ಕೆ ತನ್ನಲ್ಲಿದ್ದ ಚಿನ್ನದ ಸರ ಹಾಕಿ, ನಗುತ್ತಲೇ ಮದುಮಗ ಹಾರಿಸ್ ಎದ್ದು ಹೋದ.

ಮದುಮಗನ ಕಡೆಯಿಂದ ಬಂದವರಿಗೆ ಆದ್ಯತೆ ಕೊಡುತ್ತಾ... ಎಲ್ಲರಿಗೂ ಊಟ ಬಡಿಸಲಾಯಿತು. ತನ್ಮಧ್ಯೆ ಮದುಮಗನ ಕಡೆಯಿಂದ ಬಂದ ಕೆಲವು ಹೆಂಗಸರು ಮದುಮಗಳನ್ನು ನೋಡಲು ತವಕಿಸಿದರು.

ಸ್ವಲ್ಪ ಹೊತ್ತಿನ ನಂತರ ಹಾರಿಸ್‌ನ ತಂಗಿ ಸಫಿಯಾ ಮದುಮಗಳು ಶಾಕಿರಾಳ ಕೈ ಹಿಡಿದು ಊಟಕ್ಕೆ ಕರೆದುಕೊಂಡು ಹೋದಳು. ಊಟದ ನಂತರ ಶಾಕಿರಾಳನ್ನು ಗಂಡನ ಮನೆಗೆ ಕರೆದುಕೊಂಡು ಹೋಗುವ ಖುಶಿ. ಹಾಗೇ ತಾವು ತಂದಿದ್ದ ಬುರ್ಖಾವನ್ನು ಶಾಕಿರಾಳಿಗೆ ಹಾಕಿದರು. ಆವಾಗ ಶಾಕಿರಾಳ ಕಣ್ಣಲ್ಲಿ ಕಣ್ತುಂಬ ನೀರು. ಅದನ್ನು ನೋಡಿ ರಹ್ಮತ್‌ಳಿಗೆ ತಡೆಯಲಾಗಲಿಲ್ಲ.

ಈ ಅವ್‌ತುರೋ ಬೆಲ್‌ಕಿರಿ ನೀ...

ಆ ಅವ್‌ತುರೆ ನೊರೆಕೊನು ನೀ...

ಪಾಲ್‌ಗ್ ಪಂತಾರೆ...ನೀನಾವೊನು ಬಂಗಾರೇ...

(ಈ ಮನೆಯ ಬೆಳಕು ನೀ... ಆ ಮನೆಯನ್ನು ತುಂಬಬೇಕು ನೀ... ಹಾಲಿಗೆ ಸಕ್ಕರೆ ನೀನಾಗಬೇಕು ಚಿನ್ನ) ಹೀಗೆ ಹಾಡುತ್ತಿದ್ದಾಗ ಸುತ್ತಮುತ್ತ ನಿಂತಿದ್ದ ಹೆಂಗಸರ ಕಣ್ಣಲ್ಲೂ ಕಣ್ಣೀರು. ಶಾಕಿರಾ ಮದುಮಗನ ಜತೆಗೂಡಿ ಹೆಜ್ಜೆ ಹಾಕಿದಳು.

ತದನಂತರ ಮನೆ ಖಾಲಿ, ಖಾಲಿ. ರಹ್ಮತ್ ಮನೆಯ ಕೋಣೆಯಲ್ಲಿ ಕುಳಿತಿದ್ದಳು. ಆದೇ ರೂಮಿನೊಳ ಹೊಕ್ಕ ಅವಳ ಅತ್ತಿಗೆಯಂದಿರು ಬೆಳಗ್ಗೆ ಕಣ್ಮರೆಯಾಗಿದ್ದ ಪೆಂಡೋಲೆಯ ಬಗ್ಗೆ ಮಾತನಾಡತೊಡಗಿದರು.

'ಕೋಣೆಯೊಳಗೆ ಬಿದ್ದ ಅಂತೆ, ಹೊರಗೆ ಹೇಗೆ ಬಂತು ? ಯಾರದೋ ಚಪ್ಪಲಿಗೆ ಸಿಲುಕಿ ಅದು ಹೊರಗೆಸಯಲ್ಪಟ್ಟಿತಾ.. ಅಲ್ಲಾ...'

'ಚಪ್ಪಲಿಯಡಿಯಲ್ಲಿ ಹೋಗಲು ಅದಕ್ಕೇನು ಕಾಲುಂಟಾ ? ಯಾರೋ ಕೊಂಡು ಹೋಗಿರಬೇಕು. ಹರಕೆ ಹೊತ್ತ ವಿಷಯ ತಿಳಿದು ಹೆದರಿ, ಹೊರಗೆ ಎಸೆದು ಹೋಗಿರಬೇಕು.'

'ರೂಮಿನೊಳಗಿದ್ದವರು ನಾವೇ... ಹೊರಗೆ ಯಾರೂ ಇರಲಿಲ್ಲವಲ್ಲ'

'ಆ ಹುಡುಗಿ ಇದ್ದಾಳಲ್ಲಾ... ಸಕೀನಾ. ಅವಳೇ ಇದನ್ನು ತೆಗೆದಿರಬೇಕು. ಒಳಗೆ ಹೊರಗೆ ಹೋಗುತ್ತಾ ಮಾಡುವಂತಹ ಕೆಲಸ ಇಲ್ಲಿ ಅವಳಿಗೆ ಏನಿತ್ತು? ಬಡವರಲ್ಲಾ... ಧರ್ಮಕ್ಕೆ ಬಂದು

ಸಣ್ಣ ತುಂಡು ಚಿನ್ನ ಸಿಕ್ಕಿದರೆ ಸುಮ್ಮನೆ ಬಿಡುತ್ತಾರಾ? ಅದಕ್ಕಾಗಿಯೇ ಒಳಗೆ, ಹೊರಗೆ ಹೋಗಿ ಕಾಯುತ್ತಿದ್ದಿರಬೇಕು. ಹರಕೆ ಹೊತ್ತಾಗ ಏನೋ ಆಗಿರಬೇಕು. ಹೆದರಿ, ಹೊರಗೆ ಬಿಟ್ಟು ಹೋಗಿದ್ದಾಳೆ'

ಈ ಎಲ್ಲಾ ಮಾತುಗಳನ್ನು ಕೇಳಿ ರಹ್ಮತ್‌ಳಿಗೆ ತುಂಬಾ ಬೇಸರವಾಯಿತು. ' ಸಕೀನಾ, ಶ್ರೀಮಂತ ಕುಟುಂಬದ ಹುಡುಗಿಯಾಗಿ ಈ ಮದುವೆಗೆ ಬಂದಿದ್ದರೆ, ಇಂಥ ಆರೋಪ ಅವಳ ಮೇಲೆ ಬೀಳುತ್ತಿತ್ತಾ ? ಬಡವಳಾದ ಕಾರಣದಿಂದ ಅಲ್ವಾ, ಅವಳ ಮೇಲೆ ವೃಥಾ ಆರೋಪ ಬಿದ್ದದ್ದು? ಈವರೆಗೂ ನನ್ನ ಜತೆಗೂಡಿ ಕೆಲಸ ಮಾಡುತ್ತಿದ್ದ ಸಕೀನಾಳ ಮೇಲೆ ಇಂಥ ಅಪವಾದವಾ ?'- ರಹ್ಮತ್ ಮನಸ್ಸು ನೋವಿನಿಂದ ಮಡುಗಟ್ಟಿತು.

ಕಿಟಕಿಯತ್ತ ಕಣ್ಣು ಹಾಯಿಸಿದಾಗ, ಸಕೀನಾ ಕಣ್ಣೀರು ಹಾಕುತ್ತಿದ್ದಳು.

'ಅಮ್ಮಾ... ನಾವೀಗ ಹೋಗೋಣ. ಸಾಕು ಈ ಮದುವೆ. ನಮ್ಮಂಥವರು ಇಂಥ ಮದುವೆಗೆ ಬರಬಾರದಿತ್ತು'ಎಂದು ಸಕೀನಾ ಹೇಳುತ್ತಿದ್ದುದೂ ರಹಮತ್‌ಗೆ ಕೇಳಿಸಿತು. ಅವಳಿಗೆ ಸಕೀನಾಳನ್ನು ಕೂಗಿ ಕರೆದು ಸಂತೈಸಲು ನಾಲಗೆ ಹೊರಡಲೇ ಇಲ್ಲ.

* * *

# ಹೊಡೆತ

ಶಮೀಮ ಜಿ. ಗೂಡಿನ ಬಳಿ

'ನಿನಗೇನು ಹುಚ್ಚಾ ? ಸಿಕ್ಕಿದವರ ಜತೆ ಓಡ್ತೀಯಲ್ಲಾ ? ಎಲ್ಲಿ ಅವನು ?'- ಹಾಗಂತ ಅಬ್ಬರಿಸುತ್ತಲೇ ಅವರು ಒಳ ಹೊಕ್ಕರು. ತಂದೆಯ ಆವೇಶದ ಹೆಜ್ಜೆಯನ್ನು ದೂರದಿಂದಲೇ ಗಮನಿಸಿದ ಸುಹೇಲ್ ಚಡ್ಡಿಯಲ್ಲೇ ಮೂತ್ರ ಮಾಡಿಬಿಟ್ಟ. ಬಾಗಿಲ ಮರೆಯಲ್ಲಿ ನಿಂತು ಗಡಗಡ ನಡುಗುತ್ತಿದ್ದ ಸುಹೇಲ್, ತಂದೆ ಒಳ ಹೋದ ತಕ್ಷಣ ಸೀದಾ ಅಟ್ಟ ಹತ್ತಿದ. ಅಲ್ಲೇ ಇದ್ದ ಗೋಣಿ ಚೀಲವನ್ನು ಮೈಮೇಲೆ ಹಾಕಿ ಮೂಲೆಯಲ್ಲಿ ಕುಳಿತು ಬಿಟ್ಟ.

ತಂದೆಯಿಂದ ತನಗೆ ಪೆಟ್ಟು ಬೀಳದ ಹೊರತು ತನಗೀವತ್ತು ಮಲಗಲಿಕ್ಕಿಲ್ಲ ಎಂದು ಅವನ ಮನಸ್ಸು ಹೇಳತೊಡಗಿತು. ತಂದೆಯ ಕೋಪ ಎಂತದ್ದು ಅಂತ ಚೆನ್ನಾಗಿ ಗೊತ್ತು. ಕೋಪ ಬಂದರೆ, ತಾಯಿಗೆ ಹಿಗ್ಗಾಮುಗ್ಗ ಹೊಡೆದದ್ದನ್ನು ನೋಡಿದ್ದಾನೆ. ತೋಟದ ಕೆಲಸದಾಳು ಗಳ ಮೇಲೆ ಎರಗಿ ಹೋದದ್ದನ್ನೂ ಕಂಡಿದ್ದಾನೆ. ತಂದೆಯ ಕಣ್ಣಲ್ಲಿ ರಕ್ತವಿಲ್ಲ ಎಂದು ಅವನು ಯಾವತ್ತೋ ಭಾವಿಸಿದ್ದ.

ತಾಯಿಗೆ ಬೈಯ್ಯುತ್ತಿದ್ದುದು, ಹೊಡೆಯುತ್ತಿದ್ದುದು ಅವನಿಗೆ ಕೇಳಿಸುತ್ತಿತ್ತು. ಅವನ ಮನಸ್ಸು ಆಕ್ರೋಶಗೊಳ್ಳತೊಡಗಿತು. ತಂದೆಯನ್ನು ಇಡಿಯಾಗಿ ತಿನ್ನಬೇಕು ಅನಿಸಿತು. ಆದರೆ, ತಂದೆಯ ಮುಂದೆ ಯಾವ ಕೋಪವೂ ನಡೆಯದು ಎಂದು ಅವನಿಗೆ ಚೆನ್ನಾಗಿ ಗೊತ್ತು. ತಂದೆಯ ಒಂದೊಂದು ಮಾತಿಗೆ ಮನೆಯ ಬೆಂಚು, ಕುರ್ಚಿ, ಟೇಬಲ್ ಕೂಡಾ ಅಲುಗಾಡುತ್ತಿದೆಯೋ ಎಂದು ಅವನಿಗೆ ಅನಿಸಿದ್ದು ಸುಳ್ಳಲ್ಲ.

ತಂದೆಯ ಧ್ವನಿ ಕೇಳಿಸುತ್ತಿಲ್ಲ. ಅತ್ತಿತ್ತ ನಡೆಯುವಾಗ ಕೇಳಿ ಬರುವ ಮೆಟ್ಟಿನ ಶಬ್ದವೂ ಕೇಳಿಸುತ್ತಿಲ್ಲ. ಬಹುಷಃ ತಂದೆ ಹೊರಟು ಹೋಗಿರಬೇಕು. ಹಾಗಂತ ಭಾವಿಸಿದ ಸುಹೇಲ್

ಕೆಳಗಿಳಿದು ತನ್ನ ತಾಯಿಯ ಬಳಿ ಹೋದ. ಅವರು ತನ್ನ ಮಗನನ್ನು ಅಪ್ಪಿ ಹಿಡಿದು ಅಳತೊಡಗಿದರು. ಹಾಗೇ ಬುದ್ಧಿ ಹೇಳಿದರು.

ಆದರೆ, ಈ ಮಗನಿಗೆ ಎಷ್ಟು ಬುದ್ಧಿ ಹೇಳಿದರೂ ಅದು ಇಷ್ಟೊಂತಲೇ ಉಂಟು. ಈ ಮಗನ ಬುದ್ಧಿ ನೆಟ್ಟಗೆ ಆಗುವುದಿಲ್ಲ ಎಂಬುದು ಅವರಿಗೆ ಚೆನ್ನಾಗಿ ಗೊತ್ತು. ಆ ತಂದೆ ಮಗನನ್ನು ಪ್ರೀತಿಯಿಂದ ಕಾಣುವ ಬದಲು ಗದರಿಸುವುದೇ ಜಾಸ್ತಿ. ತಂದೆಯ ಮಾತು ಕೇಳಿದೊಡನೆ ಮಕ್ಕಳು ಗಡಗಡ ನಡುಗುತ್ತಾರೆ. ಅಲ್ಲದೆ ಈ ಮಕ್ಕಳು ತಂದೆಯ ಮುಖ ನೋಡಿ ಮಾತನಾಡಿದ್ದೇ ಇಲ್ಲ ಎನ್ನಬಹುದು. ತಂದೆಯ ನೆರಳು ಕಂಡ ತಕ್ಷಣ ಮಕ್ಕಳು ಗುಬ್ಬಿ ಥರ ಮನೆಯ ಮೂಲೆ ಸೇರಿ ಬಿಡುತ್ತಾರೆ. ಆದರೆ ಸುಹೇಲ್ ಮಾತ್ರ ಅದಕ್ಕೆ ತದ್ವಿರುದ್ಧ. ತಂದೆಯ ಕೈಗೆ ಸಿಗುವುದಿಲ್ಲ. ಸಿಕ್ಕಿದರೆ ಅವರು ಹೊಡೆಯದೆ ಬಿಡುವುದೂ ಇಲ್ಲ. ಹೊಡೆಯತೊಡಗಿದರೆ, ಇವ ಬೆನ್ನು ತೋರಿಸುತ್ತಲೇ ಇರುತ್ತಾನೆ.

ಸುಹೇಲ್‌ಗೆ ಮನೆಯಲ್ಲಿರುವುದು ಅಥವಾ ಜೈಲಲ್ಲಿ ಕೂರುವುದರಲ್ಲಿ ವ್ಯತ್ಯಾಸವೇನೂ ಇಲ್ಲ. ಮನೆ ಅಂದ್ರೆ, ಅವನಿಗೆ ಜೈಲು ಸಮಾನ. ಛೆ, ಎಂಥ ತಂದೆ... ಓಡಿ ಹೋದರೆ ಹೇಗೆ ? ಎಂದು ಮನಸ್ಸು ಪ್ರಶ್ನಿಸಿದರೂ ಯಾಕೋ ಅದು ಅವನಿಗೆ ಸರಿ ಕಾಣಲಿಲ್ಲ. ತಂದೆಯಿಂದ ಪೆಟ್ಟು ಬೀಳುವ ಮುನ್ನವೇ ದೇಹ ಬೆಚ್ಚಗಾಗತೊಡಗಿತು.

'ಅಮ್ಮಾ... ಶಾಲೆಯ ಮೈದಾನದತ್ತ ಹೋಗಿ ಬರುವೆ' ಎನ್ನುತ್ತಾ ಸುಹೇಲ್ ಹೊರ ಬಂದ. ಅಲ್ಲಿ ತನ್ನದೇ ಹರೆಯದ ಹತ್ತಾರು ಮಂದಿ ಆಟದಲ್ಲಿ ಮುಳುಗಿದ್ದರು.

ಮನೆಯಂಗಳದಲ್ಲಿ ಹರಡಿದ್ದ ಕಸಕಡ್ಡಿಯನ್ನು ಹೆಕ್ಕಿ ಮೂಲೆಯೊಂದರಲ್ಲಿ ಹಾಕಿ ಸುಡುತ್ತಿರುವಾಗ ಅಲ್ಲೇ ನಿಂತಿದ್ದ ಪಕ್ಕದ ಮನೆಯ ಶಬೀರ್‌ನ ತಾಯಿ ಮಾತಿಗೆ ತೊಡಗಿದರು.

'ಮಕ್ಕಳಿಗೆ ಶಾಲೆ ಯಾವಾಗ ಶುರುವಾಗುತ್ತೋ ಏನೋ ? ನಮ್ಮನ್ನು ಗೋಳಾಡಿಸಲು ಅವರಿಗೆ ರಜೆ ಸಿಗುವುದು. ಮನೆಯನ್ನೇ ಆಡಲು ಅಂಗಳ ಮಾಡಿ ಬಿಡುತ್ತಾರೆ' ಎಂದು ಅವರು ಹೇಳುತ್ತಲೇ ಇದ್ದರು.

ಸುಹೇಲ್‌ಗೆ ಅವನ ತಂದೆ ಹೊಡೆಯಲು ಮುಂದಾದದ್ದು, ಮೊನ್ನೆಯಷ್ಟೇ ತೋಟದ ಕೆಲಸದಾಳುಗಳಿಗೆ ಹೊಡೆದದ್ದನ್ನೆಲ್ಲಾ ಅವರು ಶಬೀರ್‌ನ ತಾಯಿಯಲ್ಲಿ ಹೇಳಿದರು.

'ಅದೇ... ನಿಮ್ಮವರು ಯಾಕೆ ಹಾಗೆ ಮಾಡುವುದು ?' ಶಬೀರ್‌ನ ತಾಯಿ ಕೇಳಿದಾಗ, ಸುಹೈಲ್‌ನ ತಾಯಿ ಪ್ರತಿಕ್ರಿಯಿಸಲೇ ಇಲ್ಲ. ಸುಹೇಲ್‌ನ ತಾಯಿಗೆ ಇಂಥ ಮಾತುಗಳನ್ನು ಕೇಳಿ ಕೇಳಿ ಸಾಕಾಗಿದೆ.

ಅದೂ ಇದೂ ಮಾತನಾಡುತ್ತಾ ಮನೆಯೊಳ ಹೊಕ್ಕ ಅವರಿಗೆ ಸುಹೇಲ್ ಬಲವಾಗಿ ಕಾಡಿ ಹೋದ. ನಮಾಜು, ಓದು, ಮಕ್ಕಳು... ಇತ್ಯಾದಿಯ ನಡುವೆ ಸಂತಸದಿಂದಿದ್ದ ಅವರಿಗೆ,

ಹೊಡೆತ, ಬೈಗುಳ ಇತ್ಯಾದಿ ತುಂಬಾ ಕಿರಿ ಕಿರಿ ಉಂಟು ಮಾಡಿತ್ತು. ಕೋಪದಿಂದ ಕುದಿಯುವಂತಹ ಗಂಡ ಸಿಕ್ಕಿದ್ದು ಅವರ ದುರಾದೃಷ್ಟ ಎನ್ನಬಹುದು. ಎಲ್ಲವನ್ನೂ ಅಲ್ಲಾಹನ ಮೇಲೆ ಹಾಕಿ ದಿನ ದೂಡಲು ಮುಂದಾದರೂ ಮನದ ಮೂಲೆಯಲ್ಲೊಂದು ಆತಂಕ ಇದ್ದೇ ಇತ್ತು. ಸಣ್ಣಪುಟ್ಟ ವಿಷಯಕ್ಕೂ ರೇಗಾಡಿ ಹೊಡೆಯುವ ಗಂಡನ ಮುಖ ನೋಡಲು ಮನಸ್ಸಾಗದಿದ್ದರೂ ಮಕ್ಕಳ ಮುಖ ನೋಡಿದಾಗ ಆ ನೋವೆಲ್ಲಾ ಮರೆಯಾಗುತ್ತಿತ್ತು. ಆದರೆ, ಅದೇ ಪ್ರೀತಿಯ ಮಕ್ಕಳಿಗೂ ಹೊಡೆಯುವಾಗ, ಕಿರಿಕಿರಿ ಮಾಡುವಾಗ ಅದನ್ನು ಅವರಿಗೆ ಸಹಿಸಲು ಸಾಧ್ಯವಾಗುತ್ತಿಲ್ಲ.

ಪರ... ಪರ... ಚಪ್ಪಲಿಯ ಶಬ್ದಕ್ಕೆ ಅವರಿಗೆ ಎಚ್ಚರವಾಯಿತು. ಅದು ಗಂಡನ ಹೆಜ್ಜೆ ಎಂದು ಬೇರೆ ಹೇಳಬೇಕಾಗಿಲ್ಲ. ಕುಳಿತಲ್ಲಿಂದ ಎದ್ದು ಆಚೀಚೆ ನಡೆಯುವ ಪ್ರಯತ್ನ ಮಾಡಿದರು.

'ಊಟ ಬಡಿಸಿದ್ದೀಯಾ... ನಾನು ಬರುವ ಹೊತ್ತಾಯಿತೂಂತ ಗೊತ್ತಾಗಲಿಲ್ಲವಾ ? ಒಂದು ಗಂಟೆಯಾಯಿತಲ್ಲಾ...' ಅವರು ಅಬ್ಬರಿಸಿದರು.

ಊಟದ ಸಮಯ ಆಯಿತು ನಿಜ. ಆದರೆ ನಮಾಜು ಮಾಡಿದರಾ ? ಹ್ಞಂ... ಹ್ಞಂ... ಅದವರಿಗೆ ನೆನಪೇ ಆಗುತ್ತಿಲ್ಲ. ನಮಾಜ್ ಮಾಡಿ ಎಂದು ಎಷ್ಟು ಸಲ ಹೇಳಿಯಾಯಿತು... ಸುಹೇಲ್‌ನ ತಾಯಿ ಯೋಚಿಸುತ್ತಿದ್ದರು. ನಮಾಜ್ ಬಗ್ಗೆ ಸುಮ್ಮನೆ ಹೇಳಬೇಕು ಎಂದು ಭಾವಿಸಿದ ಅವರು, ಊಟ ಬಡಿಸಿ ಕೊಟ್ಟರು.

'ಸುಹೇಲ್ ಎಲ್ಲಿ ?'- ಊಟದ ಮಧ್ಯೆ ತಟ್ಟನೆ ಪ್ರಶ್ನಿಸಿದರು.

ತಾಯಿಗೆ ಆತಂಕ ಶುರುವಾಯಿತು. ಈ ಹುಡುಗನಿಗೆ ಬೀಳುವ ಹೊಡೆತವನ್ನು ನಾನು ನೋಡಬೇಕಾ ಎಂದು ಕೇಳಿಕೊಂಡರು.

'ಕಿವಿ ಕೇಳುವುದಿಲ್ಲವಾ ? ಸುಹೇಲ್ ಎಲ್ಲಿ ? ನಿನ್ನನ್ನೂ ಅವನನ್ನೂ ಜತೆಯಾಗಿಯೇ ಹೂಳಬೇಕು. ಆವಾಗಲೇ ನೀನು ಸರಿ ದಾರಿಗೆ ಬರುತ್ತೀ... ನೋಡು, ಈವತ್ತು ಅವನ ಚರ್ಮ ಸುಲಿದು ನಿನ್ನ ಕೈಯಲ್ಲಿ ಕೊಡುತ್ತೇನೆ'- ಧಡಕ್ಕನೆ ಎದ್ದು ಕೈ ಕೂಡ ಸರಿಯಾಗಿ ತೊಳೆಯದೆ ಹೊರಗಿಳಿದರು.

'ಈ ರಾತ್ರಿ ಸುಹೇಲ್‌ಗೆ ಪೆಟ್ಟು ಬೀಳಲಿದೆ' ಎಂದು ತನ್ನಲ್ಲೇ ಹೇಳಿಕೊಂಡ ಅವರು, ಊಟ ಕೂಡ ಮಾಡದೆ ಬಟ್ಟೆ ಹೊಗೆಯಲು ಹೊರಟರು.

ಸಂಜೆಯಾದರೂ ಸುಹೇಲ್ ಮನೆಗೆ ವಾಪಾಸು ಬರಲಿಲ್ಲ. ಯಾಕಾಗಿ ಮಕ್ಕಳಿಗೆ ರಜೆ ಸಿಕ್ಕಿತು ದೇವರೇ... ಎಂದು ಕೇಳುತ್ತಾ ಶಾಲೆಯ ಅಧ್ಯಾಪಕರಿಗೆ ಮನಸ್ಸಲ್ಲೇ ಬೈಯತೊಡಗಿದರು.

ಸ್ವಲ್ಪ ಸಮಯದ ನಂತರ ಆಚೆ ಮನೆಯ ಶಬೀರ್ ಮತ್ತು ಸುಹೇಲ್ ಜತೆಗೂಡಿ ಬರುತ್ತಿದ್ದರು. ಮನೆಗೆ ಕಾಲಿಟ್ಟವನೇ ಊಟ ಬಡಿಸುವಂತೆ ಹೇಳಿದ.

'ಸುಹೇಲ್ ತಂದೆಯ ಎದುರಿಗೆ ಸಿಗಬೇಡ'ಎಂದು ಅವರು ಹೇಳಿದಾಗ, ಸುಹೇಲ್‌ಗೆ ತನ್ನ ತಂದೆಯ ಕೋಪ ಆರದಿರುವುದು ಮನದಟ್ಟಾಯಿತು. ಅವನು ಶಬೀರ್‌ನೊಡನೆ ಹೊರಟು ಹೋದ.

ಮುಸ್ಸಂಜೆಯಾಗಿತ್ತು. ಮನೆಗೆ ಕಾಲಿಟ್ಟ ಅವರು ಮಕ್ಕಳಿಗೆ ಬೈಯ್ಯತೊಡಗಿದರು. ಸುಹೇಲ್‌ನ ಮೇಲಿದ್ದ ಸಿಟ್ಟನ್ನು ಇತರ ಮಕ್ಕಳ ಮುಂದೆ ತೋರಿಸುತ್ತಿದ್ದಾರೆ ಎಂದು ತಾಯಿಗೆ ಮನದಟ್ಟಾಯಿತು.

ರಾತ್ರಿಯಾದರೂ, ಸುಹೇಲ್ ಮನೆ ತಲುಪಲಿಲ್ಲ. ಅವರು ರೀಪಿನ ತುಂಡನ್ನು ತಲೆಯ ಪಕ್ಕವೇ ಇಟ್ಟು ಮಲಗಿದ್ದರು. ತಾಯಿಗೆ ಆತಂಕ, ಹೆದರಿಕೆ ಶುರುವಾಯಿತು. ಮಗ ಎಲ್ಲಿದ್ದಾನೆ? ಯಾರ ಸಹಾಯ ಯಾಚಿಸಲಿ ?ಎಂದು ಅವರು ಕೇಳಿಕೊಳ್ಳತೊಡಗಿದರು.

ರಾತ್ರಿ ಒಂದು ಗಂಟೆಯಾಗಿತ್ತು. ಮಗನಿಗಾಗಿ ಕಿಟಕಿಯ ಪಕ್ಕ ನಿಂತು ಅವರು ಎದುರು ನೋಡುತ್ತಿದ್ದರು. ಸ್ವಲ್ಪ ಸಮಯದ ನಂತರ ಸುಹೇಲ್ ಬಂದ. ಅವರು ಮೆಲ್ಲನೆ ಬಾಗಿಲು ತೆಗೆದು ಮಗನಿಗೆ ಊಟ ಬಡಿಸಿದರು. ಹಾಗೇ ಬೇರೊಂದು ಕೋಣೆಯಲ್ಲಿ ನಿದ್ದೆ ಹೋದ.

ರಾತ್ರಿ ಮೂರು ಗಂಟೆಗೆ ತಂದೆ ಎದ್ದರು. ಸೀದಾ ಅಡುಗೆ ಕೋಣೆಗೆ ಹೋದರು. ಅಲ್ಲಿ ಬಟ್ಟಲು, ಚಮಚ ಇತ್ಯಾದಿ ಕಂಡು ಬಂತು. ಸುಹೇಲ್ ರಾತ್ರಿ ಬಂದು ಊಟ ಮಾಡಿದ್ದಕ್ಕೆ ಅದು ಸಾಕ್ಷಿ. ಕೋಪದಿಂದ ಕುದಿದು ಹೋದರು. ಮನೆಯಿಡೀ ಸುಹೇಲ್‌ಗಾಗಿ ಹುಡುಕಾಡಿದರು. ಮೂಲೆಯಲ್ಲಿ ಬಿದ್ದಿದ್ದ ಸುಹೇಲ್‌ನನ್ನು ಕಾಣುತ್ತಲೇ ಅವರ ಕೋಪ ನೆತ್ತಿಗೇರಿತು. ಹಿಂದೆ ಮುಂದೆ ನೋಡದೆ ಚೆನ್ನಾಗಿ ಹೊಡೆದರು. ಸುಹೇಲ್ ಮಿಸುಕಾಡಲಿಲ್ಲ. ಅವರಿಗೆ ಕೋಪ ಜಾಸ್ತಿಯಾಯಿತು. 'ಹೇಳದೆ, ಹೋಗುತ್ತೀಯಾ ?' ಎಂದು ಕೇಳಿ ಹೊಡೆಯುತ್ತಲೇ ಇದ್ದರು, ಕಣ್ಣಲ್ಲಿ ರಕ್ತ ಇಲ್ಲದವರ ಹಾಗೆ.

ಇದ್ಯಾವುದೂ ಆ ತಾಯಿಗೆ ಗೊತ್ತೇ ಇರಲಿಲ್ಲ. ತಡರಾತ್ರಿ ನಿದ್ದೆ ಕಣ್ಣಿಗೆ ಹತ್ತಿದ ಕಾರಣ ಅವರಿಗೆ ಬೆಳಿಗ್ಗೆ ಬೇಗನೆ ಎಚ್ಚರವಾಗಲಿಲ್ಲ. ತಟ್ಟನೆ ಎಚ್ಚರವಾದಾಗ, ಎದ್ದು ಸುಹೇಲ್‌ನನ್ನು ಹುಡುಕಾಡಿದರು. ಸುಹೇಲ್ ಮೂಲೆಯಲ್ಲಿ ಕವುಚಿ ಬಿದ್ದಿದ್ದ. ಅಲ್ಲಲ್ಲಿ ರಕ್ತದ ಕಲೆ ಕಾಣಿಸಿತು. ಅವರ ತಲೆ ಗಿರಗಿರನೆ ತಿರುಗತೊಡಗಿತು.

'ಸುಹೇಲ್... ಸುಹೇಲ್...' ತಾಯಿಯ ಕೂಗು ಮಗನಿಗೆ ಕೇಳಿಸಲಿಲ್ಲ. ಅವರು ಮತ್ತೆ ಮತ್ತೆ ಕೂಗಿ ಕರೆದರು. ಆದರೆ ಸುಹೇಲ್ ಎದ್ದೇಳಲೇ ಇಲ್ಲ. ಹೆದರಿಕೆ ಶುರುವಾಯಿತು. ಅಲುಗಾಡಿಸಿದರು. ಆದರೆ, ಆ ದೇಹ ಮಿಸುಕಾಡಲಿಲ್ಲ. ಸುಹೇಲ್ ಬಿದ್ದ ಹೊಡೆತ ಹಾಗಿತ್ತು. ಅವರು 'ಯಾ ಅಲ್ಲಾಹ್' ಎನ್ನುತ್ತಾ ಬೊಬ್ಬೆ ಹಾಕಿದರು.

'ಏನಾಗಿದೆ ಅವನಿಗೆ. ನೀನೂ ನಾಟಕ ಮಾಡುತ್ತಿದ್ದೀಯಾ ?'- ಅವರ ಕೋಪ ಇನ್ನೂ ತಣಿದಿಲ್ಲ.

ಆದರೆ ಮಗನ ದಾರುಣ ಸ್ಥಿತಿಯನ್ನು ಅರ್ಥ ಮಾಡಿಕೊಂಡ ಆ ತಾಯಿ ಊರಿಡೀ ಕೇಳುವಂತೆ ಕೂಗಿದರು. ಹಾಗೇ ಅವರೂ ದೊಪ್ಪನೆ ಬಿದ್ದರು. ಆವಾಗ ಅವರಿಗೆ ಹೆದರಿಕೆಯಾಯಿತು. ಇಬ್ಬರನ್ನೂ ಎಬ್ಬಿಸಲು ಪ್ರಯತ್ನಿಸಿದರು. ಆದರೆ ಅದು ಫಲಿಸಲಿಲ್ಲ. ಇಬ್ಬರ ಮೈ ಮೇಲೆ ನೀರು ಚಿಮುಕಿಸಿದರು.

ಹ್ನುಂ... ಹ್ನುಂ... ಅವರಿಬ್ಬರು ಧ್ವನಿ ಗೂಡಿಸಲೇ ಇಲ್ಲ.

ಕಣ್ಣಲ್ಲಿ ರಕ್ತ ಇಲ್ಲದ ಆ ತಂದೆ ಗರಬಡಿದಂತೆ ನಿಂತಿದ್ದರು.

*   *   *

# ಪರಿವರ್ತನೆ

ಆಯಿಶಾ ಯು.ಕೆ.

ಮನೆಯಿಂದ ಬಂದ ಕಾಗದ ಓದಿ ಮುಗಿಸಿದ ಶಫೀಕ್‌ನ ಕಣ್ಣಲ್ಲಿ ಕಣ್ಣೀರು !.

ಕಾಗದ ಬರುವ ಮುಂಚೆ ಅದಕ್ಕಾಗಿ ಹಪಹಪಿಸುತ್ತಿದ್ದ ಶಫೀಕ್‌ಗೂ ಇದೀಗ ಕಣ್ಣೀರು ಹಾಕುತ್ತಿರುವ ಶಫೀಕ್‌ಗೂ ಅಜಗಜಾಂತರ. ಗೆಳೆಯನ ಈ ಅನಿರೀಕ್ಷಿತ ಬದಲಾವಣೆಯನ್ನು ಕಂಡು ಶಮೀರ್ ಆಶ್ಚರ್ಯಚಕಿತನಾದ.

ಮನೆಯಿಂದ ಪತ್ರ ಬಂದಿದೆ... ಬಂದಿದೆ... ಎಂದು ಹೇಳಿ ನಕ್ಕು ನಲಿಯುತ್ತಿದ್ದ ಶಫೀಕ್, ಪತ್ರ ಓದಿದ ಮೇಲೆ ಯಾಕೆ ಖಿನ್ನನಾದ? ಎಂದು ಶಮೀರ್ ತನ್ನಲ್ಲೇ ಪ್ರಶ್ನಿಸಿಕೊಂಡ. ಮತ್ತೆ ಮತ್ತೆ ಗೆಳೆಯನನ್ನು ನೋಡಿಕೊಂಡ.

'ಶಫೀಕ್, ಏನಾಯಿತು ಹೇಳು?'-ಶಮೀರ್ ಅಷ್ಟು ಕೇಳಿದ್ದೇ ತಡ. ಶಫೀಕ್‌ನ ಕಣ್ಣಲ್ಲಿದ್ದ ನೀರು ಕೆಳಗಿಳಿಯತೊಡಗಿತು.

'ಏನು ಹೇಳಲಿ, ಶಮೀರ್... ಪ್ರೀತಿಯ ತಾಯಿ, ತಮ್ಮಂದಿರನ್ನೆಲ್ಲಾ ಬಿಟ್ಟು ಈ ಮರುಭೂಮಿಗೆ ಕಾಲಿಟ್ಟ ನಮ್ಮ ಅವಸ್ಥೆಯನ್ನು ನೆನೆಯುವಾಗ ದುಃಖವಾಗುತ್ತದೆ. ಇಲ್ಲಿ ನಮಗೆ ಯಾರಿದ್ದಾರೆ ? ಯಾರ ಪ್ರೀತಿ ನಮಗೆ ಸಿಗಲಿದೆ ? ದೂರದ ಊರಿನಿಂದ ಪತ್ರ ಬಂದರಷ್ಟೇ ನಮ್ಮ ಮನಸ್ಸಿಗೆ ನೆಮ್ಮದಿ. ಆದರೆ, ತಾಯಿ-ತಮ್ಮಂದಿರ ಮುಖ ನೋಡಲಾಗದ ನೋವಿನಿಂದ ಮನಸ್ಸು ಖಿನ್ನವಾಗುತ್ತದೆ. ಅವರಿಗೆ ಬೇಕಾಗಿ ರಾತ್ರಿ-ಹಗಲು ಅಂತ ನಾವು ದುಡಿದು ಹೆಣಗಾಡುತ್ತಿದ್ದೇವೆ. ಆದರೆ, ತಲೆ ತಿರುಗುವಂತಹ ಕಾಗದ ಬಂದ್ರೆ ನಮ್ಮ ಮನಸ್ಸು ಏನಾದೀತು ?'- ಶಫೀಕ್ ಹೇಳುತ್ತಲೇ ಇದ್ದ. ಅವನ ಮಾತಿನ ಒಳಾರ್ಥವನ್ನು ಅರಿಯಲಾಗದೆ ಶಮೀರ್ ಪಿಳಿ ಪಿಳಿ ಕಣ್ಣು ಬಿಡತೊಡಗಿದ.

'ಶಮೀರ್... ನನ್ನ ಸಂಗತಿ ನಿನಗೆ ಗೊತ್ತಿಲ್ಲದೇನೂ ಇಲ್ಲ. ಐದು ವರ್ಷದಿಂದ ನಾವು ಈ ಮರುಭೂಮಿಯಲ್ಲಿ ಒಡನಾಡಿಯಾಗಿದ್ದವರು. ನಾನಿಲ್ಲಿ ದುಡಿದ ಹಣದಿಂದ ಇಬ್ಬರು ತಂಗಿಯರ ಮದುವೆ ಮಾಡಿಸಿದೆ. ಅವರೀಗ ನೆಮ್ಮದಿಯಿಂದಿದ್ದಾರೆ. ನಾನು ಆದಷ್ಟು ಬೇಗ ಮದುವೆಯಾಗಬೇಕು ಎಂದು ತಾಯಿ ಹಟ ಕಟ್ಟುತ್ತಿದ್ದಾರೆ. ಹಾಗೇ ಶ್ರೀಮಂತ ಕುಟುಂಬದ ಹುಡುಗಿಯನ್ನು ಹುಡುಕಿ ಅವಳ ಫೋಟೋ ಕಳುಹಿಸಿಕೊಟ್ಟಿದ್ದಾರೆ. ಅಲ್ಲದೆ, ಇದೇ ಹುಡುಗಿಯನ್ನು ಮದುವೆಯಾಗಬೇಕು ಎಂದು ಹಟಕಟ್ಟುತ್ತಿದ್ದಾರೆ. ತಾಯಿ ನನ್ನ ಮನಸ್ಸನ್ನು ಅರ್ಥ ಮಾಡಿಕೊಂಡ ಹಾಗಿಲ್ಲ. ಈಗ ಏನು ಮಾಡಬೇಕು ಎಂದು ನನಗೆ ತೋಚುತ್ತಿಲ್ಲ' ಶಫೀಕ್‌ನ ಮಾತಲ್ಲಿ ನೋವಿತ್ತು.

'ಶಫೀಕ್... ಈ ವಿಷಯದಲ್ಲಿ ನೀನಿಷ್ಟು ಕೊರಗುವುದಾ ? ನಿನ್ನ ತಾಯಿ ಹೀಗೆಲ್ಲ ಮಾಡುವುದು ನಿನ್ನ ಒಳ್ಳೆಯದಕ್ಕೆ ಅಲ್ವಾ? ಹುಡುಗಿ ಚೆಂದ ಇದ್ದಾಳೆ. ಒಳ್ಳೆಯ ಸ್ವಭಾವದವಳಾಗಿದ್ದರೆ ಮತ್ತಿನ್ನೇನು ಬೇಕು ನಿನಗೆ? ನೀನವಳ ಬಗ್ಗೆ ಕನಸು ಕಾಣುವ ಬದಲು ಹೊರೆ ಹೊತ್ತವರ ಹಾಗೆ ಮಾಡುವುದು ಯಾಕೆ?'- ಶಮೀರ್ ಅವನನ್ನು ಸಮಾಧಾನಪಡಿಸುವ ಪ್ರಯತ್ನ ಮಾಡಿದ.

'ಶಮೀರ್... ನಾನು ನನ್ನ ಮಾತನ್ನು ಯಾವತ್ತಿಗೂ ತಪ್ಪಲಾರೆ. ಯಾವತ್ತಾದರೂ ಸರಿ, ನಾನು ಮದುವೆಯಾಗುವುದಿದ್ದರೆ... ಅದು ಅವಳನ್ನೇ, ಶಮೀಮಾ'- ಶಫೀಕ್ ಅವಳ ಹೆಸರನ್ನು ಉಚ್ಚರಿಸುತ್ತಲೇ ಇದ್ದ.

ಶಫೀಕ್ ಗಲ್ಫ್‌ನಲ್ಲಿ ಉದ್ಯೋಗದಲ್ಲಿದ್ದರೆ, ಶಮೀರ್ ವೈದ್ಯಕೀಯ ವ್ಯಾಸಾಂಗ ಮಾಡುತ್ತಿದ್ದ. ಆದರೆ, ಒಂದೇ ಜಿಲ್ಲೆಯವರಾದ ಕಾರಣ ಪರಿಚಯವಾಗಿ ಒಂದೇ ರೂಮಲ್ಲಿ ಉಳಕೊಂಡಿದ್ದರು.

* * *

ಶಫೀಕ್‌ನ ಬಾಲ್ಯದಲ್ಲೇ ಅವನ ತಂದೆ ಇಹಲೋಕ ತ್ಯಜಿಸಿದ್ದರು. ವಿಧವೆ ತಾಯಿಗೆ ಅವನನ್ನು ಚೆನ್ನಾಗಿ ನೋಡಿಕೊಳ್ಳಲೇಬೇಕಿತ್ತು. ಆದರೆ, ಬದುಕುವ ದಾರಿ ಅವರಿಗೆ ಸುಗಮವಾಗಿರಲಿಲ್ಲ. ಹೀಗಿರುವಾಗ ಅವರ ಸಹಾಯಕ್ಕೆ ಬಂದದ್ದು ಪಕ್ಕದ ಮನೆಯ ಅಬ್ಬುಕಾಕ. ಅವರು ಒಂದು ಸಣ್ಣ ಅಂಗಡಿ ಇಟ್ಟುಕೊಂಡು ಜೀವನ ಸಾಗಿಸುತ್ತಿದ್ದರು. ಕೆಲವು ದಿನದ ನಂತರ ಆ ಅಂಗಡಿಯ ಜವಬ್ದಾರಿಯನ್ನು ಶಫೀಕ್‌ಗೆ ವಹಿಸಿಕೊಟ್ಟರು. ಅಬ್ಬುಕಾಕರ ಸಣ್ಣ ಮಗಳು ಶಮೀಮಾ ಆಗಾಗ ಅಂಗಡಿಗೆ ಬರುತ್ತಿದ್ದಳು.

ಏಳನೇ ತರಗತಿ ಓದಿದ್ದ ಶಮೀಮಾ ಕೋಗಿಲೆಯ ರಾಗದಲ್ಲಿ ಹಾಡುತ್ತಾಳೆ. ಅದನ್ನು ತಿಳಿದಿದ್ದ ಶಫೀಕ್ ಅವಳಲ್ಲಿ ಹಾಡು ಹಾಡಿಸಿ ತನ್ನ ನೋವನ್ನು ದೂರ ಮಾಡಿಕೊಳ್ಳುತ್ತಿದ್ದ.

ದಿನ ಉರುಳುತ್ತಲೇ ಇತ್ತು. ಅದೊಂದು ದಿನ ಎದುರುಸಿರು ಬಿಟ್ಟು ಓಡೋಡಿ ಬಂದ ಶಮೀಮ 'ತಂದೆಗೆ ಹುಷಾರಿಲ್ಲ' ಎಂದಾಗ ಶಫೀಕ್ ಅಂಗಡಿಗೆ ಬಾಗಿಲು ಎಳೆದು ಆ ಮನೆಯತ್ತ ದಾಪುಗಾಲು ಹಾಕಿದ್ದ. ಅಬ್ಬುಕಾಕ ಚಾಪೆಯಲ್ಲಿ ಅಂಗಾತ ಬಿದ್ದಿದ್ದರು. ಶಫೀಕ್‌ನನ್ನು ಕಾಣುತ್ತಲೇ ಅವರ ಕಣ್ಣು ತುಂಬಿ ಬಂತು. ಮತ್ತೆ ಮತ್ತೆ ಅವನನ್ನು ಕಣ್ಬಿಟ್ಟು ನೋಡತೊಡಗಿದರು.

'ಶಫೀಕ್ ... ನನ್ನ ದಿನಗಳು ಮುಗಿಯುತ್ತಾ ಬಂದವು. ಕೈ ಕಾಲು ಶಕ್ತಿ ಕಳಕೊಂಡಿದೆ' ಎನ್ನುತ್ತಾ ಬಿಕ್ಕಿದರು. ಶಫೀಕ್ ತಕ್ಷಣ ಆಸ್ಪತ್ರೆಗೆ ಸಾಗಿಸುವ ವ್ಯವಸ್ಥೆ ಮಾಡಿದ. ಕೆಲವು ದಿನದ ನಂತರ ಅವರ ಆರೋಗ್ಯದಲ್ಲಿ ಸುಧಾರಣೆ ಕಂಡು ಬಂತು.

ಕಾಲ ಚಕ್ರ ತಿರುಗುತ್ತಿತ್ತು. ಶಫೀಕ್‌ಗೆ ಅವನ ಭಾವ ಗಲ್ಫ್‌ನಿಂದ ವೀಸಾ ಕಳುಹಿಸಿಕೊಟ್ಟಿದ್ದರು. ಅದನ್ನು ಕಂಡು ಅವನಿಗೆ ತುಂಬಾ ಕುಶಿಯಾಯಿತು. ಆದರೆ ಅಷ್ಟೇ ಬೇಸರವೂ ಆಯಿತು. ಗಲ್ಫ್‌ಗೆ ತೆರಳಿದರೆ ನಮ್ಮೆಲ್ಲಾ ಕಷ್ಟವನ್ನು ನೀಗಿಸಬಹುದು. ತಂಗಿಯರ ಮದುವೆ ಮಾಡಿಸ ಬಹುದು. ತಾಯಿಯನ್ನು ಚೆನ್ನಾಗಿ ನೋಡಿಕೊಳ್ಳಬಹುದು ಎಂದು ಹೇಳಿಕೊಳ್ಳುತ್ತಿದ್ದವನಿಗೆ, ವೀಸಾದ ಹಣ ಹೇಗೆ ಹೊಂದಿಸಲಿ ಎಂಬ ಆತಂಕವೂ ಉಂಟಾಯಿತು. ಆ ವಿಷಯ ಹೇಗೋ ಅಬ್ಬುಕಾಕರಿಗೆ ಗೊತ್ತಾಯಿತು. ಅವರು ತಕ್ಷಣ ತನ್ನ ಹೆಂಡತಿಯ ಚಿನ್ನಾಭರಣ ಮಾರಿ ಶಫೀಕ್‌ಗೆ ಕೊಟ್ಟರು. ಮತ್ತೆ ಕೆಲವು ಕಡೆಯಿಂದ ಸಾಲ ಪಡೆದು ವೀಸಾಕ್ಕೆ ಹಣ ಕೊಟ್ಟು ಗಲ್ಫ್‌ಗೆ ಹೋಗಲು ನಿರ್ಧರಿಸಿದ.

ಗಲ್ಫ್‌ಗೆ ಹೋಗುವ ಮುಂಚಿನ ರಾತ್ರಿ ಅಬ್ಬುಕಾಕರ ಮನೆಗೆ ತೆರಳಿದ. ಹಾಗೇ ಶಮೀಮಾ ಳಿಗಾಗಿ ಅತ್ತಿತ್ತ ಕಣ್ಣು ಹಾಯಿಸಿದ. ಆದರೆ ಅವಳು ಅಲ್ಲಿ ಕಾಣಿಸಲಿಲ್ಲ. ಮೆಲ್ಲನೆ ಅಬ್ಬುಕಾಕರ ಕೈಯನ್ನು ಎತ್ತಿಕೊಂಡ ಶಫೀಕ್, 'ನಾಳೆ ನಾನು ಗಲ್ಫ್‌ಗೆ ಹೋಗುತ್ತೇನೆ. ಅದಕ್ಕಿಂತ ಮುಂಚೆ ನನಗೊಂದು ಆಸೆ ಇದೆ. ಅದನ್ನು ಈಡೇರಿಸಿ ಕೊಡುವ ಭರವಸೆ ನೀಡುವಿರಾ ?'ಎಂದು ಕೇಳಿದ.

ಆ ಮಾತು ಕೇಳಿ ಅಬ್ಬುಕಾಕರ ಮನಸ್ಸು ಪುಳಕಗೊಳ್ಳತೊಡಗಿತು. ಆದರೂ, ಅದನ್ನು ತೋರ್ಪಡಿಸದೆ 'ಏನು ಸಂಗತಿ ?' ಎಂದು ಕೇಳಿದರು.

'ಏನಿಲ್ಲ... ಶಮೀಮಾಳನ್ನು ನನಗೆ ಮದುವೆ ಮಾಡಿಕೊಡುವಿರಾ ?'- ಸಹಜವಾಗಿ ಅವನು ನಾಚಿದ.

ಅಬ್ಬುಕಾಕರ ಮನಸ್ಸು ಅರಳತೊಡಗಿತು. ಕ್ಷಣಕಾಲ ಅವರ ನಾಲಗೆ ಚಲಿಸಲಿಲ್ಲ. 'ಶಫೀಕ್, ನನಗೂ ಆ ಬಗ್ಗೆ ಕೇಳಬೇಕು ಎಂಬ ಆಸೆ ಇತ್ತು. ಆದರೆ, ನೀನು ತಿರಸ್ಕರಿಸಿ ಬಿಟ್ಟರೆ ಎಂದು ಭಾವಿಸಿ ನಾನು ಸುಮ್ಮನಾಗಿದ್ದೆ' ಎನ್ನುತ್ತಾ ಅಬ್ಬುಕಾಕ, ಅವನ ಕೈಯನ್ನು ಬಲವಾಗಿ ಹಿಡಿದರು. ಆ ಕುಶಿಯಲ್ಲೇ ಶಫೀಕ್ ವಿಮಾನವೇರಿದ್ದ.

* * *

'ನಾನು ಈ ಹಂತ ತಲುಪಲು ಅಬ್ಬುಕಾಕ ಕಾರಣ. ಅವರು ಆವತ್ತು ತನ್ನ ಹೆಂಡತಿಯ ಚಿನ್ನಾಭರಣ ಮಾರಿ ಹಣ ಕೊಡದೇ ಇದ್ದಿದ್ದರೆ, ನನ್ನ ತಂಗಿಯರ ಮದುವೆಯಾಗುತ್ತಿರಲಿಲ್ಲ. ಆವತ್ತು ನಾನು ಈ ಕಡೆ ಬರುವಾಗ ಅಬ್ಬುಕಾಕರಲ್ಲೊಂದು ಮಾತು ಕೇಳಿದ್ದೆ. ಅಂದ್ರೆ, ನಿಮ್ಮ ಮಗಳು ಶಮೀಮಾಳನ್ನು ನನಗೆ ಮದುವೆ ಮಾಡಿಕೊಡುವಿರಾ ಅಂತ. ಈಗ ನಾನು ತಾಯಿಯ ಮಾತಿನಂತೆ ಶಮೀಮಾಳನ್ನು ಕೈ ಬಿಟ್ಟರೆ ಅಬ್ಬುಕಾಕ ಎಷ್ಟು ನೊಂದುಕೊಂಡಾರು, ಶಮೀಮಾ ಏನು ಮಾಡಿಯಾಳು ?' ಶಫೀಕ್ ಮನಸ್ಸಿನಲ್ಲಿದ್ದದ್ದನ್ನೆಲ್ಲಾ ಶಮೀರ್‌ನಲ್ಲಿ ಹೇಳಿಕೊಂಡ.

ಅದೇ ಚಿಂತೆಯಿಂದ ಶಫೀಕ್ ಊರಿಗೆ ಬಂದು ತಲುಪಿದ್ದ. ತಾಯಿಯ ಮನಪರಿವರ್ತನೆಗೆ ಇನ್ನಿಲ್ಲದ ಪ್ರಯತ್ನ ನಡೆಸಿದ. ಆದರೆ, ಅವರದ್ದು ಒಂದೇ ಹಟ... ನಾನು ತೋರಿಸಿದ ಹುಡುಗಿಯನ್ನೇ ನೀನು ಮದುವೆಯಾಗಬೇಕು. ಇಲ್ಲದಿದ್ದರೆ ನನಗೂ ನಿನಗೂ ಏನೂ ಸಂಬಂಧವಿಲ್ಲ ಎಂದು ಭಾವಿಸಿಬಿಡು!.

ಶಫೀಕ್ ಏನೂ ಮಾಡಲಾಗದೆ ಕೊರಗತೊಡಗಿದ. ಶಫೀಕ್‌ನ ತಾಯಿ ಬೇರೆ ಹುಡುಗಿಯನ್ನು ಮದುವೆಯಾಗಬೇಕು ಎಂದು ಒತ್ತಾಯಿಸುತ್ತಿರುವ ವಿಷಯ ಅಬ್ಬುಕಾಕರಿಗೆ ಗೊತ್ತಾಯಿತು. ಅವರು ಶಫೀಕ್‌ನನ್ನು ತನ್ನ ಮನೆಗೆ ಕರೆಸಿ, 'ಈ ವಿಷಯದಲ್ಲಿ ನೀನು ಕೊರಗಬೇಡ. ಒಂದಲ್ಲ ಒಂದು ದಿನ ಇಂಥ ಸಂಕಷ್ಟ ಎದುರಾದೀತು ಎಂದು ನಾನು ಆವತ್ತೇ ಭಾವಿಸಿದ್ದೆ. ಅದೀಗ ಸತ್ಯವಾಯಿತು. ಯಾವುದಕ್ಕೂ ಅಲ್ಲಾಹನ ಅನುಗ್ರಹ ಮುಖ್ಯ. ಈ ನಿಟ್ಟಿನಲ್ಲಿ ನೀನು ಪ್ರಯತ್ನ ಸಾಗಿಸು. ಅಂದ್ರೆ, ಶಮೀಮಾಳಿಗೆ ಎಲ್ಲಾದರೊಬ್ಬ ಹುಡುಗ ಇದ್ದರೆ ನೋಡು'ಎಂದರು.

ಆದರೂ ಶಫೀಕ್ ಅಲ್ಲಿಂದ ಮಿಸುಕಾಡಲಿಲ್ಲ.

'ಶಫೀಕ್. ನೀನು ನಿನ್ನ ತಾಯಿಯ ಮನಸ್ಸನ್ನು ನೋಯಿಸಬೇಡ'- ಅಬ್ಬುಕಾಕ ಮತ್ತೊಮ್ಮೆ ಎಚ್ಚರಿಸಿದರು.

ಕೆಲವು ದಿನದ ನಂತರ ತಾಯಿಯ ಒತ್ತಾಯದ ಮೇರೆಗೆ ಶಫೀಕ್, ರಮೀಝಾಳನ್ನು ಮದುವೆಯಾದ. ಆದರೆ, ಅವನಿಗೆ ಅವಳ ಮೇಲೆ ಎಳ್ಳಷ್ಟು ಪ್ರೀತಿ ಇರಲಿಲ್ಲ. ಅವಳು ಏನಾದರು ಹೇಳಿದರೆ, ಅದನ್ನು ನಿರ್ಲಕ್ಷಿಸುತ್ತಿದ್ದ. ಶ್ರೀಮಂತರ ಮನೆಯ ಹುಡುಗಿಯರಿಗೆ ಅಹಂಕಾರ ಜಾಸ್ತಿ ಎಂದೂ ಹೇಳುತ್ತಿದ್ದ. ಆವಾಗಲೂ ರಮೀಝಾ ಗಂಡನ ಮಾತಿಗೆ ಎದುರಾಡುತ್ತಿರಲಿಲ್ಲ. ಗಂಡ ಎಷ್ಟೇ ಕೋಪಿಸಿಕೊಂಡರೂ ಅದನ್ನು ಮನಸ್ಸಿನಲ್ಲಿಟ್ಟುಕೊಳ್ಳುತ್ತಿರಲಿಲ್ಲ.

ಕೆಲಸದಲ್ಲಿ ತಲ್ಲೀನಳಾಗಿದ್ದ ರಮೀಝಾ ಅಡುಗೆ ಕೋಣೆಯಲ್ಲೇ ತಲೆ ತಿರುಗಿ ಬಿದ್ದು ಬಿಟ್ಟಳು. ಆವಾಗಲೂ ಶಫೀಕ್ ಅವಳನ್ನು ಕಡೆಗಣಿಸತೊಡಗಿದ. ಸುಮ್ಮನೆ ನಟಿಸುವುದು ಎಂದೆಲ್ಲಾ ಹೇಳಿ ಹಿಯಾಳಿಸಿದ. ಶಫೀಕ್‌ನ ಈ ವರ್ತನೆಯನ್ನು ಗಮನಿಸಿದ ತಾಯಿ, ಅವನನ್ನು ತರಾಟೆಗೆ ತೆಗೆದುಕೊಂಡರಲ್ಲದೆ ಆಸ್ಪತ್ರೆಗೆ ದಾಖಲಿಸುವಂತೆ ಒತ್ತಾಯಿಸಿದರು.

ಅದೇ ಆಸ್ಪತ್ರೆಯಲ್ಲಿ ಶಮೀರ್ ಡಾಕ್ಟರ್ ಆಗಿ ಕಾರ್ಯನಿರ್ವಹಿಸುತ್ತಿದ್ದ. ಆದರೆ, ರಮೀಝಾಳನ್ನು ದಾಖಲಿಸುವಾಗ ಅಲ್ಲಿ ಶಮೀರ್ ಇರಲಿಲ್ಲ. ಬೇರೆ ವೈದ್ಯರು ಆಕೆಯನ್ನು ಪರೀಕ್ಷಿಸಿ ಎರಡು ದಿನ ವಿಶ್ರಾಂತಿ ಪಡೆದುಕೊಳ್ಳುವಂತೆ ಸೂಚಿಸಿದರು.

'ನಾನು ರಮೀಝಾಳನ್ನು ಮದುವೆಯಾಗಿ ತಪ್ಪು ಮಾಡಿಬಿಟ್ಟೆ. ಇಬ್ಬರ ಮನಸ್ಸಿಗೂ ಇದೀಗ ನೆಮ್ಮದಿ ಇಲ್ಲವಾಗಿದೆ ' ಎಂದೆಲ್ಲಾ ಹೇಳಿಕೊಂಡು ಶಫೀಕ್ ದುಃಖಿಸಿದ.

ಅಷ್ಟರಲ್ಲಿ ಆಸ್ಪತ್ರೆಯ ಮುಂದೆ ಕಾರು ಬಂದು ನಿಂತಿತು. 'ಡಾಕ್ಟರ್ ಬಂದ್ರು' ಎಂದು ದಾದಿಯರು ಸಹಜವಾಗಿ ಉಚ್ಚರಿಸಿದರು. ಆ ಕಾರಿನಿಂದ ಇಬ್ಬರು ಇಳಿದರು.

ಶಫೀಕ್, ದಾದಿಯರ ಮುಖ ನೋಡಿದ. ಅವರ ಮದುವೆಯಾಗಿ ಒಂದು ತಿಂಗಳಾಯಿತು. ಹನಿಮೂನ್‌ಗೆ ಹೋದವರು ಈಗಷ್ಟೇ ತಿರುಗಿ ಬಂದಿದ್ದಾರೆ ಎಂದು ದಾದಿಯರು ನುಡಿದರು.

ಶಫೀಕ್ ಅತ್ತ ತಿರುಗಿದ. ಮತ್ತೆ ಮತ್ತೆ ಅವನನ್ನು ನೋಡಿದ. ಅದು ಶಮೀರ್ ಎಂದು ತಿಳಿಯುತ್ತಲೇ ಪುಳಕಿತಗೊಂಡ. ಹತ್ತಿರವಾದಂತೆಯೇ ಶಮೀರ್, ಶಫೀಕ್‌ನನ್ನು ಗುರುತು ಹಿಡಿದ. ಸಂತಸ ತಡೆಯಲಾರದೆ ಶಫೀಕ್‌ನನ್ನು ಅಪ್ಪಿಕೊಂಡ.

'ನೀನು ಇಲ್ಲಿ... ಏನು ಸಂಗತಿ... ಹೆಂಡ್ತಿ ಎಲ್ಲಿ ?'- ಒಂದೇ ಉಸಿರಿಗೆ ಶಮೀರ್ ಪ್ರಶ್ನಿಸಿದ.

'ಹೆಂಡತಿ ರಮೀಝಾಳಿಗೆ ಹುಷಾರಿಲ್ಲ. ಹಾಗಾಗಿ ಇಲ್ಲಿ ದಾಖಲಿಸಿದ್ದೇನೆ'ಎನ್ನುತ್ತಾ ಶಫೀಕ್ ತನ್ನ ಹೆಂಡತಿಯನ್ನು ಗೆಳೆಯನಿಗೆ ಪರಿಚಯ ಮಾಡಿಕೊಡಲು ಮುಂದಾದ. ಆವಾಗ ಶಮೀರ್, ತನ್ನ ಹೆಂಡತಿಯನ್ನು ಪರಿಚಯಿಸಿದ. ಶಮೀಮಾ ಪರ್ದಾ ಮೇಲಕ್ಕೆತ್ತುತ್ತಿದ್ದಂತೆಯೇ ಶಫೀಕ್‌ನಿಗೆ ಒಮ್ಮೆಲೆ ಆಶ್ಚರ್ಯವಾಯಿತು. ತನ್ನಿಂದ ಕೈ ಜಾರಿದ ಮುತ್ತೊಂದು ತನ್ನ ಗೆಳೆಯನ ಕೈ ಸೇರಿದೆ. ಅವನಿಗೆ ನಂಬಲಿಕ್ಕೆ ಆಗಲಿಲ್ಲ. ನಾಲಗೆ ಶಕ್ತಿ ಕಳಕೊಂಡಂತಾಯಿತು.

'ಬಾಬಿ ಎಲ್ಲಿ ?'- ಶಮೀಮಾ ಕೇಳಿದಳು. ಶಮೀರ್ ಮತ್ತು ಶಮೀಮಾಳನ್ನು ಕಾಣುತ್ತಲೇ ಶಫೀಕ್‌ನ ಮನಸ್ಸಲ್ಲಿ ಅದ್ಯಾವುದೋ ಪರಿವರ್ತನೆಯ ಬೀಜ ಮೊಳಕೆಯೊಡಯಿತು. 'ಒಳಗೆ' ಎನ್ನುತ್ತಲೇ ಸೀದಾ ಹೆಂಡತಿಯ ಬಳಿ ಓಡಿದ. ಹಾಗೇ ರಮೀಝಾ...ರಮೀಝಾ... ಎಂದು ಕೂಗುತ್ತಲೇ ಅವಳ ತಲೆ ಸವರತೊಡಗಿದ.

ರಮೀಝಾ ಕಣ್ಬಿಟ್ಟು ನೋಡಿದಳು. ಪಕ್ಕದಲ್ಲಿ ಕುಳಿತಿರುವ ಗಂಡ, ಗಂಡನ ಗೆಳೆಯ ಶಮೀರ್, ಅವನ ಹೆಂಡತಿ ಶಮೀಮಾಳನ್ನು ಕಂಡೊಡನೆ ರಮೀಝಾಳ ತುಟಿ ಅರಳತೊಡಗಿತು.

'ರಮೀಝ್... ನಿನಗೆ ನಾನೆಷ್ಟು ಕಷ್ಟ ಕೊಟ್ಟರೂ ಅದನ್ನು ನೀನು ಸಹಿಸಿದೆ. ನಿನ್ನಂಥ ಹುಡುಗಿಯನ್ನು ಹೆಂಡತಿಯಾಗಿ ಪಡೆದದ್ದು ನನ್ನ ಸೌಭಾಗ್ಯ ಎನ್ನಬಹುದು. ನಿನ್ನ ಮನಸ್ಸನ್ನು

ನಾನು ಅರ್ಥ ಮಾಡಿಕೊಂಡಿದ್ದೇನೆ. ನನಗೆ ಮಾಫ್ ಮಾಡು' ಎನ್ನುತ್ತಾ ಶಫೀಕ್ ಆಕೆಯ ಕೈ ಹಿಡಿದು ಸಣ್ಣ ಮಗುವಿನ ಹಾಗೆ ಅಳತೊಡಗಿದ. ಅವಳು ' ಅಲ್ ಹಂದುಲಿಲ್ಲಾಹ್ 'ಎಂದಳು. ಶಮೀಮಾ ಅವಳ ಪಕ್ಕವೇ ಕುಳಿತು ಆರೋಗ್ಯ ವಿಚಾರಿಸತೊಡಗಿದಳು.

*  *  *

# ಬೇಗುದಿ

ಎ. ಎಂ. ಅಥಾವುಲ್ಲಾ, ಜೋಕಟ್ಟೆ

'ನಿಮ್ಮ ಮಗಳು ಸಾಜಿದಾಳನ್ನು ನನ್ನ ಮಗ ಅನ್ವರ್‌ನಿಗೆ ನಿಕಾಹ್ ಮಾಡಿ ಕೊಡುವಿರಾ?' ಎಂದು ಟಿಂಬರ್ ವ್ಯಾಪಾರಿ ಜಬ್ಬಾರ್ ಹಾಜಿಯ ಹೆಂಡತಿ ಖತೀಜಾದ ಸ್ವತಃ ಆಯಿಶಾದರ ಮನೆಗೆ ಹೋಗಿ ಕೇಳಿದಾಗ, ಆಯಿಶಾದರಿಗೆ ಸಂತಸ, ಆಶ್ಚರ್ಯ ಏಕಕಾಲಕ್ಕೆ ಆಗಿತ್ತು.

'ನೀವೇನು ಹೇಳ್ತಾ ಇದ್ದೀರಿ ಅಕ್ಕಾ... ನಿಮ್ಮಂಥ ಶ್ರೀಮಂತರಿಗೆ, ನಮ್ಮಂಥ ಮಧ್ಯಮ ವರ್ಗದ ಹೆಣ್ಣಾ ? ನಿಮ್ಮ ಮಗ ದೊಡ್ಡ ವ್ಯಾಪಾರಿ. ಅದಕ್ಕೆ ತಕ್ಕ ವರದಕ್ಷಿಣೆಯನ್ನು ನಾವು ಎಲ್ಲಿಂದ ಕೊಡಲಿ ?' ಎಂದು ಸಾಜಿದಾಳ ತಾಯಿ ತನ್ನ ಅಸಹಾಯಕತೆ ವ್ಯಕ್ತಪಡಿಸಿದರು.

'ನೋಡಿ, ಆಯಿಶಾದ.. ನಮಗೆ ನಿಮ್ಮ ಹಣ, ಚಿನ್ನ ಬೇಕಾಗಿಲ್ಲ. ಒಳ್ಳೆಯ ಗುಣ ಸ್ವಭಾವದ ಹೆಣ್ಮಗಳು ನಮ್ಮ ಮನೆಯ ಸೊಸೆಯಾಗಿ ಬರಬೇಕು ಎಂಬುದು ನನ್ನಾಸೆ. ಆ ಸ್ವಭಾವವನ್ನು ನಾನು ನಿಮ್ಮ ಮಗಳಲ್ಲಿ ಕಂಡಿದ್ದೇನೆ. ನಿಮ್ಮ ಮಗಳ ಚೆಂದಕ್ಕೆ ನೀವೆಷ್ಟು ಚಿನ್ನ ಹಾಕ್ತೀರಾ... ಅಷ್ಟು ಸಾಕು'-ಖತೀಜಾದ ಹೇಳುತ್ತಲೇ ಇದ್ದರು. ಆ ಮಾತು ಕೇಳಿದಾಗಲೆಲ್ಲಾ, ಆಯಿಶಾದರಿಗೆ ತಾನೇನು ಕನಸು ಕಾಣುತ್ತಿದ್ದೇನೆಯೇ ಎಂದು ಅನಿಸಿದ್ದು ಸುಳ್ಳಲ್ಲ.

ಇವರಿಬ್ಬರೊಳಗಿನ ಮಾತುಕತೆಯನ್ನು ಅಡುಗೆ ಕೋಣೆಯಲ್ಲೇ ನಿಂತಿದ್ದ ಸಾಜಿದಾ ಆಲಿಸಿಯಾಗಿತ್ತು. ಅವಳು ಆಗಲೇ ಕನಸಿನಗೂಡು ಕಟ್ಟತೊಡಗಿದಳು.

ಟಿಂಬರ್ ವ್ಯಾಪಾರಿ ಜಬ್ಬಾರ್ ಹಾಜಿಯ ಒಂಬತ್ತು ಮಕ್ಕಳಲ್ಲಿ ಅನ್ವರ್ ಮೊದಲಿಗ. ಧರ್ಮದ ಬಗ್ಗೆ ಒಂದಷ್ಟು ಜಾಸ್ತಿಯೇ ಓದಿದ್ದ. ಆದರೆ, ಕಾಲೇಜ್‌ಗೆ ಹತ್ತಿದವ, ವಿದ್ಯೆ ತಲೆಗೆ ಹೋಗುತ್ತಿಲ್ಲ ಎಂದು ಹೇಳಿ ಅರ್ಧದಲ್ಲೇ ಕೈದು ಮಾಡಿದ್ದ. ಹಾಗೇ ತಂದೆಯ ಮರದ ವ್ಯಾಪಾರದಲ್ಲಿ ಕೈ ಜೋಡಿಸಿದ್ದ. ಕೈತುಂಬ ಹಣ ಶೇಖರಣೆಯಾಗುತ್ತಾ ಹೋದರೂ, ಅಹಂಕಾರ

ಮೆರೆಯದೆ ಎಲ್ಲರ ಜತೆ ಆತ್ಮೀಯತೆಯಿಂದಿದ್ದ. ಅದೇ ಅವನ ಒಳ್ಳೆಯ ಗುಣವಾಗಿತ್ತು. ಊರವರು ಮೆಚ್ಚಿದ್ದೂ ಅವನ ಆ ಸ್ವಭಾವವಾಗಿತ್ತು.

ಇಲೆಕ್ಟ್ರಿಶಿಯನ್ ಹುಸೈನಾಕರ ಹಿರಿಯ ಮಗಳು ಸಾಜಿದಾ ಎಸ್‌ಎಸ್‌ಎಲ್‌ಸಿಯಲ್ಲಿ ಫಸ್ಟ್ ಕ್ಲಾಸ್ ಮತ್ತು ಮದ್ರಸದ ಏಳನೇ ತರಗತಿಯಲ್ಲಿ ಪಾಸಾಗಿದ್ದಳು. ನಂತರ ಮನೆಯಲ್ಲೇ ತಾಯಿಯ ಕೆಲಸಕ್ಕೆ ಕೈ ಜೋಡಿಸುತ್ತಿದ್ದಳು. ಪ್ರತಿ ನಿತ್ಯ ಐದು ಬಾರಿ ನಮಾಝ್, ಸುನ್ನತ್ ನಮಾಝ್, ಕುರ್‌ಆನ್ ಪಾರಾಯಣ ಇತ್ಯಾದಿ ಸತ್ಕಾರ್ಯವನ್ನೂ ಮಾಡುತ್ತಿದ್ದಳು.

ದೊಡ್ಡ ದೊಡ್ಡ ಶ್ರೀಮಂತ ಕುಟುಂಬದಿಂದ ವಿವಾಹ ಸಂಬಂಧ ಅನ್ವರ್‌ಗೆ ಬರುತ್ತಲಿತ್ತು. ಆದರೆ, ಅನ್ವರ್‌ಗೆ ಅದ್ಯಾವುದೂ ಇಷ್ಟವಿಲ್ಲ. ಶ್ರೀಮಂತ ಕುಟುಂಬದ ಹೆಣ್ಮಗಳಿಗಿಂತ, ತೀರಾ ಬಡ ಕುಟುಂಬದ ಒಳ್ಳೆಯ ಗುಣಸ್ವಭಾವದ ಹುಡುಗಿಯನ್ನು ಆತ ಮದುವೆಯಾಗಲು ಬಯಸಿದ್ದ. ಅದನ್ನು ಅರಿತಿದ್ದ ಅವನ ತಾಯಿ ಹುಸೈನಾಕರ ಮನೆಗೆ ತೆರಳಿ, ಮಗಳನ್ನು ತನ್ನ ಸೊಸೆಯಾಗಿಸು ವಂತೆ ವಿನಂತಿಸಿದ್ದರು.

ಲಂಗ ತೊಟ್ಟು ಮದ್ರಸಕ್ಕೆ ಹೋಗುತ್ತಿದ್ದ ಸಾಜಿದಾ ಕಲಿಯುವುದರಲ್ಲಿ ತುಂಬಾ ಹುಷಾರು ಇರುವುದನ್ನು ಅನ್ವರ್ ಅರಿತಿದ್ದ. ಖತೀಜಾದ ಸಾಜಿದಾಳ ಪ್ರಸ್ತಾಪ ಎತ್ತಿದಾಗ, ಅನ್ವರ್ ಅದಕ್ಕೆ ಒಪ್ಪಿಗೆ ಸೂಚಿಸಿದ್ದ.

ಖತೀಜಾದ ಬಂದು ಹೋದದ್ದನ್ನು ಆಯಿಶಾದ ತನ್ನ ಗಂಡನಲ್ಲಿ ಹೇಳಿದರಲ್ಲದೆ, ಸಾಜಿದಾಳನ್ನು ಅನ್ವರ್‌ಗೆ ಮದುವೆ ಮಾಡಿಕೊಡುವಂತೆ ಕೇಳಿಕೊಂಡದ್ದನ್ನೂ ತಿಳಿಸಿದರು.

ಆವಾಗ ಸಾಜಿದಾಳಿಗೆ ಅನ್ವರ್‌ನ ಮುಖವೇ ಎದುರಾಯಿತು. ಮದ್ರಸದಲ್ಲಿ ತನಗಿಂತ ಎರಡು ತರಗತಿ ಮುಂದಿದ್ದ ಅನ್ವರ್‌ನ ಭಾಷಣ ಕಲೆ, ಇತರ ವಿದ್ಯಾರ್ಥಿಗಳ ಗಮನವನ್ನು ತನ್ನೆಡೆಗೆ ಸೆಳೆಯುವ ಛಾತಿ, ಮತ್ತೆ ಮತ್ತೆ ನೋಡಬೇಕು ಎನ್ನುವಂತಹ ಮುಖ ಇತ್ಯಾದಿ ಸಾಜಿದಾಳಿಗೆ ನೆನಪಾಯಿತು. ಆಕೆ ಅದೇ ಗುಂಗಿನಲ್ಲಿ ತೇಲಿ ಹೋದಳು.

ಆಯಿಶಾದ ತನ್ನ ಗಂಡನ ಜತೆ ಸಂತೋಷದ ಸುದ್ದಿ ಹಂಚಿಕೊಂಡರೂ, ಅವರಿಂದ ಸಕಾರಾತ್ಮಕ ಪ್ರತಿಕ್ರಿಯೆ ಬರಲಿಲ್ಲ. ತನ್ನ ಮಗಳಿಗೆ ಗಲ್ಫ್ ಗಂಡನನ್ನೇ ಮಾಡಬೇಕು ಎಂಬುದು ಅವರ ಬಲವಾದ ಆಶೆಯಾಗಿತ್ತು. ಗಲ್ಫ್‌ನಿಂದ ಬರುವಾಗ ತರುವ ಸಾಮಾನು, ಅತ್ತರ್‌ನ ಪರಿಮಳ ಇತ್ಯಾದಿ ಅವರನ್ನು ಹುಚ್ಚೆಬ್ಬಿಸಿತ್ತು. ಫಾರಿನ್ ಅಳಿಯನನ್ನು ಕಂಡಾಗಲೆಲ್ಲಾ ತನ್ನ ಮಗಳನ್ನು ಫಾರಿನ್ ಹುಡುಗನಿಗೇ ಮದುವೆ ಮಾಡಿಕೊಡಲು ನಿಶ್ಚಯಿಸಿದ್ದರು. ಈಗ ವರನ ಕಡೆಯಿಂದಲೇ ಯಾವುದೇ ಬೇಡಿಕೆ ಇಲ್ಲದೆ ಮದುವೆಯ ಪ್ರಸ್ತಾಪ ಬಂದರೂ ಅವರಿಗೆ ಅದು ಸರಿ ಕಾಣಲಿಲ್ಲ.

ಗಂಡನ ಮನದ ಇಂಗಿತವನ್ನು ಅರಿತುಕೊಂಡ ಆಯಿಶಾದ ಸಾಧ್ಯವಾದಷ್ಟು ಮಟ್ಟಿಗೆ ತಿಳಿ ಹೇಳುವ ಪ್ರಯತ್ನ ಮಾಡಿದರು. ಆದರೆ ಅವರ ಸಾಹಸ ವ್ಯರ್ಥವಾಯಿತು. ಕಲ್ಲಿನ ಮೇಲೆ ನೀರು ಸುರಿದಂತಾಯಿತು.

ಅನ್ವರ್‌ನ ಬಗ್ಗೆ ಕನಸು ಕಾಣುತ್ತಿದ್ದ ಸಾಜಿದಾ, ತಂದೆಯ ಹಟಮಾರಿತನ ಕಂಡು ದುಃಖಿತಳಾದಳು. ತನ್ನಾಸೆ, ಕನಸು ಇತ್ಯಾದಿಯನ್ನು ಅರ್ಥ ಮಾಡಿಕೊಳ್ಳದ ತಂದೆಯ ವರ್ತನೆಯ ಬಗ್ಗೆ ಆಕೆ ಮನದಲ್ಲೇ ಹಳಿಯತೊಡಗಿದಳು.

ಹಾಗಿದ್ದರೆ, ಖಾನತ್ ಹೋಗುವಾಗ ಹೆಣ್ಮಕ್ಕಳ ಬಳಿ ತೆರಳಿ 'ಮಗಳೇ... ನಿನ್ನ ಒಪ್ಪಿಗೆಯಾ' ಎಂದು ಕೇಳುವುದು ಯಾವ ಕರ್ಮಕ್ಕೆ ಎಂಬ ಸಾಜಿದಾಳ ನೋವಿನ ಪ್ರಶ್ನೆ ಗಾಳಿಗೆ ಹಾರಿ ಹೋಗುತ್ತಿದ್ದವು.

ಅದೃಷ್ಟ ಮನೆಯ ಬಾಗಿಲಿಗೆ ಬಂದರೂ, ಅದನ್ನು ಪಡೆದುಕೊಳ್ಳುವ ಭಾಗ್ಯವನ್ನು ಅಲ್ಲಾಹು ತನ್ನ ತಂದೆಗೆ ದಯಪಾಲಿಸಲಿ ಎಂದು ಆಶಿಸತೊಡಗಿದ ಸಾಜಿದಾಳ ನೋವು ಮನದಲ್ಲೇ ಆವಿಯಾಗುತ್ತಿದ್ದವು.

* * *

# ರಕ್ತಸಂಬಂಧಿಗಳು

ಕೆ.ಪಿ.ಎ. ಹಮೀದ್ ಪಕ್ಕಲಡ್ಕ

ಕಚೇರಿಗೆ ಎರಡು ದಿನ ರಜೆ ಸಿಕ್ಕಿದ ಕಾರಣ ಮನೆಯಲ್ಲೇ ಇದ್ದೆ. ಆ ಕುಶಿಯಲ್ಲಿ ಪತ್ರಿಕೆಗೆ ಕಣ್ಣಾಡಿಸುತ್ತಿದ್ದಾಗ, 'ಕನ್ನಡ ಲಿಪಿ, ಬ್ಯಾರಿ ಭಾಷೆಯಲ್ಲಿ ಕತೆ, ಕವನ ಕಳುಹಿಸಿ ಕೊಡಿ' ಎಂಬ ಪ್ರಕಟನೆ ಗಮನಿಸಿದೆ. ವಿದ್ಯಾರ್ಥಿ ಜೀವನದಲ್ಲಿ ಕತೆ, ಕವನ ಓದುತ್ತಾ, ಬರೆಯುತ್ತಾ ಇದ್ದ ನನಗೆ, ಈ ರಜೆಯನ್ನು ಕತೆ, ಕವನ ರಚಿಸಲು ಸದುಪಯೋಗಪಡಿಸಿದರೆ ಹೇಗೆ ಎಂದು ಯೋಚಿಸುತ್ತಿರುವಾಗಲೇ, ಅಡುಗೆ ಕೋಣೆಯೊಳಗೆ ನಿಂತಿದ್ದ ಹೆಂಡತಿ ' ಏನು ಸುಮ್ಮನೆ ಕುಳಿತು ಪತ್ರಿಕೆ ಓದಿಯೇ ದಿನ ದೂಡುತ್ತೀರಾ? ಊರಿಗೆ ಹೋಗಿ ತಾಯಿ, ಒಡ ಹುಟ್ಟಿದವರನ್ನು ನೋಡಿ ಬರಬಾರದಿತ್ತಾ ?' ಎಂದು ಕೂಗಿ ಕೇಳಿದಳು.

ನನ್ನ ಹೆಂಡತಿಯ ಸ್ವಭಾವವೇ ಹಾಗೆ. ಒಂದೇಟಿಗೆ ಎರಡು ಹಣ್ಣನ್ನು ಉದುರಿಸುವ ಜಾಯಾಮಾನ. ನಾನು ನನ್ನ ಒಡಹುಟ್ಟಿದವರನ್ನು ಕಾಣಲು ಹೋದಲ್ಲಿಂದಲೇ, ಅವಳ ಒಡಹುಟ್ಟಿದವರನ್ನು ನೋಡಲು ಹೋದರಾಯಿತು ಎಂಬ ಯೋಚನೆ ಅವಳದ್ದು.

ಅಂದಹಾಗೆ, ನಮ್ಮಿಬ್ಬರ ತವರು ಮನೆ ಮಂಗಳೂರು. ನಾನು ಶಿವಮೊಗ್ಗ ಜಿಲ್ಲೆಯ ಸಾಗರದಲ್ಲಿ ಅರಣ್ಯ ಇಲಾಖೆಯ ಎಸ್‌ಪಿಯಾಗಿ ಕಾರ್ಯನಿರ್ವಹಿಸುತ್ತಿದ್ದೇನೆ. ಮೂವತ್ತೆರಡು ವರ್ಷದ ಸೇವಾನುಭವವೂ ಇದೆ. ಮಂಗಳೂರಿನಲ್ಲಿರುವ ನನ್ನ ತಾಯಿಗೆ ವಯಸ್ಸಾಗಿದೆ. ವಿಧವೆ ಅಕ್ಕಳ ಮನೆಯಲ್ಲೇ ಅವರಿದ್ದಾರೆ. ನಾನು ಹೋಗಿ ಬರುವ ವಿಷಯದಲ್ಲಿ ಒಂದಷ್ಟು ಹಿಂದೆ. ಆದರೆ, ನನ್ನವಳಿಗೆ ಒಡಹುಟ್ಟಿದವರೆಂದರೆ ತುಂಬಾ ಕುಶಿ. ಆಗಾಗ ಅವರ ಬಳಿ ಹೋಗಿ ಬರುವುದು ಅವಳಿಗೆ ಇಷ್ಟ. ಹಾಗಾಗಿ ನನ್ನ ಮತ್ತು ಅವಳ ಸ್ವಭಾವದಲ್ಲಿ ತುಂಬಾ ವ್ಯತ್ಯಾಸವಿತ್ತು. ಇದಕ್ಕೆಲ್ಲಾ ಹೊಂದಾಣಿಕೆ ಮುಖ್ಯ ಎಂದು ನಾನು ನಂಬಿದ್ದೇನೆ. ಹೆಂಡತಿಯ ಮಾತು ಮೀರಿ ಹೋದರೆ,

ಎರಡು ದಿನದ ರಜೆಯಲ್ಲಿ ಮನೆ ರಣರಂಗವಾದೀತು ಎಂಬ ಆತಂಕವಾಯಿತು. ಪೋಕ್ರಾನ್ ಬಾಂಬ್ ಸ್ಫೋಟವನ್ನೂ ಮೀರಿಸುವ ಬಾಂಬ್‌ನಂತಹ ಬಾಯಿ ಅವಳದ್ದು. ಅಂತೂ ಮನಸ್ಸಿಲ್ಲದ ಮನಸ್ಸಿನಿಂದ ಮಂಗಳೂರಿಗೆ ಹೊರಡುವ ಯೋಜನೆ ಹಾಕಿದೆ.

ಸಾಗರದಿಂದ ಮಂಗಳೂರು ತಲುಪಲು ಆರುವರೆ ಗಂಟೆ ಬೇಕು. ಎಕ್ಸ್‌ಪ್ರೆಸ್ ಬಸ್‌ನಿಂದ ಇಳಿದು ಮತ್ತೆ ಎಂಟು ಕಿ.ಮೀ. ಲೋಕಲ್ ಬಸ್‌ನಲ್ಲಿ ಪ್ರಯಾಣಿಸಬೇಕು. ಅದಲ್ಲದೆ ಮತ್ತು ಎರಡು ಕಿ.ಮೀ. ಮಣ್ಣಿನ ಮಾರ್ಗದಲ್ಲಿ ಹೋಗಬೇಕಾಗಿದೆ. ಅದೂ ಕಾಡನ್ನು ಸೀಳಿ. ಅದರ ನಡುವೆ ಹೊಳೆ ದಾಟಬೇಕಾಗಿದೆ. ಹಾಗಾಗಿ ಸಾಗರದಿಂದ ಮುಂಜಾನೆ ಹೊರಟರೆ, ಮಂಗಳೂರಿನ ತವರು ಮನೆ ಮುಟ್ಟುವಾಗ ಸಂಜೆಯಾಗುತ್ತಿತ್ತು.

ಆವತ್ತು ಶನಿವಾರ. ಮುಂಜಾನೆ ೬.೩೦ಗಂಟೆಗೆ ಬಸ್ ಹತ್ತಿದೆವು. ಆಗುಂಬೆ ತಲುಪುತ್ತಿದ್ದಂತೆಯೇ ಬಸ್ ಬ್ರೇಕ್ ಫೈಲ್ ಆಯಿತು. ಹಾಗೇ ಒಂದು ವಿದ್ಯುತ್ ಕಂಬಕ್ಕೆ ಬಡಿದು ಬಸ್ ನಿಂತು ಬಿಟ್ಟಿತು. ಪುಣ್ಯಕ್ಕೆ ಯಾರಿಗೂ ಪೆಟ್ಟಾಗಲಿಲ್ಲ. ತದನಂತರ ಬೇರೆ ಬಸ್ ಬಂತು. ನಾವೆಲ್ಲ ಆ ಬಸ್ ಹತ್ತಿದೆವು. ಮಂಗಳೂರು ತಲುಪುವಾಗ ಸಂಜೆ ಏಳು ಗಂಟೆಯಾಗಿತ್ತು. ನಂತರ ರಿಕ್ಷಾ ಏರಿದೆ. ಮಣ್ಣಿನ ರಸ್ತೆ ಕಾಣುತ್ತಲೇ ರಿಕ್ಷ ಚಾಲಕ ಮುಂದೆ ಹೋಗಲು ಕೇಳಲಿಲ್ಲ. ಉಪಾಯವಿಲ್ಲದೆ ರಿಕ್ಷದಿಂದ ಇಳಿದು ನಡೆಯತೊಡಗಿದೆ.

ನಿರ್ಜನ ಪ್ರದೇಶ. ಕಾಡಿನ ಮಧ್ಯೆ ಮಣ್ಣಿನ ರಸ್ತೆ ಸೀಳಿತ್ತು. ನಾಯಿ, ನರಿಯ ಕೂಗು ಕೇಳಿಸತೊಡಗಿತು. ಮಳೆ ಬೇರೆ ಬರುತ್ತಿತ್ತು. ಇಂಥ ಸಂದರ್ಭದಲ್ಲಿ ನನಗೆ ಹೆದರಿಕೆಯಾಗುವುದು ಜಾಸ್ತಿ. ನಾನು ಆಡಿ, ಓಡಿ ದಿನದೂಡುತ್ತಿದ್ದ ಪ್ರದೇಶವಾದರೂ, ಊರು ಬಿಟ್ಟು ೨೦ ವರ್ಷವಾಗಿತ್ತು. ತಾಯಿಯನ್ನು ಕಾಣಲು ಕೆಲವೊಮ್ಮೆ ಬರುತ್ತಿದ್ದುದು ಬಿಟ್ಟರೆ ಮತ್ತೆ ಬಂದವನೇ ಅಲ್ಲ.

ಅಮವಾಸೆಯ ರಾತ್ರಿ. ಕುಡುಕರ, ಕಳ್ಳರ ಬಗ್ಗೆ ಹೆದರಿಕೆ ಶುರುವಾಯಿತು. ತಾಯಿಯ ಸೀರೆ, ಕುಪ್ಪಸವನ್ನು ಭದ್ರವಾಗಿಟ್ಟುಕೊಂಡೆ. ಭಯ ಹೆಚ್ಚುತ್ತಲೇ 'ಲಾ ಇಲಾಹ ಇಲ್ಲಲ್ಲಾ' ಎಂದು ಉಚ್ಚರಿಸತೊಡಗಿದೆ. ಅಂತೂ ಧೈರ್ಯವಹಿಸಿ ಅತ್ತಿತ್ತ ಕಣ್ಣು ಹಾಯಿಸದೆ, ನದಿ ತಟದವರೆಗೂ ಬಿರುಸಿನ ಹೆಜ್ಜೆ ಹಾಕಿದೆ.

ಹೊಳೆಯಲ್ಲಿ ನೀರು ತುಂಬಿ ತುಳುಕುತ್ತಿತ್ತು. ಗಾಳಿಯೂ ಬಲವಾಗಿ ಬೀಸುತ್ತಿತ್ತು. ನದಿಯ ತಟದಲ್ಲಿ ದೋಣಿ ಕಾಣಿಸಿದಾಗ ಹೋದ ಜೀವ ಬಂದಂತಾಯಿತು. ದೋಣಿಯ ಒಂದು ತುದಿಯಲ್ಲೊಬ್ಬರು ಕುಳಿತಿದ್ದ. ನಾನು ಕುಶಿಯಿಂದ 'ಅಸ್ಸಲಾಂ ಅಲೈಕುಂ' ಎಂದೆ. 'ವ ಅಲೈಕುಂ ಸಲಾಂ' ಎಂದು ಅವರು ನನಗೆ ಮರು ಸಲಾಂ ನುಡಿದರು.

ಹರಿದ ಬಿಳಿ ಮುಂಡು, ಬಟ್ಟೆ. ಕಪ್ಪು, ಬಿಳಿ ಮಿಶ್ರಿತ ಕುರುಚಲು ಗಡ್ಡ. ತಲೆ ತುಂಬಾ ಕೂದಲು. ಕೋಲಿನಾಕಾರದ ಶರೀರ. ಬೀಡಿಯ ತುಂಡು ಕಿವಿಯಲ್ಲಿ ಸಿಕ್ಕಿಸಿದ್ದು ಕಾಣಿಸಿತು. ಒಟ್ಟಾರೆ ಭಾರತ ದೇಶದ ಸಂಪೂರ್ಣ ಬಡತನದ ಚಿತ್ರಣ ಕಂಡಂತಾಯಿತು.

'ನನ್ನ ಗುರುತು ಸಿಗಲಿಲ್ಲವಾ ಹಮೀದ್ ? ನಾನು ನಿನ್ನ ದೊಡ್ಡಮ್ಮನ ಮಗ ಇಸ್ಮಾಲಿ. ನಿನ್ನ ಒಡಹುಟ್ಟಿದವ'- ಹಾಗಂತ ಹೇಳುತ್ತಲೇ ಆ ವ್ಯಕ್ತಿ ಮುಗುಳ್ನಗತೊಡಗಿದ.

ನನಗೆ ಎಲ್ಲಿಲ್ಲದ ಕುಶಿಯಾಯಿತು. ಇಸ್ಮಾಲಿ ನನ್ನ ಬಾಲ್ಯದ ಮಿತ್ರ. ಇದೇ ಹೊಳೆಯಲ್ಲಿ ಪ್ರತೀ ದಿನ ಎರಡು ಸಲ ಮೀನಿಗಾಗಿ ಬಲೆ ಬೀಸಿದ್ದು, ತೋಟೆ ಹಾಕಿದ್ದು, ಲೈಟ್‌ಗೆ ಹೋದದ್ದು, (ಬೆಳದಿಂಗಲ ರಾತ್ರಿ ಮೀನಿಗಾಗಿ ಹೋಗುವುದು ) ಈಜಿದ್ದು, ಸ್ನಾನ ಮಾಡಿದ್ದು, ಅಬ್ಬೊನಾಕರ ದೋಣಿ ಹಾಯಿಸಿದ್ದು, ಆನಂದ ಚೌಟರ ತೋಟದಿಂದ ಮಾವಿನ ಹಣ್ಣು ಕದ್ದದ್ದು... ನಮ್ಮ ಆಟ, ಓಟ ಒಂದಾ, ಎರಡಾ?. ಎಲ್ಲವೂ ನೆನಪಿಗೆ ಬಂತು.

'ಇಸ್ಮಾಲಿ, ಏನು, ಹೇಗಿದ್ದೀಯಾ ?' ನಾನು ಕೇಳಿದೆ.

ಇಸ್ಮಾಲಿಯ ಕಣ್ಣಲ್ಲಿ ನೀರು ಆಟವಾಡತೊಡಗಿತು. ದೋಣಿ ಹಾಯಿಸುತ್ತಲೇ ' ಏನೂಂತ ಹೇಳಲಿ, ಹಮೀದ್. ನನಗೆ ಆರು ಹೆಣ್ಣು, ಮೂರು ಗಂಡು ಮಕ್ಕಳು. ನಾಲ್ಕು ಹೆಣ್ಮಕ್ಕಳು ಮದುವೆಯ ಪ್ರಾಯಕ್ಕೆ ಬಂದಿದ್ದಾರೆ. ಗಂಡ್ಮಕ್ಕಳೆಲ್ಲಾ ಸಣ್ಣವರು. ನನಗೆ ಗೋಣಿ ಮತ್ತು ಗುಜರಿಯ ವ್ಯಾಪಾರ. ದಿನಕ್ಕೆ ಐವತ್ತು ರೂಪಾಯಿ ಕೂಡ ಆಗುವುದಿಲ್ಲ.'ತನ್ನ ಕಷ್ಟವನ್ನು ಹೇಳಿದ.

ಇಸ್ಮಾಲಿ ಐದನೇ ತರಗತಿಯವರೆಗೆ ಮಾತ್ರ ಓದಿದ್ದ. ನನ್ನ ನಂತರವೇ ಅವನಿಗೆ ಮದುವೆಯಾಗಿತ್ತು. ನನಗೆ ಆರತಿಗೊಂದು, ಕೀರ್ತಿಗೊಂದು ಎಂಬಂತೆ ಒಂದು ಮಗುವಿತ್ತು. ಆದರೆ, ಇಸ್ಮಾಲಿಯ ಸಂಸಾರ ನನಗಿಂತ ವ್ಯತಿರಿಕ್ತವಾಗಿತ್ತು. ಅತ್ತ ದೀನೂ (ಪರಲೋಕ)ಅಲ್ಲದ, ಇತ್ತ ದುನಿಯಾವು (ಭೂಲೋಕ) ಅಲ್ಲದ ಲೋಕದಲ್ಲಿರುವ ಇಸ್ಮಾಲಿಗೆ ನಾನು ಯಾವ ಉಪದೇಶ ನೀಡಲಿ ? ಮನಸ್ಸು ವ್ಯಾಕುಲಗೊಂಡಿತ್ತು. ಆದರೂ ಕೂಡ 'ಹೆದರಬೇಡ ಇಸ್ಮಾಲಿ. ನಾಳೆ ನಿನ್ನ ಮನೆಗೆ ನಾನು ಬರುತ್ತೇನೆ. ನನ್ನಿಂದಾದ ಸಹಾಯವನ್ನು ನಾನು ಮಾಡುವೆ. ನಿನ್ನ ಹೆಂಡತಿ ಮಕ್ಕಳಿಗೆ ಸಹಾಯ ಹೇಳು' ಎನ್ನುತ್ತಾ ಅವನಿಗೆ ಸಮಾಧಾನ ಹೇಳಿದೆ.

'ನಾಳೆ ಸಂಜೆ ಬಾ. ನನ್ನ ಮನೆಯಲ್ಲಿ ಗಮ್ಮತ್ತು ಇದೆ. ಎಲ್ಲಾ ಒಡಹುಟ್ಟಿದವರು ಬರ್‍ತಾರೆ,'- ಇಸ್ಮಾಲಿ ಹೇಳಿದ.

ನಾನು 'ಆಯ್ತು' ಎಂದಾಗ, ' ಹಮೀದ್... ನೀನು ನನಗೆ ಸಹಾಯ ಮಾಡಬೇಡ. ನನ್ನ ಹೆಂಡತಿ, ಮಕ್ಕಳಿಗೆ ಸಹಾಯ ಮಾಡು ' ಎಂದು ಇಸ್ಮಾಲಿ ಮತ್ತೆ ಮತ್ತೆ ಹೇಳಿದ.

'ಇನ್‌ಶಾ ಅಲ್ಲಾಹ್' ಎನ್ನುತ್ತಾ ನಾನು ನನ್ನ ಮನೆಯತ್ತ ಹೆಜ್ಜೆ ಹಾಕಿದೆ.

ತಾಯಿ ಮತ್ತು ಅಕ್ಕ ಅಡುಗೆ ಕೋಣೆಯೊಳಗೆ ಕುಳಿತು ಊಟ ಮಾಡುತ್ತಿದ್ದರು. ನನ್ನನ್ನು ಕಾಣುತ್ತಲೇ ತಾಯಿ ಆಶ್ಚರ್ಯಚಕಿತರಾದರು. 'ಈ ರಾತ್ರಿ ನೀನು ಹೇಗೆ ಬಂದೆ ? ಹೊಳೆ ಹೇಗೆ ದಾಟಿದೆ ? ಬೇಗ ಬರಬಾರದಿತ್ತಾ ?'- ಒಂದೇ ಉಸಿರಿಗೆ ತಾಯಿ ಪ್ರಶ್ನಿಸಿದರು.

'ಬಸ್ ಹಾಳಾಯಿತು. ಹಾಗೇ ಬರಲು ತಡವಾಯಿತು. ಹೊಳೆ ಬದಿ ದೊಡ್ಡಮ್ಮನ ಮಗ ಇಸ್ಮಾಲಿ ಸಿಕ್ಕಿದ. ದೋಣಿ ಮೂಲಕ ಹೊಳೆ ದಾಟಿಸಿ, ಮನೆಯ ಬಳಿಯವರೆಗೂ ತಲುಪಿಸಿದ.

'ಏನು, ಇಸ್ಮಾಲಿ ಸಿಕ್ಕಿದನಾ? ಅವ ಮರಣ ಹೊಂದಿದ್ದಾನಲ್ಲಾ, ನಾಳೆ ಅವನ ನಲ್ವತ್ತರ ದುಆ ಇದೆಯಲ್ಲ'

ನಾನು ಪಿಳಿ ಪಿಳಿ ಕಣ್ಣು ಬಿಟ್ಟೆ.

'ಹೌದು. ನಲ್ವತ್ತು ದಿನದ ಹಿಂದೆ ಅವ ಅದೇ ಹೊಳೆಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಆರು ಹೆಣ್ಣು, ಮೂರು ಗಂಡ್ಮಕ್ಕಳ ತಂದೆಯಾಗಿದ್ದವನ ಕೈಯಲ್ಲಿ ನಯಾ ಪೈಸೆ ಇಲ್ಲ. ಟಿ.ಬಿ. ರೋಗ ಬೇರೆ ಇತ್ತು. ಹಾಗಿರುವಾಗ ಮತ್ತೇನು ಮಾಡುವುದು?' ತಾಯಿ ಹೇಳಿದರು.

ನನ್ನ ದೇಹವಿಡೀ ಗಡಗಡ ನಡುಗತೊಡಗಿತು. ತಲೆ ತಿರುಗತೊಡಗಿತು. ಅಡುಗೆ ಕೋಣೆಯಲ್ಲೇ ಮಣೆ ಎಳೆದು ಕುಳಿತೆ.

'ನೀನು ನನಗೆ ಸಹಾಯ ಮಾಡಬೇಡ. ಮಾಡುವುದಿದ್ದರೆ, ಹೆಂಡತಿ-ಮಕ್ಕಳಿಗೆ ಮಾಡು. ನಾಳೆ ಸಂಜೆ ಬಾ. ನನ್ನ ಮನೆಯಲ್ಲಿ ಗಮ್ಮತ್ತು ಇದೆ. ಎಲ್ಲಾ ಒಡಹುಟ್ಟಿದವರು ಬರ್ತಾರೆ'- ಇಸ್ಮಾಲಿ ಹೇಳಿದ ಮಾತನ್ನು ಮತ್ತೊಮ್ಮೆ ಜ್ಞಾಪಿಸಿದೆ.

ಅವ ಹೇಳಿದ್ದು ನಿಜ. ನಾಳೆ ಎಲ್ಲಾ ಒಡಹುಟ್ಟಿದವರು ಬರ್ತಾರೆ. ಆದರೆ, ಇಸ್ಮಾಲಿ ಮಾತ್ರ ಬರುವುದಿಲ್ಲ!.

* * *

# ಅರ್ಬುದ

ಟಿ.ಎಂ. ಹನೀಫ್ ಮೌಲವಿ

"ಏ ಇವಳೇ, ಎಲ್ಲಿದ್ದೀಯಾ, ಎಷ್ಟು ಕರೆದರೂ ಕೇಳುವುದಿಲ್ಲ"- ಇಶಾ ನಮಾಜಿನಲ್ಲಿ ತಲ್ಲೀನಳಾಗಿದ್ದ ನಬಿಸಾಳ ಕಿವಿಗೆ ಗಂಡನ ಬೊಬ್ಬೆ ಬಡಿಯುತ್ತಲೇ ಇತ್ತು. ಇಶಾ ನಮಾಜಿನ ಎರಡು ರಕಅತ್ ಮುಗಿದು, ಮೂರನೇ ರಕಅತ್‌ನಲ್ಲಿ ಫಾತಿಹ ಓದುತ್ತಿದ್ದಂತೆಯೇ ಒಳ ನುಗ್ಗಿದ ಚೆರಮೋನು, ಹೆಂಡತಿಯನ್ನು ಕೂಗುತ್ತಾ, ಬೊಬ್ಬೆ ಹಾಕುತ್ತಾ, 'ಏ ಇವಳೇ...' ಎಂದು ಅಬ್ಬರಿಸುತ್ತಿದ್ದ. ಅವನ ಆರ್ಭಟದಿಂದ ನಬಿಸಾಳ ನಮಾಜಿನ ಏಕಾಗ್ರತೆಗೆ ಭಂಗವಾಯಿತು. ಆದರೂ ನಮಾಜು ಪೂರ್ತಿಗೊಳಿಸಲು ನಿರ್ಧರಿಸಿದಳು.

ಫಾತಿಹ ಪೂರ್ತಿಯಾಯಿತು.

ಅಲ್ಲಾಹು ಅಕ್ಬರ್ ಎನ್ನುತ್ತಾ ರುಕೂವು ಹೋದಳು.

ಮೂರು ಬಾರಿ 'ಸುಬ್‌ಹಾನ.. 'ಹೇಳಿದಳು.

ಮತ್ತೆ 'ಸಮಿಯಲ್ಲಾಹು ಲಿಮನ್ ಹಮಿದ' ಅಂತ ಹೇಳಿ 'ಇಅತಿದಾಲ್'ಕುಳಿತಳು.

'ಏ ಇವಳೇ, ಎಲ್ಲಿದ್ದೀಯಾ ?ಒಳಗೂ ಇಲ್ಲ, ಹೊರಗೂ ಇಲ್ಲ. ಎಲ್ಲಿ ಮಣ್ಣು ತಿನ್ನುತ್ತಿದ್ದಾಳೆ' ಎನ್ನುತ್ತಾ ಚೆರಮೋನು ಅಡುಗೆ ಕೋಣೆಗೆ ಹೊಕ್ಕ. ಅಲ್ಲೂ ಹೆಂಡತಿ ಕಾಣಿಸುತ್ತಿಲ್ಲ.

'ಏ ಕತ್ತೆ, ಎಲ್ಲಿ ಸತ್ತು ಹೋಗಿದ್ದೀಯಾ, ನಿನಗೆ ಮಾತು ನಿಂತು ಹೋಗಿದೆಯಾ ?'- ಚೆರಮೋನು ಸೀದಾ ಮತ್ತೊಂದು ಕೋಣೆಗೆ ನುಗ್ಗಿದ. ಅಲ್ಲಿ ನಬಿಸಾ ನಾಲ್ಕನೇ ರಕಅತ್ ಮುಗಿಸಿ ಅತ್ತಹಿಯ್ಯಾತ್‌ಗೆ ಕುಳಿತಿದ್ದಳು. ಅವಳನ್ನು ಕಾಣುತ್ತಲೇ 'ಇಲ್ಲೇನು ಮಣ್ಣು ತಿನ್ನುತ್ತಿದ್ದೀಯಾ?' ಎಂದು ಕೇಳಿದ ಚೆರಮೋನು ಹಿಂದೆ ಮುಂದೆ ನೋಡದೆ ನಬಿಸಾಳ ಮುಸುಟಿಗೆ ಒಂದೇಟು ಹಾಕಿದ. ನಬಿಸಾಳ ನಮಾಜ್ ಅಸಿಂಧುವಾಯಿತು. ಅತ್ತಹಿಯ್ಯಾತ್ ಹೇಳಿ, ನಬಿ (ಸ.ಅ.)ತಂಜಳ್ ಮೇಲೆ ಸ್ವಲಾತ್ ಹೇಳಿ ಸಲಾಂ ಹೇಳಿದ್ದರೆ, ಆ ನಮಾಜ್ ಪೂರ್ತಿಯಾಗುತ್ತಿತ್ತು. ಆದರೆ, ಗಂಡನ

ಕೈ ನಬಿಸಾಳ ಮುಸುಟಿಗೆ ತಾಗಿದ ಕಾರಣ 'ವಳು' ಮುರಿಯಿತು. ನಮಾಜ್ ಅಸಿಂಧುವಾಯಿತು. ಆದ್ರೆ ಕಾಲು ತೊಳೆಯದ ಮೃಗಕ್ಕೆ ಅದರ ಬಗ್ಗೆ ಏನು ಗೊತ್ತು ?.

ನಮಾಜ್ ಪೂರ್ತಿಗೊಳಿಸಲಾಗದ ಬೇಸರ ನಬಿಸಾಳಿಗೆ ಉಂಟಾಯಿತು. 'ಯಾ ಅಲ್ಲಾಹ್... ನನ್ನನ್ನು ನಮಾಜ್ ಮಾಡಲು ಬಿಡುವುದಿಲ್ಲವಲ್ಲ. ಇದನ್ನು ನಾನು ಹೇಗೆ ಸಹಿಸಲಿ ? ಬೇರೆ ಯಾವ ಕಷ್ಟವನ್ನೂ ನಾನು ಸಹಿಸಿಯೇನು, ಆದರೆ ನಿನಗೆ ಸುಜೂದ್ ಹಾಕುವಾಗ ತಡೆಯುವುದನ್ನು ನಾನು ಹೇಗೆ ಸಹಿಸಲಿ ?'- ನಬಿಸಾ ಮನಸ್ಸಾರೆ ಅತ್ತಳು. ಹಾಗೇ ಇಂಥದ್ದೊಂದು ಗಂಡ ತನಗೆ ಸಿಕ್ಕಿದ ಬಗ್ಗೆ ಬೇಸರಿಸತೊಡಗಿದಳು. ಏಳು ಹೆಣ್ಣು, ನಾಲ್ಕು ಗಂಡು ಮಕ್ಕಳಿರುವ ಕಡು ಬಡ ಕುಟುಂಬವಾಗಿತ್ತು, ಕೆಳಗಿನ ಪೇಟೆಯ ಅಚ್ಚಬಾಕನದ್ದು. ನೆಬಿಸಾ ದೊಡ್ಡ ಮಗಳು. ತಾಯಿ ಅಚ್ಚುಂಞಾದ ಆರೋಗ್ಯ ಕೈ ಕೊಟ್ಟ ಕಾರಣ ಮಲಗಿದಲ್ಲೇ ಇದ್ದಾರೆ. ತಂದೆಗೆ ಉಬ್ಬಸದ ಕಾಯಿಲೆ ಬೇರೆ. ದೊಡ್ಡವರೆಲ್ಲಾ ಹೆಣ್ಮಕ್ಕಳೇ. ಗಂಡ್ಮಕ್ಕಳೆಲ್ಲ ಸಣ್ಣವರು. ಪಕ್ಕದಲ್ಲಿ ಕುಳಿತಿದ್ದ ಗಂಡನನ್ನು ಎವೆಯಿಕ್ಕಿ ನೋಡಿದ ಅಚ್ಚುಂಞಾದ, ಮಗಳು ನೆಬಿಸಾಳಿಗೆ ಗಂಡು ಹುಡುಕಿ ಎಂದು ಹೇಳತೊಡಗಿದರು. ಆದರೆ ಈ ಕಾಲದಲ್ಲಿ ಅಷ್ಟು ಸುಲಭದಲ್ಲಿ ಗಂಡು ಸಿಗುತ್ತಾ ? ಕೈ ಕೊಟ್ಟ ಆರೋಗ್ಯದ ಮಧ್ಯೆಯೂ ಅಚ್ಚಬಾಕ ಮಗಳಿಗೆ ಗಂಡು ಹುಡುಕುವ ಪ್ರಯತ್ನ ನಡೆಸಿದರು. ಆದರೆ, ಅವರಿಗೆ ಹುಡುಕಿ ಸುಸ್ತಾಯಿತೇ ವಿನಃ ಗಂಡು ಸಿಗಲೇ ಇಲ್ಲ. ಅಚ್ಚುಂಞಾದರ ಕಿರಿಕಿರಿಯೂ ಜಾಸ್ತಿಯಾಯಿತು. ಬೀಡಿ ಕಟ್ಟದಿದ್ದರೆ, ಮನೆಯ ಒಲೆಯಲ್ಲಿ ಹೊಗೆ ಏಳುವುದಿಲ್ಲ. ಇಂಥ ಕಷ್ಟದ ಮಧ್ಯೆಯೂ ನೆಬಿಸಾ ನಮಾಜ್‌ನಿಂದ ದೂರ ಉಳಿದವಳಲ್ಲ. ಯಾವ ಕೆಲಸವಿದ್ದರೂ, ಬಾಂಗ್ ಮೊಳಗಿದ ತಕ್ಷಣ ಅದನ್ನು ಅರ್ಧದಲ್ಲೇ ಬಿಟ್ಟು ನಮಾಜ್ ಮಾಡುತ್ತಾಳೆ. ಅಂಥ ಈಮಾನ್ದಾರಿ ಹುಡುಗಿಗೆ ಮೊಯಿಲಾರ್ ಮದುಮಗ ಸಿಗಬೇಕು ಎಂಬ ಆಶೆ ಅಚ್ಚುಂಞಾದರಿಗಿತ್ತು. ಹಾಗೇ ಮೊಯಿಲಾರ್ ಮದುಮಗನನ್ನು ಹುಡುಕತೊಡಗಿದಾಗ ಅವರ 'ಬೇಡಿಕೆ' ಕೇಳಿದಾಗ ಅಚ್ಚಬಾಕ ಮತ್ತು ಅಚ್ಚುಂಞಾದರ ತಲೆ ತಿರುಗತೊಡಗಿತು. ಅಲ್ಲದೆ ಬೇರೆ ಕಸುಬು ಮಾಡುವವ ನಾದರೂ ತನ್ನ ಮಗಳಿಗೆ ಗಂಡನಾಗಿ ಬರಲಿ ಎಂದು ಆಶಿಸಿ ಗಂಡು ಹುಡುಕತೊಡಗಿದರು. ಅಂತೂ ಮದುವೆ ದಲ್ಲಾಳಿ ಸುಲೈಮ ಒಂದು ಸಂಬಂಧ ತಂದ. ಹುಡುಗನ ಹೆಸರು ಚೆರೆಮೋನು ಅಂತ. ಒಳ್ಳೆಯವ ಎಂದೆಲ್ಲಾ ಹೇಳಿದ ಸುಲೈಮ ನೂರಾರು ಸುಳ್ಳನ್ನೂ ಸೇರಿಸಿದ. ಅಚ್ಚಬಾಕನಿಗೆ ಸಂಬಂಧ ಆಗಬಹುದು ಎಂದು ಅನಿಸಿತು. ೨೦ ಸಾವಿರ ನಗದು ಮತ್ತು ೧೦ ಪವನು ತೂಕದ ಚಿನ್ನಾಭರಣ ಹಾಕಿದರೆ ಸಾಕು ಎಂದು ದಲ್ಲಾಳಿ ಹೇಳಿದಾಗ ಅಚ್ಚಬಾಕ ಅದಕ್ಕೆ ಒಪ್ಪಿಗೆ ಸೂಚಿಸಿದರು. ಮೊಯಿಲಾರ್ ಮದುಮಗ ಸಿಕ್ಕದ ಬೇಸರ ಅಚ್ಚುಂಞಾದರಿಗೆ ಇತ್ತಾದರೂ, ದೊಡ್ಡ ಮಗಳಿಗೆ ಮದುವೆಯ ಯೋಗ್ಯ ಕೂಡಿಬಂದ ಸಂತಸದಿಂದ ಅವರ ಮನಸ್ಸು ಪುಳಕಿತಗೊಂಡಿತು. ತನ್ನೆಲ್ಲಾ ನೋವನ್ನು ಮರೆತು ಮದುವೆಗೆ ಸಿದ್ಧತೆ ನಡೆಸತೊಡಗಿದರು. ಅಂತೂ ಅದೊಂದು ದಿನ ಮದುವೆಯಾಯಿತು. ತದನಂತರವೇ ಚೆರೆಮೋನುವಿನ ಹಣೆಬರಹ ಗೊತ್ತಾಯಿತು.

* * *

'ಒಂದು ಗಂಟೆಯಿಂದ ನಾನು ಇವಳನ್ನು ಕೂಗಿ ಕರೆಯುತ್ತಿದ್ದೇನೆ. ಕೇಳಿಯೂ ಕೇಳಿಸದಂತೆ ನಟಿಸುತ್ತಿದ್ದಾಳೆ'- ಹಾಗಂತ ಹೇಳಿದ ಚೆರೆಮೋನು, ಹೆಂಡತಿಗೆ ಮತ್ತೊಂದು ಏಟು ಬಿಗಿದ. ಇನ್ನೀಗ ನಮಾಜ್ ಮಾಡಿದರೆ ಸರಿಯಾಗದು ಎಂದು ಭಾವಿಸಿದ ನಬಿಸಾ ನಮಾಜ್‌ನ ವಸ್ತ್ರವನ್ನು ಕಳಚುತ್ತಲೇ 'ಏನು ?' ಎಂದು ಕೇಳಿದಳು.

'ನಿನಗೆ ಕಿವಿ ಕೇಳುವುದಿಲ್ಲವಾ ?'

'ನಾನು ನಮಾಜ್ ಮಾಡುತ್ತಿದ್ದೆನಲ್ಲಾ, ಅಷ್ಟೂ ತಾಳ್ಮೆ ನಿಮಗಿಲ್ಲವಾ ? ನನ್ನ ನಮಾಜ್ ಪೂರ್ತಿಗೊಳಿಸಲು ನೀವು ಬಿಡಲಿಲ್ಲ. ನೀವು ನಮಾಜ್ ಮಾಡದ್ದು ದೊಡ್ಡ ತಪ್ಪು. ನಮಾಜ್ ಮಾಡುವವರನ್ನ ತಡೆ ಹಿಡಿಯುವುದು ಅದಕ್ಕಿಂದ ದೊಡ್ಡ ತಪ್ಪು'- ನಬಿಸಾ ಹೇಳುತ್ತಾ ಹೋದಳು.

'ಓಹೋ... ನೀನು ದೊಡ್ಡ ಈಮಾನ್ದಾರಿ. ನೀನು ನಮಾಜ್ ಮಾಡಿ ನಾವಿನ್ನು ಒಳ್ಳೆಯ ದಾಗಲಿಕ್ಕುಂಟು. ಹೋಗು, ಹೋಗು. ಊಟ ಹಾಕಿ ತಾ'.

ಉಪಾಯವಿಲ್ಲದೆ, ನಬಿಸಾ ಅಡುಗೆ ಕೋಣೆಯೊಳಗೆ ಕಾಲಿಟ್ಟಳು. ಹಾಗೇ ಊಟ ಬಡಿಸಿ ಗಂಡನ ಮುಂದಿಟ್ಟಳು.

'ಪದಾರ್ಥ ಎಲ್ಲಿದೆ ?'

'ಪದಾರ್ಥಕ್ಕೆ ಏನೂ ಇಲ್ಲ. ಉಪ್ಪುಮೆಣಸು ಮಾಡಿ ತರುತ್ತೇನೆ'

'ಅದನ್ನು ನಿನ್ನ ತಲೆಗೆ ಸುರಿ. ನೀನು ಏನು ಮಣ್ಣು ತಿನ್ನುತ್ತಾ ಕೂತದ್ದಾ ? ಬೀಡಿ ಕಟ್ಟಲೇನು ನಿನಗೆ ? ಬೀಡಿಯ ಮಜೂರಿ ಎಲ್ಲಿದೆ ? ನಿನ್ನ 'ದೊಡ್ಡವ'ನಿಗೆ ಕೊಟ್ಟೆಯಾ ? ಸಾಮಾನು ತರಿಸಿ ಪದಾರ್ಥ ಮಾಡಲು ನಿನಗೆ ಏನು ಧಾಡಿಯಾ ?'

'ಕಟ್ಟಿದ ಬೀಡಿಯ ಮಜೂರಿ ಶನಿವಾರ ಸಿಗುತ್ತೆ. ಹಾಗಿರುವಾಗ ನಾನೇನು ಮಾಡಲಿ ? ಇದ್ದ ಅಕ್ಕಿಯಿಂದ ಅನ್ನ ಮಾಡಿದೆ' ಎನ್ನುತ್ತಾ ನಬಿಸಾ ಉಪ್ಪುಮೆಣಸು ಮಿಶ್ರಿತ ಪದಾರ್ಥವನ್ನು ಗಂಡನ ಮುಂದಿಟ್ಟಳು.

'ಊಟವನ್ನು ನಿನ್ನ ಎದೆಗೆ ಹಾಕು'ಎಂದು ಅವಾಚ್ಯವಾಗಿ ನುಡಿದ ಚೆರೆಮೋನು ಅನ್ನದ ಬಟ್ಟಲನ್ನು ಹೆಂಡತಿಯ ಮುಖಕ್ಕೆ ಎಸೆದ. ಹಾಗೇ ಹೋಗಿ ಚಾಪೆಗೆ ಬಿದ್ದ.

ಅಂದು ಮಧ್ಯಾಹ್ನ ನಬಿಸಾ ಅನ್ನ ಮಾಡದೆ ಬರೀ ನೀರು ಕುಡಿದಿದ್ದಳು. ಹಾಗೇ ರಾತ್ರಿ ಗಂಡನಿಗಾಗಿ ಅನ್ನ ಮಾಡಿಟ್ಟಿದ್ದಳು. ಅದನ್ನೇ ಈಗ ಗಂಡ ಚೆಲ್ಲಿ ಬಿಟ್ಟಿದ್ದ. ಮಧ್ಯಾಹ್ನದ ಮೊದಲು ನಿಯ್ಯತ್ ಮಾಡಿದ್ದರೆ, ಸುನ್ನತ್ ಉಪವಾಸ ಹಿಡಿದ ಪುಣ್ಯ ಸಿಗುತ್ತಿತ್ತು ಎಂದು ನಬಿಸಾ ಭಾವಿಸಿದ್ದಳು.

ಪ್ರವಾದಿ ಪೈಗಂಬರ್ ಹೇಳಿದ ನುಡಿ ಮುತ್ತುಗಳನ್ನು ಸಣ್ಣದಿರುವಾಗ ಮದ್ರಸದಲ್ಲಿ ಉಸ್ತಾದರು ಹೇಳಿಕೊಟ್ಟದ್ದನ್ನು ನಬಿಸಾ ಮತ್ತೆ ಮತ್ತೆ ಜ್ಞಾಪಿಸತೊಡಗಿದಳು.

'ಸತ್ಯ ವಿಶ್ವಾಸಿಗಳ ಪೈಕಿ ಒಳ್ಳೆಯ ಗುಣ ಸ್ವಭಾವವುಳ್ಳ ಮತ್ತು ಹೆಂಡತಿಯ ಜತೆ ಹೆಚ್ಚು ಪ್ರೀತಿಯುಳ್ಳವರಲ್ಲಿ ಈಮಾನ್ ತುಂಬಿರುತ್ತದೆ' ಎಂದು ಉಸ್ತಾದ್ ಕಲಿಸಿಕೊಟ್ಟ ಮಾತನ್ನು ನೆನಪಿಸುವಾಗ, ನಬಿಸಾಳಿಗೆ ಗಂಡನ ಮುಖ ಎದುರಾಗುತ್ತದೆ. ಇವರು ಎಂಥ ಮನುಷ್ಯ ?. ಮದುವೆ ಯಾಗಿ ಒಂದು ವರ್ಷವಾಯಿತು. ಈವರೆಗೂ ಇವರು ಒಂದೇ ಒಂದು ಪ್ರೀತಿಯ ಮಾತನ್ನು ಆಡಿದ್ದಿದೆಯಾ ? ಮೃಗದ ಹಾಗೆ ಬೇಕಾದಾಗ ನನ್ನ ಮೇಲೆ ಎರಗುತ್ತಾರೆಯೇ ವಿನಃ ನನ್ನನ್ನು ಪ್ರೀತಿಯಿಂದ ಹೇಗಿದ್ದೀಯಾ ?ಎಂದು ಕೇಳಿದವರೇ ಅಲ್ಲ... ನಬಿಸಾ ಕುಳಿತು ಯೋಚಿಸುತ್ತಲೇ ಇದ್ದಳು. ಕೆಳಗೆ ಕಣ್ಣು ಹಾಯಿಸಿದಾಗ ಅಲ್ಲಲ್ಲಿ ಚೆಲ್ಲಲ್ಪಟ್ಟ ಅನ್ನ ಕಂಡು ಬಂತು. ತನಗರಿವಿಲ್ಲ ದಂತೆ ಅವಳು ಅದನ್ನು ಹೆಕ್ಕತೊಡಗಿದಳು. ಅದನ್ನು ಏನು ಮಾಡಬೇಕು ಎಂದು ಅವಳಿಗೆ ಗೊತ್ತಾಗ ಲಿಲ್ಲ. ಹಾಗೇ ಸುಮ್ಮನೆ ಕುಳಿತಳು. ಚೆರೆಮೋನಿಗೆ ಗಾಢ ನಿದ್ದೆ. ಗೊರಕೆ ಎಳೆಯುತ್ತಲೇ ಇದ್ದ.

ನಬಿಸಾ ಎದ್ದು ಮತ್ತೊಮ್ಮೆ ವಳು ಮಾಡಿದಳು. ಹಾಗೇ ಇಶಾ ನಮಾಜ್ ಮಾಡತೊಡಗಿ ದಳು. ಅಲ್ಲಾಹನ ಬಳಿ ದುಆ ಮಾಡಿದಳು. ಗಂಡನಿಗೆ ಒಳ್ಳೆಯ ಸದ್ಬುದ್ಧಿ ಕೊಡು ಎಂದು ಮತ್ತೆ ಮತ್ತೆ ಪ್ರಾರ್ಥಿಸಿದಳು. ಸ್ವಲ್ಪ ಸಮಯದ ನಂತರ ಅಲ್ಲಿಂದ ಎದ್ದಳು. ಹೊಟ್ಟೆ ಹಸಿಯು ತ್ತಲೇ ಇತ್ತು. ಅವಳಿಗೆ ನಾಳೆಯ ಚಿಂತೆ ಕಾಡತೊಡಗಿತು. ಮನೆಯೊಳಗೆ ಒಂದಿಷ್ಟು ಅಕ್ಕಿ ಇಲ್ಲ. ಈಗಲೇ ಹಸಿವು ತಡೆಯಲಾಗುವುದಿಲ್ಲ. ಹೇಗೂ ಹೆಕ್ಕಿಟ್ಟ ಅನ್ನವನ್ನು ತಿಂದು ನಾಳೆ ಸುನ್ನತ್ ಉಪವಾಸ ಮಾಡುವುದು ಎಂದು ನಿರ್ಧರಿಸಿ ಬಿಟ್ಟಳು.

'ಅಲ್ಲಾಹು ಅಕ್ಬರ್, ಅಲ್ಲಾಹು ಅಕ್ಬರ್...'

ಮುಂಜಾನೆಯ ಬಾಂಗ್ ಮೊಳಗಿದಾಗ, ನಬಿಸಾಳಿಗೆ ಎಚ್ಚರವಾಯಿತು. ಎದ್ದು ಹಲ್ಲುಜ್ಜಿ, ಅವಳು ಮಾಡಿ ಎರಡು ರಕಅತ್ ಸುನ್ನತ್ ನಮಾಜ್ ಮಾಡಿದಳು. ನಂತರ ಸುಬಹ್ ನಮಾಜ್ ಮಾಡಿದಳು.

ಚೆರೆಮೋನು ನಿದ್ದೆಯಲ್ಲೇ ಮುಳುಗಿದ್ದ. ನಮಾಜ್ ಮಾಡಲು ಎಬ್ಬಿಸಿದರೆ, ಬೈಗುಳ ಗ್ಯಾರಂಟಿ. ಅಲ್ಲದೆ ನನ್ನ ನಮಾಜ್‌ಗೂ ಅಡ್ಡಿಪಡಿಸಿಯಾರು ಎಂದು ಭಾವಿಸಿ ಸುಮ್ಮನಾದಳು. ಸುಬಹ್ ನಮಾಜ್‌ಗೆ ಭಂಗವಾಗದಂತೆ ಅನುವು ಮಾಡಿಕೊಟ್ಟ ಅಲ್ಲಾಹನನ್ನು ನೆನೆದಳು. ಹಾಗೇ ಗಂಡನಿಗೆ ಸದ್ಬುದ್ಧಿ ಕೊಡು ಎಂದು ಪ್ರಾರ್ಥಿಸಿದಳು. ನಂತರ ಕುರಾನ್ ಗ್ರಂಥ ಬಿಡಿಸಿ ಓದತೊಡಗಿದಳು.

ದಿನ ಉರುಳುತ್ತಲಿತ್ತು. ಗಂಡನ ಅವಾಚ್ಯ ಮಾತುಗಳನ್ನು ಕೇಳುತ್ತಾ, ಹೊಡೆತ ತಿನ್ನುತ್ತಾ ನಬಿಸಾ ತಾಳ್ಮೆ ವಹಿಸಿದಳು. ಒಮ್ಮೊಮ್ಮೆ ಆತ್ಮಹತ್ಯೆ ಮಾಡಿಕೊಳ್ಳಬೇಕು ಎಂದು ಮನಸ್ಸು ಹೇಳುತ್ತಿದ್ದಾದರೂ, ಅದು ಹರಾಂ ಎಂಬ ಕಲ್ಪನೆ ಬಂದೊಡನೆ ಆ ನಿರ್ಧಾರದಿಂದ ದೂರ ಸರಿಯುತ್ತಿದ್ದಳು. ಸೃಷ್ಟಿಸಿದವನಿಗೆ ನಮ್ಮ ಪ್ರಾಣ ಕಸಿಯುವ ಅಧಿಕಾರವಲ್ಲದೆ ನಮಗೆ ಇಲ್ಲ. ನಮ್ಮ ಕುಶಿ ಪ್ರಕಾರ ಪ್ರಾಣ ತೆಗೆದರೆ ಈಮಾನ್ ನಷ್ಟವಾದೀತು ಎಂಬ ಹೆದರಿಕೆ ಶುರುವಾಯಿತು. ಪರಲೋಕದ ಶಿಕ್ಷೆಗಿಂತ ಈ ಲೋಕದ ಶಿಕ್ಷೆಯೇ ಆದೀತು. ಇಲ್ಲಿನ ಕಷ್ಟವನ್ನು ಸಹಿಸಿದರೆ, ಅಲ್ಲಾದರು ಸುಖ ಸಿಕ್ಕೀತು ಎಂದು ನಬಿಸಾ ಭಾವಿಸಿದಳು.

ಒಂದು ಮುಂಜಾನೆ ನಬಿಸಾಳಿಗೆ ಗಂಡನ ಬೊಬ್ಬೆ ಕೇಳುತ್ತಿತ್ತು. ಎದ್ದು ಕಣ್ಣಾಡಿಸಿದಾಗ, ಚೆರೆಮೋನು ಹೊಟ್ಟೆಗೆ ಕೈ ಇಟ್ಟು ಕೂಗುತ್ತಿದ್ದ. ಆತಂಕದ ಮಧ್ಯೆಯೂ ಧೈರ್ಯವಹಿಸಿದ ನಬಿಸಾ ಚಿಮಿಣಿ ಹೊತ್ತಿಸಿದಳು. ಹಾಗೇ ' ಏನಾಗುತ್ತಿದೆ ನಿಮಗೆ, ಹೊಟ್ಟೆ ನೋವಾಗುತ್ತದೆಯಾ' ಎಂದು ಕೇಳಿದಳು.

'ಹೌದು. ನನಗೆ ಹೊಟ್ಟೆ ನೋವು ತಡೆಯಲಾಗುತ್ತಿಲ್ಲ. ಯಾ ಅಲ್ಲಾ...ಹ್'- ಚೆರೆಮೋನಿನ ಕೂಗು ಹೆಚ್ಚಾಯಿತು.

ನಬಿಸಾಳಿಗೆ ಏನು ಮಾಡಬೇಕು ಎಂದು ಗೊತ್ತಾಗಲಿಲ್ಲ. ಚೆರೆಮೋನಿನ ಬೊಬ್ಬೆ ಕೇಳಿ, ಪಕ್ಕದ ಮನೆಯ ಸುಲೈಮಾ ಓಡಿ ಬಂದ. ಚೆರೆಮೋನು ನೋವು ತಡೆಯಲಾಗದೆ ಕೈ ಕಾಲು ಬಡಿಯುತ್ತಲೇ ಇದ್ದ.

'ಆಸ್ಪತ್ರೆಗೆ ಕರೆದುಕೊಂಡು ಹೋಗೋಣವಾ ?'- ಸುಲೈಮಾ ಕೇಳಿದ.

ನಬಿಸಾ ಹ್ಞೂಂಗುಟ್ಟಿದಳು. ಹಾಗೇ ಸುಲೈಮಾ ಒಂದು ರಿಕ್ಷ ತಂದ. ಚೆರೆಮೋನನ್ನು ಆಸ್ಪತ್ರೆಗೆ ದಾಖಲಿಸಿದಾಗ, ವೈದ್ಯರು ತುರ್ತು ಚಿಕಿತ್ಸಾ ವಿಭಾಗಕ್ಕೆ ಸೇರಿಸಿದರು. ಮರುದಿನ ಹೊಟ್ಟೆ ನೋವು ಒಂದಷ್ಟು ಕಡಿಮೆಯಾಗಿತ್ತು. ಆದರೂ ನಾಲ್ಕು ದಿನ ಅಲ್ಲಿರಬೇಕಾಯಿತು. ಐದನೇ ದಿನ ಆಸ್ಪತ್ರೆಯಿಂದ ಬಿಡುಗಡೆಗೊಳಿಸಿ ಮನೆಗೆ ಕಳುಹಿಸಿಕೊಡಲಾಯಿತು. ಆವಾಗ ನಬಿಸಾ ಹಣ ಹೊಂದಿಸಲು ಪಟ್ಟಪಾಡು ಹೇಳತೀರದು. ಚೆರೆಮೋನಿನ ಕೈಯಲ್ಲಿ ನಯಾ ಪೈಸೆ ಇರಲಿಲ್ಲ. ಉಪಾಯವಿಲ್ಲದೆ ನಬಿಸಾ ಇದ್ಯಬ್ಬಾಕರ ಬ್ರಾಂಚಿಗೆ ಹೋಗಿ ದಮ್ಮಯ್ಯ ಹಾಕಿ, ಬೀಡಿಯ ಬೋನಸ್ ಸಿಕ್ಕಿದರೆ ಕೊಡುವೆ ಎಂದು ಹೇಳಿ ಒಂದು ಸಾವಿರ ರೂಪಾಯಿ ಸಾಲ ಪಡೆದಿದ್ದಳು. ಅದರಿಂದಲೇ ಒಂಬೈನೂರು ರೂಪಾಯಿ ಆಸ್ಪತ್ರೆಗೆ ಕಟ್ಟಿದ್ದಳು.

ನಾಲ್ಕು ದಿನ ಯಾವ ರಗಳೆಯೂ ಇರಲಿಲ್ಲ. ಒಂದು ದಿನ ಅಂಗಡಿಯತ್ತ ಹೊರಟು ನಿಂತ ಚೆರೆಮೋನು, 'ಒಂದೈವತ್ತು ರೂಪಾಯಿ ಇದ್ರೆ ಕೊಡು'ಎಂದು ಕೇಳಿದ.

'ನನ್ನ ಕೈಯಲ್ಲಿ ನಯಾ ಪೈಸೆ ಇಲ್ಲ. ಬೀಡಿ ಕಟ್ಟಿದ್ದು ಊಟ ಮಾಡಲಿಕ್ಕಾಯಿತು. ಮೊನ್ನೆ ಆಸ್ಪತ್ರೆಗೆ ಕಟ್ಟಲು ಒಂದು ಸಾವಿರ ರೂಪಾಯಿ ಸಾಲ ಮಾಡಿಯಾಗಿದೆ. ಹೀಗಿರುವಾಗ ನಾನು ಎಲ್ಲಿಂದ ಹಣ ತರಲಿ ? ಹೆಂಗಸರು ದುಡಿದು ಎಷ್ಟು ಸಾಕಲು ಸಾಧ್ಯ ?'- ನಬಿಸಾಳ ಈ ಮಾತನ್ನು ಕೇಳಿದೊಡನೆ ಚೆರೆಮೋನು ಕೋಪದಿಂದ ಕುದಿಯತೊಡಗಿದ.

'ನನ್ನನ್ನು ಆಸ್ಪತ್ರೆಗೆ ಸೇರಿಸಲು ನಿನಗೆ ಯಾರು ಹೇಳಿದ್ದು ? ಅಲ್ಲಿಗೆ ಕರೆದುಕೊಂಡು ಹೋಗದಿದ್ದರೆ, ನಾನೇನು ಹುಷಾರಾಗುತ್ತಿರಲಿಲ್ಲವಾ ? ಸುಮ್ಮನೆ ಆಸ್ಪತ್ರೆಗೆ ಒಂದು ಸಾವಿರ ರೂಪಾಯಿ ಸುರಿದಳು'ಎನ್ನುತ್ತಾ ಚೆರೆಮೋನು ಅವಾಚ್ಯ ಶಬ್ದದಿಂದ ಬೈಯ್ದನಲ್ಲದೆ, ಎಡಕಾಲಿನಿಂದ ಬೀಡಿಯ ಸೂಪನ್ನು ಒದ್ದು ಎಸೆದ. ಅದರಲ್ಲಿದ್ದ ಎಲೆ, ಸೊಪ್ಪು, ಬೀಡಿ ಎಲ್ಲಾ ಚೆಲ್ಲಾಪಿಲ್ಲಿಯಾಯಿತು.

ಸೂಪಿನ ಕಾಗದದ ಎಡೆಯಲ್ಲಿಟ್ಟಿದ್ದ ನೂರರ ನೋಟು ಕೂಡ ಹಾರಿತು. ಚೆರೆಮೋನು ಅದನ್ನು ತಕ್ಷಣ ಕೈಗೆತ್ತಿಕೊಂಡು ಕಿಸೆಯೊಳಗೆ ಹಾಕಿದ. ಹಾಗೇ ಅಹಂಕಾರದ ನಗೆ ಚೆಲ್ಲುತ್ತಾ ಹೆಜ್ಜೆ ಹಾಕಿದ.

ನಬಿಸಾಳ ಕಣ್ಣಲ್ಲಿ ನೀರು ಆಟವಾಡತೊಡಗಿತು. ಬೇಸರ, ದುಃಖದಿಂದ ಅವಳು ಮನಸ್ಸಾರೆ ಅತ್ತಳು. ಸುಮ್ಮನೆ ಕೆಲಕಾಲ ಕುಳಿತಳು.

ಲುಹರ್ ಬಾಂಗ್ ಮೊಳಗಿದಾಗ ನಬಿಸಾ ಎದ್ದು, ವಳು ಮಾಡುತ್ತಾ ನಮಾಜ್ ಮಾಡಿದಳು. ಅಲ್ಲಾಹನಲ್ಲಿ ಮತ್ತೊಮ್ಮೆ ಪ್ರಾರ್ಥಿಸಿದಳು.

ಅಂದು ರಾತ್ರಿ ಚೆರೆಮೋನು ಮನೆಗೆ ಕಾಲಿಡಲಿಲ್ಲ. ನಬಿಸಾ ನಡುರಾತ್ರಿಯವರೆಗೂ ಕಾದು ಕುಳಿತಳು. ಕಣ್ಣಿಗೆ ನಿದ್ದೆ ಹತ್ತುತ್ತಿದ್ದಂತೆಯೇ ಚಾಪೆಗೆ ತಲೆಕೊಟ್ಟಳು. ಎರಡಲ್ಲ, ಮೂರು ದಿನವಾದರೂ ಗಂಡನ ಸುಳಿವಿಲ್ಲ. ಎಷ್ಟಾದರು ಗಂಡನಲ್ಲವೇ ? ಒಂದೆಡೆ ಗಂಡನ ನೆನಪು, ಇನ್ನೊಂದೆಡೆ ಹೊಟ್ಟೆಯ ಹಸಿವು. ಉಪಾಯವಿಲ್ಲದೆ ಬೀಡಿಯ ಸೂಪು ಕೈಗೆತ್ತಿಕೊಂಡಳು. ಅಷ್ಟರಲ್ಲಿ ಹೊರಗಿನಿಂದ ಯಾರೋ ಕೂಗಿ ಕರೆಯುವುದು ಕೇಳಿಸಿತು.

'ಯಾರು ?'- ನಬಿಸಾ ಕೇಳಿದಳು.

'ಇದು ಚೆರೆಮೋನಿನ ಮನೆಯಾ '?

'ಹೌದು, ಏನು ವಿಷ್ಯ?'

'ಚೆರೆಮೋನು ಆಸ್ಪತ್ರೆಯಲ್ಲಿದ್ದಾನೆ'-ಆಗಂತುಕ ಹೇಳಿದ. ನಬಿಸಾಳಿಗೆ ಕೈ ಕಾಲು ಮರಗಟ್ಟಿದ ಹಾಗಾಯಿತು. 'ಏನು, ಏನಾಯಿತು ?' ಎಂದು ಕೇಳುತ್ತಾ ನಬಿಸಾ ಬುರ್ಖಾ ಮೈಗೆಳೆದುಕೊಂಡಳು.

ಚೆರೆಮೋನು, ಆಸ್ಪತ್ರೆಯ ಬೆಡ್ ಮೇಲೆ ಮಲಗಿದ್ದ. ನಬಿಸಾ ಎಬ್ಬಿಸಲು ಪ್ರಯತ್ನಿಸಿದಳು. ಆದರೆ ಚೆರೆಮೋನು ಮಾತನಾಡುತ್ತಿಲ್ಲ.

'ಅಮ್ಮಾ...ಈಗ ಎಬ್ಬಿಸಬೇಡಿ. ನಿದ್ರಿಸಿರಬೇಕು'-ನರ್ಸ್ ನುಡಿದಳು.

'ಇವನ ಕರುಳಲ್ಲಿ ಹುಣ್ಣಾಗಿದೆ. ಸ್ವಲ್ಪ ದಿನ ಇಲ್ಲೇ ಇರಬೇಕಾಗಿದೆ. ರಕ್ತ, ಮೂತ್ರ ಟೆಸ್ಟ್ ಮಾಡಲು ಬೆಂಗಳೂರಿಗೆ ಕಳುಹಿಸಲಾಗಿದೆ. ವರದಿ ಬಂದ ನಂತರ ವಿಷಯ ಹೇಳು. ನೀವೀಗ ಏನೂ ಹೆದರಬೇಡಿ'- ಡಾ. ಸುಲೈಮಾನ್ ನಬಿಸಾಳಿಗೆ ಧೈರ್ಯ ಕೊಟ್ಟರು.

'ಎಷ್ಟು ದಿನ ಇಲ್ಲಿರಬೇಕು, ಡಾಕ್ಟರ್ ?'

'ಅದನ್ನೀಗ ಹೇಳಲು ಆಗುವುದಿಲ್ಲ. ಹಣ ಸ್ವಲ್ಪ ಖರ್ಚು ಮಾಡಬೇಕಾಗುತ್ತದೆ. ವರದಿ ಬಂದ ನಂತರ ಬೆಂಗಳೂರಿಗೆ ಕರೆದುಕೊಂಡು ಹೋಗಬೇಕಾದೀತು'

ನಬಿಸಾ ತನ್ನ ಕಷ್ಟವನ್ನು ನೆನೆದಳು. ಹಾಗೇ ಅದನ್ನು ವೈದ್ಯರ ಮುಂದೆ ತೋಡಿಕೊಂಡಳು. ಅದನ್ನು ಕೇಳಿ ವೈದ್ಯರಿಗೂ ತುಂಬಾ ಬೇಸರವಾಯಿತು. 'ಯಾವುದಕ್ಕೂ ವರದಿ ಬರಲಿ, ಎರಡು

ದಿನ ಕುಳಿತುಕೊಳ್ಳಿ. ಆವಾಗ ಏನೂಂತ ಹೇಳ್ತೇನೆ. ನನ್ನ ಚಾರ್ಜ್‌ನಲ್ಲಿ ನಾನು ರಿಯಾಯಿತಿ ಮಾಡ್ತೇನೆ. ನೀವೇನೂ ಬೇಸರಿಸಬೇಡಿ'

ಹೊಟ್ಟೆಯಲ್ಲಿ ಕ್ಯಾನ್ಸರ್!

ಬೆಂಗಳೂರಿನಿಂದ ಬಂದ ವೈದ್ಯಕೀಯ ವರದಿ ಬಹಿರಂಗಪಡಿಸಿತು. ವೈದ್ಯರು ಅದನ್ನೇ ಊಹಿಸಿದ್ದರು. ಹಾಗಾಗಿ ಇನ್ನು ಕೇವಲ ಮೂರು ತಿಂಗಳ ಆಯುಷ್ಯ ಮಾತ್ರ. ಆದರೆ, ಅದನ್ನು ನಬಿಸಾಳಲ್ಲಿ ವೈದ್ಯರು ಹೇಳಲಿಲ್ಲ.

ಆದರೆ ಚೆರೆಮೋನು?. ಅವನು ಮನುಷ್ಯತ್ವ ಇಲ್ಲದವನು. ನಾನಾ ರೀತಿಯಲ್ಲಿ ಹೆಂಡತಿಯನ್ನು ಹಿಂಸಿಸುವವನು. ರೋಗಿಯಲ್ಲಿ ಯಾವುದನ್ನೂ ಹೇಳಬಾರದು. ಆದರೆ, ಯಾಕೋ ಚೆರೆಮೋನುವಿನಲ್ಲಿ ಇದನ್ನು ಹೇಳುವುದು ಒಳ್ಳೆಯದು ಎಂದು ವೈದ್ಯರಿಗೆ ಅನಿಸಿತು.

'ವರದಿ ಬಂತಾ ಡಾಕ್ಟರ್ ?'

'ಹೌದು. ವರದಿ ಬಂದಿದೆ. ನೀವಿಂದು ನಿಮ್ಮ ಗಂಡನನ್ನು ಮನೆಗೆ ಕರೆದುಕೊಂಡು ಹೋಗಬಹುದು. ಪಕ್ಕದಲ್ಲೇ ಮೆಡಿಕಲ್ ಇದೆ. ಈ ಚೀಟಿಯಲ್ಲಿ ಬರೆದ ಔಷಧಿ ತನ್ನಿ'

ನಬಿಸಾ ಚೀಟು ತೆಗೆದುಕೊಂಡು ಹೋದಳು. ಆದರೆ, ಔಷಧಿ ಖರೀದಿಸಲು ಆಕೆಯಲ್ಲಿ ಹಣವಿರಲಿಲ್ಲ. ಅವಳು ದಾರಿ ಮಧ್ಯೆ ನಿಂತು ಯೋಚಿಸತೊಡಗಿದಳು. ಇತ್ತ ಡಾ. ಸುಲೈಮಾನ್ ವಾರ್ಡ್‌ನೊಳ ಹೊಕ್ಕು ಚೆರೆಮೋನನ್ನು ಕಂಡು 'ಹೇಗಿದ್ದೀಯಾ ?' ಎಂದು ಕೇಳಿದರು.

'ಆರೋಗ್ಯವಾಗಿದ್ದೇನೆ. ಆದರೆ, ಆಗಾಗ ಹೊಟ್ಟೆ ನೋವು ಆಗುತ್ತಿದೆ'

ವೈದ್ಯರು ಅಲ್ಲೇ ಕುಳಿತು ರೋಗಿಯ ಜತೆ ಹಲವಾರು ವಿಷಯದ ಬಗ್ಗೆ ಮಾತನಾಡಿದರು. ಅವನ ಕಷ್ಟ, ಸುಖದ ಬಗ್ಗೆ ಕೇಳಿ ತಿಳಿದುಕೊಂಡರು. ಚೆರೆಮೋನಿಗಾಗಿ ನಬಿಸಾ ಪಡುತ್ತಿರುವ ಪಾಡನ್ನು ವಿವರಿಸಿ ಹೇಳಿದರಲ್ಲದೆ, 'ನಿನಗಿನ್ನು ಕೇವಲ ೩ತಿಂಗಳ ಆಯುಷ್ಯವಿದೆ. ಹಾಗಾಗಿ ಅಷ್ಟರವರೆಗಾದರೂ ನೀನು ಅವಳ ಜತೆ ಕುಶಿಯಿಂದ ಇರು. ಅವಳನ್ನು ಅರ್ಥ ಮಾಡಿಕೋ' ಎಂದರು.

'ಡಾಕ್ಟ್ರೇ... ನೀವು ನನ್ನ ಕಣ್ತೆರೆಸಿದಿರಿ. ನಾನು ಅವಳಿಗೆ ತುಂಬಾ ಕಿರುಕುಳ ಕೊಟ್ಟೆ. ಅವಳಲ್ಲದೆ ಬೇರೆ ಯಾವ ಹೆಣ್ಮಗಳಾಗಿದ್ದರೂ ಕೂಡ ನನ್ನನ್ನು ಬಿಟ್ಟು ಓಡಿ ಹೋಗುತ್ತಿದ್ದಳೋ ಏನೋ ? ಅವಳ ತಾಳ್ಮೆ ಅಪಾರ. ನನಗಿರುವ ಆಯುಷ್ಯ ಅಲ್ಪ. ಆವರೆಗೂ ನಾನು ಅವಳ ಮನಸ್ಸನ್ನು ನೋಯಿಸಲಾರೆ'- ಚೆರೆಮೋನು ಕೂಗುತ್ತಾ ಹೇಳಿದ.

ವೈದ್ಯರು ಎದ್ದು ಹೊರಡಲು ಅನುವಾದರು. ಬಾಗಿಲು ತೆರೆದು ಹೊರಗೆ ಕಾಲಿಡುತ್ತಿದ್ದಂತೆಯೇ ನಬಿಸಾ ಪ್ರಜ್ಞೆ ತಪ್ಪಿ ಬಿದ್ದಿರುವುದನ್ನು ಕಂಡಳು. ಔಷಧಿಯ ಚೀಟು ಅವಳ ಕೈಯಲ್ಲಿ ಹಾಗೇ ಇತ್ತು. ಹೆಂಡತಿ ಅಂಗಾತ ಬಿದ್ದುದನ್ನು ಕಂಡ ಚೆರೆಮೋನು ಎದ್ದು ಓಡೋಡಿ ಹೊರ ಬಂದ. ಇಬ್ಬರೂ ನಬಿಸಾಳನ್ನು ಎತ್ತಿ ಬೆಡ್ಡಿನ ಮೇಲೆ ಮಲಗಿಸಿದರು.

'ತುಂಬಾ ನಿತ್ರಾಣೆಯಾಗಿದ್ದಾಳೆ. ಗ್ಲುಕೋಸ್ ಬೇಕಾಗುತ್ತದೆ' ಎಂದು ನಬಿಸಾಳನ್ನು ಪರೀಕ್ಷಿಸಿದ ವೈದ್ಯರು ತಿಳಿಸಿದರು. ಹಾಗೇ ನಬಿಸಾಳಿಗೆ ಗ್ಲುಕೋಸ್ ಕೊಡಲಾಯಿತು.

ಔಷಧಿಗಾಗಿ ಹೊರ ಹೋಗಿದ್ದ ನಬಿಸಾ ಹಣವಿಲ್ಲದೆ ಬರಿಗೈಯಲ್ಲಿ ಮರಳಿ ಬರುತ್ತಿರುವಾಗಲೇ ಗಂಡ ಮತ್ತು ವೈದ್ಯರ ನಡುವೆ ನಡೆದ ಸಂಭಾಷಣೆಯನ್ನು ಆಲಿಸಿ, ಆಶ್ಚರ್ಯದಿಂದ ಪ್ರಜ್ಞೆ ತಪ್ಪಿ ಬಿದ್ದಿದ್ದಳು. ಅದು ವೈದ್ಯರಿಗೂ ಗೊತ್ತಾಯಿತು.

'ಯಾವ ವಿಷಯ ಗೊತ್ತಾಗಬಾರದು ಎಂದು ನಾನು ಭಾವಿಸಿದ್ದೆನೋ, ಅದೀಗ ಅವಳಿಗೆ ಗೊತ್ತಾಗಿದೆ. ಸರಿಯಾಗಿ ಹೊಟ್ಟೆಗೆ ತಿನ್ನದೆ ನಿತ್ರಾಣೆಯಾಗಿದ್ದಾಳೆ. ಈವತ್ತು ಇಲ್ಲೇ ಅವಳು ವಿಶ್ರಾಂತಿ ಪಡೆಯಲಿ. ನಾಳೆ ನೀವು ಇಬ್ಬರೂ ಹೋಗಬಹುದು' ಎಂದು ಹೇಳಿದ ವೈದ್ಯರು, ನಬಿಸಾಳಲ್ಲಿ ಔಷಧಿ ತೆಗೆಯಲು ಹಣವಿಲ್ಲದಿರುವುದನ್ನು ಅರಿತುಕೊಂಡರಲ್ಲದೆ ಎಲ್ಲಾ ಔಷಧಿ ತೆಗೆದು ಕೊಟ್ಟರು.

ವೈದ್ಯರ ಉಪಕಾರದಿಂದ ಚೆರೆಮೋನು ಕ್ಷಣಕಾಲ ದಂಗಾದ. ವೈದ್ಯರಿಗೆ ಎಷ್ಟು ಕೃತಜ್ಞತೆ ಸಲ್ಲಿಸಿದರೂ ಸಾಲದು ಎಂಬ ಭಾವನೆ ಅವನಲ್ಲಿ ಉಂಟಾಯಿತು.

ಮರುದಿನ ಡಾ. ಸುಲೈಮಾನ್, ನಬಿಸಾಳನ್ನು ಆಸ್ಪತ್ರೆಯಿಂದ ಬಿಡುಗಡೆಗೊಳಿಸುತ್ತಾ, 'ನೀನು ನಿನ್ನ ಹೆಂಡತಿಯನ್ನು ಚೆನ್ನಾಗಿ ನೋಡಿಕೋ. ಅದುವೇ ನೀನು ನನಗೆ ಮಾಡುವ ಉಪಕಾರ' ಎಂದು ನುಡಿದರು.

ಅಂತೂ ಗಂಡ ಹೆಂಡತಿ ಮನೆ ಸೇರಿದರು. ಹೆಂಡತಿಯ ಕ್ಷೀಣ ಮುಖ ಕಂಡು ಚೆರೆಮೋನು ಬೇಸರಗೊಂಡ.

'ನೀನ್ಯಾಕೆ ಖಿನ್ನನಾಗಿದ್ದೀಯಾ ? ನಾನು ನಿನಗೆ ಮಾಡಿದ ಅನ್ಯಾಯಕ್ಕೆ ಅಲ್ಲಾಹು ನನಗೆ ಕೊಟ್ಟ ಶಿಕ್ಷೆ ಇದಾಗಿದೆ. ನಾನಿನ್ನು ಹೆಚ್ಚೆಂದರೆ, ಮೂರು ತಿಂಗಳು ಜೀವಿಸಿಯೇನು. ಆವರೆಗೆ ನಿನ್ನನ್ನು ನಾನು ರಾಣಿಯ ಹಾಗೆ ನೋಡಿಕೊಳ್ಳುವೆ. ಈವರೆಗೂ ನೀನು ನನಗೆ ಅನ್ನ ಕೊಟ್ಟೆ. ಇನ್ಮೇಲೆ ನಾನು ನಿನಗೆ ಅನ್ನ ಕೊಡುತ್ತೇನೆ. ನಂತರ ಎಲ್ಲಾ ಅಲ್ಲಾಹನಿಗೆ ಬಿಟ್ಟದ್ದು. ನಾನೀಗ ಏನಾದರು ಕೆಲಸ ಮಾಡಿ ಮಧ್ಯಾಹ್ನಕ್ಕೆ ಏನಾದರು ಸಿಗುತ್ತದಾ ಅಂತ ನೋಡಿಕೊಂಡು ಬರುವೆ' ಎನ್ನುತ್ತಾ ಚೆರೆಮೋನು ಹೊರಟು ಹೋದ. ನಬಿಸಾ ಗಂಡನನ್ನು ಕೂಗಿ ಕರೆದರೂ ಆತ ಹಿಂತಿರುಗಿ ನೋಡಲಿಲ್ಲ. ಹೊರೆ ಹೊತ್ತು ಸಿಕ್ಕಿದ ಹಣದಿಂದ ಅಕ್ಕಿ, ಸಾಮಾನು, ಮೀನು ಇತ್ಯಾದಿ ಮನೆಗೆ ತಂದು ಹಾಕಿದ. ನಬಿಸಾ ಊಟಕ್ಕೆ ಅನ್ನ ಹಾಕಿದಳು.

ದಿನ ಉರುಳುತ್ತಲೇ ಇತ್ತು. ಇದೀಗ ಚೆರೆಮೋನು ಸಜ್ಜನ. ಚೆನ್ನಾಗಿ ದುಡಿಯುತ್ತಾನೆ. ಹೆಂಡತಿಗೆ ಊಟ ಹಾಕುತ್ತಾನೆ, ಸುಖ ಕೊಡುತ್ತಾನೆ. ಮನೆಗೆ ಬೇಕಾದ ಎಲ್ಲಾ ಎಲ್ಲಾ ಸಾಮಾನು ತಂದು ಹಾಕುತ್ತಾನೆ. ಕ್ಷಣ ಕ್ಷಣಕ್ಕೂ ಪ್ರೀತಿಸುತ್ತಾನೆ. ಹಾಗಾಗಿ ನಬಿಸಾಳಿಗೆ ಯಾವುದೇ ಕಷ್ಟವಿಲ್ಲ. ಅಲ್ಲದೆ ಐದು ವಕ್ತ್ ಸರಿಯಾಗಿ ನಮಾಜ್ ಮಾಡುತ್ತಾನೆ.

ಆದ್ರೆ ಎಷ್ಟು ದಿನ ಈ ಸುಖ ?

ಮದ್ರಸದಲ್ಲಿ ಉಸ್ತಾದರು ಹೇಳಿಕೊಟ್ಟ ಮಾತು ಅವಳಿಗೆ ನೆನಪಾಯಿತು. ಅಂದ್ರೆ ಕುರಾನ್ ಗ್ರಂಥ ಓದಿ ಊದಿದ ಮೇಲೆ ವ್ಯಕ್ತಿಯೊಬ್ಬ ಕ್ಯಾನ್ಸರ್‌ನಿಂದ ಮುಕ್ತಿಯಾದ ಸಂಗತಿ. ನಾನು ಕೂಡಾ ಹಾಗೇ ಯಾಕೆ ಮಾಡಿ ನೋಡಬಾರದು ಎಂದು ಭಾವಿಸಿದ ನಬಿಸಾ ಪ್ರತೀ ದಿನ ರಾತ್ರಿ ಕುರಾನ್ ಓದತೊಡಗಿದಳು.

ದಿನ ಉರುಳುತ್ತಲೇ ಇತ್ತು. ಮೂರಲ್ಲ, ನಾಲ್ಕಲ್ಲ, ವರ್ಷ ಉರುಳಿತು. ಆ ದಿನ ಹೆಂಡತಿಯ ಬಳಿ ಕುಳಿತ ಚೆರೆಮೋನು, 'ನನ್ನ ಹೊಟ್ಟೆ ನೋವು ಈಗ ಸಂಪೂರ್ಣ ಗುಣಮುಖ ವಾಗಿದೆ. ನನ್ನ ಅನಾರೋಗ್ಯ, ಆಯುಷ್ಯದ ಬಗ್ಗೆ ವೈದ್ಯರು ಹೇಳಿದ ಸಮಯವೂ ಕಳೆಯಿತು. ಆದರೂ ನಾವೊಮ್ಮೆ ವೈದ್ಯರನ್ನು ಕಂಡು ಬರೋಣ' ಎಂದು ಹೇಳಿದ.

ಗಂಡ ಮತ್ತು ಹೆಂಡತಿಯನ್ನು ಕಂಡು ವೈದ್ಯರಿಗೆ ಆಶ್ಚರ್ಯವಾಯಿತು.

ಚೆರೆಮೋನು ಕ್ಯಾನ್ಸರ್‌ನಿಂದ ಮುಕ್ತನಾಗಿದ್ದಾನೆ. ಅವನೀಗ ಆರೋಗ್ಯವಂತ. ನಮ್ಮ ವೈದ್ಯಕೀಯ ಇತಿಹಾಸದಲ್ಲಿ ಇದೊಂದು ಅದ್ಭುತ ಸಂಗತಿ ಎಂದು ವೈದ್ಯರು ಹೇಳಿದಾಗ, 'ಅಲ್ ಹಂದುಲಿಲ್ಲಾ' ಎಂಬ ಶಬ್ದ ನಬಿಸಾಳ ಬಾಯಿಯಿಂದ ತೇಲಿ ಬಂತು.

* * *

# ಪ್ರಾಯ ತುಂಬಿತ್ತು...

**ಪಿ.ಎ. ರಹೀಂ, ಬಂಟ್ವಾಳ**

---

ಮೇಸ್ತ್ರಿ ಖಾದ್ರಿಯಾಕ ಯಾರ ರಗಳೆಗೂ ಹೋಗದೆ ದುಡಿದು ದಿನ ದೂಡುವ ಅಸಾಮಿ. ಅವರ ಹೆಂಡತಿಯ ಹೆಸರು ಬೀಪಾತಾದ. ಈ ದಂಪತಿಗೆ ನಾಲ್ಕು ಹೆಣ್ಣು ಮತ್ತು ಒಬ್ಬ ಗಂಡ್ಮಗ. ಮನೆಯ ಆಸುಪಾಸು ಮಾತ್ರವಲ್ಲ ಊರು ತುಂಬಾ ಮುಸ್ಲಿಮರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ನೀರಿಗಾಗಿ ಬಾವಿ, ನಳ್ಳಿಯ ಬಳಿ ಹೆಂಗಸರ ಗಡಿಬಿಡಿ, ಮಕ್ಕಳ ಕ್ರಿಕೆಟ್ ಆಟದ ಬೊಬ್ಬೆಯ ಹೊರತು ಉಳಿದಂತೆ ಯಾವ ರಂಪಾಟವೂ ಇಲ್ಲದ ಊರದು.

ಖಾದ್ರಿಯಾಕರ ಹಿರಿಯ ಮಗ ಹಂಝ. ಸರಿಯಾಗಿ ಶಾಲೆಗೆ ಹೋಗದೆ ಏಳನೇ ತರಗತಿಯಲ್ಲಿ ಅನುತ್ತೀರ್ಣನಾದ. ಮುಂದೆ ಶಾಲೆಗೆ ಹೋಗುವುದನ್ನೇ ನಿಲ್ಲಿಸಿಬಿಟ್ಟ. ಹಾಗಂತ, ಖಾದ್ರಿಯಾಕ ಮಗನನ್ನು ಊರಿಡೀ ತಿರುಗಾಡಲು ಬಿಡಲಿಲ್ಲ. ತಾನು ಕೆಲಸಕ್ಕೆ ಹೋಗುವಾಗ ಮಗನನ್ನೂ ಕೆಲಸಕ್ಕೆ ಕರೆದುಕೊಂಡು ಹೋದರು. ತಂದೆ ಮತ್ತು ಮಗ ದುಡಿಯಲು ಶುರು ಮಾಡಿದ ಮೇಲೆ ಟಿ.ವಿ, ಗೋದ್ರೇಜ್, ಫ್ರಿಡ್ಜ್ ಎಲ್ಲಾ ಒಂದೊಂದೇ ಮನೆಯೊಳಗೆ ಸೇರತೊಡಗಿತು. ಅಂತೂ ಆ ಕುಟುಂಬದ ಬದುಕು ಹಸನಾಗಿ ಸಾಗತೊಡಗಿತು.

ಹಂಝನ ನಂತರ ಎಲ್ಲರೂ ಹೆಣ್ಮಕ್ಕಳೆ. ಅವರೆಲ್ಲಾ ಶಾಲೆ, ಮದ್ರಸಕ್ಕೆ ಹೋಗಿ ಬರುತ್ತಿದ್ದರು. ಹಿರಿಯ ಮಗಳು ರುಖಿಯ ಶಾಲೆ ಮತ್ತು ಮದ್ರಸದಲ್ಲಿ ಕಲಿಯುವುದರಲ್ಲಿ ತುಂಬಾ ಹುಷಾರಿದ್ದಳು. ಏಳನೇ ತರಗತಿಯಲ್ಲಿ ತಾಲೂಕಿನಲ್ಲೇ ಅಧಿಕ ಅಂಕ ಪಡೆದು ಉತ್ತೀರ್ಣಳಾಗಿದ್ದಳು. ಆವಾಗ ಶಾಲೆಯ ಶಿಕ್ಷಕಿಯರಿಗೂ, ಊರವರಿಗೂ ತುಂಬಾ ಸಂತಸವಾಗಿತ್ತು. ರುಖಿಯಾಳಿಗೆ ಶಾಲೆ, ರೋಟರಿ ಕ್ಲಬ್‌ನಲ್ಲಿ ಸನ್ಮಾನ ಮಾಡಲಾಯಿತು. ಶಾಲೆಯ ಶುಲ್ಕ, ಪುಸ್ತಕ ಇತ್ಯಾದಿ ನಾವು ಕೊಡುತ್ತೇವೆ, ಹೈಸ್ಕೂಲ್‌ಗೆ ಕಳುಹಿಸಿ ಎಂದು ಹೇಳಿ ಅನೇಕ ಮಂದಿ ಮುಂದೆ ಬಂದರು.

ಸಂಘ ಸಂಸ್ಥೆಯವರೂ ಹೇಳಿ ಕಳುಹಿಸಿದರು. ಆದರೆ, ಅದು ತಾಯಿ ಬೀಪಾತಾದರಿಗೆ ಇಷ್ಟವಿರಲಿಲ್ಲ. ಅವರು ಮಗಳನ್ನು ಹೈಸ್ಕೂಲ್‌ಗೆ ಕಳುಹಿಸಲು ಒಪ್ಪಲೇ ಇಲ್ಲ.

ಮಗಳ ಕೈ ಕಾಲು ಉದ್ದ ಬಿಟ್ಟಿದೆ. ಮದುವೆಯಾಗಿ ಗಂಡನ ಮನೆ ಸೇರುವ ಹುಡುಗಿ, ಕಲಿತು ಶಿಕ್ಷಕಿಯಾಗುವುದು ಬೇಡ. ಮನೆಗೆಲಸ ಕಲಿತು ಸುಮ್ಮನಿರಲಿ ಎಂದು ಬೀಪಾತಾದ ಹೇಳತೊಡಗಿದರು. ಹಾಗಾಗಿ ರುಖಿಯಾಳ ವಿದ್ಯಾಭ್ಯಾಸ ಅರ್ಧದಲ್ಲೇ ನಿಂತು ಹೋಯಿತು. ಉಪಾಯವಿಲ್ಲದೆ ರುಖಿಯಾ ಮನೆಗೆಲಸ ಮಾಡತೊಡಗಿದಳಲ್ಲದೆ, ಬೀಡಿ ಕಟ್ಟಲು ಮುಂದಾದಳು.

ರುಖಿಯಾ ಮನೆಗೆಲಸ ಮಾಡತೊಡಗಿದ ನಂತರ ಬೀಪಾತಾದರಿಗೆ ಸ್ವಲ್ಪ ವಿಶ್ರಾಂತಿ ಸಿಗತೊಡಗಿತು. ಹಾಗೇ ಊರಲ್ಲಿ ನಡೆಯುವ ಮದುವೆ, ಬಯಕೆ ಇತ್ಯಾದಿ ಸಂಭ್ರಮಗಳಿಗೆ ಹೋಗಿ ಬರತೊಡಗಿದರು. ಆ ರಾತ್ರಿಯಿಡೀ 'ನಮ್ಮ ರುಖಿಯಾಳಿಗೆ ಪ್ರಾಯ ತುಂಬಿತು. ಗಂಡು ಹುಡುಕಿ ಆದಷ್ಟು ಬೇಗ ಮದುವೆ ಮಾಡಿಬಿಡಿ. ಅವಳ ಪ್ರಾಯದ ಹಸೀನಾಳಿಗೆ ಮದುವೆಯಾಗಿದೆ. ಕೆಳಗಿನ ಮನೆಯ ಶರೀಫಮ್ಮರ ಮಗಳಿಗೂ ಮದುವೆ ನಿಶ್ಚಯವಾಗಿದೆ 'ಎಂದು ಗಂಡನ ಜತೆ ಬೀಪಾತಾದ ಹೇಳುತ್ತಲಿದ್ದರು.

ಮೀನು ವ್ಯಾಪಾರಿ ಅದ್ರಮಾಕ ಮತ್ತು ಖಾದ್ರಿಯಾಕ ಒಂದೇ ಪ್ರಾಯದವರು. ಬಾಲ್ಯ ಸ್ನೇಹಿತರು. ಏಕಕಾಲಕ್ಕೆ ಇಬ್ಬರಿಗೂ ಮದುವೆಯಾಗಿತ್ತು. ಅದ್ರಮಾಕ ಮೀನು ವ್ಯಾಪಾರದಲ್ಲಿ ಮಿಂಚಿದರು. ಮಸೀದಿಯ ಅಧ್ಯಕ್ಷರೂ ಆದರು. ಹಾಗಾಗಿ ಖಾದ್ರಿಯಾಕ ಸಿಕ್ಕಿದರೂ ಮಾತು ಕಡಿಮೆಯಾಗತೊಡಗಿತು.

ಅದ್ರಮಾಕರ ಹಿರಿಯ ಮಗಳು ಎಸ್‌ಎಸ್‌ಎಲ್‌ಸಿ ಕಲಿತಿದ್ದಾಳೆ. ಊರವರು ಏನಾದರು ಹೇಳಿಯಾರು ಎಂದು ಭಾವಿಸಿ ಕಾಲೇಜ್‌ಗೆ ಕಳುಹಿಸಿಕೊಡಲಿಲ್ಲ. ಹಾಗಂತ ಮನೆಯಲ್ಲೇ ಕೂತ್ಕೊಳಿಸುವುದು ಒಳ್ಳೆಯ ಲಕ್ಷಣವಲ್ಲ ಎಂದು ನಿರ್ಧರಿಸಿದ ಅವರು ಕಾರು, ನೂರು ಪವನು ಚಿನ್ನಾಭರಣ, ಎರಡು ಲಕ್ಷ ರೂಪಾಯಿ ನಗದನ್ನು ವರದಕ್ಷಿಣೆ ರೂಪದಲ್ಲಿ ಕೊಟ್ಟು ಅದ್ದೂರಿಯಾಗಿ ಮದುವೆ ಮಾಡಿಕೊಟ್ಟರು. ಊರಿಗೆ ಊರೇ ಮದುವೆಯ ಕರೆ ಹೋಗಿತ್ತು. ಬಿರಿಯಾನಿ, ಕೋಳಿ ಫ್ರೈ, ಐಸ್‌ಕ್ರೀಂ ಇತ್ಯಾದಿ ಕೊಟ್ಟು ಸೈ ಎನಿಸಿದರು. ಜನರು, ಊಟ ಮಾಡಿ ಕೈ ತೊಳೆದು ಹೋಗುತ್ತಲೇ ' ಮದುಮಗ ಬಂಗಾರದಂಥ ಮನುಷ್ಯ'ಎಂದು ಹೇಳುತ್ತಾ ಕೊಂಡಾಡಿದರು.

ಅದ್ರಮಾಕರ ಮಗಳಿಗೆ ಮದುವೆಯಾದ ಮೇಲೆ ಬೀಪಾತಾದರ ರಕ್ತ ಕುದಿಯತೊಡಗಿತು. 'ನೀವು ಮಗಳಿಗೆ ಮದುವೆ ಮಾಡಿಕೊಡಬೇಡಿ. ಹೀಗೆ ದಿನ ದೂಡಿ. ಊರಿನ ಹೆಣ್ಮಕ್ಕಳಿಗೆಲ್ಲಾ ಮದುವೆಯಾಯಿತು. ಮಗಳು ಯಾವನೋ ಒಬ್ಬನ ಜತೆ ಓಡಿ ಹೋದ ಮೇಲೆ ನಿಮಗೆಲ್ಲಾ ಗೊತ್ತಾದೀತು'ಎಂದು ಬೀಪಾತಾದ ಹೇಳಿ, ಕಿರಿಕಿರಿ ಮಾಡತೊಡಗಿದರು.

ಹಾಗಂತ, ಖಾದ್ರಿಯಾಕ ಸುಮ್ಮನೆ ಕೂರಲಿಲ್ಲ. ಸಾಕಷ್ಟು ಕಡೆ ಗಂಡು ಹುಡುಕಿದ್ದಾರೆ. ಆದರೆ, ಎಲ್ಲೂ ಸರಿಗಟ್ಟಾದ ಹುಡುಗ ಸಿಗಲಿಲ್ಲ. ಒಂದು ವೇಳೆ ಸರಿಗಟ್ಟಾದ ಹುಡುಗ ಸಿಕ್ಕಿದರೂ ಆತನ ವರದಕ್ಷಿಣೆ ಬೇಡಿಕೆ ಹೆಚ್ಚಾಗಿತ್ತು.

ರುಖಿಯಾ ಚೆಂದದ ಹುಡುಗಿಯಾದರೂ, ವರದಕ್ಷಿಣೆ ಇಲ್ಲದೆ ಯಾರೂ ಮದುವೆಯಾಗುತ್ತಿರಲಿಲ್ಲ. ಚೆಂದ ನೋಡಿ ಕೆಲವು ಹುಡುಗರು ಮದುವೆಯಾಗಲು ಒಪ್ಪಿಗೆ ಕೊಟ್ಟರೂ ಅವರ ಹೆತ್ತವರು ಅದಕ್ಕೆ ಅಡ್ಡ ಬರುತ್ತಿದ್ದರು. ಊರಿನ ಇಬ್ಬರು ಯುವಕರು ಮದುವೆಯಾಗಲು ಮುಂದೆ ಬಂದಿದ್ದರೂ ಅದು ಬೀಪಾತಾದರಿಗೆ ಇಷ್ಟವಿರಲಿಲ್ಲ. ಅಂತೂ ಗಂಡು ಹುಡುಕುವುದರಲ್ಲೇ ಖಾದ್ರಿಯಾಕ ಸುಸ್ತಾದರು. ಅವರ ಚಪ್ಪಲಿ ಸವೆದು ಹೋಯಿತು. ಮದುವೆ ದಳ್ಳಾಲಿಗೆ ಹಣ ಕೊಟ್ಟು ಕಿಸೆ ಕೂಡ ಹರಿಯಿತು.

ಅದೊಂದು ದಿನ ಬೀಪಾತಾದರ ದೊಡ್ಡಪ್ಪನ ಮಗ, ಅಡಿಕೆ ವ್ಯಾಪಾರಿ ಮಾಮೊದಾಕ ಒಂದು ಮದುವೆ ಸಂಬಂಧ ತಂದರು. ಗುಜರಿ ಇಬ್ರಾಯಾಕರ ಮಗ. ಚಿನ್ನಾಭರಣ ಸ್ವಲ್ಪ ಕಡಿಮೆಯಾದರೂ ಚಿಂತೆ ಇಲ್ಲ. ಆದರೆ, ಹಣ ಮಾತ್ರ ಸಾಕಷ್ಟು ಕೊಡಬೇಕು ಎಂದು ಮಾಮೊದಾಕ ಹೇಳಿದರು.

ಅಂತೂ ಬೀಪಾತಾದರ ಮುತುವರ್ಜಿಯಿಂದ ಮದುವೆ ನಿಶ್ಚಯವಾಯಿತು. ಮದುವೆ ಆದಷ್ಟು ಬೇಗ ಆಗಬೇಕು ಎಂದು ಗಂಡಿನ ಕಡೆಯವರು ತಿಳಿಸಿದ ಕಾರಣ, ಖಾದ್ರಿಯಾಕ ಕುರಿ, ಸೋಡ್ತಿ ಇತ್ಯಾದಿಯಿಂದ ಹಣ ತೆಗೆದರು. ಆದರೆ, ಹಣ ಸಾಕಾಗದೆ ಊರವರಿಂದ ಸಾಲ ಮಾಡಬೇಕಾಗಿ ಬಂತು. ಅಂತೂ ಕೆಲವೇ ಕೆಲವು ದಿನದಲ್ಲಿ ಮದುವೆ ನಡೆಯಿತು. ರುಖಿಯಾ ಗಂಡನ ಮನೆ ಸೇರಿದಳು.

ಮದುಮಗ ಮತ್ತು ಮದುಮಗಳು ಆರಂಭದಲ್ಲಿ ಒಂದೆರಡು ಬಾರಿ ಬಂದು ಹೋದದ್ದು ಬಿಟ್ಟರೆ, ನಂತರ ಅವರ ಪತ್ತೆಯೇ ಇರಲಿಲ್ಲ. ರುಖಿಯಾ ಇಲ್ಲದ ಮನೆ ಬೋರಾಗತೊಡಗಿತು. ಖಾದ್ರಿಯಾಕರಿಗಂತೂ ಬೇಜಾರಾಗಿ ಹೋಯಿತು. ಇದೀಗ ಗಂಡ ಹೆಂಡತಿ ತವರು ಮನೆಯತ್ತ ಬಾರದ್ದನ್ನು ಕಂಡು ಖಾದ್ರಿಯಾಕರಿಗೆ ಸಂಶಯವಾಗತೊಡಗಿತು. ಗಂಡಿನ ಬಗ್ಗೆ ಸರಿಯಾಗಿ ತಿಳಿದುಕೊಳ್ಳದೆ ಆತುರದಿಂದ ಮದುವೆ ಮಾಡಿಕೊಡಬಾರದಿತ್ತು ಎಂದು ಅವರ ಮನಸ್ಸು ಹೇಳತೊಡಗಿತು. ಅವರಿಗೆ ಏನೂ ಆಗದಿರಲಿ ಎಂದು ಆಶಿಸಿ ದುಆ ಮಾಡತೊಡಗಿದರು.

ಅದೊಂದು ದಿನ ಖಾದ್ರಿಯಾಕ ರುಖಿಯಾಳನ್ನು ಕಾಣಲು ಹೋದಾಗ, ಅವಳ ಮುಖ ಬಾಡಿದ್ದನ್ನು ಕಂಡರು. ಅವರ ಹೊಟ್ಟೆಗೆ ಯಾರೋ ತಿವಿದಂತಾಯಿತು. ನಾಲ್ಕು ದಿನ ಮನೆಯಲ್ಲಿರಲಿ, ಕಳುಹಿಸಿ ಕೊಡಿ ಎಂದು ಖಾದ್ರಿಯಾಕ ವಿನಂತಿಸಿದಾಗ, ' ಇಷ್ಟು ಪ್ರೀತಿಯ ಮಗಳಿಗೆ ಮದುವೆ ಮಾಡಿಕೊಟ್ಟದ್ದು ಯಾಕೆ ? ಮನೆಯಲ್ಲೇ ಕೂತುಕೊಳ್ಳಿಸಬಾರದಿತ್ತಾ ? ದಿನವಿಡೀ ನಿದ್ದೆ, ಆಲೋಚನೆ ಮಾಡುವುದು ಬಿಟ್ಟರೆ ಬೇರೆ ಏನೂ ಇವಳಿಂದ ಆಗುತ್ತಿಲ್ಲ'ಎಂದು ರುಖಿಯಾಳ ಅತ್ತೆ ಹೇಳಿ ಕಿರಿಕಿರಿ ಮಾಡತೊಡಗಿದರು. ಉಪಾಯವಿಲ್ಲದೆ ಖಾದ್ರಿಯಾಕ ತನ್ನ ಹಾದಿ ಹಿಡಿದರು.

ಮೂರು ತಿಂಗಳು ಕಳೆದರೂ ರುಖಿಯಾ ತವರು ಮನೆಗೆ ಕಾಲಿಡಲಿಲ್ಲ. ಹಾಗಾಗಿ ನೆರಕರೆಯಲ್ಲಿ ಗುಸು ಗುಸು ಶುರುವಾಯಿತು. 'ರುಖಿಯಾಳ ಗಂಡ ಈ ಹಿಂದೆ ಒಂದು

ಮದುವೆಯಾಗಿ ಹೆಂಡತಿಯನ್ನು ಕೈ ಬಿಟ್ಟಿದ್ದಾನಂತೆ. ಅಲ್ಲದೆ ಅವನ ಬುದ್ಧಿ ಕೂಡ ಒಳ್ಳೆಯದಿಲ್ಲವಂತೆ. ಪೊಲೀಸ್ ಠಾಣೆಯಲ್ಲಿ ಅವನ ಫೋಟೋ ಕೂಡ ಇದೆಯಂತೆ. ಆಗಾಗ ಪೊಲೀಸರು ಅವನನ್ನು ಹುಡುಕುತ್ತಿದ್ದಾರಂತೆ'...ಇತ್ಯಾದಿ ಮಾತನ್ನು ಕೇಳುತ್ತಿದ್ದಂತೆಯೇ ಖಾದ್ರಿಯಾಕರಿಗೆ ಗಾಯದ ಮೇಲೆ ಬರೆ ಎಳೆದಂತಾಯಿತು.

ಅಂತೂ ಖಾದ್ರಿಯಾಕ ಅಳಿಯನ ಜಮಾತ್‌ಗೆ ದೂರು ಕೊಟ್ಟರು. ಆದರೆ, ಅಲ್ಲಿ ಅದನ್ನು ಸ್ವೀಕರಿಸಲು ಅವರು ಹಿಂದೇಟು ಹಾಕಿದರು. 'ನಮ್ಮ ಜಮಾತ್‌ನಲ್ಲಿ ಮದುವೆಯಾಗಿಲ್ಲ. ಹಾಗಿರುವಾಗ ನಮಗೇನೂ ಮಾಡಲು ಆಗುವುದಿಲ್ಲ' ಎಂದು ಆ ಮಸೀದಿಯ ಮುಖಂಡರು ಹೇಳಿದರು.

ಖಾದ್ರಿಯಾಕ ಮಸೀದಿಯ ದಾಖಲೆ ಪತ್ರ ತೋರಿಸಿದರು. ಅದನ್ನು ನೋಡಿದ ಮಸೀದಿಯ ಮುಖಂಡರು, ಈ ದಾಖಲೆಪತ್ರವೂ ನಕಲಿ. ನಿಖಾಹ್ ಪೂರೈಸಿಕೊಟ್ಟ ಮುಸ್ಲಿಯಾರ್‌ಗೂ ನಮಗೂ ಸಂಬಂಧವಿಲ್ಲ ಎಂದರು. ಆ ಮಾತು ಕೇಳಿ ಖಾದ್ರಿಯಾಕ ದಂಗಾದರು. ಹಿರಿಯ ಮುಖಂಡರ ಬಳಿ ತನ್ನ ಅಳಲು ತೋಡಿಕೊಳ್ಳೋಣ ಎಂದ್ರೆ ಅದೂ ಸಾಧ್ಯವಾಗುತ್ತಿಲ್ಲ.

ಹಾಗೇ ಅಳಿಯನ ಮನೆಗೆ ಕಾಲಿಟ್ಟರು. 'ಅಪ್ಪಾ... ನನ್ನನ್ನೊಮ್ಮೆ ಇಲ್ಲಿಂದ ನೀವು ಕರೆದುಕೊಂಡು ಹೋಗಿ. ನಾನು ಯಾರ ಮನೆಯ ಚಾಕರಿ ಮಾಡಿಯಾದರೂ ದಿನ ದೂಡುವೆ. ಈ ನರಕದಿಂದ ನನ್ನನ್ನು ಪಾರು ಮಾಡಿ'ಎಂದು ರುಖಿಯಾ ಮೊರೆ ಇಟ್ಟಳು. ಮಗಳ ಆ ಮಾತು ಕೇಳಿ ಖಾದ್ರಿಯಾಕರ ಕರುಳು ಚುರ್ ಎಂದಿತು. ಅಂತೂ ಮಗಳನ್ನು ಮನೆಗೆ ಕರೆದುಕೊಂಡು ಹೋದರು.

ತನ್ನ ದುಃಖವನ್ನು ಯಾರಲ್ಲಿ ತೋಡಿಕೊಳ್ಳಲಿ ಎಂದು ಯೋಚಿಸುತ್ತಿರುವಾಗ ಅವರಿಗೆ ಬಾಲ್ಯದ ಗೆಳೆಯ ಅದ್ರಮಾಕರ ನೆನಪಾಗುತ್ತದೆ. ಅದ್ರಮಾಕ ಮನೆಯ ಹಜಾರದಲ್ಲಿ ಕುಳಿತು ಸಿಗರೇಟಿನ ಹೊಗೆಯನ್ನು ಆಕಾಶಕ್ಕೆ ಬಿಡುತ್ತಿದ್ದರು. ಖಾದ್ರಿಯಾಕ ಅಲ್ಲಿಗೆ ಹೋದದ್ದೂ ಅವರಿಗೆ ಗೊತ್ತಾಗಲಿಲ್ಲ.

'ಅಸ್ಸಲಾಂ ಅಲೈಕುಂ'-ಖಾದ್ರಿಯಾಕ ಸಲಾಂ ಹೇಳಿದರು.

'ವಅಲೈಕುಂ ಸಲಾಂ'ಎಂದ ಅದ್ರಮಾಕ, 'ನಾನೇ ನಿನ್ನ ಮನೆಯತ್ತ ಬರಬೇಕು ಅಂತ ಭಾವಿಸಿದ್ದೆ. ನೀನೇ ಬಂದೆಯಾ ? ಬಾ... ಬಾ... 'ಎನ್ನುತ್ತಾ ತನ್ನ ಎದುರಲ್ಲೇ ಕೂರಿಸಿದರು.

'ಖಾದ್ರಿ... ನೀನು ಇತ್ತ ಬಂದದ್ದು ಒಳ್ಳೆಯದಾಯಿತು. ನಾನು ತುಂಬಾ ಬೇಸರದಲ್ಲಿರುವೆ. ನನ್ನ ನೋವನ್ನು ನಾನು ಯಾರಲ್ಲಿ ಹೇಳಲಿ ?' ಎನ್ನುತ್ತಾ ಖಾದ್ರಿಯಾಕರ ಕೈ ಹಿಡಿದ ಅದ್ರಮಾಕ 'ನಾನು ಮಗಳ ಮದುವೆಯನ್ನು ಭಾರೀ ಅದ್ದೂರಿಯಾಗಿ ಮಾಡಿಕೊಟ್ಟೆ. ಒಳ್ಳೆಯ ಗುಣ ಸ್ವಭಾವದ ಹುಡುಗ. ಅವನಲ್ಲಿ ನನಗೇನೂ ದೋಷ ಕಾಣಲಿಲ್ಲ. ಆದರೆ, ನನ್ನ ಮಗಳು ಈಗ ಗಂಡನ ಮನೆಗೆ ಹೋಗಲು ನಿರಾಕರಿಸುತ್ತಿದ್ದಾಳೆ. ಗಂಡ ಬೇಡ ಎನ್ನುತ್ತಿದ್ದಾಳೆ. ಒಂದು ವೇಳೆ ನನ್ನನ್ನು

ಬಲವಂತವಾಗಿ ಅತ್ತ ಕಳುಹಿಸಿದರೆ ಆತ್ಮಹತ್ಯೆ ಮಾಡಿಕೊಳ್ಳುವೆ ಎಂದು ಎಚ್ಚರಿಸಿದ್ದಾಳೆ. ಇದು ಊರವರಿಗೆ ಗೊತ್ತಾದರೆ, ನನ್ನ ಮರ್ಯಾದೆ ಹೋದೀತು. ನಾನು ಏನು ಮಾಡಲಿ ?' ಎಂದು ಹೇಳಿ ಅಳತೊಡಗಿದರು. ತನ್ನ ನೋವನ್ನು ಹೇಳಿ ಮನಸ್ಸಿನ ಭಾರ ಇಳಿಸಲು ಹೋದ ಖಾದ್ರಿಯಾಕರಿಗೆ ಅಲ್ಲಿ ಹೊರಲಾರದ ಭಾರ ಸಿಕ್ಕಿತು. ಅವರು ಸೀದಾ ಮನೆಗೆ ಹೋಗಿ ಒಂದಷ್ಟು ಊಟ ಮಾಡಿ ನಿದ್ದೆ ಹೋದರು. ಮರುದಿನ ಮುಂಜಾನೆ ಮಗಳು ಎಬ್ಬಿಸಲು ಹೋದಾಗ, ಖಾದ್ರಿಯಾಕ ಮೌನವಾಗಿದ್ದರು. ಅವರ ದೇಹ ಮರಗಟ್ಟಿತ್ತು.

* * *

# ಗರಿ ?

ಡಿ. ಸೂಫಿ ಇಬ್ರಾಹಿಂ

ಮನೆಯಿಡೀ ಕುಟುಂಬಸ್ಥರು, ಊರವರು ತುಂಬಿ ಹೋಗಿದ್ದರು. ಹೊರಗೆ ಸಾವಿರ ಮಂದಿಗೆ ಕೂರುವಷ್ಟು ವಿಶಾಲವಾದ ಚಪ್ಪರ. ಅದರೊಳಗೆ ಬಣ್ಣ ಬಣ್ಣದ ಫೈಬರ್ ಕುರ್ಚಿಗಳನ್ನು ಸಾಲಾಗಿ ಇಡಲಾಗಿದೆ. ಮಕ್ಕಳು, ಹಿರಿಯರು ತಮ್ಮದೇ ಹರಟೆಯಲ್ಲಿ ಮುಳುಗಿದ್ದರು. ಮನೆಯೊಳಗೆ ಹೆಂಗಸರು, ಹೆಣ್ಮಕ್ಕಳ ಗಡಿಬಿಡಿ, ಮಾತುಕತೆ.

ಅಂದು ಆ ಊರಿನ ಆಪತ್ಬಾಂದವ ಎಂದೇ ಗುರುತಿಸಲ್ಪಟ್ಟಿದ್ದ ಹಸನ್ ಕಾಕರ ಮಗ ಜಲೀಲ್‌ನ ಮದುವೆ. ಹಸನ್ ಕಾಕರಿಗೆ ಅವನೊಬ್ಬನೇ ಮಗ. ಉಳಿದ ಮೂವರು ಹೆಣ್ಮಕ್ಕಳು. ಅವರ ಮದುವೆ ಆಗಲೇ ನಡೆದಿದೆ. ಕಿರಿಯ ಮಗಳು ನೆಫಿಸಾಳ ಮದುವೆ ಮೂರು ವರ್ಷದ ಹಿಂದೆಯಷ್ಟೇ ನಡೆದಿತ್ತು.

'ಅಮ್ಮಾ... ಎಷ್ಟು ಗಂಟೆಗೆ ನಿಖಾಹ್ '- ಹಸನ್ ಕಾಕರ ಮೊಮ್ಮಗಳು ಜಾಸ್ಮಿನ್ ತನ್ನ ತಾಯಿಯಲ್ಲಿ ಕೇಳಿದಳು.

'ಹನ್ನೊಂದು ಗಂಟೆಗೆ ಮಗಳೇ... ಇನ್ನೂ ಒಂದು ಗಂಟೆ ಇದೆ'ಝೀನತ್ ಹೇಳಿದಳು.

'ಮಾವ ಈವತ್ತು ಏನು ಮಾಡಬಹುದು ? ಆವತ್ತು ಹಾಕಿದ ಪಂಥದಂತೆ ನಡೆದಾನಾ ?'

'ಅದರ ಬಗ್ಗೆಯೇ ನಾನೀಗ ಯೋಚಿಸುತ್ತಿದ್ದೇನೆ'

ಅಷ್ಟರಲ್ಲಿ ಕಿರಿಯ ಮಗಳು ನೆಫಿಸಾ ಆ ಕೋಣೆಯೊಳ ಹೊಕ್ಕಳಲ್ಲದೆ ತಾಯಿ, ಮಗಳ ಸಂಭಾಷಣೆಯನ್ನು ಅರ್ಧರ್ಧ ಕೇಳಿಸಿಕೊಂಡು 'ಜಲೀಲ್‌ನ ಸೂಟ್‌ಕೇಸ್‌ನ ಬಗ್ಗೆ ಮಾತನಾಡುತ್ತಿದ್ದೀರಾ?' ಎಂದು ಮಾತಿಗೆ ತೊಡಗಿದಳು.

' ಅದರ ಬಗ್ಗೆಯೇ ಮಾತನಾಡುತ್ತಿದ್ದೇವೆ. ಹೆಂಡತಿಯನ್ನು ಕರೆದುಕೊಂಡು ಬರುವಾಗ ಸೂಟ್‌ಕೇಸನ್ನು ಏನು ಮಾಡ್ತಾನೆ ಅಂತ ನೋಡಬೇಕು'ಎಂದು ಝೀನತ್ ನುಡಿದಳು.

ಮೂರು ವರ್ಷದ ಹಿಂದೆ ನೆಫಿಸಾಳ ಮದುವೆ ಸಂದರ್ಭ ' ಜಲೀಲ್, ಈ ಸೂಟ್‌ಕೇಸನ್ನು ಹಿಡಿ' ಎಂದಿದ್ದಳು. ಆವಾಗ ಜಲೀಲ್ ಅದನ್ನು ನಯವಾಗಿ ತಿರಸ್ಕರಿಸಿದ್ದ.

'ಹಾಗಿದ್ದರೆ, ನಿನ್ನ ಹೆಂಡತಿಯ ಸೂಟ್‌ಕೇಸನ್ನು ಏನು ಮಾಡ್ತೀಯಾ?' ಎಂದು ನೆಫಿಸಾ ಕೇಳಿದಾಗ, ಅವಳ ಅಕ್ಕಂದಿರೂ ಸಹಾಯಕ್ಕೆ ಬಂದಿದ್ದರು. ಮೂವರು ಅಕ್ಕಂದಿರು ಛೇಡಿಸಿದರೂ ಜಲೀಲ್ ತನ್ನ ಹಟ ಬಿಡಲಿಲ್ಲ. 'ಹೆಂಡತಿಯಾಗಲಿ, ಯಾರೇ ಆಗಲಿ. ನಾನು ಯಾರ ಕಟ್ಟನ್ನೂ ಹೊರಲಾರೆ' ಎಂದಿದ್ದ. ಹಾಗೇ ನೋಡಿದರೆ, ಜಲೀಲ್ ವಿಚಿತ್ರ ಮನುಷ್ಯ. ತಂದೆ, ತಾಯಿ ಅಥವಾ ಅಕ್ಕಂದಿರೇ ಆಗಲಿ, ಅವರ ಒಂದೇ ಒಂದು ಗಂಟು ಮೂಟೆಯನ್ನೂ ಆತ ಹಿಡಿಯಲು ಕೇಳುವುದಿಲ್ಲ. ಅಕ್ಕಂದಿರ ಬಳಿ ಹೋಗಬೇಕು ಎಂದು ತಂದೆ ತಾಯಿ ಸೂಚಿಸಿದಾಗ, ' ಏನಾದರು ಕೊಂಡು ಹೋಗಲಿಕ್ಕಿಲ್ಲವಲ್ಲಾ' ಎಂದು ಕೇಳುತ್ತಿದ್ದ. ತಮ್ಮನ ಈ ಹಟವನ್ನು ಅಕ್ಕಂದಿರು ಛೇಡಿಸತೊಡಗಿದರು. ನೀನು ಹೆಂಡತಿಯ ಸೂಟ್‌ಕೇಸ್ ಕೈಯಲ್ಲಿ ಹಿಡಿದು ಹೆಜ್ಜೆ ಹಾಕುವಾಗ ನಾವು ಮೂವರು ಚಪ್ಪಾಳೆ ತಟ್ಟಿ ನಗುವೆವು ಎಂದು ಹೇಳಿ ನಕ್ಕಾಗ ಜಲೀಲ್ ಅದನ್ನು ಸವಾಲಾಗಿ ಸ್ವೀಕರಿಸಿದ್ದ. ಆವತ್ತಿನ ಆ ಮಾತುಕತೆಯನ್ನು ಝೀನತ್, ನೆಫಿಸಾ ಮತ್ತೊಮ್ಮೆ ಜ್ಞಾಪಿಸತೊಡಗಿದರು.

'ನಿಖಾಹ್‌ಗಾಗಿ ಹುಡುಗಿಯ ಕಡೆಯವರು ಬಂದರು'- ಯಾರೋ ಕೂಗಿ ಕರೆದುದು ಕೇಳಿಸಿತು.

ನೆಫಿಸಾ ಯೋಚನಾ ಲಹರಿಯಿಂದ ಹೊರ ಬಂದಳು. ಹಾಗೇ ಹೊರಗೆ ಇಣುಕಿದಾಗ, ವಧುವಿನ ತಂದೆ ಮತ್ತಿತರರು ಚಪ್ಪರದಲ್ಲಿ ಕುಳಿತಿರುವುದು ಕಂಡು ಬಂತು.

ಸ್ವಲ್ಪದರಲ್ಲೇ ನಿಖಾಹ್‌ನ ವಿಧಿ ಪೂರೈಸಲ್ಪಟ್ಟಿತು.

ವಧುವಿನ ಕಡೆಯವರಿಗೆ ಮೊದಲು ಊಟ ಬಡಿಸಲಾಯಿತು. ಹಾಗೇ ಅವರು ತಮ್ಮ ದಾರಿ ಹಿಡಿದರು. ಮದುಮಗ ಜಲೀಲ್ ತನ್ನ ಕೋಣೆಯೊಳ ಹೊಕ್ಕು, ಹೊಸ ಬಟ್ಟೆ ಬರೆ ಧರಿಸಿದ. ಹಾಗೇ ತಂದೆ ತಾಯಿ, ಅಕ್ಕಂದಿರ ಆಶೀರ್ವಾದ ಪಡೆದ. ತನಗರಿವಿಲ್ಲದಂತೆ ತಾಯಿಯ ಕಣ್ಣಿನಿಂದ ಕಣ್ಣೀರು ತೊಟ್ಟಿಕ್ಕಿತು. ತಕ್ಷಣ ಜಲೀಲ್ ತಂದೆ ಮತ್ತು ತಾಯಿಯನ್ನು ಆಲಿಂಗಿಸಿದ. ಇತರರಿಂದಲೂ ಆಶೀರ್ವಾದ ಕೋರಿದ. ಸ್ವಲ್ಪ ಹೊತ್ತಿನಲ್ಲಿ ವಧುವಿನ ತಮ್ಮ ಬಂದು ಭಾವನ ಕೈ ಹಿಡಿದ. ಬಲಗಾಲು ಹೊರಗಿಟ್ಟ.

ಹೊರಗೆ ಮಾರುತಿ ಕಾರು ನಿಂತಿತ್ತು. ಅದು ಮಲ್ಲಿಗೆ ಹೂವಿನಿಂದ ಶೃಂಗರಿಸಲ್ಪಟ್ಟಿತ್ತು. ಮದುಮಗ ಮತ್ತು ಮದುಮಗಳ ಹೆಸರು, ಕಾರಿನ ಕನ್ನಡಿಯಲ್ಲಿ ಎದ್ದು ಕಾಣುತ್ತಿತ್ತು.

ಎಲ್ಲರೂ ಸಂತಸದಿಂದ ನಲಿದಾಡುತ್ತಿದ್ದರು. ಮನೆ ತುಂಬ ನಿಶ್ಶಬ್ದ. ಆಕಾಶದಲ್ಲೊಂದು ಬಗೆಯ ಮೋಡ. ಮರಗಿಡದ ಎಲೆಗಳು ಅಲುಗಾಟ ನಿಲ್ಲಿಸಿತ್ತು. ಏನೋ ಒಂದು ನಾಟಕ ನೋಡು ವಂತೆ ಭಾಸವಾಗುತ್ತಿತ್ತು. ಒಟ್ಟಿನಲ್ಲಿ ಆ ನಡು ಮಧ್ಯಾಹ್ನ ನಡುರಾತ್ರಿಯಂತೆ ಕಾಣತೊಡಗಿತು.

ಕಾರಲ್ಲಿ ಮದುಮಗ ಕುಳಿತೊಡನೆ ಅದು ಧೂಳೆಬ್ಬಿಸಿತು. ಇನ್ನು ಕೆಲವೇ ಗಂಟೆಯ ನಂತರ ಮದುಮಗ ಜಲೀಲ್ ಮತ್ತು ಮದುಮಗಳು ಶಕೀರಾ ಮರಳಿ ಬರಲಿದ್ದಾರೆ. ಗಂಡ, ಹೆಂಡತಿ ಮೊದಲ ಬಾರಿ ಜತೆಗೂಡಿ ಬರುವಂತದ್ದು ಮದುವೆಯ ಒಂದು ಘಟ್ಟ. ಎಲ್ಲರೂ ಮದುಮಗ, ಮದುಮಗಳು ಬರುವ ದೃಶ್ಯ ನೋಡಲು ಕಾತರದಿಂದಿದ್ದಾರೆ.

ಅಡುಗೆ ಕೋಣೆಯಲ್ಲಿ ಸಹೋದರಿಯರಾದ ಝೀನತ್, ರಹ್ಮತ್, ನೆಫಿಸಾ ಹರಟೆಯಲ್ಲಿ ಮುಳುಗಿದ್ದರು. ಜಲೀಲ್ ತನ್ನ ಹೆಂಡತಿಯ ಸೂಟ್‌ಕೇಸ್ ಹಿಡಿಯುತ್ತಾನಾ ಎಂಬುದರ ಬಗ್ಗೆಯೇ ಚರ್ಚಿಸುತ್ತಾರೆ. ಮೂರು ವರ್ಷದ ಹಿಂದೆ ಹಾಕಿದ ಪಂಥವನ್ನು ಅವರಿಗೆ ಮರೆಯಲು ಸಾಧ್ಯವೇ ಆಗುತ್ತಿಲ್ಲ. ಅವರು ಪದೇ ಪದೇ ಅದರ ಬಗ್ಗೆಯೇ ಮಾತನಾಡುತ್ತಾರೆ. ಚಪ್ಪರದಲ್ಲಿ ಮಕ್ಕಳ ಕೂಗು, ಕೇಕೆ ಕೇಳುತ್ತಲೇ ಇತ್ತು. ಯುವಕರೆಲ್ಲಾ ಮದುಮಗನ ಜತೆ ತೆರಳಿದ ಕಾರಣ ಅಲ್ಲಿ ಮಕ್ಕಳು, ಹಿರಿಯರನ್ನು ಹೊರತುಪಡಿಸಿ ಬೇರೆ ಯಾರೂ ಇಲ್ಲ.

ಮದುಮಗ ಮದುಮಗಳ ಮನೆಯತ್ತ ಸಾಗಿ ಒಂದು ಗಂಟೆಯಾಗಿರಬಹುದು. ಅಷ್ಟರಲ್ಲಿ ಒಂದು ಜೀಪು ಬಂತು. ಹಸನಾಕರನ್ನು ಕುಳ್ಳಿರಿಸಿಕೊಂಡು ಜೀಪು ಧೂಳೆಬ್ಬಿಸಿತು. ಮದುವೆಯ ಮನೆಯಲ್ಲಿ ಆತಂಕದ ಛಾಯೆ. ಏನು, ಏನು ಸಂಗತಿ ಎಂಬ ಪ್ರಶ್ನೆ ತಲೆಗೊಂದರಂತೆ ಕೇಳಿ ಬರತೊಡಗಿತು. ಆದರೆ ಯಾರಿಗೂ ಏನೂ ಗೊತ್ತಿಲ್ಲ. ಏನೋ ಅನಾಹುತ ಆಗಿರಬೇಕು ಎಂದು ಶಂಕಿಸಿದ ಮನೆಯ ಹೆಂಗಸರು ಕೂಗಿ ರಂಪಾಟ ಮಾಡತೊಡಗಿದರು. ಜಲೀಲ್‌ನ ತಾಯಿ ಮೂರ್ಛೆ ಹೋದರು. ಅದನ್ನು ಕಂಡ ಕೆಲವರು ತಕ್ಷಣ ನೀರು ಚಿಮುಕಿಸಿ ಒಳಗೆ ಕರೆದುಕೊಂಡು ಹೋಗಿ ಮಲಗಿಸಿದರು.

ಆ ಜೀಪು ಮರಳಿ ಬಂತು. ಅದರ ಹಿಂದೆ ಬಿಳಿ ಬಣ್ಣದ ವಾಹನವೊಂದು ಬಂತು. ಮನೆ ಮುಂದೆ ಬಂದು ನಿಂತಾಗ ಅದು ಆ್ಯಂಬುಲೆನ್ಸ್ ಅಂತ ಗೊತ್ತಾಯಿತು.

ಅದರಿಂದ ನಾಲ್ಕು ಮಂದಿ ಕೆಳಗಿಳಿದರು. ಮದುಮಗನಾಗಿ ಮಾರುತಿ ಕಾರಲ್ಲಿ ಕುಳಿತು ಹೋಗಿದ್ದ ಜಲೀಲ್ ಇದೀಗ ಮಯ್ಯತ್ ಆಗಿ ಆ್ಯಂಬೆಲೆನ್ಸ್‌ನಲ್ಲಿ ಬಂದಿದ್ದ. ಮೃತದೇಹವನ್ನು ಕೆಲವರು ಒಳಗೆ ಕೊಂಡು ಹೋದರು.

'ಆರು ಗಂಟೆಗೇ ಪ್ರಾಣ ಹೋಗಿತ್ತಂತೆ'

'ಕಾರು ಹುಡಿ ಹುಡಿಯಾಗಿದೆಯಂತೆ'

'ಮದುಮಗಳಿಗೂ ಗಾಯವಾಗಿದೆಯಂತೆ. ಅವಳಿಗೂ ಎಚ್ಚರ ಬಂದಿಲ್ಲವಂತೆ'

ಹೀಗೆ ಒಬ್ಬೊಬ್ಬರು ಒಂದೊಂದು ಮಾತು ಹೇಳುತ್ತಿದ್ದರು. ಎಲ್ಲರೂ ಮೃತದೇಹ ನೋಡಲು ಹಾತೊರೆದರು. ಎಲ್ಲರ ಕಣ್ಣಲ್ಲಿ ಕಣ್ಣೀರು ಇಳಿಯತೊಡಗಿತು. ಜಲೀಲ್‌ರ ಅಕ್ಕಂದಿರ ಮಾತು ಈ ಘಟನೆಗೆ ಸಾಕ್ಷಿಯಾಯಿತು. ಯಾರೋ ಇಬ್ಬರು ಎರಡು ಬ್ಯಾಗನ್ನು ಎತ್ತಿಕೊಂಡು ಒಳ ಬಂದರು. ಅದರಲ್ಲಿ ಮದುಮಗ ಮತ್ತು ಮದುಮಗಳ ಬಟ್ಟೆಬರೆ ತುಂಬಿ ಹೋಗಿತ್ತು.

'ಹೆಂಡತಿಯಾದರೂ ಸರಿ. ನಾನು ಬಟ್ಟೆ ಬರೆಯ ಕಟ್ಟು ಹಿಡಿಯಲಾರೆ'ಎಂದು ಮೂರು ವರ್ಷದ ಹಿಂದೆ ಜಲೀಲ್ ಹೇಳಿದ ಮಾತು ಇದೀಗ ಅಣಕಿಸುವಂತಿತ್ತು.

* * *

# ಆಪತ್ಬಾಂಧವ

ಮುಮ್ತಾಝ್ ಪಕ್ಕಲಡ್ಕ

ಮನೆಗೆ ತೆರಳುವ ಸಲುವಾಗಿ ಹಾಸ್ಟೆಲ್‌ನ ಗೇಟು ದಾಟಿ ಬಸ್ ನಿಲ್ದಾಣದತ್ತ ಹೆಜ್ಜೆ ಹಾಕುತ್ತಿದ್ದೆ. ಅಷ್ಟರಲ್ಲಿ ಬಸ್ ನಿಲ್ದಾಣದ ಬಳಿ ಜನ ಜಮಾಯಿಸಿದ್ದನ್ನು ಕಂಡು ಆತಂಕಗೊಂಡೆ. ಹತ್ತಿರ ಹೋಗಬೇಕೋ, ಬೇಡವೋ ಎಂದು ಚಂಚಲಗೊಂಡೆ. ಆದರೆ, ಕುತೂಹಲ ತಡೆಯಲಾರದೆ ಅಲ್ಲೇ ನಿಂತು ಕತ್ತು ಹಾಯಿಸಿದಾಗ, ಅಲ್ಲಿದ್ದವರು ಒಬ್ಬರು ಹೆಂಗಸನ್ನು ಎಬ್ಬಿಸುವ ಪ್ರಯತ್ನ ಮಾಡುತ್ತಿದ್ದುದನ್ನು ಕಂಡೆ. ಪುಟ್ಟ ಮಗುವಿನ ಅಳು ಮುಗಿಲು ಮುಟ್ಟುವಂತಿತ್ತು. ನಾನು ಮತ್ತೊಮ್ಮೆ ಅತ್ತ ದೃಷ್ಟಿ ಹಾಯಿಸಿದೆ. ಎಚ್ಚರ ತಪ್ಪಿ ಬಿದ್ದವಳು ನನ್ನ ಗೆಳತಿ ನಸೀಮಾ. ನಾನು ನನಗರಿವಿಲ್ಲದಂತೆ, 'ನಸೀಮಾ ...' ಎಂದು ಕೂಗಿದೆ. ನನಗೆ ಅಷ್ಟು ಧೈರ್ಯ ಎಲ್ಲಿಂದ ಬಂತೋ ನಾ ಕಾಣೆ.

ನನ್ನ ಧ್ವನಿ ಕೇಳಿ ನಸೀಮಾಳ ಕಿರಿಯ ತಂಗಿ ರಶೀದಾ ಓಡೋಡಿ ಬಂದು, 'ಅಕ್ಕಾ... ಭಾವನ ಏಟಿಗೆ ಅಕ್ಕ ಎಚ್ಚರ ತಪ್ಪಿ ಬಿದ್ದಿದ್ದಾಳೆ' ಎಂದು ಒಂದೇ ಉಸಿರಲ್ಲಿ ಹೇಳಿದಳು.

ತಕ್ಷಣಕ್ಕೆ ಏನು ಮಾಡಬೇಕು ಎಂದು ನನಗೆ ಹೊಳೆಯಲಿಲ್ಲ. ನನ್ನ ನಾಲಗೆ ಮರಗಟ್ಟಿತ್ತು. ಅಷ್ಟರಲ್ಲಿ ಯಾರೋ ಒಂದಿಬ್ಬರು ನಸೀಮಾಳನ್ನು ರಿಕ್ಷಾದಲ್ಲಿ ಹಾಕಿ ಆಸ್ಪತ್ರೆಯತ್ತ ಸಾಗಿಸಿದರು. ನನ್ನೂರಿನ ಬಸ್ ಬಂದ ಕಾರಣ ನಾನು ಬಸ್ಸೇರಿದೆ. ಮನಸ್ಸು ತುಂಬಾ ನಸೀಮಾ ತುಂಬಿ ಹೋದಳು.

* * *

ಅಬ್ಬಾಸಾಕ ಮತ್ತು ಫಾತಿಮಾದರ ಆರು ಮಕ್ಕಳ ಪೈಕಿ ನಸೀಮಾ ಹಿರಿಯವಳು. ಆಸುಪಾಸಿನವರಿಗೆ ನಸೀಮಾ ಅಂದರೆ ಅಚ್ಚುಮೆಚ್ಚು. ಹುಡುಗಿಯರೆಂದ್ರೆ, ನಸೀಮಾಳ ಹಾಗಿರಬೇಕು ಎಂದು

ಕೆಲವರು ಹೇಳುವುದೂ ಉಂಟು. ಸದಾ ಮುಗುಳ್ನಗುವ ನಸೀಮಾ ಎಲ್ಲರ ಪ್ರೀತಿ ಗಳಿಸಿದ್ದಳು. ಯಾರಿಗೂ ಎರಡು ಬಗೆದವಳಲ್ಲ. ಎಲ್ಲರ ಜತೆಯೂ ಆತ್ಮೀಯತೆಯಿಂದಿದ್ದಳು.

ನಸೀಮಾ ಕೆಲಕಾಲ ನನ್ನ ತರಗತಿಯಲ್ಲಿ ಕುಳಿತ ನೆನಪು. ಅದು ಒಂದು ಅಥವಾ ಎರಡನೆ ತರಗತಿಯಲ್ಲಾಗಿರಬೇಕು. ಅವಳ ತಂದೆ ಅಬ್ಬಸಾಕ ಪಕ್ಕದಲ್ಲೇ ಹರಿಯುವ ನದಿಯಿಂದ ಗಾಳ ಅಥವಾ ತೋಟೆ ಹಾಕಿ ಮೀನು ಹಿಡಿದು ಮಾರಾಟ ಮಾಡುತ್ತಿದ್ದರು. ತನ್ನ ಸತ್ಯಸಂಧತೆಯಿಂದ ಅವರೂ ಎಲ್ಲರ ಮೆಚ್ಚುಗೆ ಗಳಿಸಿದ್ದರು. ಅಂಥ ಅಬ್ಬಸಾಕ ಅದೊಂದು ದಿನ ನದಿಯತ್ತ ಹೋದವರು ಮುಳುಗಿ ವಿಧಿವಶವಾಗಿದ್ದರು.

ತದನಂತರ ಆ ಕುಟುಂಬದ ಚಿತ್ರಣವೇ ಬದಲಾಗಿತ್ತು. ಹಿರಿಯ ಮಗ ರಫೀಕ್ ಶಾಲೆ ಕೈದು ಮಾಡಿ ದುಡಿಯಲು ಹೋದ. ಆದರೆ, ಪಡ್ಡೆ ಹುಡುಗರ ಸಹವಾಸದಿಂದ ದಾರಿ ತಪ್ಪಿದ. ಮನೆಯವರ ಬದುಕು ಮತ್ತಷ್ಟು ಅತಂತ್ರವಾಯಿತು. ತುತ್ತು ಅನ್ನಕ್ಕೂ ಗತಿ ಇಲ್ಲದಂತಾಯಿತು. ಸೋಮಾರಿ ರಫೀಕ್ ಕೆಲವರಿಂದ ಸಾಲ ಮಾಡಿದ. ಸಾಲಗಾರರು ಬಂದು ಕೇಳಿದಾಗ, ತಲೆಬಿಸಿಯಲ್ಲಿ ಕುಡಿಯತೊಡಗಿದ. ಬೀಡಿಯ ಸೂಪಿನ ಎಡೆಯಲ್ಲೋ, ಡಬ್ಬಿಯಲ್ಲೋ ತಾಯಿ ಅಡಗಿಸಿಟ್ಟ ಹಣವನ್ನೂ ಕದಿಯತೊಡಗಿದ. ಅದೂ ಸಾಕಾಗದಿದ್ದಾಗ ನಸೀಮಾಳ ಎರಡು ಪವನು ತೂಕದ ಚಿನ್ನದ ಸರವನ್ನು ಕದ್ದು ಓಡಿ ಹೋದ.

ದಾರಿ ತಪ್ಪಿದ ಮಗನನ್ನು ಸರಿದಾರಿಗೆ ತರಲು ಫಾತಿಮಾದ ಮಾಡಿದ ಪ್ರಯತ್ನ ಫಲಿಸಲಿಲ್ಲ. ಅಕ್ಕಪಕ್ಕದ ಕೆಲವರಲ್ಲಿ ಹೇಳಿದಾಗ ಅವರು ಕೇಳಿಸಿಕೊಂಡರೇ ವಿನಃ ರಫೀಕ್‌ನನ್ನು ಕರೆದು ವಿಚಾರಿಸಲಿಲ್ಲ. ಯಾಕೆಂದರೆ, ಅವರಿಗೆ ಅವರ ಸಮಸ್ಯೆಯೇ ದೊಡ್ಡದಾಗಿತ್ತು. ಒಟ್ಟಿನಲ್ಲಿ ಆ ಕುಟುಂಬವನ್ನು ಕೇಳುವವರಿಲ್ಲ. ಎಲ್ಲರೂ ಕೈ ಮೇಲೆ ಮಾಡಿದರೇ ಹೊರತು ಅವರಿಗೆ ನೆರವಾಗಲು ಮುಂದಾಗಲೇ ಇಲ್ಲ.

ಫಾತಿಮಾದ ಇದ್ದ ಮನೆ ಕೂಡ ಬಾಡಿಗೆಯದ್ದು. ಅಬ್ಬಸಾಕ ತೀರಿ ಹೋದ ನಂತರ ಆ ಮನೆಯ ಬಾಡಿಗೆಯನ್ನೂ ಪಾವತಿಸಲಿಲ್ಲ. ಮನೆಯ ಯಜಮಾನ ರಝಾಕಾಕ ನಯಾ ಪೈಸೆ ಕೈ ಬಿಡುವವರಲ್ಲ. ಪೈಸೆಗೆ ಪೈಸೆ ಕೂಡಿಡುತ್ತಾರೆಯೇ ವಿನಃ ಇತರರ ಕಷ್ಟ ಏನು ಎಂದು ಅವರಿಗೆ ಗೊತ್ತಿಲ್ಲ. ಯಾರಾದರು ಹೇಳಿದರೂ ಅದನ್ನು ಅವರು ಕೇಳಿಸಿಕೊಳ್ಳಲು ಆಸಕ್ತಿ ವಹಿಸುವುದೂ ಇಲ್ಲ. ಫಾತಿಮಾದ ಮತ್ತವರ ಮಕ್ಕಳು ಆಗಾಗ ರಝಾಕಾಕರ ಮನೆಗೆ ಹೋಗಿ ಕೆಲಸ ಮಾಡುವುದೂ ಉಂಟು. ಆದರೂ ರಝಾಕಾಕ ಬಾಕಿ ಇರುವ ಮನೆಯ ಬಾಡಿಗೆಯನ್ನು ಕೇಳಲು ಹಿಂಜರಿಯುವುದಿಲ್ಲ. ಅವರ ಜತೆ ಅವರ ಹೆಂಡತಿ ಕೂಡ ಧ್ವನಿಗೂಡಿಸುತ್ತಾರೆ.

ಆದರೆ, ರಝಾಕಾಕರ ಮಗ ನಾಸಿರ್‌ಗೆ ಫಾತಿಮಾದರ ಮೇಲೆ ಎಲ್ಲಿಲ್ಲದ ಗೌರವ. ಅವರ ಮಗಳು ನಸೀಮಾಳ ತುಂಬಾ ಪ್ರೀತಿ. ಆಗಾಗ ಅವ ಆ ಮನೆಗೆ ಹೋಗುತ್ತಿದ್ದ. ತಂದೆ, ತಾಯಿಯ ಕಣ್ತಪ್ಪಿಸಿ ತನ್ನ ಕೈಲಾದಷ್ಟು ಅವರಿಗೆ ಸಹಾಯ ಮಾಡುತ್ತಿದ್ದ. ಫಾತಿಮಾದ ಕೂಡ ಅಷ್ಟೆ, ನಾಸಿರ್‌ನನ್ನು ತನ್ನ ಮಗನ ಹಾಗೆ ನೋಡಿಕೊಳ್ಳುತ್ತಿದ್ದರು.

ಇತ್ತೀಚೆಗೆ ಗಲ್ಫ್‌ನಿಂದ ಬಂದಿದ್ದ ನಾಸಿರ್, ಹೆತ್ತವರಿಗೆ ತಿಳಿಯದಂತೆ ಸ್ವಲ್ಪ ಚಿನ್ನಾಭರಣ, ಬಟ್ಟೆ ಬರೆ ಇತ್ಯಾದಿ ಕೊಟ್ಟಿದ್ದ. ಆದರೆ ಹೇಗೋ ಅದು ನಾಸಿರ್‌ನ ಮನೆಯವರಿಗೆ ಗೊತ್ತಾಗಿತ್ತು. ವ್ಯವಹಾರಿ ಮನುಷ್ಯನಾಗಿರುವ ರಝಾಕಾಕ ಕುದಿಯತೊಡಗಿದರು. ಎಲ್ಲವನ್ನೂ ನೋಡುತ್ತಾ ಸುಮ್ಮನಿದ್ದರೆ, ಇವ ಆ ಹುಡುಗಿ ನಸೀಮಾಳನ್ನು ಖಂಡಿತಾ ಮದುವೆಯಾಗುತ್ತಾನೆ. ವರದಕ್ಷಿಣೆ ರೂಪದಲ್ಲಿ ಸಿಗುವ ನಮ್ಮ ಆದಾಯಕ್ಕೆ ಅಡ್ಡಿಯಾಗುತ್ತಾನೆ ಎಂದು ಭಾವಿಸಿದ ಅವರು ಹೇಗಾದರು ಮಾಡಿ ಫಾತಿಮಾದರ ಮಗಳು ನಸೀಮಾಳನ್ನು ಯಾವನೋ ಒಬ್ಬನಿಗೆ ಮದುವೆ ಮಾಡಿ ಕೊಡಬೇಕು ಎಂದು ನಿರ್ಧರಿಸಿದರು. ಅದಕ್ಕಾಗಿ ಒಂದಷ್ಟು ಶ್ರಮ ವಹಿಸಿದರೂ ಚಿಂತೆ ಇಲ್ಲ ಎಂದು ಅವರು ಹೇಳಿಕೊಳ್ಳತೊಡಗಿದರು.

ತನ್ಮಧ್ಯೆ ನಾಸಿರ್ ಕಾರ್ಯನಿಮಿತ್ತ ಕೆಲಕಾಲ ಮನೆಯಿಂದ ಹೊರಗಿದ್ದ. ಅದೇ ತಕ್ಕ ಸಮಯ ಎಂದು ಭಾವಿಸಿದ ರಝಾಕಾಕ ಮತ್ತವರ ಹೆಂಡತಿ ಮದುವೆ ದಲ್ಲಾಳಿಯೊಬ್ಬನ ಸಹಾಯ ದಿಂದ ನಸೀಮಾಳಿಗೆ ಮದುವೆ ಮಾಡಿಸಲು ಮುಂದಾದರು. ಹುಡುಗ ಯಾರು, ಹೇಗೆ, ಎಲ್ಲಿಯವ ಎಂದೆಲ್ಲಾ ತಿಳಿಯದೆ ಮದುವೆ ಮಾಡಿಕೊಡುವುದು ಸರಿಯಲ್ಲ ಎಂದು ಫಾತಿಮಾದ ಹೇಳತೊಡಗಿ ದಾಗ ರಝಾಕಾಕ ಉಪಾಯದಿಂದ ಆಕೆಯನ್ನು ಒಪ್ಪಿಸಿ ಮದುವೆ ಮಾಡಿಸಿದರು.

ಮೊದಲ ದಿನವೇ ಗಂಡ ಕಂಠಪೂರ್ತಿ ಕುಡಿದ. ಅದೂ ನಸೀಮಾಳ ಎದುರಲ್ಲೇ. ಅಂದು ಆಕೆಗೆ ಎದುರಾದ ಕಷ್ಟ, ಒಂದು ಮಗುವಾಗುವವರಗೂ ಮುಂದುವರಿಯಿತು. ಬಡತನದಿಂದಾಗಿ ತನಗಾಗುತ್ತಿರುವ ಅನ್ಯಾಯವನ್ನು ಎದುರಿಸಲಾಗದೆ ನಸೀಮಾ ಎಲ್ಲಾ ನೋವನ್ನೂ ನುಂಗಿದಳು. ಆದರೂ ಆಕೆ ಧೃತಿಗೆಡಲಿಲ್ಲ. ಎಲ್ಲವೂ ಅಲ್ಲಾಹನ ಕೈಯಲ್ಲಿದೆ ಎಂದು ಭಾವಿಸಿ ಪ್ರಾರ್ಥಿಸುತ್ತಲೇ ಕಣ್ಣೀರಿಳಿಸಿದಳು. ವಿಷಯ ತಿಳಿದ ನಾಸಿರ್ ಒಂದು ಕ್ಷಣ ಹೌಹಾರಿದ್ದ. ಒಮ್ಮೆ ಅವನಿಗೆ ಎಲ್ಲರ ಮೇಲೂ ಕೆಂಡದಂತಹ ಕೋಪ ಬಂತು. ಆದರೆ ತೋರಿಸಿಕೊಳ್ಳಲಾಗದೆ ತನ್ನ ವೇದನೆಯನ್ನು ಮನದಲ್ಲೇ ಅರಗಿಸಿಕೊಂಡ.

* * *

ನನ್ನೂರ ಹೆಸರನ್ನು ಕಂಡೆಕ್ಟರ್ ಕೂಗಿ ಕರೆದಾಗ ನಾನು ವಾಸ್ತವಕ್ಕಿಳಿದೆ. ದಡಬಡನೆ ಎದ್ದು ಬಸ್‌ನಿಂದ ಇಳಿದು ಮನೆಯತ್ತ ಹೆಜ್ಜೆ ಹಾಕಿದೆ. ಮುಖದಲ್ಲಿ ಎಂದಿನ ಮಂದಹಾಸ ಮಾಯವಾಗಿತ್ತು. ಅದನ್ನು ತಿಳಿದುಕೊಂಡ ಅಮ್ಮ 'ಏನಾಯಿತು, ಮೋಳೇ ?' ಎಂದು ಕೇಳಿದಾಗ, ನಾನು ಬಸ್ ನಿಲ್ದಾಣದಲ್ಲಿ ನಡೆದ ಘಟನೆಯನ್ನು ವಿವರಿಸಿದೆ.

ದಿನಗಳು ಉರುಳುತ್ತಲೇ ಇತ್ತು.

ರಝಾಕಾಕ ಅಗಲಿ ಹಲವು ತಿಂಗಳಾಗಿತ್ತು.

ನಸೀಮಾ ತನ್ನ ಗಂಡನಿಂದ ಖುಲ್ಆ ಪಡೆದಳು.

ಇನ್ನೂ ಅವಿವಾಹಿತನಾಗಿಯೇ ಇದ್ದ ನಾಸಿರ್ ತುಂಬಾ ಕುಶಿಗೊಂಡ. ಹೇಗಾದರು ಮಾಡಿ ನಸೀಮಾಳನ್ನು ತನ್ನವಳನ್ನಾಗಿಸಬೇಕು ಎಂದು ಬಯಸಿದ. ಆದರೆ, ನಸೀಮಾ ಒಪ್ಪುತ್ತಾಳೆಯೇ... ಗಂಡಸಗನ್ನು ಅವಳು ದ್ವೇಷಿಸತೊಡಗಿದರೆ... ಎಂದು ಆತ ಆತಂಕಿಸಿದ. ಅಂತೂ ಮನೆಯವರ ವಿರೋಧದ ಮಧ್ಯೆಯೂ ಆತ ಫಾತಿಮಾದರನ್ನು ಕಂಡು ಮಾತನಾಡಿದ.

ಅವರಿಗೆ ನಾಸಿರ್‌ನ ಮಾತನ್ನು ನಂಬಲಿಕ್ಕೆ ಆಗಲಿಲ್ಲ. ತಾವೇನು ಕನಸು ಕಾಣುತ್ತಿದ್ದೇವೆಯೋ... ಎಂದು ಅವರು ಭಾವಿಸಿದರು. ನಸೀಮಾ ಸಂತಸ ತಡೆಯಲಾರದೆ ಅಲ್ಲಾಹನನ್ನು ಮತ್ತೆ ಮತ್ತೆ ಸ್ಮರಿಸತೊಡಗಿದಳು. ಆಪತ್ಬಾಂದವನಾಗಿ ಬಂದ ನಾಸಿರ್‌ನನ್ನು ನೆನೆಯತೊಡಗಿದಳು.

* * *

# ಗುರಿ ಇಲ್ಲದ ಪಯಣ

ಶಾಹಿದಾ ತಸ್ನೀಂ, ನೀರ್ಕಜೆ

---

ಆ ಊರಿನ ಶ್ರೀಮಂತರ ಪೈಕಿ ಪುತ್ತುಮೋನಾಕ ಕೂಡಾ ಒಬ್ಬರು. ಹಲವು ರಂಗದಲ್ಲಿ ಕೈಯಾಡಿಸಿ ದೊಡ್ಡ ವ್ಯಾಪಾರಿ ಎಂದು ಗುರುತಿಸಿಕೊಂಡಿದ್ದಾರೆ. ಅರಮನೆಯಂಥ ಅವರ ಮನೆಯನ್ನು ಕಂಡೇ, ಅವರೆಷ್ಟು ಶ್ರೀಮಂತ ಎಂದು ಊಹಿಸಬಹುದು. ಅತ್ತಿತ್ತ ಹೋಗಲು ಎರಡು ಮೂರು ಸ್ವರೂಪದ ಕಾರಿದೆ. ಹೆಂಡತಿಯ ಜತೆಗೂಡಿ ಪವಿತ್ರ ಹಜ್‌ಯಾತ್ರೆಗೈದಿದ್ದಾರೆ. ಹಾಗಾಗಿ ಊರವರು ಅವರನ್ನು 'ಪುತ್ಮೋನಾಜಿ' ಅಂತ ಕರೆಯತೊಡಗಿದಾಗ, 'ನನ್ನನ್ನು ಮೊದಲಿನ ಹಾಗೆ ಕರೆದರೆ ಚೆನ್ನ' ಎಂದು ಹೇಳಿದ್ದರು. ಇದೇ ಅವರ ಸ್ವಭಾವಕ್ಕೊಂದು ಕನ್ನಡಿ.

ಪುತ್ಮೋನಾಕರಿಗೆ ನಾಲ್ಕು ಮಂದಿ ಗಂಡು, ಒಬ್ಬಳು ಹೆಣ್ಮಗಳಿದ್ದಾರೆ. ಹಿರಿಯ ಮಗ ಸಾಜಿದ್ ಕತ್ತರ್‌ನಲ್ಲಿ ಉದ್ಯೋಗಿಯಾಗಿದ್ದಾನೆ. ಎರಡನೆಯ ಮಗ ಸಾಬಿತ್ ಊರಲ್ಲೇ ಜ್ಯುವೆಲ್ಲರಿ ಶಾಪ್ ಇಟ್ಟುಕೊಂಡಿದ್ದಾನೆ. ಮೂರನೆಯ ಮಗ ಸಾದಿಕ್ ಇಂಜಿನಿಯರ್ ಆಗಿದ್ದಾನೆ. ನಾಲ್ಕನೆಯ ಮಗ ಸಾಲಿಕ್ ತಂದೆಯ ವ್ಯವಹಾರದ ಜತೆ ಕೈಜೋಡಿಸಿದ್ದಾನೆ. ಏಕೈಕ ಮಗಳು ಸಾಲಿಮಾ ಕಾಲೇಜ್‌ಗೆ ಹೋಗುತ್ತಿದ್ದಾಳೆ.

* * *

ಮಕ್ಕಳನ್ನು ಈ ಎತ್ತರಕ್ಕೇರಿಸಲು ಪುತ್ಮೋನಾಕ ಮತ್ತು ಉಂಞಾದ ಪಟ್ಟ ಶ್ರಮ ಅಷ್ಟಿಷ್ಟಲ್ಲ. ಕೊಂಡಾಟದ ಜತೆಗೆ ಧರ್ಮದ ಬಗ್ಗೆಯೂ ತಿಳುವಳಿಕೆ ಮೂಡಿಸಿದ್ದರು. ಅದಕ್ಕಾಗಿ ಮುಸ್ಲಿಯಾರ್‌ರನ್ನು ಖುದ್ದು ಮನೆಗೆ ಕರೆಯಿಸಿಕೊಂಡಿದ್ದರು.

ಪುತ್ತೋನಾಕ ಕೂಡ ಧರ್ಮದ ಪರಿಜ್ಞಾನವಿರುವ ಮನುಷ್ಯ. ಆಚಾರ ವಿಚಾರದಲ್ಲಿ ಧರ್ಮ ಪಾಲಿಸುತ್ತಾರೆ. ವರದಕ್ಷಿಣೆಯ ವಿಷಯದಲ್ಲೊಂದು ಅವರ ನಿಲುವು ಸ್ಪಷ್ಟ. ತನ್ನ ಗಂಡು ಮಕ್ಕಳಿಗೂ ವರದಕ್ಷಿಣೆ ಪಡೆಯಲಾರೆ, ಹೆಣ್ಮಗಳಿಗೂ ಕೊಡಲಾರೆ ಎಂದು ಬಹಿರಂಗವಾಗಿ ಹೇಳಿಕೊಳ್ಳುತ್ತಿದ್ದರು. ವರದಕ್ಷಿಣೆಯ ವಿರುದ್ಧ ಪತ್ರಿಕೆಗಳಲ್ಲಿ ಪ್ರಕಟವಾದ ಲೇಖನ ಇತ್ಯಾದಿಯನ್ನು ನಾಲ್ಕು ಮಂದಿಗೆ ಓದಿ ಹೇಳಿ ಆ ಮೂಲಕ ವರದಕ್ಷಿಣೆ ವಿರುದ್ಧದ ಆಂದೋಲನದಲ್ಲಿ ತೊಡಗಿಸಿಕೊಂಡಿದ್ದರು.

ಸಾಲಿಮಾ ಹೈಸ್ಕೂಲ್‌ನಲ್ಲಿರುವಾಗಲೇ 'ಮಗಳಿಗೆ ಕಲಿಸಿದ್ದು ಸಾಕು, ಮದುವೆ ಮಾಡಿಸಿ' ಎಂದು ಉಂಞಾದ ಆಗಾಗ ಗಂಡನಲ್ಲಿ ನುಡಿಯುತ್ತಿದ್ದಾಗ 'ಮಗಳಿಗೆ ಇಷ್ಟು ಬೇಗ ನಾನು ಮದುವೆ ಮಾಡಿಕೊಡಲಾರೆ. ಏನಿದ್ದರೂ ಅವಳು ಡಿಗ್ರಿ ಪೂರೈಸಬೇಕು' ಎಂದು ಪುತ್ತೋನಾಕ ಹೇಳುತ್ತಿದ್ದರು.

ಸಾಲಿಮಾ ಕೂಡ ಅಷ್ಟೆ, ಕಲಿಯುವುದರಲ್ಲಿ ತುಂಬಾ ಹುಷಾರಿದ್ದಳು. 'ಸಣ್ಣ ಪ್ರಾಯದಲ್ಲೇ ಹುಡುಗಿಯರಿಗೆ ಮದುವೆ ಮಾಡಿಸಿದರೆ, ಅವರು ಮತ್ತೆ ಆಡಿ ನಲಿಯುವುದು ಯಾವಾಗ ?' ಎಂದು ಕೇಳುತ್ತಿದ್ದ ಪುತ್ತೋನಾಕ, 'ನನ್ನ ಮಗಳನ್ನು ವರದಕ್ಷಿಣೆ ಕೊಡದೆ ಮದುವೆ ಮಾಡಿಸುತ್ತೇನೆ' ಎಂದೂ ನುಡಿಯುತ್ತಿದ್ದರು. ಆವಾಗ ಉಂಞಾದ ಅದೇನೋ ಎದುರಾಡುತ್ತಿದ್ದರು. ಆದರೂ ಪುತ್ತೋನಾಕ ಧೃತಿಗೆಡುತ್ತಿರಲಿಲ್ಲ.

ಸಾಜಿದ್ ಮತ್ತು ಸಾಬಿತ್‌ರ ಮದುವೆ ಸಂದರ್ಭದಲ್ಲಿ ಅವರು ಹುಡುಗಿಯ ಗುಣ ಸ್ವಭಾವಕ್ಕೆ ಆದ್ಯತೆ ನೀಡಿದರೇ ವಿನಃ ಅವರ ಮನೆತನ, ಆಸ್ತಿ, ಪಾಸ್ತಿ ಇತ್ಯಾದಿ ನೋಡಲಿಲ್ಲ.

ಹತ್ತನೇ ತರಗತಿಯಲ್ಲಿದ್ದ ಕಲಿಯುತ್ತಿದ್ದ ಸಾಲಿಮಾಳನ್ನು ಹತ್ತಿರ ಕರೆದ ಪುತ್ತೋನಾಕ, 'ನೀನು ಎಸ್‌ಎಸ್‌ಎಲ್‌ಸಿಯಲ್ಲಿ ಒಳ್ಳೆಯ ಅಂಕ ಪಡೆದರೆ ನಿನಗೆ ಚಿನ್ನದ ನೆಕ್ಲೆಸ್ ಕೊಡುವೆ' ಎಂದು ಆಶ್ವಾಸನೆ ಕೊಟ್ಟಿದ್ದರು. ಅಂಥ ಪುತ್ತೋನಾಕ ಹೃದಯಾಘಾತಕ್ಕೊಳಗಾಗಿ ಎಲ್ಲರನ್ನೂ ಆಶ್ಚರ್ಯಚಕಿತಗೊಳಿಸಿದ್ದರು. ತೀರಾ ಲವಲವಿಕೆಯಿಂದಿದ್ದ ಪುತ್ತೋನಾಕರ ಅಗಲಿಕೆಯಿಂದ ಮನೆಯವರಷ್ಟೇ ಅಲ್ಲ, ಊರಿನ ಬಹುತೇಕ ಮಂದಿಯೂ ನೋವುಂಡಿದ್ದರು.

ಅಂತೂ ಸಾಲಿಮಾ ಎಸ್‌ಎಸ್‌ಎಲ್‌ಸಿಯಲ್ಲಿ ಫಸ್ಟ್ ಕ್ಲಾಸ್ ಪಾಸಾಗಿದ್ದಳು. ಉಂಞಾದರಿಗೆ ಮಗಳನ್ನು ಕಾಲೇಜ್‌ಗೆ ಕಳುಹಿಸಲು ಇಷ್ಟವಿಲ್ಲ. ಆದರೆ, ಅಣ್ಣಂದಿರ ಮನ ಒಲಿಸಿದ ಸಾಲಿಮಾ ಕಾಲೇಜ್ ಮೆಟ್ಟಲೇರಿ ಬಿಟ್ಟಿದ್ದಳು.

* * *

ಮಗಳಿಗೆ ಆದಷ್ಟು ಬೇಗ ಮದುವೆ ಮಾಡಿಸಬೇಕು ಎಂಬ ಹಟ ಉಂಞಾದರಿಗಿತ್ತು. ಹಾಗಾಗಿ ಮಗಳು ಕಾಲೇಜ್‌ಗೆ ಹೋಗುತ್ತಿದ್ದರೂ ಅವರು ತನ್ನ ಪ್ರಯತ್ನದಿಂದ ಹಿಂಜರಿಯಲಿಲ್ಲ.

ಆಗಾಗ ಗಂಡ್ಮಕ್ಕಳಲ್ಲಿ ಎಚ್ಚರಿಸುತ್ತಲೇ ಇದ್ದರು. ಮನೆಯಲ್ಲಿ ಮದುವೆಯ ಪ್ರಸ್ತಾಪ ಎತ್ತಿದಾಗಲೆಲ್ಲಾ, 'ನಾನು ವರದಕ್ಷಿಣೆ ಪಡೆದವನ ಕೈ ಹಿಡಿಯಲಾರೆ' ಎಂದು ಸಾಲಿಮಾ ಬಾಯ್ಬಿಟ್ಟು ಹೇಳುತ್ತಲೇ ಇದ್ದಳು.

'ಒಬ್ಬ ಒಳ್ಳೆಯ ಹುಡುಗ ಇದ್ದಾನೆ. ಐವತ್ತು ಪವನಂತೂ ಹಾಕಬೇಕು. ಈ ಕಾಲದಲ್ಲಿ ಅದು ದೊಡ್ಡ ವಿಷಯವೇ ಅಲ್ಲ' ಎಂದು ಮದುವೆ ದಲ್ಲಾಳಿ ಆಮದಾಕ ಬಂದು ಹೇಳಿದ್ದು ಸಾಲಿಮಾಳ ಕಿವಿಗೆ ಬಿದ್ದಿತ್ತು.

'ಚಿನ್ನ ನನ್ನ ಮೈಗೆ. ಬಾಯ್ಬಿಟ್ಟು ಇಷ್ಟು ಪವನು ಚಿನ್ನ ಹಾಕಬೇಕು ಎಂದು ಹೇಳುವ ನೈತಿಕತೆ ಅವನಿಗಿಲ್ಲ. ಅಂಥವನನ್ನು ನಾನು ಮದುವೆಯಾಗಲಾರೆ' ಎನ್ನುತ್ತಾ ಸಾಲಿಮಾ ಆತನನ್ನು ಮದುವೆಯಾಗಲು ನಿರಾಕರಿಸಿದಳು. ಒಟ್ಟಿನಲ್ಲಿ ನಾಲ್ಕೈದು ಮದುವೆ ಸಂಬಂಧ ಬಂದರೂ ಸಾಲಿಮಾ ಎಲ್ಲವನ್ನೂ ತಿರಸ್ಕರಿಸಿ ಬಿಟ್ಟಳು. ಇದರಿಂದ ಕಂಗಾಲಾದ ಅವಳ ಅಣ್ಣಂದಿರು, ಸಾಲಿಮಾಳಿಗೆ ಗೊತ್ತಾಗದ ಹಾಗೆ ವರದಕ್ಷಿಣೆ ಕೊಡುವ ನಿರ್ಧಾರಕ್ಕೆ ಬಂದರು.

ಹಾಗೆಯೇ ಪಕ್ಕದ ಊರಿನ ಸಾಹೇಬ್ ಹಾಜಿಯ ಮಗ ವಾಜಿದ್‌ನಿಗೆ ಸಾಲಿಮಾಳನ್ನು ಮದುವೆ ಮಾಡಿ ಕೊಡಲು ಮುಂದಾದರು. ನೂರು ಪವನು ಚಿನ್ನ ಹಾಕಬೇಕು, ಒಂದು ಲಕ್ಷ ರೂಪಾಯಿ ಕೊಡಬೇಕು ಎಂದು ಆತ ತಾಕೀತು ಮಾಡಿದ್ದ. ಆದರೆ, ಅದು ಸಾಲಿಮಾಳ ಕಿವಿಗೆ ಬೀಳದಂತೆ ನೋಡಿಕೊಂಡಿದ್ದರು.

ಯಾವುದೇ ಬೇಡಿಕೆ ಇಲ್ಲದೆ, ತನ್ನನ್ನು ಮದುವೆಯಾಗಲು ಬಯಸಿದ ಹುಡುಗನನ್ನು ಮನಸಾರೆ ಅಭಿನಂದಿಸಿದ ಸಾಲಿಮಾ, ಮದುವೆಗೆ ಒಪ್ಪಿಗೆ ನೀಡಿದಳು. ಹಾಗೇ ಹೆಣ್ಣು ನೋಡುವ ಶಾಸ್ತ್ರವೂ ನಡೆಯಿತು. ಒಂದು ಹೆಣ್ಣಿನ ದೇಹಕ್ಕೆಷ್ಟು ಚಿನ್ನ ಬೇಕೋ, ಅಷ್ಟು ಮಾತ್ರ ಸಾಲಿಮಾಳ ಮೈಮೇಲಿತ್ತು. ಒಂದಷ್ಟು ಶೃಂಗಾರ ಮಾಡಿದ ಮೇಲಂತೂ ಸಾಲಿಮಾಳ ಚೆಂದ ಮತ್ತಷ್ಟು ಎದ್ದು ಕಾಣುತ್ತಿತ್ತು. ಸಾಲಿಮಾಳ ಚೆಂದ, ಬುದ್ಧಿವಂತಿಕೆಯನ್ನು ಮೊದಲೇ ಕೇಳಿ ತಿಳಿದುಕೊಂಡಿದ್ದ ವಾಜಿದ್‌ನ ಮನೆಯವರು ಸ್ಥಳೀಯ ಸಂಸ್ಕೃತಿಯಂತೆ, ಸಾಲಿಮಾಳ ನಡುಬೆರಳಿಗೆ ಉಂಗುರ ಹಾಕಿ ಹೆಣ್ಣು ಒಪ್ಪಿಗೆಯಾಗಿದೆ ಎಂದು ಸೂಚಿಸಿ ಹೋಗುವುದರಲ್ಲಿದ್ದರು. ಅಷ್ಟರಲ್ಲಿ ಹೆಣ್ಣು ನೋಡಲು ಬಂದ ಹೆಂಗಸರ ಪೈಕಿ ಒಬ್ಬರು, 'ಚಿನ್ನ ಎಷ್ಟು ಹಾಕುತ್ತಾರೆ 'ಎಂದು ಕೇಳಿದಾಗ, ಮತ್ತೊಬ್ಬಳು 'ನೂರು ಪವನು ಹಾಕಬೇಕು ಎಂದು ಹೇಳಿಯಾಗಿದೆಯಲ್ಲಾ, ಅಷ್ಟು ಹಾಕದೆ ಇರುತ್ತಾರಾ ?' ಎಂದು ಹೇಳಿದ್ದು ಸಾಲಿಮಾಳಿಗೆ ಕೇಳಿಸಿತು. ಒಳಗಿಂದೊಳಗೆ ಮಾಡಿದ ಈ ಒಪ್ಪಂದವನ್ನು ತಿಳಿದುಕೊಂಡ ಸಾಲಿಮಾ ಕಿಡಿಕಿಡಿಯಾದಳು. ತಾನು ಮದುವೆಯಾಗಲಾರೆ ಎಂದು ಹಟಕಟ್ಟಿದಳು. ಅಂತೂ ಆ ಮದುವೆಯ ಪ್ರಸ್ತಾಪವೂ ಮುರಿದು ಬಿತ್ತು.

ಆವಾಗ ಉಂಞಾದ ಉರಿದು ಹೋದರು. 'ಹೆಣ್ಣು, ಹೆಣ್ಣಿನ ಹಾಗೆ ಇರಬೇಕು. ನಿನ್ನ ಹಟಕ್ಕೂ ಒಂದು ಮಿತಿ ಬೇಕು. ಈ ಕಾಲದಲ್ಲಿ ಹೆಣ್ಣನ್ನು ಮದುವೆ ಮಾಡಿಕೊಳ್ಳದೆ ಮನೆಯಲ್ಲಿಟ್ಟು

ಕೊಳ್ಳುವುದೂ ಒಂದೆ, ಸೀರೆಯ ಸೆರಗಲ್ಲಿ ಬೆಂಕಿಯ ಕೆಂಡ ಕಟ್ಟಿಕೊಳ್ಳುವುದೂ ಒಂದೆ' ಎಂದು ಹೇಳಿ ಕಿಡಿಕಾರಿದರು.

'ಉಮ್ಮಾ... ನಿಮಗೆ ನನ್ನ ಮನಸ್ಥಿತಿ ಇನ್ನೂ ಅರ್ಥ ಆಗಿಲ್ವಾ ? ನಾನೀಗ ಸೆಕೆಂಡ್ ಪಿಯುಸಿ ಓದುತ್ತಿದ್ದೇನಷ್ಟೆ. ಡಿಗ್ರಿ ಪೂರೈಸಬೇಕು ಎಂಬ ನನ್ನಾಸೆಗೆ ತಣ್ಣೀರೆರಚಬೇಡಿ. ಅದಲ್ಲದೆ ವರದಕ್ಷಿಣೆ ಕೊಡುವುದು ಅಥವಾ ಪಡೆಯುವುದಕ್ಕೆ ತಂದೆ ಬದ್ಧವೈರಿಯಾಗಿದ್ದರು ಗೊತ್ತಾ...?' ಎಂದು ತಾಯಿಯ ಮುಂದೆ ಆರ್ಭಟಿಸಿದಳು. ಉಂಞಾದ ಮಗಳ ವಾದಕ್ಕೆ ಪ್ರತ್ಯುತ್ತರ ನೀಡಲಾಗದೆ ಕಣ್ತುಂಬ ಅಳತೊಡಗಿದರು. ತಾಯಿ ಅಳುವುದನ್ನು ಕಂಡು ಸಾಲಿಮಾಳ ಕಣ್ಣಲ್ಲೂ ಕಣ್ಣೀರಿಳಿಯಿತು.

ತಂಗಿಯ ಹಟ ಮಿತಿಮೀರುತ್ತಿದೆ ಎಂದು ಅಣ್ಣಂದಿರಿಗೆ ಅನಿಸಿದರೂ, ಆಕೆ ನ್ಯಾಯವನ್ನು ಎತ್ತಿ ಹಿಡಿಯುತ್ತಿರುವುದು ಅವರಿಗೆ ಸಮಾಧಾನ ಉಂಟು ಮಾಡುತ್ತಿತ್ತು. ಹಾಗಾಗಿ ತಂಗಿಯನ್ನು ತರಾಟೆಗೆ ತೆಗೆದುಕೊಳ್ಳಲು ಅವರಿಗೆ ಆಗಲೇ ಇಲ್ಲ.

ಅದೊಂದು ದಿನ ಸಾಬಿತ್ ತನ್ನ ಗೆಳೆಯ ನಾಸಿರ್‌ನಲ್ಲಿ ತಂಗಿಯ ಮದುವೆ, ಆಕೆಯ ನಿಲುವು ಇತ್ಯಾದಿಯನ್ನು ಹೇಳಿ, 'ನೀನೇ ನನ್ನ ತಂಗಿಯನ್ನು ಮದುವೆಯಾಗುವೆಯಾ?' ಎಂದು ಕೇಳಿದ. ಆದರೆ, ಆತ ಕೂಡ ವರದಕ್ಷಿಣೆಯ ಬೇಡಿಕೆ ಮುಂದಿಟ್ಟನಲ್ಲದೆ, 'ಆಕೆಗೆ ತಿಳಿಯದೆ ಹಾಗೆ ಕೊಡಿ. ನಾವು ಅದನ್ನು ಬಹಿರಂಗಪಡಿಸುವುದಿಲ್ಲ 'ಎಂದ.

ಅದರಂತೆ ಎರಡೂ ಕಡೆ ಮಾತುಕತೆ ಸಾಗಿತು. ಹೆಣ್ಣು ನೋಡುವ ಶಾಸ್ತ್ರವೂ ಮುಗಿಯಿತು. ಹೊಟ್ಟೆ ತುಂಬ ಉಂಡು, ನಕ್ಕು ನಲಿದಾಡಿ, ಮದುವೆಗೆ ದಿನವನ್ನೂ ನಿಗದಿಪಡಿಸಿ ಹೋದರು.

ಸಾಲಿಮಾ ಈಗ ನಿರ್ಜನ ಸ್ಥಳದಲ್ಲಿ ಒಂಟಿಯಾಗಿ ಕುಳಿತು ರಂಗು ರಂಗಿನ ಕನಸು ಕಾಣುತ್ತಾಳೆ. ಕ್ಷಣ ಕ್ಷಣಕ್ಕೂ ಭಾವೀ ಗಂಡನನ್ನು ನೆನಪಿಸುತ್ತಾಳೆ. ಮದುವೆಯಾದ ಮೇಲೆ ಸುಂದರ ಬದುಕನ್ನು ಕಳೆಯಬೇಕು ಎಂದು ಆಶಿಸುತ್ತಾಳೆ. ಅವಳಿಗೆ ನಾಸಿರ್‌ನ ಮುಖ ನೆನಪಾದಾಗಲೆಲ್ಲಾ ಆದಷ್ಟು ಬೇಗ ಮದುವೆಯಾಗಿ ಅವನ ತೆಕ್ಕೆ ಸೇರಬೇಕು ಎಂಬ ಆಶೆಯಾಗುತ್ತದೆ.

ಅಲ್ಲದೆ ಬಾಲ್ಯದ ದಿನಗಳಲ್ಲಿ ತನ್ನ ಅಜ್ಜಿ ಹೇಳಿದ ಕಥೆಗಳೂ ಅವಳಿಗೆ ಈಗ ನೆನಪಾಗುತ್ತದೆ. 'ಚಂದತ್ತೋರು ರಾಜಕುಮಾರ, ಕುದ್ರೆರೊ ಮೇಲ್ ದೆಚ್ಚಿ ಬನ್ನ್‌ಟ್ಟ್ ನಂಡೆ ಪುಲ್ಲಿರೆ ಕುಟ್ಯೋಂಟೆ ಪೋಂಡ '(ಕುದುರೆ ಏರಿ ಬರುವ ಚೆಂದದ ರಾಜಕುಮಾರ ನನ್ನ ಮೊಮ್ಮಗಳನ್ನು ಕರೆದುಕೊಂಡು ಹೋಗುತ್ತಾನೆ) ಎಂದು ಅಜ್ಜಿ ಹೇಳಿದಾಗ, 'ಬೆಲೆಮಾ... ನಂಡೆ ರಾಜಕುಮಾರ ಎವುಡೆ ಉಲ್ಲ. ಎಪ್ಪ ಕುದುರೆ ಪತ್ತಿ ಬಂಡ ?' (ಅಜ್ಜೀ... ನನ್ನ ರಾಜಕುಮಾರ ಯಾವಾಗ ಕುದುರೆ ಏರಿ ಬರುತ್ತಾನೆ) ಎಂದು ಆಗಾಗ ಕೇಳುತ್ತಾ ಹಟಕಟ್ಟುತ್ತಿರುವುದನ್ನು ಸಾಲಿಮಾ ಜ್ಞಾಪಿಸಿಕೊಳ್ಳುತ್ತಾಳೆ.

ತನ್ಮಧ್ಯೆ ಮದುವೆಗೆ ಭರದ ಸಿದ್ಧತೆ ನಡೆಯುತ್ತಿತ್ತು.

ದಿನ ಉರುಳುತ್ತಿತ್ತು.

ಅಂತೂ ಸಾಲಿಮಾಳ ಕೈಗೆ ಮದರಂಗಿ ಹಚ್ಚಲಾಯಿತು. ಆಕೆಯ ಕಣ್ಣಲ್ಲಿ ಸಂತಸ, ಸಂಭ್ರಮ. ಮನಸ್ಸಲ್ಲಿ ನೂರಾರು ಕನಸುಗಳ ರಾಶಿ.

ಮರುದಿನ ಸಾಲಿಮಾ, ತಲೆ ತಗ್ಗಿಸಿ ಕುಳಿತಿದ್ದಳು. ಎಷ್ಟೇ ಚುರುಕು, ನಾಜೂಕಿನ ಹುಡುಗಿ ಯಾದರೂ, ಮದುವೆಯಂದು ತಲೆತಗ್ಗಿಸಿ ಕೂರುವುದು ಇಲ್ಲಿನ ವಾಡಿಕೆ.

ಕ್ಷಣಾರ್ಧದಲ್ಲಿ ನಿಕಾಹ್ ನಡೆಯಿತು. ನಾಸಿರ್‌ನನ್ನು ಪುರುಷರು ಆಲಿಂಗಿಸಿ 'ಶಾದಿ ಮುಬಾರಕ್' ಹೇಳುತ್ತಿದ್ದರೆ, ವಿಶೇಷ ಕುರ್ಚಿಯಲ್ಲಿ ಶೃಂಗರಿಸಿ ಕುಳಿತ ಸಾಲಿಮಾಳನ್ನು ಸುತ್ತುವರಿದ ಹೆಂಗಸರು, ಮದುಮಗಳ ಮೈಮೇಲೆ ಎಷ್ಟು ಚಿನ್ನವಿದೆ ? ಯಾವ ವಿನ್ಯಾಸದ್ದು ?ಉಟ್ಟ ಸೀರೆ, ರವಕೆಯಯ ಬಣ್ಣ, ಅದೆಷ್ಟು ಬೆಲೆಯದ್ದು... ಇತ್ಯಾದಿಯ ವೀಕ್ಷಣೆ, ತನಿಖೆಯಲ್ಲಿ ತೊಡಗಿದರು. ಆದರೆ, ಸಾಲಿಮಾಳ ಮೈಮೇಲೆ ನಿರೀಕ್ಷೆಯಷ್ಟು ಚಿನ್ನಾಭರಣವಿಲ್ಲದಿರುವುದನ್ನು ಕಂಡ ಹೆಂಗಸರು, ಅದನ್ನು ಕ್ಷಣಾರ್ಧದಲ್ಲಿ ಹರಡಿಬಿಟ್ಟರು. ಅದಷ್ಟೇ ಅಲ್ಲ, ತಲೆಗೊಂದರಂತೆ ಮಾತನಾಡತೊಡಗಿ ದರು. ಕಾಸಿ ಬಿಡಿ, ಬಂಗಾರು ಕೂಡ ಪಡೆಯದೆ ಮದುವೆಯಾಗುವ ಆ ಹುಡುಗನಿಗೆ ಹುಚ್ಚು ಎಂದೂ ಕೆಲವರು ಛೇಡಿಸಿದರು. ಎಲ್ಲವನ್ನೂ ಕೇಳಿಸಿಕೊಂಡ ಸಾಲಿಮಾ ಪ್ರತ್ಯುತ್ತರ ನೀಡದೆ ಮೌನವಾದಳು. ನೋವು ನುಂಗಿಕೊಂಡಳು. ಒಂದಷ್ಟು ಬದಲಾವಣೆ ಎಂಬಂತೆ, ಸಾಲಿಮಾ ಮೊದಲ ರಾತ್ರಿಯನ್ನು ಗಂಡನ ಮನೆಯಲ್ಲಿ ಕಳೆಯುವುದೆಂದು ತೀರ್ಮಾನಿಸಲಾಗಿತ್ತು. ಅದರಂತೆ, ಮೊದಲ ರಾತ್ರಿ ಸಾಲಿಮಾ ತನ್ನ ಪ್ರೀತಿಯ ಗಂಡನನ್ನು ಕಣ್ತುಂಬ ನೋಡಿ ಆನಂದಿಸಿದಳು. ತಮಾಶೆ, ಮಾತು, ಹರಟೆ ಇತ್ಯಾದಿ ಎಲ್ಲವೂ ನಡೆಯಿತು.

ಅಷ್ಟರಲ್ಲಿ ಸಾಲಿಮಾಳಿಗೆ ಆ ಕೋಣೆಯೊಳಗೆ ಪುಟ್ಟ ಬ್ಯಾಗ್ ಕಂಡಿತು. ಅಂಥದ್ದೇ ಬ್ಯಾಗನ್ನು ಅವಳಿಗೆ ತನ್ನ ಮನೆಯಲ್ಲಿ ನೋಡಿದ ನೆನಪು. ಅದು ಹೇಗೆ ಇಲ್ಲಿಗೆ ಬಂತು ? ತನಗೆ ಅರಿವಿಲ್ಲದಂತೆ, ಚಿನ್ನಾಭರಣ, ಹಣ ಇತ್ಯಾದಿ ಕೊಟ್ಟಿದ್ದಾರೆಯೇ ಎಂದು ಸಾಲಿಮಾ ಶಂಕಿಸಿದಳು. ಆದರೆ, ಏಕಾಏಕಿ ಕೇಳಲು ಅವಳಿಗೆ ಸಾಧ್ಯವಾಗಲಿಲ್ಲ. ಗಂಡ ನಗುತ್ತಾ, ಖುಶಿಯಿಂದ ಮಾತನಾಡು ತ್ತಿದ್ದರೂ ಸಾಲಿಮಾಳಿಗೆ ಆ ಪುಟ್ಟ ಬ್ಯಾಗ್‌ನ ಮೇಲೆಯೇ ಕಣ್ಣು. ಗಂಡನ ಮಾತಿಗೆ ಈಗ ಅವಳಲ್ಲಿ ಉತ್ತರವಿಲ್ಲ. ಅವಳು ಅನ್ಯ ಮನಸ್ಕಳಾಗಿದ್ದಳು. ತನ್ನ ಮನಸ್ಸನ್ನು ಅರ್ಥೈಸದ ಮನೆ ಮಂದಿಯ ಮೇಲೆ ಅವಳು ಮನಸ್ಸಲ್ಲೇ ಕಿಡಿಕಾರತೊಡಗಿದಳು.

ಅಂತೂ ಸಾಲಿಮಾ ಆ ಬ್ಯಾಗ್‌ನ ಬಗ್ಗೆ ಪ್ರಶ್ನಿಸಿದಳು. ಸಾಲಿಮಾಳ ಅನಿರೀಕ್ಷಿತ ಪ್ರಶ್ನೆಯಿಂದ ನಾಸಿರ್ ತಬ್ಬಿಬ್ಬಾದ. ಅವನಿಗೆ ಉತ್ತರಿಸಲು ನಾಲಗೆ ಅಲ್ಲಾಡಲಿಲ್ಲ. ಅವಳು ಮತ್ತೆ ಮತ್ತೆ ಪ್ರಶ್ನಿಸಿದಾಗ, ಅದೇನೋ ಹೇಳಿದ. ಆದರೆ, ಗಂಡ ಹೇಳುತ್ತಿರುವುದು ಸುಳ್ಳೆಂದು ಅವಳಿಗೆ ಮನವರಿಕೆಯಾಯಿತು.

'ಸತ್ಯ ಹೇಳಿ, ನೀವು ನನ್ನ ರಾಜ ಅಲ್ವಾ... ಏನಿದ್ದರೂ ಇನ್ನು ನನಗೆ ಏನು ಮಾಡಲಿಕ್ಕೆ ಆಗುತ್ತದೆ ?' ಎಂದು ಸಾಲಿಮಾ ಹೇಳಿ ನಟಿಸುವ ಮೂಲಕ ಗಂಡನ ಬಾಯಿ ಬಿಡಿಸಲು ಪ್ರಯತ್ನಿಸಿದಳು.

ಹೆಂಡತಿಯ ಮನದ ಇಂಗಿತವನ್ನು ಅರ್ಥ ಮಾಡಿಕೊಳ್ಳದ ನಾಸಿರ್, 'ಅದು ನನಗೆ ವರದಕ್ಷಿಣೆ ರೂಪದಲ್ಲಿ ಸಿಕ್ಕಿದ ಹಣ, ಚಿನ್ನ' ಎಂದು ಬಾಯ್ಬಿಟ್ಟ. ಆ ಮಾತು ಕೇಳಿದ್ದೇ ತಡ, ಸಾಲಿಮಾ ರಂಪಾಟ ಮಾಡಿದಳು.

ಕೋಣೆಯೊಳಗೆ ಅಳು, ಬೊಬ್ಬೆಯನ್ನು ಕೇಳಿ ನಾಸಿರ್‌ನ ತಾಯಿ, ತಂದೆ, ಅಕ್ಕ, ತಂಗಿಯಂದಿರು ಅತ್ತ ಓಡಿ ಹೋದರು. 'ಏನಾಯಿತು... ಏನಾಯಿತು ?' ಎಂದು ಕೇಳುತ್ತಾ ಬಾಗಿಲು ತೆಗೆಯುವಂತೆ ಸೂಚಿಸಿದರು.

ನಾಚಿ ನೀರಾದ ನಾಸಿರ್ ಉಪಾಯವಿಲ್ಲದೆ ಬಾಗಿಲು ತೆಗೆದ. ಸಾಲಿಮಾ ಅಳುತ್ತಾ, ನೀವೆಲ್ಲ ಸೇರಿ ನನ್ನನ್ನು ವಂಚಿಸಿದಿರಿ ಎಂದು ಆಕ್ಷೇಪಿಸಿದಳು. ಅವರ ಯಾವ ಮಾತೂ ಅವಳನ್ನೂ ಸಮಾಧಾನಪಡಿಸಲು ಸಾಧ್ಯವಾಗಲಿಲ್ಲ.

ಕ್ಷಣ ಉರುಳುತ್ತಿತ್ತು.

ಬಚ್ಚಲು ಕೋಣೆಗೆ ಹೋಗುವ ನೆಪದಲ್ಲಿ ಸಾಲಿಮಾ, ಬಚ್ಚಲು ಕೋಣೆ ಸೇರಿದಳಲ್ಲದೆ, ಮನೆಯವರ ಕಣ್ತಪ್ಪಿಸಿ ಆ ಮನೆಯಿಂದಲೇ ಹೊರಗಿಳಿದಳು. ಹಾಗೇ ಪುಟ್ಟ ಬ್ಯಾಗನ್ನು ಅವುಚಿ ಕೊಂಡು ಬಿರುಸಿನ ಹೆಜ್ಜೆ ಹಾಕತೊಡಗಿದಳು. ತನ್ನನ್ನು ಖಂಡಿತಾ ಮನೆಯವರು ಒಳಗೆ ಕಾಲಿಡಲು ಬಿಡುವುದಿಲ್ಲ ಎಂಬುದು ಅವಳಿಗೆ ಚೆನ್ನಾಗಿ ಗೊತ್ತು. ಆದರೂ, ಆಕೆ ರಾತ್ರಿ ಎಂಬುದನ್ನೂ ಲೆಕ್ಕಿಸದೆ, ಗುರಿ ಇಲ್ಲದೆ ಪಯಣಿಸುತ್ತಿದ್ದಳು...

ಇತ್ತ, ಬಚ್ಚಲು ಕೋಣೆಗೆ ಹೋದ ಸಾಲಿಮಾ ಹೊತ್ತು ಮೀರಿದರೂ ಬಾರದಿದ್ದುದನ್ನು ಕಂಡು ನಾಸಿರ್‌ನ ಮನೆಯವರು ಕಂಗಾಲಾದರು. ಕೆಲವರು ಸಾಲಿಮಾಳನ್ನು ಹುಡುಕತೊಡಗಿದರೆ, ಇನ್ನು ಕೆಲವರು ಆ ಪುಟ್ಟ ಬ್ಯಾಗ್ ಎಲ್ಲಿ ಎಂದು ಕಣ್ಣಾಡಿಸತೊಡಗಿದರು.

* * *

# ತಾಳ್ಮೆ

ಖತೀಜಾ ಸಫ್‌ರೀನಾ, ಜೆಪ್ಪು

ಊರಿಗೆ ಹೋಗಿ ವ್ಯಾಪಾರ ಮಾಡಲು ನಿರ್ಧರಿಸಿದ್ದ ಅಝೀರುಝ್, ಐದು ವರ್ಷ ಸೌದಿ ಅರೇಬಿಯಾದ ದುಡಿಮೆಗೆ ತಿಲಾಂಜಲಿ ಹಾಕಿ ಊರು ಸೇರಿದ್ದ. ಮಗ ಮನೆ ಸೇರಿದ ಮರುದಿನ ದಿಂದಲೇ ತಾಯಿ ಮತ್ತು ಅಕ್ಕ ಮದುವೆ ಮಾಡಲು ಹಾತೊರೆದರು.

'ಉಮ್ಮಾ... ನಾನು ಮದುವೆಯಾಗುವುದಿದ್ದರೆ, ಬಡ ಯತೀಂ ಹುಡುಗಿಯನ್ನು. ನನಗೆ ನಯಾ ಪೈಸೆ ವರದಕ್ಷಿಣೆ ಬೇಡ. ನಾನೇ ಮಹರ್ ಕೊಟ್ಟು ಮದುವೆಯಾಗುತ್ತೇನೆ' ಎಂದು ಅಝೀರುಝ್ ಹೇಳಿದ.

'ಅಝೀರುಝ್... ಹಾಗೆಲ್ಲ ಹೇಳಿ ಹಟಕಟ್ಟಬೇಡ. ನಾನು ನಿನಗೆ ಹೆಣ್ಣು ನೋಡಿದ್ದೇನೆ. ಅಹಮದ್ ಹಾಜಿಯ ಮಗಳನ್ನು ನೀನು ಮದುವೆಯಾದರೆ, ನಿನಗೆ ನೂರು ಪವನು ಚಿನ್ನ, ಕಾರು ಎಲ್ಲವೂ ಸಿಗುತ್ತದೆ. ಅದು ಬಿಟ್ಟು ಯತೀಂ ಹುಡುಗಿಯನ್ನು ಮದುವೆಯಾದರೆ, ನಿನಗೆ ಏನು ಸಿಗುತ್ತೆ' ಎಂದು ತಾಯಿ ಕೇಳಿದರು.

'ಉಮ್ಮಾ... ನನಗೆ ಹಣ, ಚಿನ್ನ, ಕಾರು ಯಾವುದೂ ಬೇಡ. ನಾನು ಮದುವೆಯಾಗುವು ದಿದ್ದರೆ, ಯತೀಂ ಹುಡುಗಿಯನ್ನು. ಇಲ್ಲದಿದ್ದರೆ ನನಗೆ ಮದುವೆಯೇ ಬೇಡ'

ಅಂತೂ ಅಝೀರುಝ್‌ನ ನಿಲುವಿಗೆ ಗೆಲುವಾಯಿತು. ತನ್ನ ನಿರ್ಧಾರದಂತೆ ಅವ ಯತೀಂ ಹುಡುಗಿಯನ್ನು ಮದುವೆಯಾದ.

'ಝುಬೇದ, ಮನೆಯವರ ಇಷ್ಟಕ್ಕೆ ವಿರುದ್ಧವಾಗಿ ನಾನು ನಿನ್ನನ್ನು ಮದುವೆಯಾಗಿದ್ದೇನೆ. ಹಾಗಾಗಿ ತಾಯಿ, ಅಕ್ಕ ಏನಾದರು ಹೇಳಿದರೆ, ಅದನ್ನು ಗಂಭೀರವಾಗಿ ಪರಿಗಣಿಸಬೇಡ. ತಾಳ್ಮೆಯಿಂದ ವರ್ತಿಸು' ಎಂದು ಅಝೀರುಝ್ ಮೊದಲ ರಾತ್ರಿಯೇ ಹೆಂಡತಿಗೆ ವಾಸ್ತವ ಮನವರಿಕೆ ಮಾಡಿಕೊಟ್ಟ.

ಮದುವೆಯಾದ ಎರಡೇ ಎರಡು ದಿನದಲ್ಲಿ, ಮನೆಯ ಎಲ್ಲಾ ಕೆಲಸ ಕಾರ್ಯಗಳು ಝುಬೇದಾಳ ಹೆಗಲಿಗೆ ಬಿತ್ತು. ಅವಳು ತಾಳ್ಮೆ ವಹಿಸಿ ಎಲ್ಲಾ ಕೆಲಸ ಮಾಡತೊಡಗಿದಳು. ಅತ್ತೆ ಮತ್ತು ನಾದಿನಿಯ ಬೈಗುಳ ಆಕೆಗೆ ನಿತ್ಯಪಾಠವಾಯಿತು.

ಝುಬೇದಾಳ ನಾದಿನಿ ನಫೀಸಾಳಿಗೆ ಮದುವೆಯಾಗಿ ಆರು ವರ್ಷವಾಗಿದೆ. ಆದರೆ ಅವಳಿನ್ನೂ ಗರ್ಭ ಧರಿಸಿಲ್ಲ. ಅಲ್ಲದೆ ತಾಯಿ ಮನೆಯಲ್ಲೇ ಠಿಕಾಣಿ ಹೂಡಿದ್ದಾಳೆ.

ದಿನ ಉರುಳುತ್ತಿತ್ತು.

ಝುಬೇದಾ ಮೂರು ತಿಂಗಳ ಗರ್ಭಿಣಿ. ಅದನ್ನು ಕಂಡಾಗ ನಫೀಸಾಳಲ್ಲಿ ಮತ್ಸರ ಹೊಗೆಯಾಡತೊಡಗಿತು. ಹೇಗಾದರು ಮಾಡಿ ಝುಬೇದಾಳ ಗರ್ಭವನ್ನು ತೆಗೆಯಬೇಕು ಎಂದು ನಫೀಸಾ ನಿರ್ಧರಿಸಿದಳು. ಮಗಳ ನಿರ್ಧಾರ ತಿಳಿದರೂ ಅದನ್ನು ಅವಳ ತಾಯಿ ವಿರೋಧಿಸಲಿಲ್ಲ. ಪರೋಕ್ಷವಾಗಿ ಉಮ್ಮಾನ ಒಪ್ಪಿಗೆ ಇರುವುದನ್ನು ನಫಿಸಾ ತಿಳಿದುಕೊಂಡಳು.

ಝುಬೇದಾ ಏಕಾಂಕಿಯಾಗಿದ್ದಾಗ, ನಫಿಸಾ ತೊಂದರೆ ಕೊಡುತ್ತಾಳೆ. ಆದರೆ, ಅಝೀಝ್ ಮನೆಯಲ್ಲಿದ್ದಾಗ ನಾದಿನಿಯ ಜತೆ ಆತ್ಮೀಯಳಾಗಿರುತ್ತಾಳೆ. ಅದನ್ನು ತಿಳಿದೂ ತಿಳಿಯದಂತೆ ಝುಬೇದ ನೋವು ನುಂಗಿದಳು. ತನಗಾಗುತ್ತಿರುವ ಕಿರುಕುಳ, ಅನ್ಯಾಯವನ್ನೂ ಅವಳು ಗಂಡನ ಮುಂದೆ ತೋಡಿಕೊಳ್ಳಲಿಲ್ಲ.

ಕಾರ್ಯನಿಮಿತ್ತ ಅಝೀಝ್ ಮುಂಬೈಗೆ ಹೋಗಿದ್ದ. ಅದೇ ವೇಳೆಯನ್ನು ನಫೀಸಾ ದುರುಪಯೋಗಿಸಿಕೊಂಡಳು. ಅಂದ್ರೆ ಉಪಾಯದಿಂದ ಝುಬೇದಾಳನ್ನು ಆಸ್ಪತ್ರೆಗೆ ಕರೆದೊಯ್ದು ಆಕೆಯ ಗರ್ಭ ತೆಗೆಸಿದಳು. ತಾನೊಂದು ಜೀವವನ್ನು ಕೊಲ್ಲುತ್ತಿದ್ದೇನೆ ಎಂದು ಗೊತ್ತಿದ್ದೂ ಕೂಡ ಆ ವೈದ್ಯರು ಹಣದ ಆಮಿಷಕ್ಕೆ ಬಲಿಯಾಗಿ ಮನುಷ್ಯತ್ವವನ್ನೇ ಮರೆತಿದ್ದರು.

'ಉಮ್ಮಾ... ಝುಬೇದಾ ಮೂರು ತಿಂಗಳ ಗರ್ಭಿಣಿ, ನೋಡಿಕೊಳ್ಳಿ,' ಎಂದು ಅಝೀಝ್ ತನ್ನ ತಾಯಿಯಲ್ಲಿ ಹೇಳಿದಾಗ, 'ನೀನೇನು ಹೆದರಬೇಡ, ಮೋನೇ' ಎಂದಿದ್ದರು. ಅದೇ ತಾಯಿ, ತನ್ನ ಮಗಳ ಕುಕೃತ್ಯವನ್ನು ತಡೆಯುವ ಮನಸ್ಸು ಮಾಡಲಿಲ್ಲ.

ತನ್ನ ಹೊಟ್ಟೆಯಲ್ಲಿದ್ದ ಮಗುವನ್ನು ಕೊಂದ ಸಂಗತಿ ಝುಬೇದಾಳಿಗೆ ತಿಳಿಯುವಾಗ ಸಮಯ ಮೀರಿತ್ತು. ನಾದಿನಿಯ ಪ್ರೀತಿಯ ಮಾತಿಗೆ ಮರುಳಾದ ಅವಳು ತನಗೆ ಅರಿವಿಲ್ಲದಂತೆ ಮೋಸ ಹೋಗಿದ್ದಳು.

ಹಾಗೇ ಹತಾಶೆ, ನೋವಿನಿಂದ ಅಳ ತೊಡಗಿದಳು. ಅಷ್ಟಲ್ಲದೆ ಅವಳಿಗೆ ಬೇರೆ ಏನೂ ಮಾಡಲಿಕ್ಕೆ ಆಗಲಿಲ್ಲ. ಆದರೆ, ಅವಳ ಅಳಲನ್ನು ಕೇಳಲು, ಸಮಾಧಾನಪಡಿಸಲು ಅಲ್ಲಿ ಯಾರೂ ಇರಲಿಲ್ಲ.

ನಫಿಸಾ ಗೆಲುವಿನ ನಗೆ ನಕ್ಕಳು.

ಇದ್ದಕ್ಕಿದ್ದ ಹಾಗೆ, ಝುಬೇದಾಳ ಆರೋಗ್ಯ ಹದಗೆಟ್ಟಿತು. ಅದನ್ನು ಕಂಡ ಅತ್ತೆ ಮತ್ತು ನಾದಿನಿಗೆ ಆತಂಕವಾಯಿತು. ಅಝೀಝ್ ಬಂದು ಖಾಲಿ ಹೊಟ್ಟೆ ನೋಡಿ, 'ಇದೇನು ಹೀಗೆ' ಎಂದು ಕೇಳಿದರೆ, ಏನು ಉತ್ತರಿಸಲಿ ಎಂದು ಹೆದರಿದರು. ಒಮ್ಮೆ ಅವರು ಬರಬಾರದೇ ಎಂದು ಝುಬೇದಾ ಆಶಿಸುತ್ತಿದ್ದಳು. ಕಾಕತಾಳೀಯವಾಗಿ ಹೋದ ಕೆಲಸ ಬೇಗ ಆದ ಕಾರಣ ಅಝೀಝ್ ನಿಗದಿತ ದಿನಕ್ಕಿಂತ ಮೂರು ದಿನ ಮುಂಚೆಯೇ ಮನೆ ಸೇರಿದ್ದ.

ಹೆಂಡತಿಯ ಸ್ಥಿತಿ ಕಂಡು ಅಚ್ಚರಿಗೊಂಡ.

'ಝುಬೇದಾ... ಏನಾಯಿತು ನಿನಗೆ ?' ಎಂದು ಸಣ್ಣ ಮಗುವಿನ ಹಾಗೆ ಕೇಳಿದ.

'ನನ್ನ ಮಗುವನ್ನು ನಿಮ್ಮ ಮನೆಯವರು...'- ಮಾತು ಪೂರ್ತಿಗೊಳಿಸಲಾಗದೆ ಝುಬೇದಾ ಅತ್ತಳು.

'ಏನಾಯಿತು, ಮಗುವಿಗೆ ಏನಾಯಿತು ?'

'ಅವರು ಹೊಟ್ಟೆಯಿಂದ ತೆಗೆಸಿದರು'- ಝುಬೇದಾ ಸಹನೆಯ ಕಟ್ಟೆಯೊಡೆದು ಹೇಳಿದಳು.

ಆ ಮಾತು ಕೇಳಿ, ಅಝೀಝ್ ಹೌಹಾರಿದ. ಅವನಿಗೆ ನಿಂತಲ್ಲಿ ನಿಲ್ಲಲಿಕ್ಕೆ ಆಗಲಿಲ್ಲ. ತಾಯಿ ಮತ್ತು ಅಕ್ಕನನ್ನು ತರಾಟೆಗೆ ತೆಗೆದುಕೊಂಡ. ಇಬ್ಬರಿಗೂ ಮಾತಿಗೆ ಬರವಿತ್ತು.

ಝುಬೇದಾ ಹೊಟ್ಟೆ ನೋವಿನಿಂದ ಚಡಪಡಿಸುತ್ತಿದ್ದಳು. ಅದನ್ನು ನೋಡಲಾಗದೆ ಅಝೀಝ್, ಆಕೆಯನ್ನು ತಕ್ಷಣ ಆಸ್ಪತ್ರೆಗೆ ಸೇರಿಸಲು ಮುಂದಾದ. ಆದರೆ, ದಾರಿ ಮಧ್ಯೆಯೇ ಝುಬೇದಾ ಕೊನೆಯುಸಿರೆಳೆದಿದ್ದಳು.

ದಿನ ಉರುಳಿತು. ಅಝೀಝ್‌ಗೆ ಆ ಮನೆಯಲ್ಲಿರಲು ಮನಸ್ಸಾಗಲೇ ಇಲ್ಲ. ಯತೀಂ ಹುಡುಗಿಯನ್ನು ಸೊಸೆಯಾಗಿ ಸ್ವೀಕರಿಸಲು ಇಷ್ಟವಿಲ್ಲದ ತಾಯಿ, ನಾದಿನಿಯಾಗಿ ಪರಿಗಣಿಸಲು ಮುಂದಾಗದ ಅಕ್ಕನಿರುವ ಆ ಮನೆಯಲ್ಲಿರಲು ಅಝೀಝ್‌ನ ಮನಸ್ಸು ಒಪ್ಪಲೇ ಇಲ್ಲ. ಅವನು ತನ್ನೆಲ್ಲಾ ವಸ್ತು, ಬಟ್ಟೆಬರೆಯನ್ನು ಕೈಗೆತ್ತಿಕೊಂಡು ಆ ಮನೆಯಿಂದ ಹೊರಗಿಳಿದ.

ಅದನ್ನು ನೋಡಲು ಆ ತಾಯಿಗೆ ಆಗಲಿಲ್ಲ. ಅವರು ಉಪಾಯವಿಲ್ಲದೆ, 'ಮೋನೇ...' ಎಂದರು.

ಎಷ್ಟಾದರು ಹೆತ್ತ ಕರುಳು. ಹಾಗಾಗಿ ಅಝೀಝ್ ಹಿಂತಿರುಗಿ ನೋಡಿದ.

'ನಮಗೆ ಮಾಫ್ ಮಾಡು, ಮೋನೇ'

'ಮಾಫ್ ಕೊಡಲು ನಾನ್ಯಾರು ಉಮ್ಮಾ... ಅದು ಅಲ್ಲಾಹನ ಔದಾರ್ಯಕ್ಕೆ ಬಿಟ್ಟದ್ದು. ನೀವು ಅಲ್ಲಾಹನಲ್ಲಿ ಮಾಫ್ ಕೇಳಿ' ಎನ್ನುತ್ತಾ ಧರಧರನೆ ಹೆಜ್ಜೆ ಹಾಕಿದ. ಕಂಬದ ಹಾಗೆ ನಿಂತಿದ್ದ ತಾಯಿ ಮತ್ತು ಮಗಳಿಗೆ ಮಾತು ಹೊರಡಲೇ ಇಲ್ಲ.

* * *

# ಮಾನವೀಯತೆ

ಸಮೀನ ಅಬ್ದುಲ್ ವಾಹಿದ್

'ಉಮ್ಮಾ... ಉಮ್ಮಾ...'- ಹೊರಗಿನಿಂದ ಹೆಂಗಸಿನ ಧ್ವನಿಯೊಂದು ಕೇಳಿಸಿದಾಗ, ಮನೆಯೊಳಗಿದ್ದ ಮಹಿಳೆ ಬಾಗಿಲು ತೆರೆದು ಹೊರಬಂದು, ' ಏನು ?'ಎಂದು ಕಣ್ಣಲ್ಲೇ ಕೇಳಿದರು.

'ಉಮ್ಮಾ... ಏನಾದರು ಕೆಲಸ ಇದ್ದರೆ ಕೊಡಿ ಉಮ್ಮಾ... ನೀವು ಹೇಳಿದ ಎಲ್ಲಾ ಕೆಲಸ ಮಾಡುವೆ'- ಆ ಹೆಂಗಸಿನ ಧ್ವನಿಯಲ್ಲಿ ಕೆಲಸ ಕೊಡಲೇಬೇಕು ಎಂಬ ಬಲವಾದ ಬೇಡಿಕೆ ಇತ್ತು.

'ಕೆಲಸವಾ... ಇಲ್ಲಿದ್ದ ಕೆಲಸದವರೇ ನಮಗೆ ಹೆಚ್ಚಾಗಿದ್ದಾರೆ. ಇನ್ನು ನಿನ್ನನ್ನಿಟ್ಟು ನಾನೇನು ಮಾಡಲಿ. ಹೋಗಾಚೆ' ಎಂದು ಹೇಳಿದ ಆ ಮಹಿಳೆ ತಟ್ಟನೆ ಬಾಗಿಲು ಮುಚ್ಚಿದರು.

'ಯಾ ಅಲ್ಲಾಹ್... ಈ ಮಕ್ಕಳನ್ನು ನಾನೆಲ್ಲಿಗೆ ಕರೆದುಕೊಂಡು ಹೋಗಲಿ? ನನ್ನವರೂಂತ ಇಲ್ಲಿ ನನಗೆ ಯಾರೂ ಇಲ್ಲವಾ ? ನನಗ್ಯಾತಕೆ ಈ ಶಿಕ್ಷೆ?' ನೆಫಿಸಾ ಅಳತೊಡಗಿದಳು. ನೆಫಿಸಾಳಿಗೆ ಸಬೀನಾ, ಶಂಸಾದ್, ಝುಲೇಖ, ಇಸಾಕ್ ಎಂಬ ನಾಲ್ಕು ಮಕ್ಕಳಿದ್ದಾರೆ. ಸಬೀನಾಳಿಗೆ ಏಳು, ಶಂಶಾದ್‌ಳಿಗೆ ಆರು, ಝುಲೇಖಾಳಿಗೆ ಐದು, ವರ್ಷ ಪ್ರಾಯವಾಗಿದೆ. ಇಸಾಕ್ ಮೂರು ತಿಂಗಳ ಮಗು. ನೆಫಿಸಾ ತನ್ನ ನಾಲ್ಕು ಮಕ್ಕಳನ್ನು ಕರೆದುಕೊಂಡು ಹೆಜ್ಜೆ ಹಾಕುತ್ತಿದ್ದಾಳೆ. ಆದರೆ... ಅದೆಲ್ಲಿಗೆ ಅಂತ, ಅವಳಿಗೂ ಗೊತ್ತಿಲ್ಲ.

'ಏಯ್... ರಿಕ್ಷವನ್ನು ಸ್ವಲ್ಪ ಹಿಂದಕ್ಕೆ ಕೊಂಡು ಹೋಗಿ ನಿಲ್ಲಿಸು' ಎಂದು ಮೈಮುನಾ ರಿಕ್ಷ ಚಾಲಕನಿಗೆ ಸೂಚಿಸಿದಳು. ರಿಕ್ಷ ಹಿಂದಕ್ಕೆ ಚಲಿಸುತ್ತಲೇ ಮೈಮುನಾ, ಮಕ್ಕಳ ಜತೆಗೂಡಿ ಹೆಜ್ಜೆ ಹಾಕುತ್ತಿದ್ದ ನೆಫಿಸಾಳನ್ನು ತದೇಕಚಿತ್ತದಿಂದ ನೋಡಿದಳು. ಅವಳಿಗೆ ನೆಫಿಸಾಳ ಹಾಗೆ

ಕಂಡಿತು. ಆದರೂ ಹೌದೋ... ಅಲ್ಲವೋ ಎಂಬ ಸಂಶಯ. ಇರಲಿ, ಕೇಳಿಯೇ ಬಿಡೋಣ ಎಂದು ಭಾವಿಸಿ 'ನೆಫಿಸಾ... ನೆಫಿಸಾ...' ಎಂದು ಕೂಗಿ ಕರೆದಳು. ನೆಫಿಸಾ ತಿರುಗಿ ನೋಡಿದಾಗ, ಮೈಮುನಾಳಿಗೆ ಅದು ನೆಫಿಸಾ ಎಂಬುದು ಸ್ಪಷ್ಟವಾಯಿತು.

'ಇವಳೇನು ಹೀಗೆ... ಇವಳಿಗೇನಾಯಿತು ?'- ನೆಫಿಸಾಳ ದೇಹವನ್ನು ನೋಡುತ್ತಾ ಮೈಮುನಾ ತನ್ನಲ್ಲೇ ಕೇಳಿಕೊಂಡಳು.

ನೆಫಿಸಾ ಕಣ್ಣೆಟ್ಟು ನೋಡುತ್ತಾ, 'ಹ್ಞಾಂ... ಮೈಮುನಾ...' ಎಂದು ಹೇಳಿ ಮುಗುಳ್ನಕ್ಕಳು. ಅವಳಿಗೆ ಹೋದ ಜೀವ ಮರಳಿ ಬಂದಂತಾಯಿತು, ಆಸರೆ ಸಿಕ್ಕಂತಾಯಿತು. ಮೈಮುನಾ ತಕ್ಷಣ ಬಾಡಿಗೆ ಕೊಟ್ಟು ರಿಕ್ಷಾದಿಂದ ಇಳಿದು ನೆಫಿಸಾಳನ್ನು ಆಲಿಂಗಿಸಿದಳು.

'ನೆಫಿಸಾ... ಏನಿದು, ಯಾಕೆ ಇಷ್ಟು ಸೊರಗಿದ್ದೀಯಾ, ಏನಾಗಿದೆ ನಿನಗೆ, ನಿನ್ನನ್ನು ನೋಡದೆ ತುಂಬಾ ವರ್ಷ ಆಯಿತಲ್ಲಾ.. ಇದ್ಯಾರು, ನಿನ್ನ ಮಕ್ಕಳಾ... ಗಂಡ ಎಲ್ಲಿ ?' ಎಂದು ಮೈಮುನಾ ಕೇಳುತ್ತಾ ಹೋದಳು.

'ಗಂಡ' ಎಂಬ ಶಬ್ದ ಕಿವಿಗೆ ಬಿದ್ದೊಡನೆ ನೆಫಿಸಾಳ ಮುಖ ಕಪ್ಪಿಟ್ಟಿತು. ಅವಳ ಕಣ್ಣಲ್ಲಿ ನೀರು ಆಟವಾಡತೊಡಗಿತು. ಏನೋ ಹೇಳಲು ನಾಲಗೆ ತಡವರಿಸತೊಡಗಿತು.

'ಏನಾಯಿತು, ಹೇಳು... ನೆಫಿಸಾ... ಹೇಳು ?'- ಮೈಮುನಾ ನೆಫಿಸಾಳಿಗೆ ಧೈರ್ಯ ತುಂಬುವ ಪ್ರಯತ್ನ ಮಾಡಿದಳು.

'ನನ್ನ ಗಂಡ ತೀರಿ ಹೋಗಿ ಐದು ತಿಂಗಳಾಯಿತು'- ಅಷ್ಟು ಹೇಳುವಾಗ ನೆಫಿಸಾಳ ಕಣ್ಣಲ್ಲಿ ನೀರು ತೊಟ್ಟಿಕ್ಕಿತು. ಅವಳು ತನ್ನ ಕಷ್ಟದ ದಿನಗಳನ್ನು ಮೈಮುನಾಳ ಮುಂದಿಡಲು ಪ್ರಯತ್ನಿಸಿದಳು.

'ಆಯಿತು... ಈಗ ನೀನು ನಮ್ಮ ಮನೆಗೆ ಬಾ...' ಎನ್ನುತ್ತಾ ಧುತ್ತನೆ ಓಡುತ್ತಿದ್ದ ರಿಕ್ಷಾವನ್ನು ನಿಲ್ಲಿಸುವಂತೆ ಸೂಚಿಸಿದಳು. ರಿಕ್ಷ ನಿಂತೊಡನೆ ಎಲ್ಲರೂ ಅದಕ್ಕೆ ಹತ್ತಿದರು. ಒಬ್ಬರ ಮೇಲೊಬ್ಬರು ಕುಳಿತು ಪಯಣಿಸಿದರು.

* * *

ಮೈಮುನಾ ಮತ್ತು ನೆಫಿಸಾ ಬಾಲ್ಯದ ಗೆಳತಿಯರು. ಮೈಮುನಾಳ ತಂದೆ ವ್ಯಾಪಾರಿ. ನೆಫಿಸಾಳ ತಂದೆಗೆ ಕಬ್ಬಿಣದ ಅಂಗಡಿಯಲ್ಲಿ ಕೆಲಸ. ಮೈಮುನಾ ಏನಾದರು ಖರೀದಿಸುವಾಗ, ನೆಫಿಸಾಳಿಗೂ ತೆಗೆಯುತ್ತಿದ್ದಳು. ಅತ್ತಿತ್ತ ಹೋಗುವಾಗಲೂ ಅವಳನ್ನು ಜತೆಗೂಡಿಸುತ್ತಿದ್ದಳು. ಹಾಗಿತ್ತು ಅವರ ಗೆಳೆತನ. ಏಳನೇ ತರಗತಿಯ ನಂತರ ನೆಫಿಸಾ ಶಾಲೆ ಕೈದು ಮಾಡಿದ್ದಳು. ಆದರೆ ಮೈಮುನಾ ಕಾಲೇಜ್ ಮೆಟ್ಟಲು ಹತ್ತಿದ್ದಳು. ನೆಫಿಸಾಳನ್ನು ಕಾಲೇಜ್‌ಗೆ ಕಳುಹಿಸಿ ಕೊಡಿ

ಎಂದು ಅವಳ ತಂದೆಯಲ್ಲಿ ಹೇಳಿದಾಗ, ಹೆಣ್ಮಕ್ಕಳೆಲ್ಲಾ ಹೆಚ್ಚು ಕಲಿಯಬಾರದು ಎನ್ನುತ್ತಾ ನೆಫಿಸಾಳನ್ನು ಕಾಲೇಜ್‌ಗೆ ಕಳುಹಿಸಲು ನಿರಾಕರಿಸಿದ್ದರು. ವರ್ಷ ಉರುಳುತ್ತಲೇ ಮೈಮುನಾಳಿಗೆ ಮದುವೆಯಾಯಿತು. ಅವಳ ಗಂಡ ಇಂಜಿನಿಯರ್. ತದನಂತರ ನೆಫಿಸಾಳ ಮದುವೆಯಾಯಿತು.

* * *

ರಿಕ್ಷಾ ಮನೆಯ ಮುಂದೆ ನಿಂತಾಗ, ಮೈಮುನಾ ಯೋಚನಾ ಲಹರಿಯಿಂದ ಹೊರ ಬಂದಳು. ರಿಕ್ಷಾದ ಬಾಡಿಗೆ ಕೊಟ್ಟು, ನೆಫಿಸಾ ಮತ್ತಾಕೆಯ ಮಕ್ಕಳನ್ನು ಕರೆದುಕೊಂಡು ಮನೆಯ ಅಂಗಳ ಹತ್ತಿದಳು. ಹಾಗೇ ಬಾಗಿಲು ತಟ್ಟಿದಳು. ರುಕಿಯಾದ ಬಂದು ಬಾಗಿಲು ತೆರೆದರು.

'ನೆಫಿಸಾ... ಒಳಗೆ ಬಾ' ಎಂದ ಮೈಮುನಾ, ಮಕ್ಕಳ ಕೈ ಮುಖ ತೊಳೆಯುವಂತೆ ರುಕಿಯಾದರಲ್ಲಿ ಹೇಳಿದಳು.

ರುಕಿಯಾದರಿಗೆ ಇದೊಂದೂ ಅರ್ಥವಾಗಲಿಲ್ಲ. ಅವರು ಪಿಳಿ ಪಿಳಿ ಕಣ್ಬಿಟ್ಟು ನೋಡಿದರು. 'ರುಕಿಯಾದ, ಇದು ನನ್ನ ಬಾಲ್ಯದ ಗೆಳತಿ ನೆಫಿಸಾ ಅಂತ' ಎನ್ನುತ್ತಾ ಮೈಮುನಾ ಅವರನ್ನು ಪರಿಚಯ ಮಾಡಿಕೊಟ್ಟಳು. ಅಲ್ಲದೆ ಮದುವೆಗೆ ಮುಂಚೆಯೇ ಆ ಮನೆಯಲ್ಲಿ ಕೆಲಸ ಮಾಡುತ್ತಿರುವ ರುಕಿಯಾದರ ಬಗ್ಗೆಯೂ ನೆಫಿಸಾಳಲ್ಲಿ ಹೇಳಿದಳು.

'ಚಾ... ತಂದು ಕೊಡಲಾ ?' ರುಕಿಯಾದ ಕೇಳಿದರು.

'ಆ... ತನ್ನಿ. ತಿನ್ನಲು ಏನಾದರು ಕೊಡಿ' ಮೈಮುನಾಳ ಸೂಚನೆ.

'ಬಶೀರ್‌ನ ಫೋನ್ ಬಂದಿತ್ತು'

'ಹೌದಾ... ಏನು ಹೇಳಿದರು?'

'ಹಂಝನನ್ನು ಕರೆದುಕೊಂಡು ಬರುವಾಗ ಸಂಜೆಯಾಗುತ್ತದಂತೆ' ಎಂದು ಹೇಳಿದ ರುಕಿಯಾದ ಚಹ ಮಾಡಿ ತರಲೆಂದು ಅಡುಗೆ ಕೋಣೆಯೊಳಗೆ ಕಾಲಿಟ್ಟರು.

'ನನ್ನ ಮಗ ಹಂಝ ಅಂತ. ಆರು ವರ್ಷ ಪ್ರಾಯ. ಒಂದನೇ ತರಗತಿಗೆ ಹೋಗುತ್ತಿದ್ದಾನೆ. ನನ್ನ ಗಂಡನ ಹೆಸರು ಬಶೀರ್ ಅಂತ' ಎಂದು ಮೈಮುನಾ ತನ್ನ ಮನೆಯವರ ಪರಿಚಯ ಮಾಡಿಕೊಟ್ಟಳಲ್ಲದೆ, 'ಬುರ್ಖಾ... ತೆಗೆ 'ಎಂದು ಸೂಚಿಸಿದಳು.

ರುಕಿಯಾದ ಚಹ ತಂದಿಟ್ಟರು. ನೆಫಿಸಾಳ ಮಕ್ಕಳು ಮುಗಿ ಬಿದ್ದು ತಿನ್ನತೊಡಗಿದರು. 'ತಿನ್ನಿ... ತಿನ್ನಿ...ಬೇಕಾದಷ್ಟು ತಿನ್ನಿ' ಎಂದು ಹೇಳಿದ ಮೈಮುನಾ 'ನೀನು ಎಲ್ಲಿಗೆ ನಡೆದುಕೊಂಡು ಹೋಗುತ್ತಿದ್ದೆ' ಎಂದು ಕೇಳಿದಳು.

'ಮೈಮುನಾ ಎಲ್ಲಿಗೇಂತ ಹೇಳಲಿ ? ನನ್ನ ಬದುಕು ಹೀಗಾಗಬಾರದಿತ್ತು' ಎನ್ನುತ್ತಾ ನೆಫಿಸಾ ಕಣ್ಣೀರಿಳಿಸತೊಡಗಿದಾಗ, ಮೈಮುನಾ ಸಮಾಧಾನಪಡಿಸಿದಳು.

'ನಿನ್ನ ಮದುವೆಯಾದ ಮೂರು ತಿಂಗಳ ನಂತರ ನನ್ನ ಮದುವೆಯೂ ಆಯಿತು. ನನ್ನವರು ಮೊಯಿದಿನ್ ಅಂತ. ಕಾರು ಓಡಿಸುತ್ತಿದ್ದರು. ನನ್ನನ್ನು ಚೆನ್ನಾಗಿ ನೋಡುತ್ತಿದ್ದರು. ನನ್ನ ಮದುವೆ ಯಾದ ಒಂದೇ ವರ್ಷದಲ್ಲಿ ತಂದೆ ಇಹಲೋಕ ತ್ಯಜಿಸಿದರು. ನಂತರ ಒಂದೊಂದೇ ವರ್ಷದ ಅಂತರದಲ್ಲಿ ಮೂರು ಮಕ್ಕಳನ್ನು ಹೆತ್ತೆ. ಮೂರೂ ಹೆಣ್ಮಕ್ಕಳಾದ ಕಾರಣ ನನ್ನವರು ತುಂಬಾ ಬೇಸರದಿಂದಿದ್ದರು. ಆದರೂ ಮಕ್ಕಳಿಗೆ ಯಾವುದರಲ್ಲೂ ಕೊರತೆ ಇರಲಿಲ್ಲ. ಒಂದು ಗಂಡು ಮಗುವಾಗಲಿ ಎಂದು ಆಗಾಗ ದುಆ ಮಾಡುತ್ತಲೇ ಇದ್ದರು. ಐದು ವರ್ಷದ ನಂತರ ಇಸಾಕ್‌ಗೆ ಜನ್ಮ ನೀಡಿದೆ. ಆ ಕುಶಿಯಲ್ಲಿ ಊರಿಗೆ ಸಿಹಿ ತಿಂಡಿ ಹಂಚಿದರು. ಒಟ್ಟಾರೆ ನಮ್ಮ ಬದುಕು ಹಸನಾಗಿಯೇ ಸಾಗುತ್ತಿತ್ತು. ನನ್ನವರಿಗೆ ಧನಿಯನ್ನು ಕರೆದುಕೊಂಡು ಆಗಾಗ ಕಾಸರಗೋಡಿಗೆ ಹೋಗಲಿಕ್ಕಿತ್ತು. ಹಾಗೇ ಒಂದು ದಿನ ಅಪಘಾತದಲ್ಲಿ ಧನಿ ಸಮೇತ ಅವರು ಮೃತಪಟ್ಟರು'ಎಂದು ಹೇಳಲೂ ನೆಫಿಸಾಳಿಗೆ ಆಗಲಿಲ್ಲ.

ಮೈಮುನಾ, ನೆಫಿಸಾಳ ಮುಖ ನೋಡುತ್ತಾ ಉಗುಳು ನುಂಗಿದಳು.

'ನಂತರ ನಾನು ಏನು ಮಾಡಲಿ ? ಯಾರ ಬಳಿ ಹೋಗಲಿ ? ಅವರೇ ಮಾಡಿಕೊಟ್ಟ ಚಿನ್ನದ ಒಡವೆ ಒಂದೊಂದೇ ಖಾಲಿಯಾತೊಡಗಿತು. ಅಂದ್ರೆ ಅದನ್ನು ಮಾರಿ ಕೆಲಕಾಲ ಮಕ್ಕಳ ಹೊಟ್ಟೆ ತುಂಬಿಸಿದೆ. ಅದೂ ಖಾಲಿಯಾದ ಮೇಲೆ ಉಪಾಯವಿಲ್ಲದೆ ಕೆಲಸ ಹುಡುಕಿ ಮನೆ ಮನೆ ಅಲೆದೆ. ಆದರೆ ಮಕ್ಕಳಿದ್ದ ಕಾರಣ ಯಾರೂ ಕೆಲಸ ಕೊಡಲಿಲ್ಲ. ನನ್ನವರ ಮನೆಯೊಂದಿದೆ. ಅದಿಲ್ಲದಿದ್ದರೆ ನಾನು ಬೀದಿ ಪಾಲಾಗುತ್ತಿದ್ದೆ. ಆದರೆ, ಎಲ್ಲಿಂದ ಹೊಟ್ಟೆ ತುಂಬಿಸಲಿ, ನನಗೆ ಯಾರಿದ್ದಾರೆ'- ನೆಫಿಸಾ ಮತ್ತೊಮ್ಮೆ ಕಣ್ಣೀರು ಒರೆಸಿದಳು.

'ನೆಫಿಸಾ... ಯಾರೂ ಇಲ್ಲ ಎಂದು ಯಾಕೆ ಹೇಳುತ್ತೀಯಾ.. ನಿನಗೆ ನಾನಿಲ್ವ . ನೀನೇನು ತಲೆಬಿಸಿ ಮಾಡಬೇಡ. ಸ್ವಲ್ಪ ಹೊತ್ತಿನಲ್ಲಿ ನನ್ನವರು ಬರ್‍ತ್ತಾರೆ. ಖಂಡಿತಾ, ಅವರು ಏನಾದರು ಮಾಡುತ್ತಾರೆ' ಎಂದು ಹೇಳಿ ಮೈಮುನಾ, ನೆಫಿಸಾಳಿಗೆ ಧೈರ್ಯ ನೀಡಿದಳು.

ಕಾಲ್ ಬೆಲ್ ರಿಂಗಾಯಿತು.

ಅಸ್ಸಲಾಂ ಅಲೈಕುಂ ಎನ್ನುತ್ತಾ ಬಶೀರ್ ಮನೆಯೊಳ ಹೊಕ್ಕರು. ಅಲ್ಲಿ ಪುಟ್ಟ ಮಕ್ಕಳಿರು ವುದನ್ನು ಕಂಡು ಒಮ್ಮೆ ಆಶ್ಚರ್ಯಗೊಂಡು, ಒಳಗೊಮ್ಮೆ ಕಣ್ಣು ಹಾಯಿಸಿದರು. ಹೆಂಡತಿಯ ಜತೆ ಹೆಂಗಸೊಬ್ಬಳು ಮಾತನಾಡುತ್ತಿರುವುದು ಕಂಡಿತು. ಮೈಮುನಾ ಹೊರ ಬಂದು ಎಲ್ಲಾ ವಿಷಯ ತಿಳಿಸಿದಳು.

ಅಲ್ಲೇ ಇದ್ದ ಹೆಣ್ಮಕ್ಕಳನ್ನು ಹತ್ತಿರ ಕರೆದು 'ಹೆಸರೇನು, ಶಾಲೆಗೆ ಹೋಗುತ್ತೀರಾ, ಎಷ್ಟನೇ ಕ್ಲಾಸು' ಎಂದೆಲ್ಲಾ ಔಪಚಾರಿಕವಾಗಿ ಕೇಳಿದರು.

ನೆಫಿಸಾ ಮತ್ತು ಆ ಮಕ್ಕಳ ಕುರಿತು ಬಶೀರ್ ಅಲ್ಲೇ ಕುಳಿತು ಯೋಚಿಸತೊಡಗಿದರು. ಹಾಗೇ ಮನದಲ್ಲೊಂದು ಯೋಜನೆ ರೂಪುಗೊಂಡಿತು. ಮೊದಲು ಮಕ್ಕಳಿಗೆ ಶಿಕ್ಷಣ ಕೊಡಬೇಕು. ನಂತರ ದೊಡ್ಡವಳಿಗೆ ಟೈಲರಿಂಗ್ ಶಿಕ್ಷಣ ಕೊಡಿಸಿ ಒಂದು ಹೊಲಿಗೆ ಯಂತ್ರವನ್ನೂ ತೆಗೆದು ಕೊಡಬೇಕು. ಇದೆಲ್ಲಾ ಆಗಲು ಕೆಲವು ವರ್ಷ ಬೇಕು. ಆವರೆಗೂ ಅವಳ ಮನೆ ಖರ್ಚನ್ನು ನಾನೇ ನೋಡಬೇಕು ಎಂಬ ನಿರ್ಧಾರಕ್ಕೆ ಬಂದ ಬಶೀರ್ ಅದನ್ನು ಹೆಂಡತಿಯ ಮುಂದೆ ಹೇಳಿದರು.

ಗಂಡನ ಆ ನಿರ್ಧಾರ ಕೇಳಿ ಮೈಮುನಾ ಸಂತಸಗೊಂಡಳು. ಓಡಿ ಹೋಗಿ ಬಾಲ್ಯದ ಗೆಳತಿ ನೆಫಿಸಾಳಲ್ಲಿ ಎಲ್ಲವನ್ನೂ ತಿಳಿಸಿದಳು. ಅವಳಿಗೂ ಅದನ್ನು ನಂಬಲಿಕ್ಕೆ ಆಗಲಿಲ್ಲ. ಈ ಕಾಲದಲ್ಲಿ ಇನ್ನೊಬ್ಬರ ಕಷ್ಟಕ್ಕೆ ಹೀಗೆ ಇಷ್ಟೊಂದು ಉದಾರತೆಯಿಂದ ಸ್ಪಂದಿಸುವವರಿದ್ದಾರಾ ? ಎಂದು ನೆಫಿಸಾ ತನ್ನಲ್ಲೇ ಕೇಳಿಕೊಂಡು 'ನಿಮ್ಮ ಈ ಉಪಕಾರವನ್ನು ನಾನು ಯಾವತ್ತೂ ಮರೆಯಲಾರೆ' ಎನ್ನುತ್ತಾ ದುಃಖ, ಸಂತಸದ ಕಣ್ಣೀರು ಹಾಕಿದಳು.

'ಇದು ಉಪಕಾರ ಅಲ್ಲಮ್ಮಾ... ಮನುಷ್ಯತ್ವ. ಕಷ್ಟದಲ್ಲಿರುವವರಿಗೆ ಸಹಾಯ ಮಾಡದಿದ್ದರೆ, ಅವ ಮನುಷ್ಯನೇ ಅಲ್ಲ' ಎಂದು ಬಶೀರ್ ನುಡಿದರು. ಗಂಡನ ಆ ಮಾತು ಕೇಳಿದ ಮೈಮುನಾ 'ಬಾ... ಅಲ್ಲಾಹನಿಗೆ ಲಕ್ಷ ಲಕ್ಷ ಶುಕ್ರ್ ಹೇಳೋಣ. ಎರಡು ರಕಅತ್ ನಮಾಝ್ ಮಾಡೋಣ' ಎನ್ನುತ್ತಾ ನೆಫಿಸಾಳನ್ನು ಕರೆದಳು. ನೆಫಿಸಾಳಿಗೆ ಕನಸಿನ ಲೋಕಕ್ಕೆ ಹೋಗಿ ಬಂದಂತಹ ಅನುಭವವಾಯಿತು. ಅವಳು ಸಂತಸ ತಡೆಯಲಾರದೆ, ಮೈಮುನಾಳ ಹಿಂದೆ ಹೆಜ್ಜೆ ಹಾಕಿದಳು.

* * *

# ಶುಭ ಹಾರೈಕೆಗಳು

ಪತ್ರಕರ್ತರೂ, ಲೇಖಕರೂ, ಕತೆಗಾರರೂ ಆಗಿರುವ ಹಂಝ ಮಲಾರ್ ಬ್ಯಾರಿ ಜನಾಂಗದ ಉತ್ಸಾಹಿ ಯುವ ಪ್ರತಿಭೆ. ಬ್ಯಾರಿ ಜನಾಂಗ ಮತ್ತು ಸಂಸ್ಕೃತಿಯನ್ನು ಪ್ರತಿಂಬಿಸುವ ಅತ್ಯುತ್ತಮ ಕೃತಿ 'ಮೊಯಿಲಾಂಜಿ'ಯು ನಮ್ಮ ಪ್ರಕಾಶನ ಸಂಸ್ಥೆಯಾದ ಬ್ಯಾರಿ ಪ್ರಕಾಶನದಿಂದ ದ್ವಿತೀಯ ಬಾರಿಗೆ ಮುದ್ರಣ ಕಂಡಿದ್ದು, ೧೯೯೮ ರಲ್ಲಿ ಬೆಂಗಳೂರಿನಲ್ಲಿ ನಡೆದ ಐತಿಹಾಸಿಕ ಬ್ಯಾರಿ ಸಮ್ಮೇಳನ ದಲ್ಲಿ ಬಿಡುಗೊಂಡಿದೆ.

ತನ್ನ ಎಳೆಯ ವಯಸ್ಸಿನಲ್ಲೇ ಬರವಣಿಗೆಯ ಹವ್ಯಾಸವನ್ನು ರೂಢಿಸಿಕೊಂಡಿರುವ ಹಂಝ ಮಲಾರ್, ಈವರೆಗೆ ವಿಭಿನ್ನ ಭಾಷೆ ಮತ್ತು ಸಾಹಿತ್ಯದ ಪ್ರಕಾರಗಳ ೨೩ ಕೃತಿ ರಚಿಸಿದ್ದಾರೆ. ಇದೀಗ ೨೪ ನೆಯ ಕೃತಿಯಾಗಿ ಇತರರು ಬರೆದ ೨೦ ಬ್ಯಾರಿ ಕತೆಗಳನ್ನು ಕನ್ನಡಕ್ಕೆ ಅನುವಾದಿಸಿ ಅದನ್ನು ಕಥಾಸಂಕಲನದ ರೂಪದಲ್ಲಿ ಪ್ರಕಟಿಸುವ ಸಾಹಸಕ್ಕೆ ಮುಂದಾಗುವ ಮೂಲಕ ಹಂಝ ಮಲಾರ್ ಬ್ಯಾರಿ ಸಾಹಿತ್ಯ ಪರಂಪರೆಗೆ ಹೊಸ ಕಾಯಕಲ್ಪ ನೀಡುವ ಪ್ರಯತ್ನ ಮಾಡಿದ್ದಾರೆ.

ಬ್ಯಾರಿ ಸಾಹಿತ್ಯವು ಕನ್ನಡದಂತಹ ಇತರ ಭಾಷೆಗಳಿಗೆ ಮತ್ತು ಇತರ ಭಾಷೆಗಳ ಸಾಹಿತ್ಯ ಬ್ಯಾರಿ ಭಾಷೆಗೆ ತರ್ಜುಮೆಯಾಗಬೇಕು ಎಂದು ವೇದಿಕೆಗಳಲ್ಲಿ ಭಾಷಣ ಮಾಡುವ, ಪತ್ರಿಕೆಗಳಲ್ಲಿ ಬರೆಯುವ ಮೂಲಕ ಪುಕ್ಕಟೆ ಸಲಹೆ ನೀಡುವವರ ಸಂಖ್ಯೆಗೇನೂ ಕೊರತೆ ಇಲ್ಲ. ಇವರ ನಡುವೆ ಹಂಝ ಮಲಾರ್‌ರದ್ದು ಎತ್ತರದ ಸ್ಥಾನ. ಸದ್ದುಗದ್ದಲವಿಲ್ಲದೆ, ತಣ್ಣಗೆ ತನ್ನ ೨೪ನೇ ಕೃತಿಯನ್ನು ಹೊರತರುತ್ತಿರುವುದು ಶ್ಲಾಘನಾರ್ಹ. ಸಮಾಜದಲ್ಲಿ ಬರೆಯುವವರ ಸಂಖ್ಯೆ ಗಣನೀಯವಾಗಿ ಹೆಚ್ಚಾಗುತ್ತಿದ್ದರೂ, ಕೊಂಡು ಓದುವವರ ಸಂಖ್ಯೆ ಮಾತ್ರ ಕಡಿಮೆಯಾಗುತ್ತಿರುವುದು ವಿಪರ್ಯಾಸ. ಕೃತಿಗಳನ್ನು ಕೊಂಡು ಓದುವ, ಇತರರಿಗೂ ಪ್ರೇರಣೆ ನೀಡುವ ಮೂಲಕ ಲೇಖಕರಿಗೆ ಪ್ರೋತ್ಸಾಹ ನೀಡಬೇಕಾಗಿರುವುದು ಪ್ರಜ್ಞಾವಂತರ ಕರ್ತವ್ಯ. ಈ ನಿಟ್ಟಿನಲ್ಲಿ ಚಿಂತಿಸುವ ಹೊಸ ಸಮಾಜವೊಂದರ ನಿರ್ಮಾಣವಾಗಲಿ, ಅದಕ್ಕೆ ಈ ಕೃತಿ ಪ್ರೇರಣೆ ನೀಡಲಿ. ಹಂಝ ಮಲಾರ್ ಎತ್ತರಕ್ಕೆ ಬೆಳೆಯಲಿ, ಸಮಾಜಕ್ಕೆ ಕೀರ್ತಿ, ಗೌರವ ತರಲಿ ಎಂದು ಹಾರೈಸುತ್ತೇನೆ.

**ಬಿ.ಎಂ. ಫಾರೂಕ್**

ವ್ಯಕ್ತಿಯೊಬ್ಬರ ವ್ಯಕ್ತಿತ್ವಕ್ಕೂ ಅವರ ಬರವಣಿಗೆಗೂ ಅವಿನಾಭಾವ ಸಂಬಂಧವಿದೆ ಎಂಬುದಕ್ಕೆ ಹಂಝ ಮಲಾರ್ ಮತ್ತವರ ಬರಹಗಳು ಉತ್ತಮ ಉದಾಹರಣೆ. ಮಿತ ಭಾಷಿ, ಸೌಮ್ಯ ಸ್ವಭಾವದ ಯುವ ಮಿತ್ರ ಹಂಝ ಮಲಾರ್ ಅನೇಕ ವರ್ಷಗಳಿಂದ ನನಗೆ ಪರಿಚಿತರು. ಕಲುಷಿತಗೊಂಡಿರುವ ಸಮಾಜದ ಸ್ಥಿತ್ಯಂತರಗಳನ್ನು ಎಳೆಯರಂತೆ ಪ್ರಶ್ನಿಸುವವರು. ಇವರ ಬರಹ, ಕತೆ, ಕಾದಂಬರಿಗಳು ವ್ಯಕ್ತಿತ್ವದಷ್ಟೇ ಮುಗ್ಧ, ಸರಳ.

೧೨೦೦ವರ್ಷಗಳ ಇತಿಹಾಸವಿರುವ ಬ್ಯಾರಿ ಭಾಷೆ, ಸಾಹಿತ್ಯ, ಸಂಸ್ಕೃತಿ ರಕ್ಷಣೆ ಮತ್ತು ಅಭಿವೃದ್ಧಿಯ ಘೋಷಣೆಗಳೊಂದಿಗೆ ಹುಟ್ಟಿಕೊಂಡಿರುವ ಯಾವುದೇ ಸಂಘ ಮತ್ತು ಅದರಲ್ಲಿ ಸಕ್ರಿಯನಾಗಿರುವ ಸ್ವತಃ ನನಗೆ ಮಾಡಲಾಗದ ಕೆಲಸವನ್ನು ಹಂಝ ಮಲಾರ್ ಒಬ್ಬರೇ ಸಾಧಿಸು ತ್ತಿರುವುದರ ಬಗ್ಗೆ ಅಸೂಯೆಯಿದೆ. ಎಲ್ಲಾ ಜವಬ್ದಾರಿಗಳನ್ನು ತಾನೊಬ್ಬನೇ ಹೊತ್ತುಕೊಂಡ ವರಂತೆ ಅಲ್ಪಾವಧಿಯಲ್ಲಿ ೨೪ ಕೃತಿಗಳನ್ನು ರಚಿಸಿರುವ ಇವರ ಸಾಧನೆ ನಿಜಕ್ಕೂ ಶ್ಲಾಘನೀಯ.

ಬ್ಯಾರಿ ಕತೆಗಳನ್ನು ಕನ್ನಡಕ್ಕೆ ಅನುವಾದಿಸಿ ಪ್ರಕಟಿಸುತ್ತಿರುವ ಸಾಹಿತ್ಯದ ಈ ನೂತನ ಪ್ರಕಾರ ನಮ್ಮ ಬ್ಯಾರಿ ಸಾಹಿತ್ಯ ಅಕಾಡೆಮಿಯ ಬೇಡಿಕೆಗೆ ಪೂರಕ. ಕನ್ನಡ, ಬ್ಯಾರಿ, ತುಳು ಭಾಷೆಗಳಲ್ಲಿ ಚೆನ್ನಾಗಿ ಬರೆಯಬಲ್ಲ ಹಂಝ ಮಲಾರ್ ಬ್ಯಾರಿ ಜನಾಂಗದ ಆಸ್ತಿ. ಬ್ಯಾರಿ ಜನಪದ, ಸಾಹಿತ್ಯ, ಸಂಸ್ಕೃತಿಯನ್ನು ಸಂಗ್ರಹಿಸಿ, ಪ್ರಕಟಿಸುತ್ತಿರುವ ಹವ್ಯಾಸವನ್ನೂ ರೂಢಿಸಿಕೊಂಡಿರುವ ಹಂಝ ಮಲಾರ್‌ರನ್ನು ಪ್ರಬುದ್ಧ ಯುವ ಸಾಹಿತಿ ಎಂದರೂ ತಪ್ಪಾಗಲಾರದು. ಕೇಂದ್ರ ಬ್ಯಾರಿ ಸಾಹಿತ್ಯ ಪರಿಷತ್ ಈ ಸಂದರ್ಭದಲ್ಲಿ ಹಂಝ ಮಲಾರ್‌ರನ್ನು ಸಮಸ್ತ ಬ್ಯಾರಿಗಳ ಪರವಾಗಿ ಅಭಿನಂದಿಸುತ್ತದೆ, ಶುಭ ಹಾರೈಸುತ್ತದೆ.

**ಉಮರ್ ಯು.ಎಚ್.**

ಗೆಳೆಯ ಹಂಝ ಮಲಾರ್ ಓರ್ವ ಕನಸುಗಾರ. ಕೇವಲ ಕನಸು ಕಾಣುತ್ತಾ ಸುಮ್ಮನೆ ಕೂರುವವರಲ್ಲ. ತಾನು ಕಂಡ ಕನಸುಗಳನ್ನು ತನ್ನ ಲೇಖನಿಯ ಮೂಲಕ ಸಮಾಜದ ಜತೆ ಹಂಚಿ ಕೊಂಡು ಅದಕ್ಕೊಂದು ರೂಪ ಕೊಟ್ಟು ಅದು ನನಸಾಗುವುದನ್ನು ಕಾಣಲು ಹಂಬಲಿಸುವ ವ್ಯಕ್ತಿ.

ಪತ್ರಕರ್ತನಾಗಿ ಸಮಾಜದ ಅಂಕುಡೊಂಕುಗಳನ್ನು ಕಂಡು, ನೊಂದು ತನ್ನ ಲೇಖನಿಯ ಮೂಲಕ ಅವುಗಳನ್ನು ಅನಾವರಣಗೊಳಿಸಿ ತಿದ್ದುವ ಶಕ್ತಿ ಇರುವ ಹಂಝ ಮಲಾರ್ ಓರ್ವ ಭಾವಜೀವಿ. ಇವರ ಲೇಖನ, ಕಥೆ, ಕಾದಂಬರಿಗಳಲ್ಲಿ ನಾವು ಸದಾ ಜೀವನಾನುಭವವನ್ನು ಕಾಣಬಹುದಾಗಿದೆ. 'ಮೊಯಿಲಾಂಜಿ' ಪತ್ರಿಕೆಯನ್ನು ಹುಟ್ಟು ಹಾಕಿ ತನ್ಮೂಲಕ ತನ್ನಲ್ಲಿರುವ ಸೃಜನಾತ್ಮಕ ಭಾವನೆಗಳನ್ನು ಸಮುದಾಯದ ಮುಂದಿಟ್ಟು ಕೊನೆಗೆ ಪತ್ರಿಕೆಯನ್ನು ಮುಂದುವರಿ ಸಲು ಬೇಕಾದ ಪ್ರೋತ್ಸಾಹ ಸಿಗದೆ ಬೇರೆ ಪ್ರಕಾಶನಕ್ಕೆ ನೀಡಿದರೂ ನಿರಾಶರಾಗದೆ ಸಾಹಿತ್ಯ ಕೃತಿಗಳನ್ನು ರಚಿಸುತ್ತಾ ತನ್ನ ಕಾಯಕಕ್ಕೆ ಬದ್ಧರಾಗಿರುವ ಇವರ ಸಮರ್ಪಣಾಭಾವ ಶ್ಲಾಘನಾರ್ಹ.

ಬ್ಯಾರಿ ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿಯ ಮೇಲೆ ಅಪಾರ ಅಭಿಮಾನ ಹೊಂದಿರುವ ಹಂಝ ಮಲಾರ್ ಈ ನಿಟ್ಟಿನಲ್ಲಿ ನೀಡಿರುವ ಕೊಡುಗೆಗಳು ಅಪಾರ. ಇದರಿಂದ ಆರ್ಥಿಕವಾಗಿ ಬಹಳಷ್ಟು ಕಳಕೊಂಡಿದ್ದರೂ ಅದಕ್ಕಾಗಿ ವ್ಯಥೆ ಪಡದೆ ಒಂದಲ್ಲ ಒಂದು ಹೊಸತನ ನಿರ್ಮಿಸುತ್ತಲೇ ಇದ್ದಾರೆ. ಇದೀಗ ಆಯ್ದ ಬ್ಯಾರಿ ಕತೆಗಳನ್ನು ಕನ್ನಡಕ್ಕೆ ಅನುವಾದಿಸಿ ಸಂಕಲನ ರೂಪದಲ್ಲಿ ಹೊರತರಲು ಮುಂದಾಗಿರುವ ಇವರ ಪ್ರಯತ್ನ ಮೆಚ್ಚುವಂತದ್ದು.

ನನ್ನ ದೃಷ್ಟಿಯಲ್ಲಿ ಹಂಝ ಮಲಾರ್ ಬ್ಯಾರಿ ಜನಾಂಗದ 'ಸೊತ್ತು'. ಈ ಯುವ ಪ್ರತಿಭೆಯನ್ನು ಪ್ರೋತ್ಸಾಹಿಸುವುದು ಪ್ರತಿಯೊಬ್ಬ ಬ್ಯಾರಿಯ ಕರ್ತವ್ಯ. ಈ ಸಂದರ್ಭದಲ್ಲಿ ಹಂಝ ಮಲಾರ್‌ಗೆ ಬ್ಯಾರಿ ಸಾಹಿತ್ಯ ಮತ್ತು ಸಾಂಸ್ಕೃತಿಕ ಸಂಘವು ಶುಭಾಶಯ ಸಲ್ಲಿಸಲು ಬಯಸುತ್ತದೆ.

**ಬಶೀರ್ ಬೈಕಂಪಾಡಿ**

# ಪದಗಳ ಅರ್ಥ

| | | |
|---|---|---|
| ಮೋನು | : | ಮಗ. |
| ಮೋಳು | : | ಮಗಳು. |
| ಅಬ್ಬ | : | ತಂದೆ. |
| ಉಮ್ಮ | : | ತಾಯಿ. |
| ಕಾಕ | : | ಅಣ್ಣ. |
| ದಾದ | : | ಅಕ್ಕ. |
| ಯತೀಂ | : | ಅನಾಥ. |
| ಜಮಾಅತ್ | : | ಮುಸ್ಲಿಂ ಮೊಹಲ್ಲಾ. |
| ಖತೀಬ್ | : | ಮಸೀದಿಯ ಧರ್ಮಗುರು. |
| ಮಹರ್ | : | ವಧುದಕ್ಷಿಣೆ. |
| ಮೈಕಾಲ | : | ಮಂಗಳೂರು. |
| ಬರು | : | [illegible]. |
| ದೈಕೊರು | : | ಕೂತ್ಕೊಳ್ಳಿ. |

## ಹಂಝ ಮಲಾರ್‌ರ ಪ್ರಕಟಿತ ಕೃತಿಗಳು

೧. ಮೊಯಿಲಾಂಜಿ (ಬ್ಯಾರಿ ಜನಾಂಗ ಅಧ್ಯಯನ)
೨. ಬ್ಯಾರಿ ಮುಸ್ಲಿಮರು (ಬ್ಯಾರಿ ಜನಾಂಗ ಅಧ್ಯಯನ
೩. ಒರು ಪೆನ್ಣ್‌ರೆ ಕಿನಾವು (ಬ್ಯಾರಿ ಕಾದಂಬರಿ)
೪. ಬದ್‌ಕ್‌ದ ಕನ (ತುಳು ಕಾದಂಬರಿ)
೫. ಅರಬಿ ಕಡಲಿಗೆ ಪರದೆ (ಕಾದಂಬರಿ)
೬. ಮುಗುಳ್ನಗೆ (ಕಾದಂಬರಿ)
೭. ಫಾತಿಮಾಳ ಕನಸು (ಕಾದಂಬರಿ)
೮. ಕೋಟಿ ಚೆನ್ನಯ (ಜಾನಪದ ಕಾದಂಬರಿ)
೯. ಸೂಫಿ ಬ್ಯಾರಿಯ ಝುಕಾತ್ ಯಾತ್ರೆ (ಕಥಾ ಸಂಕಲನ)
೧೦. ನೀಲಿ ಕಣ್ಣಿನ ಬಿಳಿ ಹುಡುಗ (ಕಥಾ ಸಂಕಲನ)
೧೧. ಮಾಂಸ ತೂಗುವ ಹುಡುಗ (ಕಥಾ ಸಂಕಲನ)
೧೨. ಹೂ ಮನಸ್ಸಿನ ಕಥೆಗಾರ (ಕಥಾ ಸಂಕಲನ)
೧೩. ಕೆಂಪು ಕಣ್ಣಿನ ಹುಡುಗಿ (ಕಥಾ ಸಂಕಲನ)
೧೪. ಒಬ್ಬ ದೇಶಪ್ರೇಮಿಯ ಒಲವು (ಕಥಾ ಸಂಕಲನ)
೧೫. ಸೀದಿ ಅಜ್ಜನ ಡೋಲು (ಕಥಾ ಸಂಕಲನ)
೧೬. ಬಿಳಿ ಗಡ್ಡದ ಮನುಷ್ಯ (ಕಥಾ ಸಂಕಲನ)
೧೭. ಬೂದಿ ಮುಚ್ಚಿದ ಕೆಂಡ (ಕಥಾ ಸಂಕಲನ)
೧೮. ಸೈತಾನನ ದಿನಗಳು (ಕಥಾ ಸಂಕಲನ)
೧೯. ಅದರಾಚೆ ಊರೇ ಇಲ್ಲ (ಕಥಾ ಸಂಕಲನ)
೨೦. ಒಂದು ದಿವ್ಯ ಪ್ರೇಮವು (ಪ್ರೇಮ ಕಥಾ ಸಂಕಲನ)
೨೧. ಅರಸ್ತಾನದ ಕತೆಗಳು (ಆಯ್ದ ಅತ್ಯುತ್ತಮ ಕಥೆಗಳ ಸಂಕಲನ)
೨೨. ಚರ್ಮುರಿ (ಹಾಸ್ಯ ಸಂಕಲನ)
೨೩. ಪ್ರೆಸ್ ಬಿಟ್ಸ್ (ಪತ್ರಿಕಾ ಬರಹಗಳ ತುಣುಕುಗಳು)
೨೪. ತಲ್ಲಣ (ಬ್ಯಾರಿ ಅನುವಾದಿತ ಕಥೆಗಳು)